ಅಪರಂಜಿ

ಯುಗಾದಿ ವಿಶೇಷಾಂಕ

ಹತ್ತು ವರುಷದ ಹಬ್ಬ

ಏಪ್ರಿಲ್ '93



ಅಪರಂಜಿ

ಸಂಪುಟ ೧೦ ಏಪ್ರಿಲ್ ೧೯೯೩ ಸಂಚಿಕೆ ೭

ಯುಗಾದಿ ಸಂಚಿಕೆ

ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ:
2 ರೂ. 50 ಪೈ.

ವಾರ್ಷಿಕ ಚಂದಾ
25 ರೂ.
ಆಜೀವ ಚಂದಾ:
250 ರೂ.

ಯುಗಾದಿ ವಿಶೇಷಾಂಕ
ರೂ. 10/-

ವಿಳಾಸ:
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ,
ಮಲ್ಲೇಶ್ವರಂ,
ಬೆಂಗಳೂರು-560 003.

ಕೆಲಸದ ವೇಳೆ:
ಬೆಳಗ್ಗೆ 8ರಿಂದ
10 ಗಂಟೆಯವರೆಗೆ

ಇಂದು ಶ್ರೀಮುಖ ಯುಗಾದಿ. ಈ ಶುಭದಿನದಂದು, ಅಪರಂಜಿ ಬಳಗದ ಲೇಖಕ, ಲೇಖಕಿಯರು, ಜಾಹಿರಾತುದಾರರು, ಓದುಗರು, ಎಲ್ಲರಿಗೂ ಭಗವಂತನು ಸಕಲ ಸನ್ಮಂಗಳವನ್ನುಂಟು ಮಾಡಲೆಂದು, ಅಪರಂಜಿ ಪ್ರಾರ್ಥಿಸುತ್ತಾಳೆ. ಲೇಖನಗಳನ್ನು ಸಕಾಲಕ್ಕೆ ಕಳುಹಿಸಿ ಸಹಕರಿಸಿದ, ಲೇಖಕ ವರ್ಗಕ್ಕೆ ಅಪರಂಜಿಯ ಮೊದಲ ಕೃತಜ್ಞತೆಗಳು. ಎಂದಿನಂತೆ, ಜಾಹಿರಾತುದಾರರ ಔದಾರ್ಯ ಸಂಚಿಕೆಯ ಆರ್ಥಿಕ ಬೆನ್ನೆಲುಬಾಗಿದೆ. ಈ ಕಾರ್ಯದಲ್ಲಿ ಹೆಚ್ಚಿನ ಸಹಕಾರ ನೀಡಿದ್ದಕ್ಕಾಗಿ, ಪ್ರೊಫೆಸರ್ ಜಿ.ಆರ್. ನಾಗಭೂಷಣ, ಶ್ರೀ ಎಸ್.ಬಿ. ವೈದ್ಯ, ಡಾ|| ಓಂ ಪ್ರಕಾಶ್ ಹಾಗೂ ಶ್ರೀ ಸಿ.ಆರ್. ಶಿವಕುಮಾರ್ ಇವರುಗಳಿಗೆ ಅಪರಂಜಿ ಆಭಾರಿ. ಮುಖಪುಟ ವಿನ್ಯಾಸದಿಂದ ಮೊದಲುಗೊಂಡು ಸಂಚಿಕೆಯ ಎಲ್ಲಾ ಚಿತ್ರಗಳನ್ನೂ ಶ್ರೀ ಬಾಗೂರು ಮಾರ್ಕಾಂಡೇಯ ಬಹಳ ಆಸಕ್ತಿಯಿಂದ ರಚಿಸಿಕೊಟ್ಟಿದ್ದಾರೆ. ಅಂತೆಯೇ, ರವಿ ಗ್ರಾಫಿಕ್ಸ್‌ನ ಶ್ರೀ ವಿ. ಆರ್. ನಾಥ್, ಶ್ರೀ ನರಕೇಸರಿ, ಇವರುಗಳ ಉತ್ಸಾಹ, ಆಸಕ್ತಿ, ಈ ಸಂಚಿಕೆ ಅಚ್ಚುಕಟ್ಟಾಗಿ, ವಿಳಂಬವಿಲ್ಲದೆ ಹೊರಬರುವುದಕ್ಕೆ ಮುಖ್ಯ ಕಾರಣ. ಶ್ರೀ ರವಿ ಮತ್ತು ಶ್ರೀ ಆಚಾರ್ಯ ಅವರುಗಳು ಡಿ.ಟಿ.ಪಿ ಕೆಲಸವನ್ನು ಬಹು ಮುತುವರ್ಜಿಯಿಂದ ನಿರ್ವಹಿಸಿದ್ದಾರೆ. ಈ ಎಲ್ಲ ಉತ್ಸಾಹಿ ತರುಣರಿಗೂ ಅಪರಂಜಿಯ ಹೃತ್ಪೂರ್ವಕ ವಂದನೆಗಳು.

ಸಂಚಿಕೆ ನಿಮ್ಮ ಮಡಿಲಿನಲ್ಲಿದೆ ಮೂರು ತಿಂಗಳ ಸತತ ಯತ್ನದ ಫಲ. ಲೇಖಕ, ಲೇಖಕಿಯರ ಮುಖ್ಯ ಉದ್ದೇಶ-ನಿಮ್ಮ ಮನರಂಜನೆ. ಕೈಲಾಸಂ ಹೇಳಿದಂತೆ,

ಹೊನ್ನೆ? ಬಲ್‌ಬಿರುದುಗಳೆ? ಹಾಲುಗಲ್ ವಿಗ್ರಹವೆ?
ಕವಿ ಬಯಸನಿಂಥದೇ ಪ್ರತಿಫಲವ ಬೇಕು!
ಹಿರಿಯರುಂ ಕಿರಿಯರುಂ ಕಿಲಕಿಲನೆ ನಕ್ಕೆರಡು
ಕಣ್ಣ ಹನಿಯಿತ್ತರೆನಗದು ಆನಿತೆ ಸಾಕು!

ಒಂದಿಬ್ಬರು ಓದುಗರಾದರೂ ಕಿಲಕಿಲನೆ ನಗುವಂತಾದರೆ ಅಪರಂಜಿ ಧನ್ಯಳು.

-ಶಿವಕುಮಾರ್

ಈ ಸಂಚಿಕೆಯಲ್ಲಿ ....

	ಲೇಖನ	ಲೇಖಕಿ/ಲೇಖಕ	ಪುಟ
1.	ಅಪರಂಜಿ ಕಿಡಿ	ಪ್ರಕಾಶ	10
2.	ಬೇಕು ಪುರುಷ ನಾಲ್ಕರ ಮೊರಟೋರಿಯಮು	ಡಾ|| ಶಿವರಾಮ ಕಾರಂತ	13
3.	ಪಿಂಕಿ ಸೋಂಕು	ಟಿ. ಸುನಂದಮ್ಮ	15
4.	ರಾಂಪುರದ ಮನೆ ಭೂತ	ಕೇಫ	17
5.	ಊಟಕ್ಕಿದ್ದರೂ ಲೆಖ್ಖಕ್ಕಿಲ್ಲ	ಡಾ|| ಜ್ಯೋತ್ಸ್ನಾ ಕಾಮತ್	27
6.	ಲೈಫ್ ಸರ್ಟಿಫಿಕೇಟ್	ರಾಮಿ	33
7.	ಹಾಲಿಗೆ ಬರುವ ನೀಲಕುಂತಲೆಯರು	ಎಸ್.ಎನ್. ಶಿವಸ್ವಾಮಿ	37
8.	ಶರಲೇಖಿನ ಸಾಹಸ	ಪ್ರಕಾಶ	41
9.	ಅಷ್ಟಮ ಶನಿ	ಕೆ.ಎಸ್. ಶ್ರೀಕಂಠಯ್ಯ	45
10.	ಅಪರಂಜಿಯ ವಿಜ್ಞಾನ ವಿಭಾಗ	ಸಿ.ಆರ್. ಸತ್ಯ	49
11.	ಗಂಡಂದಿರ ಜೇಬು ಮತ್ತು ಹೆಂಡಂದಿರು	ಭುವನೇಶ್ವರಿ ಹೆಗಡೆ	53
12.	ನಮ್ಮ ಮೂಣುಮಲ್ಲಿ ಮುತ್ತಣ್ಣ	ಎಚ್.ಕೆ. ರಂಗನಾಥ್	57
13.	ಯುಗಾದಿ ಸಂದೇಶಗಳು	ಆರತಿ	62
14.	ಫ್ರೂಟ್ ಲಾಯರಿ	ನಾಗೂಶ್ರೀ ಸೂರಿ	65
15.	ರೋಡುಬ್ಬರಗಳ ವೈಖರಿ	ಬಿ.ಜಿ. ರುದ್ರಪ್ಪ	71
16.	ಚಕ್ರವರ್ತಿ ವಜ್ರ	ಅ.ರಾ.ಸೇ	75
17.	ನಾಮಾಂಕಣ	ಶೀನೂ	83
18.	ಪದ್ಯ ಮೀಮಾಂಸೆ	ವಿಕಟಕವಿ	93
19.	ಒಂದು ಪ್ರಣಯದ ಕಥೆ	ಶಿವು	95
20.	ವಿರೋಧ ವಿಲಾಸ	ಎಂ.ಎಸ್.ಕೆ. ಪ್ರಭು	101
21.	ಕ್ಯಾರೇ ದೇವ್ರು	ಕಮಲಾ ರಾಮಸ್ವಾಮಿ	107
22.	ಮೊದಲುಗಳು	ಪ್ರಭಾ	109
23.	ನಾನು ಮತ್ತು ನನ್ನ ಹೆಸರು	ಬಿ.ಎಸ್. ಚಂದ್ರಶೇಖರ್	113
24.	ಫೀಮೇಲ್ ಲಾಜಿಕ್ ಅಥವಾ ಮಹಿಳಾ ತರ್ಕ	ಶಾಂತ ರಘು	117
25.	ದಾನ	ಚಂಚಲಾ ವೇಣು	121
26.	ಭವಿಷ್ಯವಾಣಿ	ಲೀಲಾ ಮಿರ್ಲೆ	125
27.	ಅಜ್ಜಿ ಹಾಡಿದಳು!	ವಿಜಯಾ ಸಚ್ಚಿದಾನಂದ್	131

ಹನಿಗವನಗಳು:- ಎಚ್. ಡುಂಡಿರಾಜ್, ಪ್ರಭಾ, ಎನ್. ಪ್ರಕಾಶ್

ಚಿತ್ರಗಳು:- ಬಾಗೂರು ಮಾರ್ಕಾಂಡೇಯ

ಉಗಾದಿ ಸಂಚಿಕೆಗೆ ಜಾಹಿರಾತುಗಳನ್ನು ನೀಡಿದ ಕೆಳಗಿನ ಸಂಸ್ಥೆಗಳನ್ನು
"ಅಪರಂಜಿ" ಕೃತಜ್ಞತೆಯಿಂದ ನೆನೆಯುತ್ತಾಳೆ.

ಕ್ರಮಸಂಖ್ಯೆ		ಜಾಹಿರಾತು	ಪುಟ
1.	ಎಚ್.ಎಂ.ಟಿ		1
2.	ಕೆನರಾ ಬ್ಯಾಂಕ್		2
3.	ಜೆಮ್ ಪ್ರಾಪರ್ಟೀಸ್		3
4.	ಹೈವೋಲ್ಟೇಜ್ ಇಕ್ವಿಪ್‌ಮೆಂಟ್ ಕಂಪನಿ		4
5.	ಅಂಬಿಕಾ ಟ್ರೇಡಿಂಗ್ ಕಂಪನಿ		6
6.	ಫೈನ್ ಕ್ರಾಫ್ಟ್		12
7.	ಪ್ರಾಪರ್ಟಿ ಡೆವಲಪ್‌ಮೆಂಟ್ ಕಂಪನಿ		14
8.	ಶೇಷಾದ್ರಿ ಅಂಡ್ ಕಂಪನಿ		36
9.	ರವಿ ಗ್ರಾಫಿಕ್ಸ್		40
10.	ಎಸ್.ವಿ.ಆರ್. ಏಜನ್ಸೀಸ್		48
11.	ಆರ್. ಶಂಕರ್		52
12.	ಕ್ವಾಲಿಟಿ ಐಸ್‌ಕ್ರೀಮ್ಸ್		56
13.	ಜಗನ್ ಇಂಜಿನಿಯರಿಂಗ್ ಕಂಪನಿ		64
14.	ವಿಜಯ ಸ್ಪೆರಾಯಿಡಲ್ಸ್		74
15.	ಟರ್ನ್ ಕೀ ಕನ್‌ಸ್ಟ್ರಕ್ಷನ್ಸ್ (ಪ್ರೈ) ಲಿಮಿಟೆಡ್		82
16.	ಮೆಟಲ್ ಪವರ್		94
17.	ಉಪಾಧ್ಯ ಎಂಡ್ ಕಂಪನಿ		100
18.	ಮೆಷೀನ್ ಎಲಿಮೆಂಟ್ಸ್		112
19.	ಸ್ಕೈಲೈನ್ ಆಡ್‌ವರ್ ಟೈಸಿಂಗ್		124
20.	ಇಂದಿರಾ ಟ್ರಾವೆಲ್ಸ್		138
21.	ಗಿರಿಮಾಜಿ ಇಕ್ವಿಪ್‌ಮೆಂಟ್ಸ್		136
22.	ಯೂನಿಗ್ಲಾಸ್ ಇಂಡಸ್ಟ್ರೀಸ್ (ಪ್ರೈ) ಲಿಮಿಟೆಡ್		137
23.	ಮೈತ್ರೀ ಇಲೆಕ್ಟ್ರೋಟೆಕ್ನಿಕ್ (ಪ್ರೈ) ಲಿಮಿಟೆಡ್		139
24.	ಹಿಂದೂಸ್ಥಾನ್ ಇಂಜಿನೀರ್ಸ್		140
25.	ದ ಪವರ್ ಇಂಜಿನಿಯರಿಂಗ್ ಕಂಪನಿ		141
26.	ರಾಜ್ ರೂಫ್ಸ್ ಎಂಡ್ ಕ್ಲಸ್ಟರ್ಸ್		142
27.	ಸ್ಪೀಡ್ ವಾಲ್ ಇಂಡಸ್ಟ್ರೀಸ್		143
28.	ಕ್ರಿಸ್ಟಲ್ ಕ್ಯಾಬ್ಸ್ (ಪ್ರೈ) ಲಿಮಿಟೆಡ್		143
29.	ಅಸೋಸಿಯೇಟೆಡ್ ಇಲೆಕ್ಟ್ರೋ ಸೆರಾಮಿಕ್ಸ್		144
31.	ಕರ್ನಾಟಕ ಇನ್ಸೆಕ್ಟಿಸೈಡ್ಸ್ ಅಂಡ್ ಫಂಗಿಸೈಡ್ಸ್	ಮುಂದಿನ ಒಳ ಹೊದಿಕೆ	
32.	ಮಾಸಕಾಟ್ ಆಗ್ರೋ ಕೆಮಿಕಲ್ಸ್	ಹಿಂದಿನ ಒಳ ಹೊದಿಕೆ	
33.	ಯು ಐ ಪ್ಲಾಸ್ಟ್ (ಪ್ರೈ) ಲಿಮಿಟೆಡ್	ಹಿಂದಿನ ಹೊರ ಹೊದಿಕೆ	

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ-೧೦ ಶ್ರೀಮುಖ ಯುಗಾದಿ ಸಂಚಿಕೆ -೭

ಏತೇ ಅಸೃಗ್ರಮಿಂದವಸ್ತಿರಃ ಪವಿತ್ರಮಾಶವಃ ವಿಶ್ವಾನ್ಯಭಿಸೌಭಗಾ

-ಋಗ್ವೇದ

ಜಗತ್ತಿನ ಸೃಷ್ಟಿಗೆ ಬಿಗ್‌ಬ್ಯಾಂಗ್ (ಮಹಾಸ್ಫೋಟ) ಕಾರಣವೆಂದು ವಿಜ್ಞಾನಿಗಳು ಹೇಳುತ್ತಿರುವದಕ್ಕೆ ಸಾಕ್ಷ್ಯಗಳು ಈಗಲೂ ಹುಟ್ಟುತ್ತಿರುವುದಷ್ಟೇ.

ಇಂತಹ ಒಂದು ಕಲ್ಪನೆಯು ಶಬ್ದ ಸಾದೃಶ್ಯದಿಂದ ಭಾರತೀಯರಲ್ಲೂ ಇತ್ತು. ಶಬ್ದದಿಂದ ಜಗತ್ತು ಹುಟ್ಟುವುದೆಂದೂ, ಶಬ್ಧವು ಸ್ಫೋಟ (ಬ್ಯಾಂಗ್) ರೂಪವೆಂದೂ ಕೆಲವರು ಅಭಿಪ್ರಾಯ ಪಡುತ್ತಿದ್ದರು. ಶಬ್ದವೆಂದರೆ ವರ್ಣಗಳೇ ಎನ್ನುವುದು ವೇದಾಂತಿಗಳ ಮತ.

ಭಗವದ್ಗೀತೆಯಲ್ಲಿ ಪ್ರಜಾಪತಿಯು ಯಜ್ಞದಿಂದ ಪ್ರಜೆಗಳನ್ನು ಸೃಷ್ಟಿಸಿದನೆಂದು ಹೇಳಿದೆ.

ಋಗ್ವೇದದಲ್ಲಿ ಮೇಲೆ ಹೇಳಿರುವ ಮಂತ್ರವಿದೆ. ಪ್ರಜಾಪತಿಯು ಏತೇ ಎಂದು ದೇವತೆಗಳನ್ನು ಅಸೃಗಂ ಎಂದು ಮನುಷ್ಯರನ್ನು ಇಂದವಃ ಎಂದು ಪಿತೃಗಳನ್ನು, ತಿರಃಪವಿತ್ರಂ ಎಂದು ಗ್ರಹಗಳನ್ನು .... ಅಭಿ ಸೌಭಗಾ ಎಂದು ಮಿಕ್ಕವರನ್ನು ಸೃಷ್ಟಿಸಿದನು. ಕೊನೆಯ ಅಭಿಸೌಭಗಾ ಎಂದರೆ ಸೌಭಾಗ್ಯಯುಕ್ತರಾದ ಇತರರು ಎಂದು ಅರ್ಥ.


ನಮ್ಮ ಸೌಭಾಗ್ಯವೇನೆಂಬುದನ್ನು ನಾವು ಅರಿತುಕೊಳ್ಳುವಂತಾಗಲಿ.

ಮಾನವರಾಗಿ ಹುಟ್ಟುವುದಕ್ಕೆ ಒಂದು ಸಂಸ್ಕಾರಬೇಕು. ಬರ್ಬರತೆಯೇ ಶ್ರೇಷ್ಠವೆಂದು ಅದನ್ನೇ ಪ್ರಸಾರಮಾಡುವುದನ್ನು ಶಾಂತಿ ಖಡ್ಗದಿಂದಲೇ ಪರಿಹರಿಸಬೇಕು ಎನ್ನುವುದನ್ನು ಅರಿಯಬೇಕು.

ಕತ್ತೆಯೇ ಕುದುರೆಯೆಂದೂ, ನೃಶಂಸನಿಂದ ನಮಗೆ ತಿಳಿದುಕೊಳ್ಳುವುದಿದೆಯೆಂದೂ, ಎಷ್ಟು ಪ್ರಚಾರಮಾಡಿದರೂ, ಸುಳ್ಳು ಸತ್ಯವಾಗಲಾರದು.

ಸಾಯಣಾಚಾರ್ಯರಿಂದ ಕಲಿಯಬೇಕಾದುದಿದೆ ಎಂದು ಈಗಲಾದರೂ ನಾವು ಅರಿತುಕೊಳ್ಳಬೇಕು.

ನಮ್ಮ ನಾಡಿನ ಸೌಭಾಗ್ಯ, ಶ್ರೀಮುಖ ಸಂವತ್ಸರದಲ್ಲಿ ಶ್ರೀಯುಕ್ತವಾಗಲಿ.



ಪ್ರೇಮಚಂದ್ರ ಸಾಗರ್ ರಾಜೀನಾಮೆ

–ಸುದ್ದಿ

ಅವರಿಗೆ ಸಚಿವಸ್ಥಾನದ ಮೇಲೆ ಪ್ರೇಮವಿಲ್ಲ!

X X X

ಶೇವಿಂಗ್ ಕ್ರೀಂ ರಿಯಾಯಿತಿ

–ಸುದ್ದಿ

ಮನಮೋಹನರಿಗೂ ಶೇವಿಂಗ್‌ಕ್ರೀಂ ಗೂ ಏನು ಸಂಬಂಧ?

X X X

ಗ್ರಾಮೀಣ ಜಾಗಗಳಿಗೂ ಪತ್ರಿಕೆಗಳು

–ಸುದ್ದಿ

ಪಾಪ, ಅವರ ಜೀವನವನ್ನೇಕೆ ಹಾಳು ಮಾಡುತ್ತೀರಿ?

X X X

ಪ್ರಜಾಪ್ರಭುತ್ವದ ಸಮಾಧಿಯ ಮೇಲೆ ನೃತ್ಯ ಮಾಡಲು ಯಾರನ್ನೂ ಬಿಡುವುದಿಲ್ಲ

–ಶ್ರೀ ಮೊಯ್ಲಿ

ಹಾಗಾದರೆ ಸಮಾಧಿ ಇದೆ ಅಂತಲೋ??

X X X

ರಿಮೇಕ್ ಚಿತ್ರಗಳಿಗೆ ಸಬ್ಸಿಡಿ ಇಲ್ಲ

–ಸುದ್ದಿ

ಹೌದು, ಅವನ್ನ ಪುನಃ ನೋಡುವುದು ತಪ್ಪುತ್ತೆ!

X X X

ಬ್ರಿಟನ್ನಿನ ಸ್ಟ್ಯಾಂಪುಗಳ ಮೇಲೆ ರಾಣಿಯ ಚಿತ್ರ ಇನ್ನಿಲ್ಲ

–ಪತ್ರಿಕೆ

ಸದ್ಯ, ಇನ್ನು ಆಕೆಯ ಮುಖಕ್ಕೆ!
ಮಸಿ ಬಳಿಯುವುದು ತಪ್ಪುತ್ತೆ!!

X X X

ಸರ್ಕಾರದ ಭದ್ರತೆಗೆ ಕುಂದಿಲ್ಲ

–ಮುಖ್ಯಮಂತ್ರಿಗಳು

ಈ ಹೇಳಿಕೆಗಳಿಂದಲೇ ನಮಗೆ ಭಯ ಶುರುವಾಗೋದು!

X X X

ಲೋಕಸಭೆಯಲ್ಲಿ ನಡೆಯೋದನ್ನ ಇನ್ನು ಮುಂದೆ ಕಾರ್ಯ–ಕಲಹಗಳು ಎಂದು ಕರೆಯುತ್ತಾರೆ ಅನ್ನುವುದು ಶುದ್ಧ ಕುಹಕ!!!

X X X

ವ್ಯಸನದ ಅನಂತರ ಬರುವ ಸುಖವೂ ಹೆಚ್ಚಿನದೇ ಆಗಿರುತ್ತದೆ

–ಸುಭಾಷಿತ

ಭಾರತದ ಕ್ರಿಕೆಟ್ ಆಗಲೂ ಇತ್ತೇನೋ?

X X X

ಬಿ.ಜೆ.ಪಿ ಅಂದರೆ ಭಾರತೀಯ ಜಗಳ ಪಾರ್ಟಿ ಅಂತ ನಂ ಬಳಗದವರೊಬ್ಬರು ವರ್ಣಿಸಿದ್ದಾರೆ!



IF CARTOONS COULD TALK
AS YOU CAN SEE STARTING HERE AND ENDING HERE, I WAS DRAWN WITH A CONTINUOUS LINE AND, AMAZINGLY, THE PEN WAS NEVER LIFTED FROM THE PAPER!
HAS IT MADE YOU HAPPY?
NO

ಕೃಪೆ ಪಂಚ್

ಬೇಕು ವರುಷ ನಾಲ್ಕರ ಮೊರಟೋರಿಯಮು
ದೆಹಲಿಯ ಗದ್ದುಗೆಯನೇರಿ ಸುಸ್ತಾದ ರಾಯರಿಗೆ

–ಶಿವರಾಮ ಕಾರಂತ

ನಮ್ಮಗಳ ಮಾ–ಭಾರತವು ನವ ನವ್ಯ ಎಂಪೋರಿಯಮು
ಎಷ್ಟೆಲ್ಲ ಜಾತಿ ಮತ ನಡೆ ನುಡಿಗಳ ಕನ್ಸೋರ್ಟಿಯಮು
ನರರು ಸಿಂಪಗಳ ಜತೆ ಕಾದುವಾ ಕೊಲೀಸಿಯಮು
ಗೌಳಿ ಹೆಗ್ಗೌಳಿ ಉಡ ಮೊಸಳೆಗಳ ಸರ್ಪೇರಿಯಮು !
ನಾವು ಹಾಡುವ ಗೀತೆ 'ನಾವೆಲ್ಲರೂ ಒಂದೇ'
ನಿಜವಕ್ಕು ಮಸಣದಾ ಗಡಿ ದಾಟಿದಂದೇ !
ವಂಶ ಮೂಲದ ಬೇನೆ ಕೈ ಬಿಸಿಯ ಜ್ವರವೆಂದು
ತಣಿಸೆ ಹೊರಟಿಹ ವೈದ್ಯ   ಐಸ್ ಪ್ಯಾಕಿನಿಂದೆ !
ಜನರ ಕೊರಳಿನ ಗಾನ ಸಾಸಿರರ ಕೊಕೊಘನಿ
ಬೇನೆಗರೆಯುವ ಮುದ್ದು ಬಲು ಸುಲಭವೆನ್ನಿ !
ಮಕ್ಕಳಿಂ ಮೊಮ್ಮಕ್ಕಳಿಂ ಬಿಗಿಸುವೆವು ಸರಪಣಿ
ಮೆರಥಾನು ಓಟದಲಿ ಮರೆಯೋಣ ಬನ್ನಿ
ಪಾಡಿಯೇ ಹಾಡುವೆವು ಭಾರತವು ಒಂದೆಂದು
ಹೋಳಾಯ್ತು ಏಕೆಂದು ಮರೆತಿರಲು ಇಂದು !
ಕಣ್ಣು ಮಿಟುಕಿಸಿ ನಮ್ಮ ದಾಳಗಳ ನಡೆಸುವೆವು
ಎಂದು ತೊಡಗಿತು ಬೇನೆ ಯಾಕೆಂದು ಚಿಂತಿಸದೆ–
ಹೀಗಿರಲು ಬೇಡವೇ ತಪವೆಸಗೆ ನಾಲ್ಕು ವರ್ಷ
ಅದರಿಂದ ಲಭಿಸಲೇಬೇಕು ದೇಶಕ್ಕೆ ಹರ್ಷ !
ಆ ಅವಧಿಯಲಿ ನಾವು ನೀವೆಲ್ಲ ಸೇರಿ
ಒಡಲ ಜ್ವಾಲಾಮುಖಿಗೆ ಸಮಿತ್ತುಗಳ ತೂರಿ
ಉರಿಸೋಣ ಬನ್ನಿ ಮಾ–ಮಾ–ಶಾಂತಿ ಹೋಮ
ಕಟ್ಟೋಣ ಬನ್ನಿ   ಹಚ್ಚ ಹೊಸ ಕ್ರಿಮೆಟೋರಿಯಮ.



ಕೃಪೆ – ಶಂಕರ್ಸ್ ವೀಕ್ಲಿ

ಪಿಂಕಿಸೋಂಕು !

-ಟಿ. ಸುನಂದಮ್ಮ

ನಾನು ನೋಡಿದ ಹಿಂದೀ ಧಾರಾವಾಹಿಯೊಂದರಲ್ಲಿ, ನಾಯಕನ ತಾಯಿ ಹದಿಮೂರು 'ಎಪಿಸೋಡ್'ಗಳಲ್ಲೂ ದೇವರ ಮನೆಯಲ್ಲಿ ಮಂಟಪದ ಮುಂದೆ ಕೂತಿದ್ದಳು. ಅವಳನ್ನು ಮಗನೋ, ಸೊಸೆಯೋ, ಆಳೋ, ಅಡಿಗೆಯಾತನೋ ಮಾತಾಡಿಸಿದಾಗ ಕಣ್ಣುಬಿಡುವಳು. ಉತ್ತರ ಕೊಡುವಳು, ಸಲಹೆ ನೀಡುವಳು; ಮತ್ತೆ ಕಣ್ಣು ಮುಚ್ಚುವಳು. ಆಕೆಗೆ ಹಸಿವು ಬಾಯಾರಿಕೆ ನಿದ್ದೆ ಯಾವುದೂ ಇಲ್ಲವೇನೋ ಎನ್ನಿಸುತ್ತಿತ್ತು !

ನಮ್ಮ ದೊಡ್ಡಮ್ಮ ಒಂದಿಷ್ಟು ಅದೇ ಜಾತಿಯವರೇ ! ಊಟ, ತಿಂಡಿ, ನಿದ್ದೆ ಉಂಟು, ಬಿಡಿ. ಆಳೂ ಇಲ್ಲ ಅಡಿಗೆಯವನೂ ಇಲ್ಲದ್ದರಿಂದ ಸದಾಕಾಲ ದೇವರ ಮನೆಗೆ ಅಂಟುವ ಹಾಗೂ ಇರಲಿಲ್ಲ! ಆದರೆ ದೇವರು ದಿಂಡರು ಮಡಿಮುಡಿ ಬಾಬತ್ತಿನಲ್ಲಿ ಅರ್ಧ ಶತಮಾನದ ಹಿಂದೇ ನಿಂತುಬಿಟ್ಟಿದ್ದಾರೆ; 'ಮಡಿ ಮಡಿ ಎಂದು ಮೂರ್ಮೊಳ ಹಾರುವ' ಪುರಂದರದಾಸರ ಪಟ್ಟ ಶಿಷ್ಯೆ. ಮುದ್ದಿನ ಮೊಮ್ಮಗಳು ರೇಷ್ಮಾಳ ಸ್ಪರ್ಶ, ರಾತ್ರಿ ಊಟದ ನಂತರವೇ. ಅವರ ಮನೆಗೆ ಹೋದರೆ ವಟಸಾವಿತ್ರಿ, ಹುಣ್ಣಿಮೆ ಲಕ್ಷ್ಮಿ, ಸಂಕಷ್ಟ ಗಣಪತಿ, ಸತ್ಯನಾರಾಯಣ, ಸಪ್ತಗೌರಿ ಯಾವುದಾದರೂ ದೇವತೆಯ ಪ್ರಸಾದ ನಮ್ಮ ಕೈಗೆ (ಬಾಯಿಗೆ) ಬರುವುದು ಗ್ಯಾರಂಟಿ.

ದೊಡ್ಡಪ್ಪ ಹೆಂಡತಿಯ ನೆರಳು; ಸ್ವಂತ ಚಿಂತನೆಯ ಗೊಂದಲಕ್ಕೆ ಹೋಗದೆ ಮದುವೆಯಲ್ಲಿ ಮಾವ ಕೊಟ್ಟಿದ್ದ ಕೆಂಪು (ಕಿಮಟಿನಿಂದಾಗಿ ಈಗ 'ಮೆರೂನ್') ಮಗುಟ ಉಟ್ಟು ಸಾಲಿಗ್ರಾಮಗಳಿಗೆ ಸ್ನಾನ ಮಾಡಿಸಿ, ವಿಗ್ರಹಗಳಿಗೆ ಅಕ್ಷತೆ, ಗಂಧಗಳ ಮೇಕಪ್ ಹಚ್ಚಿ ತಿಳಿದಷ್ಟು ಪದಗಳನ್ನು ಉಚ್ಚರಿಸಿ ಮಿಕ್ಕವನ್ನು ನುಂಗಿ ಮಂತ್ರ ಹೇಳಿ ದೇವರನ್ನು ಉದ್ಧರಿಸುತ್ತಾರೆ. ಆಕೆಯ ವ್ರತಗಳಿಗೆ 'ಅನಫಿಷಿಯಲ್' ಪುರೋಹಿತನಾಗುತ್ತಾರೆ. ಉಪವಾಸ ಮಾಡೆಂದ ದಿನ 'ಹುಂ', ಪಾರಣೆ ಧಾರಣೆ ಭೋಜನ ಬಡಿಸಿದಾಗ ಎರಡೂ ದಿನದ 'ಕೋಟಾ' ಹೊಟ್ಟೆಗೆ ಭರ್ತಿ ಮಾಡುತ್ತಾರೆ!

ಮಗನಿಗೆ ಫ್ಯಾಕ್ಟರಿಯಲ್ಲಿ ಕೆಲಸ, ಸೊಸೆ ಬ್ಯಾಂಕ್ ಉದ್ಯೋಗಿ. ಬೆಳಗಿಂದ ರಾತ್ರಿವರೆಗೆ ಮನೆಯಾಚೆ. ರೇಷ್ಮಾಗೆ ತನ್ನನ್ನಾಡಿಸುವ ಹುಡುಗಿ ಪೊನ್ನಿಯ ಸೆರಗು ಹಿಡಿದು ಓಡಾಡುವ ವಯಸ್ಸು ದಾಟಿತು. ಮೂರು ವರ್ಷ ತುಂಬಿದ 'ಹಿರಿತನ;' "ಅಪ್ಪ! ಬೇಜಾರು, ಅಮ್ಮಾ! ಬೇಜಾರು" ಎಂದು ಹಾಡತೊಡಗಿದಳು. ಆಟದ ಸಾಮಾನುಗಳು ಅಸಹ್ಯ ಆದವು, ಅಕ್ಕಪಕ್ಕದ ಮನೆಯಲ್ಲಿ ಓರಗೆಯ ಮಕ್ಕಳಿಲ್ಲ. ಗಂಡ-ಹೆಂಡತಿ-ಗಂಡನ ತಂಗಿ-ಹೆಂಡತಿಯ ಅಣ್ಣ-ಗೆಳೆಯ ಗೋಪಾಲ-ಗೆಳತಿ ಮಾಲತಿ 'ಹೈ-ಲೆವಲ್' ಸಮಿತಿ ಸೇರಿದರು; ನಾಲ್ಕು ಗಂಟೆ ಕಾಲದ ಸುದೀರ್ಘ ಚರ್ಚೆಯ ನಂತರ ಈ ಕೆಳಗೆ ಕಂಡ ನಿರ್ಣಯ ತೆಗೆದುಕೊಂಡರು.



"ರೇಷ್ಮಾ ಜತೆ ಆಡವಾಡಲು ನಾಯಿಮರಿ ಕೊಂಡು ತರಬೇಕು"

ಪೂಡಲ್ 'ಪಿಂಕಿ' ಗೃಹಪ್ರವೇಶ ಮಾಡಿದಳು; ಹೊನ್ನಿ, ರೇಷ್ಮಾ ಆರತಿ ಬೆಳಗಿದರು. 'ಬಲಗಾಲು ಮುಂದಿರಿಸೇ' ಎಂದೇನೋ ಭಾವಮೈದುನನ ಭಾಮೆ ಹೇಳಿದ್ದುಂಟು; ಹೊಸ ಜಾಗಕ್ಕೆ ಹೆದರಿದ ಪ್ರಾಣಿ ನಾಲ್ಕೂ ಕಾಲುಗಳನ್ನೂ ಎಗರಿಸುತ್ತ ನೇರ ದೇವರ ಕೋಣೆಯೊಳಕ್ಕೇ ಓಡಿಹೋಯಿತು. ಅಡಿಗೇ ಮನೆಯಲ್ಲಿ ಅಡಗಿ ಕೂತಿದ್ದ ದೊಡ್ಡಮ್ಮನಿಗೆ ಈ ಅನಾಹುತದಿಂದ 'ಹಾರ್ಟ್ ಅಟಾಕ್' ಆಗದಿದ್ದುದು ಪವಾಡ!.... ನಂತರದ ಶುದ್ಧೀಕರಣದ ಪರಿಚ್ಛೇಧ, ನಿಮ್ಮ ಊಹೆಗೇ ಬಿಟ್ಟಿದ್ದು.

ಪಿಂಕಿಗೆ ನಡೆದ ಉಪಚಾರ, ಬಹುಶಃ ರೇಷ್ಮಾ ಬೇಟಿಗೂ ಆಗಿರಲಾರದು. ಹಾಸಿಗೆ–ಹೊದ್ದಿಕೆ–ಬಿಸ್ಕತ್ತು–ಸೋಪು–ಷಾಂಪು–ವಿಟಮಿನ್ನು–ಟಾನಿಕ್ಕು.... ರಾಜಾತಿಥ್ಯ. ರೇಷ್ಮಳಂತೂ ಒಂದು ನಿಮಿಷವೂ ಬಿಟ್ಟಿರಲಾರಳು. 'ಪ್ಲೇ ಹೋಂ'ಗೆ ಹೋಗಿರುವ ಮೂರು ಗಂಟೆ ಕಾಲಕ್ಕೆ ನಾಯಿಯ 'ದೇಖ್‌ಭಾಲ್' ಬಗ್ಗೆ ಹೊನ್ನಿಗೆ ಮೂವತ್ತು ಆದೇಶಗಳು.

ದೊಡ್ಡಮ್ಮ ದೊಡ್ಡಪ್ಪನಿಗೆ ಒತ್ತಾಯದ ಸೆರೆ; ನಾಯಿ ಎಲ್ಲಿ ಏನು ಮುಟ್ಟುತ್ತೋ ಎಂದು ಕಾವಲು ಕಾಯುವುದರ ಫಲ, ದೊಡ್ಡಪ್ಪನಿಗೆ ಏರಿದ ರಕ್ತದೊತ್ತಡ. ಹೇಗೋ ಎಲ್ಲೋ 'ಪಿಂಕಿಸೋಂಕು' ಆಯಿತೆಂದು ದಿನಕ್ಕೆ ಕನಿಷ್ಠ ನಾಲ್ಕು ಸಾರಿ ಸ್ನಾನ, ದೊಡ್ಡಮ್ಮನಿಗೆ.

ಬೇಸಿಗೆ ರಜ ಕಳೆದ ಮೇಲೆ ರೇಷ್ಮಾ ದೊಡ್ಡ ಸ್ಕೂಲ್ ಸೇರಿದಳು. ಹೊನ್ನಿಗೊಬ್ಬ ಹೊನ್ನ ಸಿಕ್ಕದ್ದರಿಂದ ಅವಳು ನಾಯಿ ಆಡಿಸುವ ಬದಲಿಗೆ ಗಂಡನನ್ನಾಡಿಸಲು ಹೊರಟುಹೋದಳು. ಮನೆಯಲ್ಲುಳಿದವರು ದೊಡ್ಡಪ್ಪ, ದೊಡ್ಡಮ್ಮ. ಹೊತ್ತು ಹೋಗದೇ ಒಳಬಾಗಿಲಿನಿಂದ ಪಿಂಕಿಯ ಚಲನವಲನಗಳನ್ನು ಗಮನಿಸುವ ಅಭ್ಯಾಸವಾಯ್ತು. "ನೋಡಿದಿರೇನ್ರೀ ಮುಂ....ದು, ಎಷ್ಟು ಚೆನ್ನಾಗಿ ಕುಣಿಯುತ್ತೆ?" "ಸೀತಾ! ನಾಯಿ ಪೇಪರ್ ಕಚ್ಕೊಂಡು ಒಳಕ್ಕೆ ತಂದಿಡ್ತು!"... ಹೀಗೆ ಕಾಮೆಂಟರಿ.

ರೇಷ್ಮಗೆ ಶಾಲೆಯಲ್ಲಿ ಗೆಳತಿಯರು ಸಿಕ್ಕರು; ಆಟ–ಪಾಠ, ಪಿಕ್‌ನಿಕ್, ಪರೀಕ್ಷೆ – ಪಿಂಕಿಗೆ ಎರಡು ಮುತ್ತು ಎರಡು 'ಹಲೋ'ಗಳೇ ಸಿಕ್ಕುವುದು! ಪ್ರಾಣಿ ಹಸಿವೆಗೆ ನಾನ್–ಸ್ಟಾಪ್ ಬೊಗಳಿದರೆ ಸುಮ್ಮನಿರಲು ಸಾಧ್ಯವೇ? ಬೇಸಿನ್‌ಗೆ ಹಾಲು ಹಾಕಿ ಹತ್ತಿರ ಇಡುವರು ದೊಡ್ಡಪ್ಪ, ದೂರದಿಂದ ಬ್ರೆಡ್, ಬಿಸ್ಕತ್ತು ಹಾಕುವವರು ದೊಡ್ಡಮ್ಮ.

ಹಬ್ಬದ ದಿನ ಬಿಡುವಾಗುವುದಿಲ್ಲ, ಹಿಂದಿನ ದಿನವೇ ಹಿರಿಯರಿಗೆ ನಮಸ್ಕಾರ ಮಾಡಿ ಬರೋಣ ಎಂದು ದೊಡ್ಡಪ್ಪನ ಮನೆಗೆ ಹೊರಟೆ. ಅರ್ಧ ದಾರಿಯಲ್ಲೇ ಎದುರಾದರು. ಪುಟ್ಟ ಶಾಲು ಕವುಚಿದ ನಾಯಿ ದೊಡ್ಡಪ್ಪನ ಕಂಕುಳಲ್ಲಿ ಆರ್ಥ್ರೈಟಿಸ್‌ನ ಅಷ್ಟಗಾಲು ಹಾಕುತ್ತ ಪತಿರಾಯನ ಪಕ್ಕದಲ್ಲಿ ನಡೆಯುತ್ತಿರುವ ದೊಡ್ಡಮ್ಮ. ನನ್ನನ್ನು ನೋಡಿದ್ದೇ "ಪಿಂಕಿಗೆ ತುಂಬ ಮೈಹುಷಾರಿಲ್ಲ ಸರೂ. ರಾತ್ರಿಯೆಲ್ಲ ಕುಂಯ್ಗುಡ್ತಿತ್ತು" ಅಂದರು ದೊಡ್ಡಪ್ಪ. "ತೊಡೇ ಮೇಲೇ ಹಾಕ್ಕೊಂಡಿದ್ದೆ ಕಣೇ, ಪಾಪ! ಎಷ್ಟು ನೋವ್ಹೋ ಏನ್ಕಥೆಯೋ? ಆಸ್ಪತ್ರೆಗೆ ಕರಕೊಂಡು ಹೋಗ್ತಿದೀವಿ" ಅಂದರು ದೊಡ್ಡಮ್ಮ.



(ವಸ್ತು 'ಪೈರೆಸಿ' ಶ್ರೀಮತಿ ಸರೋಜಾ ನಾರಾಯಣರಾವ್‌ರವರಿಂದ)

ರಾಂಪುರದ ಮನೆ ಭೂತ

ಕೇಫ

ರಾತ್ರಿ ನಾನು ಸರಿಯಾಗಿ ನಿದ್ರೆ ಮಾಡಿರಲಿಲ್ಲ. ಮೈಗಳ್ಳರ ಸಂಘದಲ್ಲಿ ಹಿಂದಿನ ದಿನ ಟಿಪ್ಸಿ, ನಂಗೆ ಓದೋಕೇಂತ ಒಂದು ಪುಸ್ತಕ ಕೊಟ್ಟಿದ್ದ ಗುರು ರಾಜಾಚಾರ್ರು ಬರೆದಿದ್ದ ಪತ್ತೇದಾರಿ ಕಾದಂಬರಿ 'ಕಾಣದ ಕೈ'. ಅದನ್ನು ಓದ್ತಾ ಓದ್ತಾ ಹಾಗೇ ಮಲಗಿದ್ದೆ. ಶೌರಿ ನನ್ನ ಮುಂಜಾನೆ ಕಾಫಿ ತಂದು ನನ್ನನ್ನೆಬ್ಬಿಸಿದಾಗ ನಾನು ಎಚ್ಚರವಾಗೇ ಇದ್ದೆ. ಕಾಫಿಲೋಟ ಕೈಗೆ ತಕೊಳ್ತಾ ಶೌರಿಯ ಮುಖ ನೋಡ್ದೆ. ಚಂದಿ ಒಂದೊಂದು ಬಾರಿ ರಾಜನ ಮುಖಾನ ವರ್ಣಿಸೋ ತರಹ ಹಾ ಪ್‌ಮೋರೆ ಹಾಕ್ಕೊಂಡಿದ್ದ.

"ಯಾಕೆ ಶೌರಿ ಹೀಗಿದ್ದಿ? ನಿನ್ನ ಕೈ ಬೆರಳುಗಳೆಲ್ಲಾ ಸರಿಯಾಗಿವೆ ತಾನೆ?"

"ಎಲ್ಲಾ ಸರಿಯಾಗಿವೆ ಸರ್ ಆದರೆ "

"ಏನು ಶೌರಿ?"

"ರಾಮಪುರದ ಮನೇಲಿ ಎರಡು ಭೂತಗಳು ಸೇರ್ಕೊಂಡಿವೆಯಂತೆ ಸರ್ " ಅಂದ ಸ್ವಲ್ಪ ಬಿಳಿಚಿಕೊಳ್ತಾ.

"ಸ್ಟಾಪ್ ಶೌರಿ ಯಾರು ನಮ್ಮ ಭೀಮಾಮಾವನ್ನ, ನಾಗೇತ್ತೇನ ಭೂತಗಳ ಪಟ್ಟಕ್ಕೇರಿಸಿದೋರು?" ಅಂದೆ.

"ಭೀಮರಾಯರು ನಾಗಮ್ಮನೋರು ರಾಂಪುರದಲ್ಲಿ ಎರಡು ವಾರಗಳಿಂದ "

"ಎಷ್ಟು.."

"ಕ್ಷಮ್ಸಿ ಸರ್... ಮೂರು ವಾರಗಳಿಂದ ಇಲ್ಲ ಸರ್"

ಶೌರಿಯ ಮಾತು ಕೇಳಿ ನನಗಾಶ್ಚರ್ಯವಾಯ್ತು. ನಮ್ಮ ರಾಂಪುರ ಅಸ್ತಿತ್ವಕ್ಕೆ ಬಂದಿದ್ದು ಕಲಿಯುಗದ ಮೊದಲ್ನೇ ದಶಕದಲ್ಲೇ ಅಂತ ಊರಿನ ಕ್ಯಾತೇ ದೇವರಗುಡಿ ಪತ್ರಗಳಲ್ಲಿ ದಾಖಲೆ ಇದೆ ಅಂತ ಶೌರಿಯ ಭಾವ ಹೆಗ್ಗಡದೇವನ ಕೋಟೆ ಅಖಿಲಾಂಡಯ್ಯ ನನಗೆ ಹೇಳಿದ್ದ. ಇತಿಹಾಸದ ಪ್ರಕಾರ ಭೀಮಮಾವನ ಪೂರ್ವಜ



ರಾಮಯ ಅನ್ನೋನು ಪಾಂಡವರ ವನವಾಸದ ಸಮಯದಲ್ಲಿ ಅವರಿಗೆ ಅಪರೂಪದ ಗಿಡಮೂಲಿಕೆಗಳನ್ನೆಲ್ಲಾ ಒದಗಿಸಿದ್ದನಂತೆ. ಪಾಂಡವರು ಪಟ್ಟಕ್ಕೆ ಬಂದ ಮೇಲೆ -ಯುಧಿಷ್ಟಿರ ಮಹಾರಾಜ ರಾಮಯ್ಯನಿಗೆ ಈಗ ರಾಂಪುರವಿರೋ ಜಾಗಾನ ಬಳುವಳಿಯಾಗಿ ಕೊಟ್ಟನಂತೆ. ಆ ಊರಿನಲ್ಲಿ ಭೀಮ ಹೆಜ್ಜೆ ಇಟ್ಟ ಕಡೆ ಬಿದ್ದ ಹಳ್ಳವಿದೆ. ಅಲ್ಲಿ ಕೆಲವು ಕಲ್ಲಿನ ಗುಂಡುಗಳಿವೆ. ಅವು ಹಿಂದೆ ಕೃಷ್ಣ

ಬಿಸಾಡಿದ ಬೆಣ್ಣೆ ಮುದ್ದೆಗಳು ಅಂತ ರಾಂಪುರದ ಶಾನುಭೋಗ ಹರಿಯಪ್ಪನೋರು ನಂಗೆ ಹೇಳಿದ್ದಾರೆ – ಇರಲಿ ಅದರೆ ಆ ಕಾಲದಿಂದ ಇದುವರೆಗೂ ಭೀಮಮಾವನ ಯಾವ ಪೂರ್ವಜನೂ ಪತ್ನೀಸಮೇತವಾಗಿ ಐದು ದಿನಗಳ ಮೇಲೆ ಮನೆಬಿಟ್ಟು ಹೋದ ದಾಖಲೆ ಇಲ್ಲ. ಒಂದೆ ಅಂದ್ರೆ ತುಂಬಾ ಒಂದೆ ಭೀಮಮಾವನ ಪೂರ್ವಜರಿಬ್ಬರು ಹಸರುಗಳು ದಾಖಲೆ ಇಲ್ಲ ಕಾಶೀಯಾತ್ರೆಗೆ ಹೋದೋರು ವಾಪ್ಸು ಬರಲಿಲ್ಲ. ಅದು ನಡೆದಿದ್ದು ದೆಹಲೀಲಿ ಯಾರೋ ಖಿಲ್ಜಿ ಅನ್ನೋನು ಆಳ್ತಾ ಇದ್ದಾಗ. ಈಗ ದೆಹಲೀನ ಬಾಬ್ರಿ ರಾಮ ಇಬ್ರೂ ಅಲ್ಲಾಡಿಸ್ತಾ ಇರೋ ಕಾಲದಲ್ಲಿ ಭೀಮಮಾವ ನಾಗತ್ತೆ ಇಬ್ರೂ ಮೂರುವಾರದಿಂದ ರಾಂಪುರದಲ್ಲಿ ನಾಪತ್ತೆ ಅಂದ್ರೆ ನಾನು ಹೇಗೆ ನಂಬಲಿ? ಭೀಮಮಾವ ಜೆಮ್ಕು. ಅದೇ ನಾಗತ್ತೆ ಅಂಟೆಸ್ಟ್ ಆಫ್ ಅಂಟ್ಸ್ ಏನಲ್ಲ. ಶೌರೀನ ಕಂಡ್ರೆ ಆಗೊಲ್ಲ ಅವರಿಗೆ.

"ಶೌರಿ ನಿಜ ಹೇಳು. ಭೀಮರಾಯರು ನನ್ನ ಅಂಕಲ್ಸ್ ಪೈಕೀಲೆಲ್ಲಾ ಅಂಕ್ಲೆಸ್ಟು. ಮೂರು ವಾರದಿಂದ ನಾಪತ್ತೆ ಅಂತ ಈಗ ಹೇಳ್ತಾ ಇದ್ದೀಯಲ್ಲಾ ಯಾಕೆ ವಿಚಾರಿಸಲಿಲ್ಲ? ಮ್ಯಾಟರ್ ಸೀರಿಯಸ್ ಅಲ್ವೆ?"

"ಹಾಗೇನು ಕಾಣೊಲ್ಲ ಸರ್. ನಾಗಮ್ಮನೋರು ಈಗ ಸದ್ಯದಲ್ಲಿ ವಿಮಲಮ್ಮನೋರ ಮನೇಲಿದ್ದಾರೆ."

ವಿಮಲ ನಾಗತ್ತೆ ಭೀಮಮಾವನ ಡಾಟರು.

"ಅದೇಕೆ"?

"ವಿಮಲಮ್ಮನೋರ ಮಾವ ಅತ್ತೆ ಬದರಿಯಾತ್ರೆ ಹೊರಟಿದ್ದಾರೆ ಭೀಮರಾಯರು ಹೆಬ್ಬೂರಲ್ಲಿದ್ದಾರೆ "

"ಯಾರು ನಿಂಗೆ ಹೇಳಿದ್ದು?"

"ಡೋಂಟ್‌ಫಿಕರ್ ಕಂಡಕ್ಟರ್ ಖಾದರು. ಅವನ ಬಸ್‌ನಲ್ಲೇ ಭೀಮರಾಯರು ಹೆಬ್ಬೂರಿಗೆ ಬಂದರಂತೆ. ಅವನೇನಂತೆ ಅವರಿಗೆ ಇಲ್ಲಿಂದ ಉಂಡೆ ನೆಕ್ಕ ತಕೊಂಡು ಹೋಗಿಕೊಡೋದು."

ಶೌರಿ ಮಾತು ಕೇಳಿ ನನಗೆ ನಿಜವಾಗಿ ಮನಸ್ಸು ಪಿಚ್ಚೆನ್ನಿಸಿತು. ಭೀಮಮಾವ ನಾಗತ್ತೆ ನಿಜವಾಗಿ ಮೂರು ವಾರಗಳಿಂದ ನಾಪತ್ತೆಯಾಗಿದ್ದಿದ್ದರೆ ನಾನವರನ್ನ ತುಂಬಾ ಮೆಹನತ್ತಿನಿಂದ ಸಜೀವವಾಗೋ ನಿರ್ಜೀವ ಅಥವಾ ಅಜೀವ? ವಾಗಿಯೋ ಪತ್ತೆ ಹಚ್ಚಿ ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಮಸಿ ಬಳಿಯೋಣಾಂತ ನೆನಸಿದ್ದೆ. ಪುರುಷೋತ್ತಮನ ಸಾಹಸಗಳನ್ನೆಲ್ಲಾ ಅವನ ಮೂವತ್ತೊಂಭತ್ತನೇದನ್ನ ಮೂರುಬಾರಿ ಓದಿದ್ದೆ. ಹಿಚ್‌ಕಾಕ್ ಪಿಕ್ಚರ್ಸ್‌ನೆಲ್ಲಾ ನೋಡಿದ್ದೆ. ಈಗ ಶೌರಿಯ ಬಾಯಿಂದ ಮಾವ ಅತ್ತೆ ಸುಖವಾಗಿದ್ದಾರೇಂತ ಕೇಳಿ ನಮ್ಮ ಕ್ರಿಕೆಟ್ ಟೀಂ ತರಹ ಕಾಟ್ ಬೋಲ್ ಸ್ಟಂಪ್ಡ್ ಅಂಡ್ ರನೌಟ್ ಆದೆ ಎಲ್ಲಾ ಒಟ್ಟಿಗೆ.



"ನಾನೊಂದು ಸಾರಿ ರಾಂಪುರಕ್ಕೆ ಹೋಗಿ ಬರಲೇ ಸರ್?"

ಶೌರಿಯ ಪ್ರಶ್ನೆ ನನ್ನನ್ನ ದಿಢೀರಂತ ರಾಂಪುರದ ಭೂತದ ಕಡೆ ಎಳೀತು. ನಮ್ಮ ರಾಂಪುರದ ಮನೆ ಮತ್ತು ಹೆಬ್ಬೂರು ಮನೆಗಳಲ್ಲಿ ಮೇಲಿನ ಉಪ್ಪರಿಗೆಗಳಲ್ಲಿ ಭೂತಗಳು ಓಡಾಡುತ್ತೆ ಅಂತ ಇಡೀ ಮೈಸೂರು ಜಿಲ್ಲೆಗೇ ಗೊತ್ತು. ನಾನಿದನ್ನ ತುಂಬಾದಿನ ನಂಬಿರಲಿಲ್ಲ ಕಾರಣ ರಾಂಪುರದ ಶಿಂಗ್ರು ಭೀಮಮಾವನ ಪುತ್ರರತ್ನ ಹಾಗೂ ಹೆಬ್ಬೂರಿನ ಮೂರ್ತಿ --ಇಬ್ರೂ ತಮ್ಮ ತಮ್ಮ ಮನೆಭೂತಗಳೇ ಅವರುಗಳ ಬಾಡಿಗಾರ್ಡ್ಸ್ ಅಂತ ಹೇಳ್ಕೊತ್ತಾರೆ. ತಾವು ಸ್ಮೋಕ್ ಮಾಡೋಕೆ ಉಪ್ಪರಿಗೆ ಮೇಲೆ ಏರಿದರೆ ಬೇರೆ ಯಾರೂ ಅಲ್ಲಿಗೆ ನುಗ್ಗದ ಹಾಗೆ ಆ ಭೂತಗಳು ನೋಡ್ಕೊಳ್ತವಂತೆ. ಅವರಿಬ್ಬರದೇ ಈ ಕಿತಾಪತಿ ಅಂತ ಅಂದುಕೊಂಡಿದ್ದೆ. ಆದರೆ ಹೆಬ್ಬೂರು ಮನೆ ಅಡಿಗೆ ಶಾಮಣ್ಣ ಕನ್‌ಫರ್ಮ್ ಮಾಡಿದ್ದ. ರಾಂಪುರದಲ್ಲಿರೋದು ದುರ್ಗಾಸಾನಿ ಭೂತ ಅಂತ್ಲೂ ಹೆಬ್ಬೂರಿನಲ್ಲಿ ಝಂಡಾ ಹಾಕಿರೋದು ಚಂದ್ರಾಸಾನಿ ಭೂತ ಅಂತ್ಲೂ ಶಾಮಣ್ಣ ಒಂದು ಬಾರಿ ನಂಗೆ ಹೇಳಿದ್ದ. ಶಾಮಣ್ಣನ್ನ ಮತ್ತೂ ನೀಡಳ್ ಮಾಡಿದ ಮೇಲೆ ಇನ್ನೂ ಡಿಟೆಯಿಲ್ಸ್ ಹೇಳಿದ. ದುರ್ಗಾಸಾನಿ ನಮ್ಮ ಭೀಮಮಾವನ ಪೂರ್ವಜರೊಬ್ಬರ ಪ್ರಾಯಶಃ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಗರ್ಲ್‌ಫ್ರೆಂಡ್ ಆಗಿದ್ಲಂತೆ. ಅದೇ ರೀತಿ ಚಂದ್ರಸಾನಿ ಹೆಬ್ಬೂರು ಭಾಗೀರತೀ ಚಿಕ್ಕಮ್ಮನ ಪತಿ ಶಂಕರರಾಯರ ಪೂರ್ವಜರೊಬ್ಬರ ಗರ್ಲ್‌ಫ್ರೆಂಡ್ ಆಗಿದ್ಲಂತೆ. ಆಸಾನಿಗಳಿಬ್ರೂ ಹೇಗೆ ಭೂತಗಳಾದ್ರು ಅಂತ ಶಾಮಣ್ಣ ಹೇಳಲಾರ. ಇವೆಲ್ಲಾ ಬಂಕಂ ಅಂದುಕೊಂಡಿದೆ ನಾನು.

"ಶೌರಿ ಇದೆಲ್ಲಾ ಬಂಕಂ ! ನಾನು ನಂಬೊಲ್ಲ" ಅಂದೆ.

"ಏನು ನಂಬೊಲ್ಲ ಸರ್?"

"ರಾಂಪುರದ ಮನೇಲಿ ಭೂತವಿದೇಂತ "

"ನಿಮಗೆ ಪೀತಾಂಬರ ಉಪಾಧ್ಯಾಯರು ಗೊತ್ತಲ್ವೆ ಸರ್?"

"ಗೊತ್ತು.."

ಈ ಪೀತಾಂಬರ ಉಪಾಧ್ಯಾಯ ಒಂದು ಬಾರಿ ರಾಂಪುರದಲ್ಲಿ ಝಂಡಾ ಹಾಕಿದ್ದ. ಅದೇ ಸಮಯದಲ್ಲಿ ನಮ್ಮ ವಿಪು ಶಿಂಗ್ರೂಗೆ ಟ್ಯೂಟರ್ ಆಗಿ ರಾಂಪುರದ ಮನೇಲಿ ಇದ್ದ. ವಿಪು ಪ್ರತಿ ರೇಸಿಂಗ್ ಸೀಸನ್ ಮುಗಿದ ಮೇಲೂ ಟ್ಯೂಷನ್ ಕೆಲ್ಸ ಹುಡುಕ್ತಾನೆ. ನಮ್ಮ ನಾಗತ್ತೆ ಇದೇ ಉಪಾಧ್ಯಾಯ– ಪೀತಾಂಬರ ವಿಪು ಅಲ್ಲ ಅವರಿಗೆ ಕಾರ್ಯದರ್ಶಿ ಕೆಲ್ಸ ಮಾಡೋಕೆ ನನ್ನನ್ನ ಸೇರಿಸಬೇಕು ಅಂತ ಯೋಚಿಸಿದ್ದರು. ಶೌರಿ ತಪ್ಪಿಸಿದ್ದ.



"ಅದೇ ಪೀತಾಂಬರ ಉಪಾಧ್ಯಾಯರು ಒಂದು ಬಾರಿ ಆ ಮನೇಲಿ ಎರಡನೇ ಉಪ್ಪರಿಗೆಯಿಂದ ಮೂರನೇ ಉಪ್ಪರಿಗೆ ಮೆಟ್ಟಲು ಹತ್ತೋಕೆ ಪ್ರಯತ್ನಿಸಿದರು ಸರ್– ಮೆಟ್ಟಲುಗಳ ಮೇಲಿಂದ ಕೆಂಪು ರಕ್ತ

ಸಣ್ಣದಾಗಿ ಪರಿದುಕೊಂಡು ಬಂದಿಳೀತಂತೆ. ಅದನ್ನ ನೋಡಿದ ತಕ್ಷಣ ಅವರು ಪ್ರಜ್ಞಾಹೀನರಾಗಿ ಎರಡುದಿನ ಮಲಗಿ ಬಿಟ್ಟರಂತೆ''

''ಆಮೇಲೆ?''

''ಅದೆಲ್ಲಾ ಭೂತಚೇಷ್ಟೆ ಪುನಃ ಆಕಡೆ ನೀವು ನೋಡಬೇಡಿ. ಹಾಗೂ ಈ ವಿಷಯಾನ ನಮ್ಮ ತಾಯಿಗೆ ತಿಳಿಸಬೇಡಿ ನಾನೆಲ್ಲಾ ಸರಿ ಪಡಿಸ್ತೇನೆ '' ಅಂತ. ನರಸಿಂಗರಾಯರು ಎಚ್ಚರಿಸಿದರಂತೆ.

''ಅಂದ್ರೆ ಶಿಂಗ್ರು ಪತೋಟಿ ಬೀರೋ ಭೂತ! ಶೌರಿ ನಾನೂ ಬರ್ತೀನಿ ರಾಂಪುರಕ್ಕೆ ಭೂತಾನ ನೋಡಬೇಕು'' ಅಂದೆ.

''ನೀವೇ ಸರ್?''

ಶೌರಿ ಬಿಳಿಚಿಕೊಂಡ

''ನಾನು ನಿರ್ಧರಿಸಿದ್ದೇನೆ ಶೌರಿ'' ಅಂದೆ.

''ಸರಿಸರ್ ಆದರೆ ಕಾರ್ ತರಬೇಡಿ. ಡೋಂಟ್‌ಫಿಕರ್ ಬಸ್‌ನಲ್ಲಿ ಹೋಗೋಣ'' ಅಂದ.

''ಆಗಲಿ ಶೌರಿ'' ಅಂತ ಒಪ್ಪಿದೆ.

''ಸರಿ ಸರ್'' ಅಂದ ಪುನಃ ಹ್ಯಾಪ್‌ಮೋರೆ ಮಾಡ್ತಾ

ನನಗಾಗ ಯಮಧೈರ್ಯ ಬಂದಿತ್ತು. ಬೆಂಕಿಭೀಮಣ್ಣ ಒಮ್ಮಡಿ ಇಮ್ಮಡಿ ಮುಮ್ಮಡಿ ನಾಲ್ವಡಿ ರಂಪೋಲ್ ರಂಗಣ್ಣರುಗಳ ಪೀಳಿಗೆಯವನಾದ ನಾನು ಕೇವಲ ದುರ್ಗಾಸಾನಿ ಭೂತಕ್ಕೆ ಹೆದರಬೇಕೆ?

ರಾಂಪುರಕ್ಕೆ ಹೋಗೋ ಡೋಂಟ್‌ಫಿಕರ್‌ನಲ್ಲಿ ಕೂತೆವು. ಕಂಡಕ್ಟರ್ ಬುಡನ್ನು,

''ಯಾಕೆ ಶೌರಿಯಣ್ಣ ರಾಯರು ಒಂಥರಾ ಇದ್ದಾರೆ? 'ಮಹಲ್' ಪಿಕ್ಚರ್‌ನಾಗೆ ಅಶೋಕ್‌ಕುಮಾರ್ ಇದ್ದ ಹಾಗಿದ್ದಾರಲ್ಲಾ ಭೂತ ಬಂಗ್ಲಾ ತೋರಿಸ್ತೀಯಾ ರಾಯ್ರಿಗೆ?'' ಅಂತ ಕೇಳ್ದ.

ನಾನು ಶೌರಿ ಕಡೆ ನೋಡಿದೆ. ಶೌರಿ ಡ್ರೈವರ್ ಅಸ್ಲಂ ಹತ್ರ ಮಾತಾಡ್ತಿದ್ದ. ಸುಮಾರು ನಾಲ್ಕನೇ ರೇಸಿನ ಸಮಯಕ್ಕೆ ಡೋಂಟ್ ಫಿಕರ್ ಬಸ್ ಕೆಮ್ಮುತ್ತಾ ಕುಂಟ್ತಾ ರಾಂಪುರ ಸೇರಿ ಭೀಮಮಾವನ ಮನೆ ಗೇಟ್ ಮುಂದೆ ಇಸ್ತಾಪಾಯ್ತು. ಮನೆನಾಯಿ ಕರಿಯ ಮತ್ತು ಕಂಪೆನಿಯಿಂದ ನನಗೆ ಶೌರಿಗೆ ಪ್ರಚಂಡ ಸ್ವಾಗತವಾಯ್ತು – ಇಪ್ಪತ್ತೊಂದು ಫಿರಂಗಿ ಗುಂಡು ಸೆಲ್ಯೂಟ್ ತರಹ. ಆ ಗದ್ದಲ ಕೇಳಿಯೋ ಏನೋ ಬಂಗಲೆ ಒಳಗಿಂದ ಒಂದು ರಕ್ತವರ್ಣದ ಮುಂಡು ಉಟ್ಕೊಂಡಿದ್ದ ಪೂರ್ತಿ ಬೋಳು ತಲೆ ಶರೀರದ ವ್ಯಕ್ತಿ ಕೋಲು ಹಿಡಿದು ಹೊರಕ್ಕೆ ಬಂದರು.





"ಯಾರದು?" ಅಂತ ಘರ್ಜಿಸಿದರು

"ನಾನು- ಶೌರಿ ಮತ್ತು ರಾಯರು" ಅಂದ ಶೌರಿ ಒಂಥರಾ ಕೀರಲು ಧ್ವನೀಲಿ.

"ಈ ಕ್ಷಣ ನಿನ್ನ ರಾಯನ್ನ ಇಲ್ಲಿಂದ ತೊಲಗಿಸಿಕೊಂಡು ಹೊರಡು ಇಲ್ಲದಿದ್ದರೆ ಇಲ್ಲೇ ಈಗ್ಲೇ ನಿಂದೂ ಅವರದೂ ...."

ಶೌರಿ ಅಲ್ಲಿ ನಿಲ್ಲಲಿಲ್ಲ.

"ಬನ್ನಿ ಸರ್- ಇಲ್ಲಿ ನಿಲ್ಲೋದು ಕ್ಷೇಮವಲ್ಲ. ಶಾನುಭೋಗ ಹರಿಯಪ್ಪನೋರ ಮನೆಗೆ ಹೋಗೋಣ" ಅಂದ.

"ಯಾರು ಶೌರಿ ಅದು? ಭಯಂಕರ ಭೈರಾಗಿಯೆ?" ಅಂದ ಪಿಸುಗುಟ್ಟಿದೆ

"ಅವನಿಗಿಂತ್ಲೂ ಡೇಂಜರು ಸರ್ ನಡೀರಿ" ಅನ್ನುತ್ತಾ ಶಾನುಭೋಗ ಹರಿಯಪ್ಪನೋರು ಮನೆ ಕಡೆ ಲಗೇಜ್ ಸಮೇತ ನಡೆದ ನಾನೂ ಹಿಂಬಾಲಿಸಿದೆ.

"ಸರ್" ಅಂತ ನಿಂತ

"ಏನು ಶೌರಿ?"



"ಹಾಗೇ ಮೇಲುಪ್ಪರಿಗೆ ಕಿಟಿಕೀ ಕಡೆ ಕಣ್ಣು ಹಾಯ್ಸಿ ಸರ್ ಸರ್" ಅಂದ.

"ಹಾಗೇ ಕಣ್ಣು ಹಾಯ್ಸಿದೆ. ಎರಡು ಕೆಂಪು ಫುಟ್‌ಬಾಲ್ ತರಹ ಗುಂಡು ಆಕಾರಗಳು ನನ್ನ ಕಣ್ಣಿಗೆ ಬಿದ್ದವು. ನನ್ನ ಮೈಯಲ್ಲಿ ಒಂದು

ರೀತಿ ಷಾಕ್‌ವೇವ್ ಹರಿದ ಹಾಗಾಯ್ತು. ಆ ಕೆಂಪು ಚೆಂಡುಗಳು ನೇತಾಡುತ್ತಿದ್ದವೋ ತೇಲಾಡುತ್ತಿದ್ದವೋ ಗೊತ್ತಾಗಲಿಲ್ಲ.

"ಶೌರಿ   ! "

"ಈಗ ಇಲ್ಲಿ ನಿಲ್ಲೋದು ಬೇಡ ಸರ್. ನೇರವಾಗಿ ಹರಿಯಪ್ಪನೋರ ಮನೆಗೆ ಹೋಗೋಣ. ಅಲ್ಲಿಂದ ನೀವು ನೇರವಾಗಿ ಸಂಜೆ ಬಸ್‌ನಲ್ಲಿ ವಾಪಾಸಾಗಿ ಸರ್–ನಗರಕ್ಕೆ"

"ಇವತ್ತೇ "

"ಹೌದು ಸರ್ ನಮ್ಮ ಸುತ್ತಲೂ ಸಾವಿರ ಕಿವಿಗಳಿವೆ ಸರ್ ಈ ಊರಿನಲ್ಲಿರೋದೇ ಡೇಂಜರು ಸರ್ ಹರಿಯಪ್ಪನೋರ ಮನೆ ಬಂತು ಸರ್..."

ರಾಂಪುರದ ಶ್ಯಾನುಭೋಗ ಹರಿಯಪ್ಪನೋರು ಚಿನ್ನದಂಥಾ ಮನುಷ್ಯ. ಒಂದು ಬಾರಿ ಇವರ ಮನೇಲಿ ಒಂದು ವಾರ ಝುಂಡಾ ಹಾಕಿ ಹಗಲೂ ರಾತ್ರಿ ಯಾರ ತಾಪತ್ರಯವೂ ಇಲ್ದೆ ನನ್ನ ಬುಲ್‌ಬುಲ್ ತರಂಗ್‌ನ ಕುಟ್ಟಿ ಬಜಾಯ್ಸಿದ್ದೆ. ಶಿವರಾಂಪೇಟೆ ಜನ ನನ್ನ ಬುಲ್‌ಬುಲ್ ತರಂಗ್ ಝೇಂಕಾರಾನ ಸಹಿಸಲಾರದೆ ಮೈಸೂರಿಂದ ನನ್ನನ್ನು ಗಡೀಪಾರು ಮಾಡಿದ್ದರು. ಹರಿಯಪ್ಪನೋರ ಮನೇಲಿ ಅವರ ಮಗ ರಂಗನಾಥನ ಹಾರ್ಮೋನಿಯಂ ಸಾಥಿ ಕೂಡ ಸಿಕ್ಕಿತ್ತು ವಂಡರ್‌ಫುಲ್ ಟೈಮ್ !

"ಹರಿಯಪ್ಪನೋರ ಹತ್ತಿರ ದೊಡ್ಡಮನೆ ಭೂತದ ವಿಷಯ ಎತ್ತಬೇಡಿ ಸರ್–" ಅಂತ ಶೌರಿ ಎಚ್ಚರಿಸಿದ.

ಹರಿಯಪ್ಪನೋರು ನಮ್ಮನ್ನು ತುಂಬಾ ಆದರದಿಂದ ಸ್ವಾಗತಿಸಿ ರಸಬಾಳೆ ಮುಚ್ಚೋರೆ ಕಾಫಿ ಸಮಾರಾಧನೆ ನಡೆಸಿದರು.

"ದೊಡ್ಡ ಮನೇಲಿ ರಾಯರೂ ನಾಗಮ್ಮನೋರೂ ಇಲ್ಲಾಂತ ನಿಮಗೆ ಗೊತ್ತಲ್ಲ. ಅರ್ಜೆಂಟಾಗಿ ಒಂದು ರಿಕಾರ್ಡ್ ಬೇಕಾಗಿತ್ತು ಅದಕ್ಕೆ ಮೈಸೂರಿಂದ ಪಾಂಡುರಂಗರಾಯರನ್ನು ಕರ್ಕೊಂಡು ಬಂದೆ " ಅಂತ ಶೌರಿ ನಮ್ಮ ರಾಂಪುರದ ಭೇಟಿ ಉದ್ದೇಶ ಹೇಳಿದ.

ಶೌರಿ ತರಹ ನಂಗೂ ಸುಳ್ಳು ಹೇಳೋಕೆ ಬಂದಿದ್ದಿದ್ದರೆ ನಾನೀಗ ಸಿ.ಎಂ. ಆಗ್ತಾ ಇದ್ದೆ !

"ಪಾಂಡುರಂಗರಾಯರು ಎಂದೂ ಪಾಂಡುರಂಗರಾಯರೇ "ಅಂತ ಹರಿಯಪ್ಪನೋರು ಹೊಗಳಿದರು.



ಮೈಸೂರಿಗೆ ಪುನಃ ಬುಡನ್ ಬಸ್‌ನಲ್ಲೇ ವಾಪಸ್ ಬಂದೆ. ವರ್ಲ್ಡ್‌ಕಪ್ ಕ್ರಿಕೆಟ್‌ನಿಂದ ಅಜಾರುದ್ದಿನ್ ವಾಪಸ್ ಬಂದ ಹಾಗೆ. ಆಗ ರಾತ್ರಿ ಸುಮಾರು ಸೆಕೆಂಡ್ ಷೋ ಇಂಟರ್‌ವಲ್ ಸಮಯ. ಬಸ್ಸಿಂದ

ಇಳೀತಿದ್ದ ಹಾಗೇ ನನ್ನ ಬ್ಯಾಗನ್ನ ಕೈಗೆತ್ತಿಕೊಂಡೋನು ಉಜ್ಜನಪ್ಪ ಘಂಟಾಘೋಷ ಪೇಪರ್ ಎಡಿಟರು.

"ಶೌರಿಯಣ್ಣ ಯೋಳಿದ್ದ ನೀವು ಈ ಬಸ್‌ನಾಗೆ ಬರ್ತೀರಿ ಅಂತ ಕ್ಯಾರಿಯರ್‌ನಲ್ಲಿ ಊಟ ತಂದಿಟ್ಟಿದ್ದೇನೆ–" ಅಂದ.

ರಾಮ್‌ಪುರದಿಂದ ನನ್ನ ಸ್ಟ್ರಾಟಜಿಕ್ ರಿಟ್ರೀಟ್‌ನ ಮೊದಲೇ ಶೌರಿ ನಿರೀಕ್ಷಿಸಿ ಈ ಏರ್ಪಾಟೆಲ್ಲಾ ಮಾಡಿದ್ದ ಅಂತ ಅರ್ಥವಾಯ್ತು. ಊಟ ಮುಗಿಸಿ, ಹಾಲಿನ ಸೋಫಾ ಮೇಲೆ ಕೂತು ಕೈಗೆ ಬುಲ್‌ಬುಲ್ ತರಂಗ್ ತಕೊಂಡೆ.

"ರಾಂಪುರದಲ್ಲಿ ವಿಷಕಂಠರಾಯರಿದ್ರಾ?" ಉಜ್ಜನಪ್ಪ ಕೇಳಿದ.

ನನಗೆ ಚೇಳು ಕುಟುಕಿದ ಹಾಗಾಗಿ ಬುಲ್‌ಬುಲ್ ತರಂಗ್ ಕೈಯಿಂದ ಜಾರುವುದರಲ್ಲಿತ್ತು.

"ಇಲ್ಲ ನಾನು ನೋಡಲಿಲ್ಲ. ಏಕೆ ಅವರಲ್ಲಿದ್ದಾರೆ ಅಂತ ಯಾರು ನಿಂಗೆ ಹೇಳಿದ್ದು?"

"ತಿಪ್ಪಣ್ಣ ಹೇಳ್ದ ರಾಯರೂ ಮಹಾಲಕ್ಷಮ್ಮನೋರೂ ಗುಲಾಬಕ್ಕನೂ ತಿರುಪತೀಗೆ ಹೋಗಿ ವಾಪ್ಸಾಗಿ ರಾಂಪುರದಲ್ಲಿ ಇವಾರೇಂತ ಅಷ್ಟೆ " ಅನ್ನುತ್ತಾ ಒಳಕ್ಕೆ ಹೋದ.

ಈ ಪ್ರಸಂಗಾನ ನಾನು ಮುಂದುವರಿಸೋಕೆ ಮೊದಲು ನಿಮಗೆ ಈ ಪಟಾಲಂ ಯಾರೂಂತ ಜ್ಞಾಪಿಸಬೇಕು. ನಿಮಗೆ ಗೊತ್ತಿದ್ದರೆ ಕ್ಷಮಿಸಿ. ವಿಷಕಂಠರಾಯರು ನಮ್ಮ ಚಿಕ್ಕಪ್ಪ. ರುಸ್ತುಂ ಗರಡಿ ಆಳು. ಮಹಾಲಕ್ಷ್ಮಮ್ಮ ಅವರ ವೈಫ್ ಒಂದೆ ಪ್ಯಾಲೇಸ್‌ನಲ್ಲಿ ಡ್ಯಾನ್ಸರ್ ಆಗಿದ್ದು ರಿಟೈರ್ ಆಗಿರೋರು. ಗುಲಾಬಿಮಾಲಾ ಆಕೆಯ ಪೂರ್ವಾಶ್ರಮದ ಮಗಳು. ತಿಪ್ಪಣ್ಣ ನನ್ನ ಬುಲ್‌ಬುಲ್ ತರಂಗ್ ಗುರು ಗುಲಾಬಿಮಾಲಾ ಪತಿ. ಈ ಉಜ್ಜನಪ್ಪ ತಿಪ್ಪಣ್ಣನ ನೂರೆಂಟು ಆಂಟಿಗಳ ಪೈಕಿ ಒಬ್ಬ ಆಂಟೀ ಮಗ ಎಡಿಟರು ಹಾಗೂ ನಮ್ಮ ಶೌರಿಗೆ ಭಂಟ.

ನಾನು ಡನ್‌ಹಿಲ್ ಹಚ್ಚಿದೆ. ಐದನೇ ಪಫ್ ಎಳೀತಿದ್ದಾಗ ನನ್ನ ತಲೇಲಿ ಏನೋ ಹೊಡೆದ ಹಾಗಾಯ್ತು. ರಾಂಪುರದಲ್ಲಿ ನನ್ನ, ಶೌರೀನ ಗದರಿಸಿ ಓಡಿಸಿದ ಆ ಭಯಂಕರ ಬೈರಾಗಿ ಯಾರು? "ತತ್‌ಕ್ಷಣ ನಿನ್ನ ರಾಯನ್ನ ಇಲ್ಲಿಂದ ತೊಲಗಿಸಿಕೊಂಡು ಹೋಗು ಇಲ್ದಿದ್ರೆ––––" ಅಂತ ಕಿರ್ಲಿದ್ದ. ಮುಂದೆ "ಅವನ ಡೆಡ್‌ಬಾಡಿ––" ಅಂತ ಸೇರಿಸ್ತಿದ್ದ ಅಂತ ಕಾಣುತ್ತೆ. ರಾಂಪುರದಲ್ಲಿ ವಿಷಕಂಠರಾಯರಿದ್ರಾ? ಅಂತ ಉಜ್ಜಿನಪ್ಪ ಕೇಳಿದ್ಯಾಕೆ? ಸಿಗರೇಟ್ ಮುಗಿಸಿ ಕೈಗೆ ಬುಲ್‌ಬುಲ್ ತರಂಗ್ ತಕೊಂಡೆ. ಬ್ರಹ್ಮಾ ನಿಂಗೆ ಜೋಡಿಸ್ತೀನಿ– ಟ್ಯೂನ್ ಬಾರಿಸಿದೆ. ವಾದ್ಯಾನ ಅದರ ಷೆಡ್ ಸೇರಿಸಿ ರೂಮಿಗೆ ಹೋಗಿ ಮಲಗಿದೆ.



ಮರುದಿನ ವಿಶೇಷವೇನೂ ನಡೀಲಿಲ್ಲ. ಉಜ್ಜಿನಪ್ಪ ನನ್ನ ಸೇವೇಲಿದ್ದ. ರಾತ್ರಿ ಸಂಘದಿಂದ ಬಂದು ಇಂದ್ರಭವನ್ ಊಟ ಮುಗಿಸಿ ಅವತ್ತಿನ ಘಂಟಾಘೋಷ ಕೇಳಿದೆ.

"ಇವತ್ತು ರಜಾ ಮಾಡಿದೆ ಅದ್ರೂ ನಾನಿಲ್ಲೇ ಇದ್ದುಬಿಟ್ಟಲ್ಲಾ-" ಅಂದ.

ಪ್ರಪಂಚದ ಬೇರೆ ಯಾವ ಪೇಪರ್ ಎಡಿಟರೂ ಈ ರೀತಿ ನನಗಾಗಿ ಪೇಪರ್ ನಿಲ್ಲಿಸಿರಲಾರ. ಟಿ.ವಿ. ಆನ್ ಮಾಡಿದೆ. ಕರೆಂಟ್ ಹೋಯ್ತು.

ಶೌರಿ ಇನ್ನೂ ಪತ್ತೆ ಇಲ್ಲ. ಮರುದಿನ ಬೆಳಗ್ಗೆ ನನ್ನ ಕಾಫಿ ತಂದವನು ಶೌರಿ.

"ಶೌರಿ ಭೂತ ಬಂಗಲೇಯಿಂದ ಯಾವಾಗ ಬಂದೆ?" ಕೇಳಿದೆ.

"ನಿನ್ನೆ ರಾತ್ರಿ -- ಸತ್ತವರ ನೆರಳು ನಾಟಕ ಮುಗಿದು ಜನ ವಾಪಸ್ ಹೋಗ್ತಾ ಇದ್ರು ಸರ್-"

"ಅಷ್ಟು ಲೇಟ್ ಯಾಕೆ?"

"ಬುಡನ್ ಬಸ್ಸು ಸ್ಟಾರ್ಟೇ ಆಗ್ಲಿಲ್ಲ. ಡೀಸಲ್ಲು, ವಾಟರು, ಬ್ಯಾಟರಿ ಸ್ವಿಚ್ಚು, ಟೈರು, ಬ್ರೇಕು, ಸ್ಟೀರಿಂಗು ಎಲ್ಲಾ ಸರಿಯಾಗಿದ್ವು. ಎಲ್ಲಾ ಭೂತ ಚೇಷ್ಟೆ ಅಂದ್ರು ವಿಷಕಂಠ --- ಕ್ಷಮ್ಸಿಸರ್"

ನನ್ನ ಕೈಲಿದ್ದ ಕಾಫಿ ಲೋಟ ಜಾರಿ ಕೆಳಕ್ಕೆ ಬಿದ್ದಿತ್ತು.

ಶೌರಿ ತಕ್ಷಣ ಲೋಟಾನ ಎತ್ತಿ ಕ್ಲೀನ್‌ಮಾಡಿ ಬೇರೆ ಕಾಫಿ ಕಪ್ ಸಾಸರ್‌ನಲ್ಲಿ ತಂದ.

"ಏನು ನೀನು ಅಂದಿದ್ದು ಶೌರಿ !"

"ರಾಯರು ಸರ್ ನಿಮ್ಮ ಅಂಕಲ್ಲು ವಿಷಕಂಠರಾಯರು ರಾಂಪುರದ ಮನೇಲಿದ್ದಾರೆ ಸರ್"

"ಅಂದರೆ ಕೆಂಪು ಮುಂಡಾಸು ಬೋಳುತಲೆ ಭಾರೀ ಭಯಂಕರ ಬೈರಾಗಿ ವೇಷ ಧರಿಸಿದ್ದ ಆಸಾಮಿ--"

"ಬಿಲ್‌ಖುಲ್ ಅವರೇ ಸರ್"

ನನಗೆ ತಕ್ಷಣ ಅವರ ಘರ್ಜನೆ ನೆನಪಾಯ್ತು. ಬಿಲ್‌ಖುಲ್ ರಂಘೋಲ್ ವಂಶದ್ದು. ಅದನ್ನ ಮಿಸ್ ಮಾಡಿದ್ದೆ.

"ದುರ್ಗಾಸಾನಿಭೂತ ಓಡ್ಸೋ ಡ್ರೆಸ್‌ನಲ್ಲಿದ್ದರೇನು?"

"ಸರ್--?"



ಒಂದೊಂದು ಬಾರಿ ಶೌರಿ ನನ್ನ ಪ್ರಶ್ನೆಗೆ ಸರ್?- ಅಂತ ಮರು ಪ್ರಶ್ನೆ ಕೇಳಿದರೆ ಒದ್ದುಬಿಡಲೇ ಅನ್ನಿಸುತ್ತೆ. ಈಗಲೂ ಹಾಗೇ ಎನ್ನಿಸಿತು. ಆದರೂ ಸಮಾಧಾನದಿಂದ ರಿಪೀಟ್ ಮಾಡಿದೆ.

"ವಿಷಯಾನ ತಿಳಿಸ್ತೇನೆ ಸರ್. ಹೆಗ್ಗಡದೇವನ ಕೋಟೆ ಹಲಸಿನ ಹಣ್ಣು ತಂದಿದ್ದೇನೆ ಸರ್. ಚಪಾತಿ ಹಲಸಿನ ಹಣ್ಣಿನ ರಸಾಯನ ಮಾಡ್ತೇನೆ. ಸ್ನಾನ ಮುಗಿಸಿ ಬನ್ನಿಸರ್" ಅಂದ

ಹೆಗ್ಗಡದೇವನಕೋಟೆ, ರಾಮಪುರ, ಹೆಬ್ಬೂರು ಕಡೆ ಹಲಸಿನ ಹಣ್ಣುಗಳು ಹೆಸರುವಾಸಿ. ಮುಮ್ಮಡಿ ಕೃ.ರಾ. ಒಡೆಯರ ಕಾಲದಿಂದ ಪ್ಯಾಲೆಸ್‌ನಲ್ಲಿ ಒಂದುದಿನ ಅದರ ಡಿಷ್ ತಪ್ಪಿದ್ದಿಲ್ಲವಂತೆ. ನಾನು ಸ್ನಾನ ಮುಗಿಸಿ, ಶೌರಿ ತಯಾರಿಸಿದ ಚ ಮತ್ತು ಹಹರ ತಿಂದು ಮುಗಿಸಿದೆ. ಬೆಸ್ಟ್ ಕಾಂಬಿನೇಷನ್. ಉದ್ದಿನೊಡೆ, ರವೆ ಉಂಡೆ, ಹೆಸರು ಬೇಳೆ ಪಾಯಸದ ಕಾಂಬಿನೇಷನ್ ತರಹ. ಮೂರನೇ ಚಪಾತಿ ಅರ್ಧ ಮುಗಿದಿದ್ದಾಗ ಶೌರಿ ತನ್ನ ರಾಂಪುರದ ವಾರ್ತೆ ಶುರುಮಾಡಿದ.

ವಿಮಲಾ ಅತ್ತೆ, ಮಾವ ತೀರ್ಥಯಾತ್ರೆ ಹೋಗಿರೋದ್ರಿಂದ ನಾಗತ್ತೆ ಮಗಳ ಮನೇಲಿ ಝುಂಡಾ. ಭೀಮ ಮಾವ ರಾಂಪುರದಲ್ಲಿ ಕಾವೇರಮ್ಮನ ಅಡಿಗೆಯಿಂದ ಬೇಸತ್ತಿದ್ದರಿಂದ ಶಾಮಣ್ಣನ ನಳಪಾಕ ಅನುಭವಿಸೋಕೆ ಹಾಗೂ ಸಮಯ ಸಿಕ್ಕಾಗ ಮೈಸೂರಿಗೆ ಹಾರಿ ತನ್ನ ಹಳೇ ದೋಸ್ತುಗಳನ್ನು ನೋಡೋಕಾಗುತ್ತೇಂತ ಹೆಬ್ಬೂರಿನಲ್ಲಿಗೇ ಬ್ಯಾಚಲರ್ ಆಗಿ ಠಿಕಾಣಿ ಹಾಕಿದ್ದಾರೆ. ಸೋ-ರಾಂಪುರದ ಬಂಗ್ಲೆ ಖಾಲಿ. ಇದೇ ಸಮಯ ನೋಡಿ ವಿಷಕಂಠರಾಯರು, ಮಹಾಲಕ್ಷಮ್ಮ, ಗುಲಾಬಿಮಾಲಾ-ತಿರುಪತೀಲಿ ಹರಕೆ ತೀರಿಸಿ ತಮ್ಮ ತಲೇ ಮೇಲೆ ಟರ್ಫ್ ಬೆಳೆಯೋವರ್ಗೂ ರಾಂಪುರದ ಮನೇಲೆ ಅಜ್ಞಾತವಾಸದಲ್ಲಿದ್ದಾರೆ. ಇಷ್ಟು ವಿಷಯಾನ ಶೌರಿ ಹಿಚಕಾಕ್ ತರಹ ಅನ್‌ಫೋಲ್ಡ್ ಮಾಡ್ದ. ಚೌಕವಾದ ಪೆಗ್ ಚೌಕಾಕಾರದ ಹೋಲ್‌ನಲ್ಲೇ ಫಿಟ್ ಆದಹಾಗಾಯ್ತು.

ಆದರೂ---

"ಶೌರಿ- ನಮ್ಮ ಚಿಕ್ಕಪ್ಪ ಮೈಸೂರಿನಲ್ಲಿ ಚಾರ್ವಾಕ ಸಂಘ ಸ್ಥಾಪಿಸಿ ದೇವರುಗಳೆಲ್ಲಾ ಬೂಸಿ ಅಂತ ಸಾರ್‍ತಾ ಇರ್ಲಿಲ್ವೆ !"

"ಹೌದು ಸರ್-ಆದ್ರೆ ಗುಲಾಬಿ ಕಾಟ ಸರ್. ಹಿಂದೆ ಒಂದು ಬಾರಿ ಅವಳ ಮನೇಲಿ ತಿಪ್ಪಣ್ಣನ ಆಂಟಿ ಒಬ್ಬರ ಕಾಟ ಜಾಸ್ತಿಯಾಗಿದ್ದಾಗ ನಾನು ಗುಲಾಬಿಗೆ ತಿರುಪತೀಗೆ ಹರಸ್ಕೋ ಕಷ್ಟವೆಲ್ಲಾ ಪರಿಹಾರವಾಗುತ್ತೆ ಅಂತ ಹೇಳಿದ್ದೆ. ಆದ್ರೆ ಗುಲಾಬಿ ನನ್ನ ಮಾತಿನ ಅರ್ಥ ಸರಿಯಾಗಿ ಮಾಡಿಕೊಳ್ಳದೆ ತಿಪ್ಪಣ್ಣನ ಆ ಆಂಟೀನ ತಿರುಪತೀಗೆ ಕಳ್ಸಿ ಮುಡಿ ಕೊಡಿಸ್ತೇನೆ ಅಂತ ಹರಸಿಕೊಂಡುಬಿಟ್ಟು. ಅದನ್ನ ಕೇಳಿ ಆಂಟಿ ಫಲಾಯನ ಮಾಡಿಬಿಟ್ರು. ಹರಕೆ ತೀರಲಿಲ್ಲ. ಹಾಗೂ ಗುಲಾಬಿ ಸೊರಗಿ ಸೊರಗಿ ಕೃಶವಾಗಿಬಿಟ್ಟಂತೆ. ಅದನ್ನೋಡಿ ವಿಷಕಂಠರಾಯರು ನೀನೇನೂ ಯೋಚ್ನೆ ಮಾಡಬೇಡ. ನಾನು ನಿನ್ನಮ್ಮ, ನೀನು ಮೂರು ಜನರೂ ಹೋಗಿ ತಿರುಪತೀ ತಿಮ್ಮಪ್ಪನಿಗೆ ತೃಪ್ತಿಯಾಗೋ ಹಾಗೆ ಮುಡೀಕೊಟ್ಟು ಬರೋಣ ಅಂತ ಸಮಾಧಾನ ಮಾಡಿದರಂತೆ. ಮಟ್ಟಿ ಮಣ್ಣನ್ನ ಹಣೆಗೆ ಹಚ್ಚಿಕೊಂಡು ಘೋರ ಹರಕೇನೂ ಹೊತ್ತರಂತೆ"



“ತಿಮ್ಮಣ್ಣನಿಗೆ ಮಾಫಿ ಅನ್ನು--”

“ಅಂಟಿ ಹೊರಟ್ಹೋದ ಮೇಲೆ ತಿಪ್ಪಣ್ಣ ತಿರುಪತೀಗೆ ಫೈನ್ ಕಳ್ಸಿಬಿಟ್ಟು ತಾನು ಯಾಲಕ್ಕಣ್ಣನ ಸೆಲೂನಲ್ಲಿ ಬೋಡು ಮಾಡಿಸಿಕೊಂಡು ಬಿಟ್ಟಿದ್ದ ಸರ್-- ಆಗಿಂದ ಟೋಪಿ ಹಾಕ್ತಾ ಇದ್ದಾನಲ್ಲ ನೋಡಿದ್ದೀರಲ್ಲಾ--”

“ನಮ್ಮ ದೇವರುಗಳು ತುಂಬಾ ಅಕಾಮಡೇಟಿವ್ ಅಂತ ಕಾಣುತ್ತೆ. ಅಲ್ವೆ ಶೌರಿ?”

“ಬಿಲ್‌ಕುಲ್ ಸರ್ ಅದಕ್ಕೇ ಸರ್ ಸಾಗರ್ರು ಛೋಪ್ರಾ ಅಂಥಾವ್ರೋರೆಲ್ಲಾ ಸಿನಿಮಾಗಳಲ್ಲಿ ನಮ್ಮ ದೇವರುಗಳನ್ನ ಅಷ್ಟು ಅಧ್ವಾನ್ನವಾಗಿ ತೋರಿಸ್ತಾ ಇರೋದು. ನಮ್ಮ ದೇಶದಲ್ಲಿ ಖೋಮೇನಿ ಅಂಥಾವ್ರೋರು ಯಾರಿದ್ದಾರೆ ಸರ್?”

ವಿಷಯ ಎಲ್ಲೆಲ್ಲೋ ಹೋಗ್ತಾ ಇರೋ ಹಾಗೆ ಕಾಣಿಸ್ತು.

“ಶೌರಿ ಈಗ ನಾನು ಕೇಳ್ತಿರೋ ಮಿಸ್ಟ್ರೀಗೆ ಸಮಜಾಯಿಷಿ ಹೇಳ್ತೀಯಾ?” ಅಂದೆ.

“ಕೇಳಿ ಸರ್”

“ರಾಂಪುರದ ಉಪ್ಪರಿಗೆ ಕಿಟಕೀಲಿ ನೇತಾಡ್ತಿದ್ದ ಕೆಂಪು ಗುಂಡುಗಳ ರಹಸ್ಯವೇನು ಶೌರಿ? ಅವು ದು. ಮತ್ತು ಚಂ. ಭೂತಗಳ ತಲೆಗಳಿದ್ದಿರಬೋದೇ?”

“ಇದ್ದಿರಲಾರದು ಸರ್. ಮಹಾಲಕ್ಷಮ್ಮ ಮತ್ತು ಗುಲಾಬಕ್ಕನ ಮೊಟ್ಟೆ ತಲೆಗಳಿದ್ದಿರಬೋದು ಸರ್. ಪ್ರಾಯಶಃ ಕೆಂಪು ಕರ್ಚಿಫ್ ಸುತ್ತಿಕೊಂಡಿದ್ದರು ಅಂತ ಕಾಣುತ್ತೆ. ಚಪಾತಿ ಇನ್ನೊಂದು ಹಾಕ್ಲೇ ಸರ್?”

ನಾಲ್ಕು ಚಪಾತಿ ತಂದಿದ್ದೆ.

“ಸಾಕು ಶೌರಿ ಸ್ಟ್ರಾಂಗ್ ಕಾಫಿ ತಾ ಅಂದೆ.

“ಸರಿ ಸರ್” ಅಂತ ಒಳಗೆ ಹೋದ.

ಅಲ್ಲಾ

ನ ವಿಲ್ಲಾ
ದೊಳಗೆ ವಿರಾಜಮಾನ
ರಾಮ
ಮನದೊಳಗೇ ಇರುವ
ನಲ್ಲಾ!



ಎನ್. ಪ್ರಕಾಶ್

ಊಟಕ್ಕಿದ್ದರೂ ಲೆಖ್ಖಕ್ಕಿಲ್ಲ !

ಡಾ. ಜ್ಯೋತ್ಸ್ನಾ ಕಾಮತ್

ನಡುರಾತ್ರಿಯಲ್ಲಿ ನುಸಿ ಜಿರಲೆ, ಹಲ್ಲಿಗಳು ಬೆದರುವಂತೆ ನನ್ನೊಳಗಿನ ಗೊರಕಾಸುರನು ಕರ್ತವ್ಯನಿರತನಾಗಿರಲು, ಯಾರೋ ಹೊರಬಾಗಿಲಿನ ಮೇಲೆ ಜೋರಾಗಿ ಗುದ್ದಿದಂತಾಗಿ ಬೆಚ್ಚಿಬಿದ್ದೆ. ಕ್ಯಾಮರಾದೊಂದಿಗೆ ಕಾಡಿಗೆ ಹೋಗಿದ್ದ ರಾಯರು ಓಂತಿರುಗಿರಬಹುದೇ? ಛೇ ಇರಲಾರದು ! ನಿದ್ರಿಸುತ್ತಿರುವ ಪತ್ನಿಗೆ ತೊಂದರೆ ಕೊಡುವ ಬದಲಾಗಿ ತಮ್ಮೊಂದಿಗೆ ಒಯ್ದು ಕೀಲಿಕೈ ಬಳಸಿಯೇ ಒಳಗೆ ಬರುವ ಆಸಾಮಿ ಅವರು. ಇನ್ನೊಮ್ಮೆ ಜೋರಾಗಿ ಬಾಗಿಲು ಗುದ್ದಿದ ಸಪ್ಪಳ, ಜೊತೆಗೆ ಗುಸು ಗುಸು ಮಾತು. ರಾಯರು ಊರಲ್ಲಿಲ್ಲವೆಂದು ಅರಿತು ದರೋಡೆಕೋರರು ದಾಳಿ ಮಾಡುತ್ತಿರಬಹುದೇ? ಅವರು ಕರೆಗಂಟೆ ಬಳಸುವ ಬದಲಾಗಿ ಕೈ, ಕತ್ತಿಗಳನ್ನೇ ಬಳಸುತ್ತಾರೆಂದು ಡಿಟೆಕ್ಟಿವ್ ಕಾದಂಬರಿಯಲ್ಲಿ ಓದಿದ ನೆನಪು! ಕೂಡಲೇ ಕೈ ಕಾಲು ನಡುಗಲಾರಂಭಿಸಿದವು. ಛೇ ಇರಲಾರದು. ಬೇಕಾದಷ್ಟು ಮನೆಗಳು ನಗರದ ಹೊರವಲಯದಲ್ಲಿ ಇರುವಾಗ ಮಲ್ಲೇಶ್ವರದ ಹೃದಯ ಸ್ಥಾನದಲ್ಲಿರುವ, ತೊಂಬತ್ತು ಸಂಸಾರಗಳಿಗೆ ಆಶ್ರಯ ಕೊಟ್ಟಿರುವ ಈ ಕಟ್ಟಡದಲ್ಲಿ ಹೊಕ್ಕು ದರೋಡೆಗೆ ಯತ್ನಿಸಲು ಅವರೇನು ಹುಚ್ಚರಾಸ್ಪತ್ರೆಯಿಂದ ತಪ್ಪಿಸಿಕೊಂಡು ಓಡಿಬಂದವರೇ? ಕಾವಲುಗಾರನನ್ನು ಕೂಗೋಣವೆಂದರೆ ಅವನ ಸುಳಿವೇ ಇಲ್ಲ. ಪೋಲೀಸರಿಗೆ ತಿಳಿಸೋಣವೆಂದರೆ ಫೋನ್‌ಮಾಡಲು ಕೈ ಮಂಜುಗಟ್ಟಿದಂತಾಗಿ ನಂಬರು ತಿರುಗಿಸಲು ಶಕ್ತಿ ಇಲ್ಲದಂತಾಗಿದೆ. ಒಂದೆರಡು ಸಲ ತಪ್ಪು ನಂಬರುಗಳು ಸಿಕ್ಕವು. ಬಂದವರನ್ನು ಧೈರ್ಯವಾಗಿ ಎದುರಿಸುವುದೇ ಕ್ಷೇಮಕರವೆಂದು ದೀಪ ಹಾಕಿ, ರಾಯರು ವಿಶೇಷ ಮುತುವರ್ಜಿ ವಹಿಸಿ ಮಾಡಿಸಿದ ಕಳ್ಳ ಕಿಂಡಿಯಿಂದ ಬಾಗಿಲು ತೆರೆದು "ಯಾರವರು?" ಎಂದು ಗದರಿಕೊಂಡೆ. "ನಾವು ಆದಾಯಕರ ಇಲಾಖೆಯವರು" ಎಂದು ತಮ್ಮ ಪರಿಚಯ ಪತ್ರವನ್ನು ತಂಡದ ನಾಯಕರು ಮುಂದೆ ಮಾಡಿದರು. ನಡುರಾತ್ರಿಯ ಈ ದಾಳಿಗಾಗಿ ವಿಸ್ಮಯಪಟ್ಟರೂ ಬಾಗಿಲು ತೆಗೆಯದೇ ಬೇರೆ ಮಾರ್ಗವಿರಲಿಲ್ಲ.

ಒಳಗೆ ಬಂದವರು ನಯವಿನಯ, ವಂದನೆಗಳ ಗೊಂದಲಕ್ಕೆ ಬೀಳದೇ ಇದ್ದ ಆಸನಗಳನ್ನೆಲ್ಲ ಅಲಂಕರಿಸಿದರು. ಮುಖಂಡನು ನೇರ ಮಾತುಕತೆ ಆರಂಭಿಸಿದ. "ನಾವು ಕೇಳಿದ ಪ್ರಶ್ನೆಗಳಿಗೆಲ್ಲ ಸ್ಪಷ್ಟ ಮತ್ತು ಸಂಕ್ಷಿಪ್ತ ಉತ್ತರ ಕೊಡಬೇಕು. ಅರೆ ಸತ್ಯ–ಅಸತ್ಯಗಳಿಂದ ದೂರವಿರಿ! ಅಡ್ಡಕತೆ–ಹರಟೆಗಳಿಗೆ ಅವಕಾಶವಿಲ್ಲ. ಅಲ್ಲದೇ ನಿಮ್ಮ ಮನೆಯ ಶೋಧ–ಝಡ್ತಿಗೆ ಸಂಪೂರ್ಣ ಸಹಕಾರ ನೀಡಬೇಕು. ನಮ್ಮ ಚಟುವಟಿಕೆ ನ್ಯಾಯಬದ್ಧವಾಗಿದೆ ಎಂದು ಖಾತ್ರಿಪಡಿಸುವುದಕ್ಕಾಗಿ ಈರ್ವರು ಪ್ರತಿಷ್ಠಿತರನ್ನು ಸಾಕ್ಷಿಯಾಗಿ ಕರೆತಂದಿದ್ದೇನೆ. ಸಂಪೂರ್ಣ ಸಹಕಾರ ನೀಡಿದರೆ, ನಿಮಗೆ ಯಾವ ತೊಂದರೆಯೂ ಆಗದು" ಎಂದು ಠೀವಿಯಿಂದ ನುಡಿದಾಗ ಉಳಿದವರು ಕೋಲೆ ಬಸವನಂತೆ ತಲೆಹಾಕಿದರು. "ನೀವು ಹೇಳಿದ್ದಕ್ಕೆಲ್ಲ



ಒಪ್ಪಿಗೆ ಆದರೆ ನಾನಿನ್ನೂ ಅರೆ ನಿದ್ರೆಯಲ್ಲಿದ್ದರಿಂದ ಕೊಟ್ಟ ಉತ್ತರಗಳೆಲ್ಲ ಸಮಂಜಸವಾಗಿರುತ್ತವೆಂದು ಹೇಳಲಾಗದು.... ಆದ್ದರಿಂದ ನನಗೆ ಒಂದು ಲೋಟ, ನಿಮಗೆಲ್ಲ 'ಒನ್ ಬೈ ಟೆನ್' ಕಾಫಿ ಕೊಡುತ್ತೇನೆ, ಸಾರಿ'' ಎಂದು ಅವರ ಒಪ್ಪಿಗೆಗೂ ಕಾಯದೇ ಅದಿಗೆ ಮನೆಗೆ ಧಾವಿಸಿದೆ. ಬಂದವರೆಲ್ಲ ಮಿಕಿ ಮಿಕಿ ನೋಡುತ್ತ ಕುಳಿತಿರಬೇಕು. ''ಹತ್ತು ಜನಕ್ಕೆ ಆಗುವಷ್ಟು ಕಪ್ಪು-ಸಾಸರು ಮನೆಯಲ್ಲಿಲ್ಲದ ಕಾರಣ ಲಭ್ಯವಿದ್ದ ಲೋಟ-ಬಟ್ಟಲು-ವಾಟೆಗಳಲ್ಲಿಯೇ ಕೊಡುತ್ತಿದ್ದೇನೆ. ಈ ಹಿತ್ತಾಳೆಯ ಲೋಟ ತಾತ ನನ್ನ ಹತ್ತನೆಯ ಹುಟ್ಟುಹಬ್ಬಕ್ಕೆ ಕೊಟ್ಟಿದ್ದು. ಕಂಚಿನ ಈ ಬಟ್ಟಲು ಚಿಕ್ಕಮ್ಮ ತನ್ನ ಮದುವೆಯ ,ನೆನಪಿಗೆ ಉಡುಗೊರೆ ಇತ್ತದ್ದು, ಈ ಸ್ಟೀಲ್ ಲೋಟ ಅತ್ತೆಯವರು ಚೊಚ್ಚಲ ಮಗುವಿನ ಕೈಯಲ್ಲಿ ಇಟ್ಟದ್ದು......'' ಎಂದು ವಿವರಣೆ ಕೊಡುತ್ತ ಎಲ್ಲರಿಗೂ ಕಾಫಿ ಕೊಡುತ್ತಿದ್ದಾಗ, ಮುಖಂಡನು ''ತಲೆಹರಟೆ ಬೇಡವೆಂದು ಹೇಳಲಿಲ್ಲವೇ? ಮಾತುಬೇಡ'' ಎಂದು ಜಬರಿಸಿ ತಾನೇ ಮಾತುನಿಲ್ಲಿಸಿ ಕಾಫಿ ಹೀರತೊಡಗಿದ. ನಂತರ ಸಂಭಾಷಣೆ ಈ ಕೆಳಗಿನಂತೆ ಸಾಗಿತು.

ಪ್ರಶ್ನೆ:– ನಿಮ್ಮ ಯಜಮಾನರ ಹೆಸರು ಏನು?

ಉತ್ತರ:– ನಾನು ಹೆಸರೆತ್ತಿ ಕೂಗುವುದಿಲ್ಲ. ಮಿಸ್ಟರ್ ಎಂದೋ, ರಾಯರೇ ಎಂದೇ ಕರೆಯುವುದು ರೂಢಿ. ಪತ್ರ ಬರೆಯುವಾಗ ಹಿಂದೆ ಪ್ರಿಯತಮಾ ಎಂದೂ ಕರೆದದ್ದುಂಟು.

ಪ್ರಶ್ನೆ:– ಶಾಲೆ-ಕಾಲೇಜುಗಳಲ್ಲಿ ಬಳಸುವ ಹೆಸರು ಹೇಳಿದರೆ ಸಾಕು.

ಉತ್ತರ:– ಸಹಪಾಠಿಗಳೆಲ್ಲ 'ಕೆ.ಎಲ್.' ಎಂದೇ ಕೂಗುತ್ತಾರೆ ನೋಡಿ. 'ಕಾಮತ್' ಹೆಸರು ಕಿಕ್ಕಿರಿದು ತುಂಬಿದ ಊರಿನಲ್ಲಿ ಅದೇ ರೂಢಿ. ಶಾಲೆ ಹಾಜರಿಯಲ್ಲಿ 'ಕೆ.ಎಲ್. ಕಾಮತ್' ಎಂದಿತ್ತು. ಅಮೇರಿಕೆಯಲ್ಲಿ ಪ್ರಾಧ್ಯಾಪಕರೆಲ್ಲ 'ಕ್ರಿಸ್' ಎಂದೇ ಕರೆಯುತ್ತಿದ್ದರಂತೆ.

ಪ್ರಶ್ನೆ:– ಹೆಸರಿನ ಹಿಂದೆ ಡಾಕ್ಟರ್ ಎಂದು ಸೇರಿಸಲಾಗಿದೆ. ಅವರೇನು ದನದ ಡಾಕ್ಟರೇ?

ಉತ್ತರ:– ಆದಿದ್ದರೆ ಎಷ್ಟೋ ವಾಸಿ ಇತ್ತು ! ತಿಗಣೆ, ಜಿರಲೆಗಳ ಡಾಕ್ಟರ್ ಎಂದು ಕರೆದುಕೊಳ್ಳುತ್ತಾರೆ ವ್ಯಾಕ್!

ಪ್ರಶ್ನೆ:– ಅವರ ವೃತ್ತಿ ಯಾವುದು? ಏನ್ ಕೆಲ್ಸಾ ಮಾಡ್ತಾರೆ?

ಉತ್ತರ:– ಸದಾ ಒಂದೇ ಕೆಲಸ ಮಾಡುವುದರಲ್ಲಿ ವಿಶ್ವಾಸವಿಟ್ಟವರಲ್ಲ ! ಒಮ್ಮೊಮ್ಮೊ ಈರುಳ್ಳಿ ಹೆಚ್ಚಿಕೊಡ್ತಾರೆ. ಇನ್ನೊಮ್ಮೆ ನಾನು ಒಗೆದ ಬಟ್ಟೆ ಒಣ ಹಾಕ್ತಾರೆ. ಕ್ಯಾಮರಾದಲ್ಲಿ ಫಿಲ್ಮ್ ಇದ್ದರೆ ಫೋಟೊ ತೆಗೀತಾರೆ. ನನ್ನ ಕೆಲವು ಕಲರ್ ಫೋಟೊ ತೆಗೆದಿದ್ದಾರೆ. ಆಲ್ಬಮ್ ತೋರಿಸ್ಲಾ?



ಪ್ರಶ್ನೆ:– ಹಾಗಾದರೆ ಊಟ-ಉಪಚಾರಕ್ಕೆ ಏನು ಮಾಡ್ತೀರಾ?

ಉತ್ತರ:– ನಾವು ಮೀನು–ಮಾಂಸಕ್ಕೆ ಮನಸೋತವರಲ್ಲ. ಎಣ್ಣೆ–ಬೆಣ್ಣೆಗಳ ಪ್ರಿಯರಲ್ಲ. ಊಟಕ್ಕೆ ಚಪಾತಿ, ಮೂಲಂಗಿ, ಸೌತೇಕಾಯಿ–ಕೋಸು ತಿಂತೀವೆ !

ಪ್ರಶ್ನೆ:– (ಅಸಹನೆಯಿಂದ) ಛೇ ಛೇ. ನಾವು ಕೇಳ್ತಿರೋದು ಪ್ರತಿ ತಿಂಗಳ ಖರ್ಚಿಗೆ, ವಸ್ತು–ಒಡವೆ ಖರ್ಚಿಗೆ ಹಣ ಎಲ್ಲಿಂದ ಬರುತ್ತದೆ? ಮಿಕ್ಸಿ–ಫ್ರಿಜ್–ಕಾರುಗಳಿಗೆಲ್ಲ?

ಉತ್ತರ:– ಓ ! ಅದಕ್ಕಾಗಿ ಇಷ್ಟೆಲ್ಲಾ ತಲೆ ಕೆಡಿಸಿಕೊಂಡಿರಾ? ಅರೆಯುವ ಕಲ್ಲೇ ನಮ್ಮ ಮಿಕ್ಸಿ. ಒಂದು ರೂಪಾಯಿ ಕೊಟ್ಟು ತಂದ ಮಡಕೆಯೇ ನಮ್ಮ ಫ್ರಿಜ್. ನಮ್ಮದು ಪೆಟ್ರೋಲ್ ಇಲ್ಲದೆಯೇ ಓಡುವ ಕಾರು ನೋಡಿ ! ಅಂದರೆ ನಮ್ಮ ನಾಲ್ಕು ಕಾಲೇ ಎರಡು ಜೋಡಿ ವಾಹನಗಳು. ಅಂಥ ಅವಶ್ಯಕತೆ ಬಿದ್ದಾಗ ಬಸ್.....

ಸಹಾಯಕ:– ಸಾಹೇಬರೇ ! ಈ ಅಮ್ಮ ತಮ್ಮನ್ನು ಹಾಸ್ಯಮಾಡುತ್ತಿದ್ದಾರೆ. ಸಮಯ ಹಾಳು ಮಾಡದೇ ಕೆಲಸ ಪ್ರಾರಂಭಿಸಬಹುದಲ್ಲವೇ?

ಮುಖ್ಯಸ್ಥ:– ಹೌದು, ಹೌದು ನಿಮ್ಮ ಮನೆಯಲ್ಲಿ ಅಡಗಿಸಿಟ್ಟ ಸಂಪತ್ತಿನ ಶೋಧವಾಗಬೇಕಾಗಿದೆ. ದೇವರ ಮನೆ ಎಲ್ಲಿದೆಯಮ್ಮ?

ಉತ್ತರ:– ನಟ–ನಟಿಯರಂತೆ ದೇವರ ಕೋಣೆಯಲ್ಲಿ ಬೆಳ್ಳಿ–ಬಂಗಾರ ಹುದುಗಿಸಿಟ್ಟು ದೇವರನ್ನೇ ಕಾವಲುಗಾರನಾಗಿ ನೇಮಿಸುವ ವರ್ಗಕ್ಕೆ ಸೇರಿದವರು ನಾವಲ್ಲ. ನಮ್ಮ ಮನೆಯಲ್ಲಿ ಪೂಜಾಸ್ಥಾನವೇ ಇಲ್ಲ. ಅಷ್ಟೇ ಅಲ್ಲ, ದೇವರ ಪಟ ಕೂಡ ತೂಗುಹಾಕಿಲ್ಲ. ಆ ಕರುಣಾಮಯನ ಕೃಪಾಕಟಾಕ್ಷ ಸದಾಕಾಲ ನಮ್ಮ ಮೇಲಿರುವಾಗ, ನಾವೇಕೆ ಪಟ–ವಿಗ್ರಹಗಳ ಪೂಜೆ–ನೈವೇದ್ಯಗಳಿಗೆ ಶರಣು ಹೋಗಬೇಕು?

ಮುಖ್ಯಸ್ಥ:– ಯಾವ ಯಾವ ಬ್ಯಾಂಕುಗಳಲ್ಲಿ ನಿಮ್ಮ ಲಾಕರುಗಳಿವೆ ಮ್ಯಾಡಂ?

ಉತ್ತರ:– ಮನೆಯಲ್ಲಿದ್ದ ಬೀರುಗಳಿಗೇ ಲಾಕ್ ಹಾಕದೇ ಇರುವಾಗ, ಲಾಕರುಗಳ ಗೊಡವೆ ನಮಗೇಕೆ?

ಮುಖ್ಯಸ್ಥ:– ಈ ತಪಾಸಣಾ ಅಧಿಕಾರಿಗಳು ನಿಮ್ಮ ವಾಸಸ್ಥಾನವನ್ನು ಸೂಕ್ಷ್ಮವಾಗಿ ಪರಿಶೀಲಿಸಲಿದ್ದಾರೆ. ಆದ್ದರಿಂದ ನಿಮ್ಮ ಸಾಮಾನುಗಳು ನಾಪತ್ತೆಯಾಗದಂತೆ ಅವರ ಜೊತೆಗೇ ಇರಿ.

ಉತ್ತರ:– ಅಂಥ ಹೆದರಿಕೆ ನನಗಿಲ್ಲ. ಅವರು ಯಾವುದನ್ನೂ ಹಾಳು ಮಾಡದೇ ಕೂಲಂಕುಷ ಶೋಧಮಾಡಲು ಸ್ವತಂತ್ರರು.



ತಂಡ ವಿದ್ಯುದ್ವೇಗದಿಂದ ಕೆಲಸ ಪ್ರಾರಂಭಿಸಿತು. ಬೆಡ್ ರೂಂ, ಅಡಿಗೆ ಮನೆ ಮುಗಿಸಿ ಬಚ್ಚಲು ಮನೆಗೆ ನುಗ್ಗಿದ ಅಧಿಕಾರಿ, ಉದ್ವೇಗದಿಂದ "ಸಾರ್, ಸಾರ್, ಇಲ್ಲಿ ಕೆಲವು ಹಳೇ ಹೆಂಚುಗಳನ್ನು ತೆಗೆದು ಹೊಸ ಹೆಂಚುಗಳನ್ನು ಜೋಡಿಸಿದ್ದು ತುಂಬ ಸ್ಫುಟವಾಗಿದೆ !" ಎಂದು ಕೂಗಿದ. ಮುಖ್ಯಸ್ಥರು ಅಲ್ಲಿಗೆ ಧಾವಿಸಿ ವಿವರಣೆ ಕೊಡುವಂತೆ ಆದೇಶವಿತ್ತರು.

ನಾನು:– ತಟ್ಟಪಡದ ಮೂಲ ಕಂಟ್ರಾಕ್ಟರರು ದಕ್ಷತೆ ವಹಿಸದೇ ಇದ್ದುದರಿಂದ ಒಂದೊಂದೆ ಹೆಂಚು ಕಿತ್ತು ಬರಲಾರಂಭಿಸಿದ್ದವು. ಹೀಗಾಗಿ ಬಾತ್‌ರೂಂನ ಬಲಗಡೆ ಭಾಗ ಹೆಂಚು ಕಳೆದುಕೊಂಡು ಅಸಹ್ಯವಾಗಿ ನಿಂತಿತ್ತು. ಯಾರೋ ಗಾರೆಯವನನ್ನು ಹಿಡಿದುತಂದು ಸರಿಪಡಿಸಲು ಯತ್ನಿಸಿದಾಗ, ಅವನು ಸಾವಿರಾರು ರೂಪಾಯಿ ಮೊಬಲಗು ಮುಂದಿಟ್ಟ. ಅವನನ್ನು ಕಳಿಸಿ ತಾನೇ ಆ ಕೆಲಸವನ್ನು ನಮ್ಮ ರಾಯರು ವಹಿಸಿಕೊಂಡು, ಮಾದರಿಯ ಟೈಲ್‌ದೊಂದಿಗೆ ಜೆ.ಸಿ.ರೋಡಿಗೆ ಹೋದಾಗ, ಅಂಗಡಿಯವನು 'ಇಂಥ ಟೈಲ್ಸ ಮಾಡೋದನ್ನ ನಿಲ್ಸಿ ಯಾವ ಕಾಲ ಆಯ್ತೋ !' ಎಂದು ಹೇಳಿ ಬದಲಿಗೆ ಕೊಂಚ ಬೇರೆ ಡಿಸೈನ್ ಇರುವವನ್ನು ಕಡಿಮೆ ದರದಲ್ಲಿ ಕೊಟ್ಟ. ಜೊತೆಗೆ ಒಂದು ಕಿಲೋಗ್ರಾಂ ಬಿಳೀ ಸಿಮೆಂಟ್ ತಂದು ಸ್ವತಃ ಕೂಡ್ರಿಸಿದ್ದಾರೆ. ಈ ಕೆಲಸಕ್ಕೆ ಅವರು ಖರ್ಚು ಮಾಡಿದ್ದು ಕೇವಲ ನೂರು ರೂಪಾಯಿ ಮಾತ್ರ !

ಮುಖ್ಯಸ್ಥರಿಗೆ ಈ ವಿವರಣೆಯಿಂದ ತೃಪ್ತಿಯಾದಂತೆ ಅನಿಸಲಿಲ್ಲ. "ಒಳಗೆ ಪೊಳ್ಳು ಇದ್ದು ಸದ್ದು ಬರುತ್ತದೆಯೋ ನೋಡಯ್ಯಾ!" ಅಪ್ಪಣೆ ಕೊಡುತ್ತಿದ್ದಂತೆ, ಸಹಾಯಕನು ತೋರುಬೆರಳು ಅದಕ್ಕೆ ತಗುಲಿಸಿದೊಡನೆ ಇಡೀ ಹಂಚಿನ ಸಾಲೇ ನೆಲಕ್ಕುರುಳಿತು. ಒಳಗೆ ಗಟ್ಟಿ ಗೋಡೆ ಗಹಗಹಿಸಿತು. ಹೆಂಚು ಬಿದ್ದ ಸಪ್ಪಳ ಜೋರಾಗಿದ್ದರಿಂದ ಈ ಅಹಾಹುತಕ್ಕೆ ಕಾರಣರಾದವರಂತೆ ಕಕ್ಕಾವಿಕ್ಕಿಯಾಗಿ ತಂಡದವರು ನಿಂತಾಗ, ನಾನು "ಗಾಬರಿಯಾಗಬೇಡಿ, ಕಾಡಿನಿಂದ ಹಿಂದಿರುಗಿದ ಕಾಮತರು ಮತ್ತೆ ರಿಪೇರಿ ಮಾಡುತ್ತಾರೆ. ಓ, ನಿಮಗೆ ಒಡೆದ ಹೆಂಚು ತಗಲಿ ರಕ್ತ ಸುರೀತಾ ಇದೆ. ಇಕ್ಕಾ, ಡೆಟ್ಟಾಲಿನಿಂದ ತೊಳೆದುಕೊಳ್ಳಿ. ನಂತರ ಈ ಬ್ಯಾಂಡ್‌ಏಡ್ ಪಟ್ಟಿ ಹಚ್ಚಿಕೊಳ್ಳಿ !" ಎಂದಾಗ ತಂಡದವರಿಗೆಲ್ಲ ವಿಪರೀತ ಸಂಕೋಚವಾಗಿ, ಅಳುಕುತ್ತಲೇ ಗಾಯಕ್ಕೆ ಚಿಕಿತ್ಸಾ ಮಾಡಿದರು. ಮುಖ್ಯಸ್ಥರು ಕೊಂಚ ಮೆತ್ತಗಾಗಿ, "ನಿಮ್ಮ ಮನೆಯನ್ನು ಒಡೆದು, ಕೊರೆದು ಹಾಳು ಮಾಡುವ ಮನಸ್ಸು ನಮಗಾರಿಗೂ ಇಲ್ಲ. ನಿಮ್ಮ ಗಳಿಕೆಯ ಹಣವನ್ನೆಲ್ಲ ಎಲ್ಲಿ ಇಡುತ್ತೀರಿ" ಎಂದು ಯಾವ ಮುಚ್ಚುಮರೆ ಇಲ್ಲದೇ ಹೇಳಿ" ಎಂದರು, ವಿನಂತಿಸುವ ಧ್ವನಿಯಲ್ಲಿ.


ನಾನೆಂದೆ, "ನಮ್ಮಲ್ಲಿ ಗಳಿಕೆಯೆಂಬ ಗುಟ್ಟು ಇಲ್ಲವೇ ಇಲ್ಲ. ಎಲ್ಲಾ ಖುಲ್ಲಂ ಖುಲ್ಲಾ. 27 ವರ್ಷದ ವೈವಾಹಿಕ ಜೀವನದಲ್ಲಿ ಇವರ ಜೇಬು ಖಾಲಿಯಿದ್ದ ಒಂದು ದಿನ ಕೂಡ ನೆನಪಿಲ್ಲ. ಒಂದು ದಿನ ನಸುಕಿನ ತಿರುಗಾಟಕ್ಕೆ ಹೋದಾಗ ಹಳ್ಳಿಯವನೊಬ್ಬ "ಸ್ವಾಮಿ ಕಾಫಿಗೆ ಕಾಸಿಲ್ಲ. ಈ ಕನಕಾಂಬರ ಹೂ ಕೊಂಡು ನೆರವಾಗಿರಿ" ಎಂದು ಅಂಗಲಾಚಿದ. ಇವರು ತಕ್ಷಣ ಜೇಬಿನಿಂದ 2 ರೂಪಾಯಿ ಕೊಟ್ಟು ಅವನು ಕೊಟ್ಟಷ್ಟು ಹೂ ಮನೆಗೆ ತರಬೇಕೇ? ಮೊನ್ನೆ ಇನ್ನೊಂದು ತಮಾಷೆಯಾಯಿತು. ಸಂಜೆಗೆ ಸಾಂಕಿ ಕೆರೆಯ ಬಳಿ ಅಲೆದಾಡಲು ಹೊರಟಿದ್ದೆವು. ದಾರಿಯಲ್ಲಿ ಹಣ್ಣು ಮುದುಕಿ ಭಿಕ್ಷೆ ಬೇಡುತ್ತಿದ್ದಳು. 'ಜೇಬಿನಲ್ಲಿ ಕಾಸಿದ್ದರೆ ಮುದುಕಿಗೆ ಕೊಡಿ' ಎಂದು ಮಾತು ಮುಗಿಸುವ ಮೊದಲೇ ಅವಳ ಕೈಯಲ್ಲಿ ಐವತ್ತು ಪೈಸೆ



ಹಾಕಿದ್ದರು. ಅವರ ಗಳಿಕೆಯ ಹಣ ಯಾವಾಗಲೂ ಅವರ ಜೇಬಿನಲ್ಲಿರುತ್ತದೆ !"

ಪ್ರಶ್ನೆ:– ದಯವಿಟ್ಟು ಯಾವ ಬ್ಯಾಂಕಿನಲ್ಲಿ ಹಣ ಇಡುತ್ತೀರಿ ಎಂದು ಹೇಳಬಾರದೇ?

ನಾನು:– ರಾಯರಿಗೆ ಬ್ಯಾಂಕ್ ವ್ಯವಹಾರವೆಂದರೆ ತುಂಬ ಪ್ರೀತಿ ! ಅಂತೆಯೇ ಮನೆಯಿಂದ ಕಾಲುನಡಿಗೆಯಲ್ಲಿ ಮುಟ್ಟಬಹುದಾದಂಥ ವಿವಿಧ ಬ್ಯಾಂಕುಗಳ



ಶಾಖೆಗಳಲ್ಲಿ ಖಾತೆ ತೆಗೆದಿದ್ದಾರೆ. ಹತ್ತು ರೂಪಾಯಿಗೆ ಒಂದು ಖಾತೆ ತೆರೆಯಬಹುದಾಗಿದ್ದರೂ ಇವರಿಗೆ ಚೆಕ್ ಪುಸ್ತಕ ಒಟ್ಟು ಮಾಡುವುದು ಸೇರುತ್ತದೆ. ಹಿಂದೆ ಕನಿಷ್ಟ ನೂರು ರೂಪಾಯಿ ಠೇವಣಿ ಇಟ್ಟರೆ ಸಾಕಿತ್ತು. ಈಗ ಇದನ್ನು ಇನ್ನೂರಾ ಐವತ್ತಕ್ಕೆ ಏರಿಸಿದ್ದರಿಂದ, ಇದ್ದಬದ್ದ ಹಣ ಠೇವಣಿ ನುಂಗಿಬಿಟ್ಟಿದೆ !

ಪ್ರಶ್ನೆ:– (ಸಂತೋಷದಿಂದ) ನೀವು ಸತ್ಯವನ್ನು ಕೊನೆಗೊಮ್ಮೆ ಹೊರಗೆಡವಿದ್ದರಿಂದ ತುಂಬಾ ಸಂತೋಷವಾಗಿದೆ. ನಿಮಗೆ ತೊಂದರೆಯಾಗದಿದ್ದರೆ, ನಿಮ್ಮವರ ಎಲ್ಲಾ ಪಾಸ್‌ಬುಕ್, ಚೆಕ್ ಬುಕ್‌ಗಳನ್ನು ತೋರಿಸುವ ಕೃಪೆ ಮಾಡುವಿರಾ?

ನಾನು:– ಅದಕ್ಕೇನಂತೆ? ತಾನು ಊರಲ್ಲಿಲ್ಲದಾಗ, ನನಗೆ ತೊಂದರೆಯಾಗಕೂಡದು ಎಂದು ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಕೂಡಲೇ ಸಿಗುವಂತೆ ಇಟ್ಟಿದ್ದಾರೆ. ಆದರೆ ಹೋದ ತಿಂಗಳೂ ಇವರು ಕಾಡು ಎಮ್ಮೆಗಳ ಛಾಯಾಗ್ರಹಣಕ್ಕೆ ಹೋದಾಗ ಈ ಚೆಕ್ ಪುಸ್ತಕಗಳೊಂದಿಗೆ ವಿವಿಧ ಬಾಂಕುಗಳಿಗೆ ಓಡಾಡಿದರೂ, ಇವರ ಖಾತೆಯಲ್ಲಿ ಕನಿಷ್ಟ ಮೊತ್ತ ಇರುವುದರಿಂದ ಒಂದು ಪೈಸಾ ಕೊಡುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿಬಿಟ್ಟರು. ಆದರೆ ಸುದೈವದಿಂದ ಆಗಾಗ ಇವರ ಬಟ್ಟೆಗಳನ್ನು ಕೊಡವಿ, ಒಗೆಯುವ ಮೊದಲು ಶೋಧಿಸಿದಾಗ ಸಿಗುವ ಕಾಸು ನನಗೆ ಬೇಕಾದಷ್ಟು ಇತ್ತು. ಏನೇನೂ ತೊಂದರೆಯಾಗಲಿಲ್ಲ.



ಎದ್ದು ಆ ರಟ್ಟಿನ ಪೆಟ್ಟಿಗೆ ಮುಖ್ಯಸ್ಥರ ಎದುರಿಗಿಟ್ಟೆ. ಎಲ್ಲರ ಕಣ್ಣುಗಳೂ ಪಿಕಿ ಪಿಕಿ ನೋಡಲಾರಂಭಿಸಿದವು. ಮೊದಲ ಪಾಸ್‌ಬುಕ್ ಎತ್ತಿಕೊಂಡ ಮುಖ್ಯಸ್ಥರು ಅದರ ಮೇಲೆ ನಮೂದಿಸಿದ ಹೆಸರನ್ನು

ಓದಿ ದಿಗ್ಭ್ರಮೆಗೊಂಡರು. "ಏನ್ರಿ? ಇದು ಡಾಕ್ಟರ್ ಕೃಷ್ಣಾನಂದ ಕಾಮತರ ಮನೇನಾ?

ನಾನು:– ಮತ್ತೆ? ನಾನು ಅಂಥಿಂಥವರನ್ನು ಮದುವೆಯಾಗ್ತೀನಿ ಎಂದು ತಿಳಿದಿರಾ?

ಮುಖ್ಯಸ್ಥ:– ನೀವು ಜ್ಯೋತ್ಸ್ನಾ ಕಾಮತರೇ ! ಆಕಾಶವಾಣಿಯ ಡೈರೆಕ್ಟರ್ ಡಾ। ಕಾಮತರು ನಿಮಗೆ ಸಂಬಂಧಿಯೇ?

ನಾನು:– ಹೌದುರೀ ! ನನಗೆ ಮದುವೆಯ ಮೊದಲು ಡಾಕ್ಟರೇಟ್ ಇರಲಿಲ್ಲ. ಆದರೆ ಅದಿಲ್ಲದಿರುವುದು ರಾಯರಿಗೆ ಅವಮಾನಕಾರಿ ಎಂದು ನಾನೂ ಪಿ.ಎಚ್.ಡಿ. ಮುಗಿಸಬೇಕಾಯ್ತು ! ಆಕಾಶವಾಣಿ ಕೇಂದ್ರದ ನಿರ್ದೇಶಕಿ ನಾನೇ ಎಂದರೆ ನಂಬುತ್ತೀರಷ್ಟೇ?

ಅದೇನೋ ಅನಾಹುತ ಆದಂತೆ ತಂಡದವರೆಲ್ಲ ಗರಬಡಿದವರಂತೆ ಎದ್ದು ನಿಂತು, ಪಶ್ಚಾತ್ತಾಪದ ಧನಿಯಲ್ಲಿ ಮುಖ್ಯಸ್ಥರು "ಪ್ರಮಾದವಾಯಿತು, ತಾಯಿ ಕ್ಷಮಿಸಬೇಕು. ಕಾವಲುಗಾರನ ಮಾತು ನಂಬಿದ್ದೆ ಮುಳುವಾಯಿತು. ಕಮಿಶನರ ಸಾಹೇಬರು ನಾವು ಹಲ್ಲೆ ಮಾಡಬೇಕಾದವರ ವಿಳಾಸ ಕೊಟ್ಟು ಅದೇ ಕಟ್ಟಡದಲ್ಲಿ ಆಕಾಶವಾಣಿಯ ನಿರ್ದೇಶಕರೂ ವಾಸವಾಗಿದ್ದಾರೆ, ಅವಶ್ಯ ಅನಿಸಿದರೆ ಅವರ ನೆರವು ಪಡೆಯಬಹುದು ಎಂದು ಸೂಚಿಸಿದ್ದರು. ಈ ಬೃಹತ್ ಕಟ್ಟಡದಲ್ಲಿ ವಿಳಾಸ ಹುಡುಕುವುದು ಕಷ್ಟಕರವೆಂದು ಕಾವಲುಗಾರನಿಗೆ ವಿಚಾರಿಸಿದೆವು. ಅವನು ತನಗೆ ತಿಳಿಯದೇ ಇದ್ದದ್ದು ಏನೂ ಇಲ್ಲ ಎಂಬಂತೆ ನಿಮ್ಮ ಮನೆ ತೋರಿಸಬೇಕೇ? ಅವನಿಗೆ ಚೆನ್ನಾಗಿ ಥಳಿಸಿದಾಗಲೇ ತಾನು ಮಾಡಿದ ಅಪರಾಧದ ಅರಿವಾಗಬೇಕು. ತಾವು ನಮ್ಮ ತಪ್ಪನ್ನು ಹೊಟ್ಟೆಯಲ್ಲಿ ಹಾಕಿಕೊಂಡು ಕಮಿಶನರ್ ಸಾಹೇಬರಿಗೆ ದೂರು ಕೊಡಬೇಡಿ!" ಎಂದು ಅಂಗಲಾಚಿ ಬೇಡಿಕೊಂಡರು.

"ನೀವು ಹೇಳುವುದನ್ನು ಒಪ್ಪಿಕೊಳ್ಳುವ ಪೂರ್ವದಲ್ಲಿ ನನ್ನ ಸೂಚನೆಗಳಿಗೆ ನಿಮ್ಮ ಸಮ್ಮತಿ ಅತ್ಯವಶ್ಯ. ಈ ಚಳಿಗಾಲದ ರಾತ್ರೆಯಲ್ಲಿ ನೀವೆಲ್ಲ ವಿಪರೀತ ದಣಿದಿದ್ದರಿಂದ ನಾನು ಕೊಡುವ ಅಲ್ಪೋಪಹಾರವನ್ನು ಸೇವಿಸಬೇಕು. ಅಲ್ಲದೇ, ಆ ಬಡಪಾಯಿ ಕಾವಲುಗಾರನನ್ನು ಕ್ಷಮಿಸಿ, ಕಾಫಿ ತಿಂಡಿಗಾಗಿ ಇಲ್ಲಿಗೆ ಬರಮಾಡಿಕೊಳ್ಳಬೇಕು" ಎಂದಾಗ "ತಾವು ತೋರಿಸುವ ಮಾತೃ ಹೃದಯದ ದೊಡ್ಡಸ್ತಿಕೆ ಹೇಗೆ ತಳ್ಳಿಹಾಕುವುದು?" ಎಂದರು, ಆದಾಯಕರ ಇಲಾಖೆಯ ಮೊಕಾದ್ದಮರು. ಆಗಂತುಕರೂ ಕಾವಲುಗಾರನೊಂದಿಗೆ ನಾಷ್ಟಾ ಸ್ವೀಕರಿಸುವುದನ್ನು ಕಂಡಾಗ ಇನ್ನೂ ಮಾನವೀಯತೆ ಬದುಕಿಕೊಂಡಿದೆ ಎಂದು ನೆಮ್ಮದಿಯಾಯಿತು.

ದೋ ಸೆ

ದೋ ಸೆ

ಯಾವಾಗಲೂ ಹೆಚ್ಚು

ಏಕ್ ಸೆ



–ಎನ್. ಪ್ರಕಾಶ್

ಲೈಫ್ ಸರ್ಟಿಫಿಕೇಟ್

–ರಾಮಿ

ಅಯೋಧ್ಯಾ ರಾಮಾಯಣದ ಉತ್ತರಕಾಂಡ ಅಲ್ಲ– ಅಗ್ನಿಕಾಂಡ ಆಗಷ್ಟೆ ಕೊಂಚ ತಹಬಂದಿಗೆ ಬಂದಿತ್ತು. ಆದರೂ ತಲೆಯೊಳಗೆಲ್ಲ ಹೊಗೆ, ಮಸಿ ತುಂಬಿಕೊಂಡಿತ್ತು.

ಆಗ ತಾನೆ ಬಂದು ಹೋಗಿದ್ದ ಪ್ರಾಣೇಶ, ಸರ್ಕಾರ ಅಂತ ಇದೆಯಾ ಈ ದೇಶದಲ್ಲಿ ಅಂತ ಆರ್ಭಟಿಸಿ ಹೋಗಿದ್ದ. ಎಗರಾಡುವ ಭರದಲ್ಲಿ ಎತ್ತಿದ ಕೈಯನ್ನು ನನ್ನ ಬೆನ್ನಿಗೆ ಬಾರಿಸಿದ ನೋವು ಇನ್ನು ಇತ್ತು. ಪುಣ್ಯಕ್ಕೆ ಆತನ ಕೈಯಲ್ಲಿ ತ್ರಿಶೂಲವೋ ಇನ್ನೊಂದೋ ಇರಲಿಲ್ಲ.

ಸರ್ಕಾರ ಎಲ್ಲಿದೆ, ಪಾರ್ಟಿಗಳು ಎಲ್ಲಿದ್ದಾವೆ, ಲೀಡರುಗಳು ಎಲ್ಲಿದ್ದಾರೆ, ಸಂತರು ಗಿಂತರು ಎಲ್ಲಿದ್ದಾರೆ ಎಂದು ಪುಂಖಾನುಪುಂಖವಾಗಿ ಪ್ರಾಣೇಶ ಕೆರಳು ನುಡಿ ಹಾರಿಸಿದ್ದು ಇನ್ನೂ ಕಿವಿಯಲ್ಲಿ ಮೊರೆಯುತ್ತಿತ್ತು.

ಅಷ್ಟರಲ್ಲಿ ನಾಲ್ಕು ದಿನಗಳಿಂದ ನಾಪತ್ತೆಯಾಗಿದ್ದ ಪೋಸ್ಟ್‌ಮನ್ ಮಹಾಶಯ ಪ್ರತ್ಯಕ್ಷನಾದ. ಸರ್ಕಾರ ಎಲ್ಲಿ ಅನ್ನೋದಕ್ಕೆ ಸಾಕ್ಷಿಯಾಗಿ ಈತನಾದರೂ ಬಂದನಲ್ಲ ಅನಿಸಿತು.

ಬಂದ ಟಪ್ಪಾಲನ್ನು ಕೈಗೆತ್ತಿಕೊಂಡಾಗ ಮೊದಲು ಸಿಕ್ಕಿದ್ದು ಸರ್ಕಾರೀ ಬ್ಯಾಂಕಿನ ಕಾಗದ. ಸರ್ಕಾರ ಇದೆ ಅನ್ನೋದಕ್ಕೆ ಇನ್ನೊಂದು ಸಾಕ್ಷಿ.

ನೀವು ಬದುಕಿದ್ದೀರಿ ಅನ್ನೋದನ್ನ ಖಚಿತಪಡಿಸಿಕೊಳ್ಳೋದಕ್ಕಾಗಿ ಕೂಡಲೆ ಬ್ಯಾಂಕಿಗೆ ಬಂದು ಹೋಗಿ ಎಂಬ ಕರೆ ಅದರಲ್ಲಿತ್ತು. ವರ್ಷಕ್ಕೆರಡು ಸಲ ಲೈಫ್ ಸರ್ಟಿಫಿಕೇಟ್ ಅಂತ ಕೊಡೋದಕ್ಕಿದೆಯಲ್ಲ ನಿವೃತ್ತರಿಗೆ.

ಸರ್ಕಾರ ಇದೆಯಾ ಅಂತ ಪ್ರಾಣೇಶನ ಆರ್ಭಟ. 'ನೀನು ಬದುಕಿದ್ದೀಯಾ?' ಅಂತ ಸರ್ಕಾರ ಕೇಳ್ತಾ ಇದೆ ನನ್ನನ್ನ.

ಉಳಿದವುಗಳೆಲ್ಲ ಲಗ್ನ ಪತ್ರಗಳು. ಮಸೀದಿ ಉರುಳಿಸಲಿ, ಮಂದಿರ ಮುರಿಯಲಿ, ದೇಶವೇ ಉರಿಯಲಿ – ಲಗ್ನಗಳಂತೂ ನಡೆದೇ ನಡೆಯುತ್ತವಲ್ಲ!



ಲೈಫ್ ಸರ್ಟಿಫಿಕೇಟ್ ಒದಗಿಸೋದಕ್ಕಾಗಿ ಸರ್ಕಾರಿ ಬ್ಯಾಂಕಿಗೆ ನಡೆದೆ. ಹೌದು ನಡೆದೇ ಹೋದೆ. ಬಸ್ಸುಗಳಿನ್ನೂ ಓಡಾಡೋದಕ್ಕೆ ತೊಡಗಿರಲಿಲ್ಲ.

ಬ್ಯಾಂಕ್ ಬಾಗಿಲು ತೆರೆದಿತ್ತು. ಪ್ರಾಣೇಶನಿಗೆ ಹೇಗೇ ಅನ್ನಿಸಲಿ, ಸರ್ಕಾರವಂತೂ ನಡೀತಾ ಇದೆ ಅಂತ ಸಮಾಧಾನವಾಯಿತು. ಕೌಂಟರಿನಲ್ಲಿ ನೂಕುನುಗ್ಗಲು ಇಲ್ಲ ಅಂತಲೂ ಸಂತೋಷವಾಯಿತು.

ಆದರೆ ಒಳಗಡೆ ಹೆಚ್ಚಿನ ಆಸನಗಳು ಖಾಲಿ ಖಾಲಿ. ಕೆಲವೇ ಕೆಲವರು ನೌಕರರು ಒಂದೆರಡು ಕಡೆ ಗುಂಪು ಕಟ್ಟಿಕೊಂಡು ನಿಂತು ಏನೋ ಬಹಳ ಸೀರಿಯಸ್ಸಾಗಿ ಚರ್ಚಿಸುತ್ತಿದ್ದರು.

ಮತ್ತೇನು ಕರಸೇವೆ ಕಥೆಯನ್ನೇ ಬಣ್ಣಿಸ್ತಾ ಇದ್ದಾರೆ ಅಂದುಕೊಂಡೆ. ಕಿವಿಗೊಟ್ಟ ಮೇಲೆ ಆ ಸಮಾಚಾರ ಅಲ್ಲ ಅಂತ ತಿಳಿಯಿತು. ಸಧ್ಯವೇ ಇನ್ನೂ ಐವತ್ತು ಶಾಖೆಗಳನ್ನು ತೆರೀತಾರಂತೆ ಬ್ಯಾಂಕಿನವರು ಆಗ ಯಾರು ಯಾರಿಗೆ ಪ್ರಮೋಶನ್ ದಕ್ಕಬಹುದು ಎಂದು ಜಿಜ್ಞಾಸೆ.

"ಯಾವ ಹೊಸ ಬ್ರಾಂಚಿನಲ್ಲೂ ಕೆಲಸ ಇರೋದಿಲ್ಲ. ನಷ್ಟ ಅಂತ ಮುಚ್ಚಿಬಿಡ್ತಾರೆ" –ಸಿನಿಕ ನೌಕರಿಣಿಯೊಬ್ಬಳ ಉದ್ಗಾರ.

"ಮುಚ್ಚಿದರೆ ಮುಚ್ಚಲಿ. ಅವರ ಮುಂಡಾ ಮೋಚಿತು ..... ಪ್ರಮೋಶನ್ ಪಡೆದವರನ್ನ ಹಿಂದಕ್ಕೆ ತಳ್ಳೋಕಾಗೊಲ್ಲವಲ್ಲ" ಅಂತ ಇನ್ನೊಬ್ಬನ ಟಿಪ್ಪಣಿ.

ಚರ್ಚೆ ಸೀರಿಯಸ್ ಆಗ್ತಾ ಹೋಯಿತೇ ಹೊರತು ನನ್ನ ಕಡೆಗೆ ಯಾರೂ ಗಮನ ಹರಿಸೋ ಹಾಗೆ ಕಾಣಲಿಲ್ಲ.

ಮೆತ್ತಗೆ ಕೌಂಟರನ್ನು ಕುಟ್ಟಿ ನೋಡಿದೆ. ಇನ್ನೊಮ್ಮೆ ಕೊಂಚ ಜೋರಾಗಿಯೇ ಕುಟ್ಟಿದೆನೋ ಏನೋ, ಗುಂಪಿನವರು ತಿರುಗಿ ನನ್ನ ಕಡೆಗೆ ತಿರುಗಿ ನೋಡಿದರು. ಅವರಲ್ಲೊಬ್ಬ ಧಾವಿಸಿ ಬಂದು ಆತಂಕದಿಂದೆಂಬಂತೆ 'ಏನ್ರೀ' ಅಂತ ಹುಬ್ಬೇರಿಸಿದ.

ಲೈಫ್ ಸರ್ಟಿಫಿಕೇಟ್ ಬಗ್ಗೆ ಬಂದೆ ಎಂದು ತಿಳಿಯಪಡಿಸಿದೆ.

"ಅಲ್ರಿ ದೇಶಕ್ಕೆ ದೇಶವೇ ಸುಡ್ತಾ ಇದೆ. ಜನ ಸಾಯ್ತಿದಾರೆ. ನೀವುಗಳೊಳ್ಳೆ ಲೈಫ್ ಸರ್ಟಿಫಿಕೇಟು ಅಂತ ಬಂದಿದೀರಲ್ಲ" ಎಂದು ಛೇಡಿಸೋದಕ್ಕೆ ನೋಡಿದ.

"ಜನ ಸಾಯ್ತಿದ್ದಾರೆ ನಿಜ. ಆದರೆ ನಾವು ನೀವು ಬದುಕೇ ಇದ್ದೇವಲ್ಲ" ಎಂಬ ವರಸೆ ತೆಗೆದೆ

"ಒಂದ್ಸಲ ಗಲಾಟೆಯೆಲ್ಲ ಮುಗೀಲಿ. ಆಮೇಲೆಲ್ಲಾ ಮಾಡೋಣ. ಈವಾಗ ಸ್ಟಾಫ್ ಬೇರೆ ಸಾಕಷ್ಟಿಲ್ಲ" ಎಂಬ ಪ್ರತಿ ವರಸೆ ಬಂತು.

"ಇಷ್ಟು ಮಂದಿಯಾದರೂ ಬಂದಿದ್ದೀರಲ್ಲ. ಯಾರಾದರೂ ಬರಕೊಂಡು ಬಿಡಿ ಬದುಕಿದಾರೆ ಉಸಿರಾಡ್ತಿದಾರೆ ಅಂತ" ಎಂದು ವರಾತ ಹಿಡಿದೆ.

"ಒಳ್ಳೆ ಘಾಟಿ ಕಣ್ರೀ ನೀವು" ಎಂದುಬಿಟ್ಟು ಫೈಲ್ ಹುಡುಕೋದಕ್ಕೆ ಹೊರಟ. "ಒಳ್ಳೇ ದಿನ ನೋಡಿ ಬಂದಿದ್ದೀರ" ಎಂದು ಗೊಣಗುತ್ತಾ ಮೇಜಿನ ಮೇಲೆಲ್ಲಾ ತಡಕಾಡಿದ.

"ನೆಕ್ಸ್ಟ್ ವೀಕ್ ಬರೊದಕ್ಕೆ ಹೇಳ್ರೀ" ಅಂತ ಹರಟೆ ಹುಂಬನೊಬ್ಬ ಕಿರಲಿದ್ದು ಕೇಳಿಸಿತು.



"ಏನ್ರೀ ಹ್ಯಾಗ್ ಮಾಡ್ತೀರಾ?" ಅಂತ ಫೈಲು ಹುಡುಕುತ್ತಿದ್ದವನು ವಿಚಾರಿಸಿದ.

"ಮುಂದಿನ ವಾರ ಊರಲ್ಲಿರೊಲ್ಲ" ಅಂತ ಸುಳ್ಳು ಹೊಡೆದೆ.

ಆತ ಸುಮ್ಮನಿರ್ತಾನೆಯೇ? "ದೇಶದಲ್ಲೆಲ್ಲ ಕರ್ಫ್ಯೂ ಪ್ರತಿಬಂಧಕಾಜ್ಞೆ.. ಎಲ್ಲಿಗೆ ಹೋಗ್ತಿರಾ" ಎಂದು ತರಾಟೆಗೆ ತಗೊಂಡ.

"ಹೇಗೂ ಬಂದಿದ್ದೀನಿ... ನೀವು ಪತ್ರ ಬರೆದ ಪ್ರಕಾರ ಸರ್ಟಿಫಿಕೇಟ್ ತಯಾರಿಸಿ ಬಿಡಿ" ಎಂಬ ಮಂತ್ರವನ್ನು ಪುನರುಚ್ಚರಿಸಿದೆ.

"ಸರಿ ಬಿಡಿ ನಿಮಗೆ ಅರ್ಥವೇ ಆಗೋದಿಲ್ಲ. ದೇಶದಲ್ಲೆಲ್ಲ ದಾಂಧಲೆ. ಪ್ರಪಂಚವೆಲ್ಲ ನಮ್ಮ ಕಡೆಗೆ ನೋಡ್ತಾ ಇದೆ. ನೀವೆಲ್ಲೋ ಲೈಫ್ ಸರ್ಟಿಫಿಕೇಟು ಅಂತ ಜಪಿಸ್ತಿದೀರಲ್ಲ" ಎಂದು ತಲೆ ಕೆರೆದುಕೊಳ್ಳುತ್ತ ಫೈಲಿಗಾಗಿ ಹುಡುಕಾಟ ನಡೆಸಿದ.

ಗುಂಪಿನವರ ಮಾತುಕತೆ ಒಂದಂಕೆ ಲಾಟರಿ ಪದ್ಧತಿ ಶುದ್ಧ ಅನ್ಯಾಯ ಎಂಬುದರ ಸುತ್ತ ನಡೆದಿತ್ತು. ಹಾಳಾಗಿ ಹೋಗಲಿ ಬಿಡಿ ಎಂದು ಈತ ನಿಂತಲ್ಲಿಂದಲೇ ತನ್ನ ಅಭಿಪ್ರಾಯ ನೀಡಿದ. ಲಾಟರಿಯಲ್ಲಿ ಬಹಳ ಕಳಕೊಂಡ ಕಳೆ ಕಾಣಿಸಿತು ಮೂತಿಯಲ್ಲಿ.

ಒಂದು ಫಾರಂ ಕೈಗೆತ್ತಿಕೊಂಡು ನನ್ನ ಹೆಸರು ಉಚ್ಚರಿಸಿ 'ಇಂಥವರು ನೀವೇ ತಾನೇ' ಎಂದು ಖಚಿತ ಪಡಿಸಿಕೊಂಡು ವಿವರ ಬರೆದುಕೊಂಡ. ಸಹಿ ಗಿಹಿ ಬೇಕಾಗಿಲ್ಲ ಎಂದ.

ಗುಂಪಿನ ಮಾತುಕತೆ ಕರಸೇವೆ ಕಡೆಗೆ ಹರಿದಿತ್ತು. ಪ್ರಧಾನಿಯ ಹೇಳಿಕೆ, ಪಕ್ಷಗಳ ಲೀಡರುಗಳ ಹೇಳಿಕೆ, ಪತ್ರಿಕೆಗಳ ಅಭಿಪ್ರಾಯ ಎಲ್ಲವನ್ನೂ ಖಂಡಿಸುತ್ತಾ ತಂತಮ್ಮ ವಾದವನ್ನು ಉಗ್ರವಾಗಿ ಮಂಡಿಸಿದರು.

ಲೈಫ್ ಸರ್ಟಿಫಿಕೇಟಿನ ಶಾಸ್ತ್ರ ಮುಗಿದಿತ್ತು. ಈತ ಬೇಗನೆ ಹೋಗಿ ಗುಂಪನ್ನು ಸೇರಿಕೊಂಡ. ಕೌಂಟರಿಗೆ ಬಂದ ಇನ್ನೂ ಒಬ್ಬಿಬ್ಬರು ಕಾಯುತ್ತಾನೇ ಇದ್ದರು.

ದೇಶ ಉರಿತಾ ಇರೋವಾಗ ಅದೊಂದು ಮುಖ್ಯವೇ !

ನಾನು ಬದುಕಿದ್ದೇನೆ ಅನ್ನೋದನ್ನ ಸರ್ಕಾರಕ್ಕಂತೂ ಖಚಿತಪಡಿಸಿ ಬಂದಿದ್ದಾಯಿತು. ಕಳೆದ ವರ್ಷ ಲೈಫ್ ಸರ್ಟಿಫಿಕೇಟ್ ಕೊಟ್ಟಾಗ ಮೂರು ಮೂರು ಸಲ ಕಳೆದು ಹೋಗಿ ಪುನಃ ಪುನಃ ಕೊಡಬೇಕಾಗಿ ಬಂದಿದ್ದು ನೆನಪಾಯಿತು. ಈ ವರ್ಷ ಹೇಗೋ !



ಆದರೂ ಪ್ರಾಣೇಶನ ಹಾಗೆ ಸರ್ಕಾರ ಇಲ್ಲ ಅಂತ ಅರ್ಭಟಿಸೋದಕ್ಕೆ ಮನಸ್ಸು ಬರೋದಿಲ್ಲ. ಇದೆ ಇದೆ ... ಉಸಿರಾಡ್ತಾ ಇದೆ. ಸರ್ಕಾರ ಇದೆ, ಪಾರ್ಲಿಮೆಂಟು ಇದೆ. ನ್ಯಾಯಾಲಯಗಳಿದ್ದಾವೆ, ಲೀಡರುಗಳಿದ್ದಾರೆ, ಪಾರ್ಟಿಗಳಿವೆ. ಆದರೆ ಆ ಬಗ್ಗೆ ಲೈಫ್

ಸರ್ಟಿಫಿಕೇಟ್ ಕೊಡೋದಕ್ಕೆ ಅನುಮಾನಿಸುವಂಥ ಕ್ಷಣಗಳು ಮಾತ್ರ ಆಗಾಗ ಒದಗ್ತಾ ಇವೆಯಲ್ಲ ಎಂದು ತಲೆ ಕೆರೆದುಕೊಳ್ಳುತ್ತಾ ಗೂಡು ಸೇರಿದೆ.



ಹಾಲಿಗೆ ಬರುವ ನೀಲಕುಂತಲೆಯರು

ಎಸ್.ಎನ್. ಶಿವಸ್ವಾಮಿ

"ಯಾಕೋ ಮಾರಪ್ಪ, ಸಾಯಂಕಾಲ ಕ್ಲಬ್ಬಿಗೆ ಲೇಟಾಗಿ ಬರೋಕೆ ಶುರುಮಾಡಿದ್ದಿ ಈಚೀಚೆಗೆ? ಮನೇ ಪತ್ರ ಏನಾದ್ರೂ ಸ್ವಾರಸ್ಯ ....? " ಅಂತ ವಿಚಾರಿಸಿದ್ದಕ್ಕೆ

"ಆರು ಗಂಟೆಗೆ ಮುಂಚೆ ನಾನು ಮನೆ ಬಿಟ್ಟು ಹೊರಡೊಲ್ಲ" ಅಂತ ಖಡಾಖಂಡಿತವಾಗಿ ಉತ್ತರಕೊಟ್ಟ ಮಾರಪ್ಪ, ಸಿಗರೇಟಿನ ಹೊಗೆ ಸುರುಳಿ ಬಿಡುತ್ತ.

ಹೆಸರಿಗೆ ತಕ್ಕಂತೆ ಮಾರಪ್ಪ ರಸಿಕ. ಸಿಗರೇಟಿನ ಹೊಗೆ ಹೊರಡಿಸುವಾಗಲೂ ಬರಿಯ ಉಂಗುರಗಳನ್ನು ಹೊರಡಿಸುವುದಿಲ್ಲ. ಅವನು ಬಿಡುವ ಹೊಗೆ ಒಬ್ಬ ಸೌಂದರ್ಯೋಪಾಸಕನಿಗೆ ತಕ್ಕಹಾಗೆ ಬೇರೆ ಬೇರೆ ಸ್ತ್ರೀರೂಪ ತಳೆಯುತ್ತಿತ್ತು. ಒಂದು ಸಲ ಗುಂಗುರು ತಲೆಯ ಆಕಾರ, ಒಂದು ಸಲ ನುಣುಪಾದ ಬಾಬ್‌ಕಟ್ಟಿನ ಹಾಗೆ, ಒಂದು ಸಲ ಬಳುಕುವ ಲತೆಯಂತೆ ನಡೆದು ಬರುವ ಲಲನೆಯ ಆಕಾರ, ಹೀಗೆಲ್ಲ ಮಾರಪ್ಪ ಹೊಗೆಯಲ್ಲೇ ರೂಪಿಸುತ್ತಿದ್ದ. ಈ ಸಲ ಉದ್ದದ ಕೂದಲ ಜಡೆಯನ್ನು ಚಿತ್ರಿಸಿದ್ದ.

ಅವನ ಈ ಕಲೆಯನ್ನು ಮನಸ್ಸಿನಲ್ಲೇ ಮೆಚ್ಚಿಕೊಳ್ಳುತ್ತ ನಾನು,

"ಅದೇ ನಾನು ಕೇಳಿದ್ದು, ಆರು ಗಂಟೆಗೆ ಮುಂಚೆ ಯಾಕೆ ಬರೋಲ್ಲ, ಅಂತ. ಅಷ್ಟುಹೊತ್ತಿಗೆ ಒಂದು ರೌಂಡು ರಮ್ಮಿ ಮುಗಿದೇ ಹೋಗಿರುತ್ತಲ್ಲಾ" ಅಂದೆ.

"ಐದೂವರೆಯಿಂದ ಆರರವರೆಗೆ ನಾನು ಈ ಬಾಲ್ಕನಿಯಿಂದ ಆಚೀಚೆಗೆ ಕದಲೋದಿಲ್ಲ. ಆ ಮೂಲೇಲಿ ಒಂದು ಮಿಲ್ಕ್‌ಬೂತ್ ಇದೆ ನೋಡು. ಅಲ್ಲಿಗೆ ಸಾಯಂಕಾಲದ ಹೊತ್ತು ಸ್ಕೂಲು, ಕಾಲೇಜುಗಳಿಂದ, ಆಫೀಸುಗಳಿಂದ ಹಿಂದಿರುಗಿದ ಹುಡುಗಿಯರು ಹಾಲಿಗೆ ಬರ್ತಾರೆ. ಶೃಂಗಾರವಾಗಿ ಬರ್ತಾರೆ. ಒಬ್ಬೊಬ್ಬರು ಒಂದೊಂದು ಅಲಂಕಾರ. ಅದರಲ್ಲೂ ಅವರ ಕೇಶಾಲಂಕಾರಗಳನ್ನು ನೋಡ್ತಾ ಇದ್ರೆ, ನಾನೂ ಒಂದಿನ ಬ್ಯೂಟಿಪಾರ್ಲರ್ ತೆಗೆದುಬಿಡೋಣವೇ ಅನ್ನಿಸುತ್ತೆ" ಅನ್ನುತ್ತಾ ಮಾರಪ್ಪ ಸದಾ ಕೂದಲಿನ ನೀಳವಾದ ಜಡೆಹೋಲುವ ಒಂದು ಹೊಗೆ ಸುರುಳಿ ಬಿಟ್ಟ.



"ನೋಡು ಈ ಥರದ ಉದ್ದದ ಜಡೆಹುಡುಗಿ ಆಫೀಸಿನಿಂದ ಮನೆಗೆ ಬರೋದಾರೀಲೇ ಟಿಫಿನ್‌ಕ್ಯಾರಿಯರ್‌ನಲ್ಲಿ ಹಾಲು ತಗೊಂಡು ಹೋಗ್ತಾಳೆ" ಅಂತ ಸೇರಿಸಿದ.

ಅವನ ಕಲಾ ನೈಪುಣ್ಯಕ್ಕೆ 'ಭಲೆ' ಎನ್ನುತ್ತ ತಲೆದೂಗಿದೆ.

ಮಾರಪ್ಪ ಬಿಟ್ಟ ಹೊಗೆ ಸುತ್ತುತ್ತ ಹೋಗಿ ಆಕಾಶದಲ್ಲಿ ಲೀನವಾಯಿತು. ಮಾರಪ್ಪ ಇನ್ನೊಂದು ಸುರುಳಿ ಹೊರದಿಸಿದ.

"ಇದನ್ನ ನೋಡಿದೆಯಾ? ಮುಂದಲೆ, ಹಿಂದಲೆ, ಎರಡೂ ಬೇರೆ ಬೇರೆ ದಿಕ್ಕಿಗೆ ಬಾಚಿಕೊಂಡ ಹಾಗೆ ಬಾಚಿಕೊಂಡು ಓಇಗೊಬ್ಬ ಹುಡುಗಿ ಐದೂಮುಕ್ಕಾಲಿಗೆ ಸರಿಯಾಗಿ ಬರ್ತಾಳೆ" ಅಂದ.

ಆ ಕಲೆಯ ವಿಚಿತ್ರವನ್ನು ಊಹಿಸಿಕೊಂಡೆ.

"ತಮಾಷೆಯಾಗಿದೆ" ಅಂತ ಮಿನಿಕಾಮೆಂಟ್‌ಮಾಡಿದೆ.

ಮಾರಪ್ಪ "ಆ ಹುಡುಗಿ ನಡೆಯೋ ಗತ್ತು ನೋಡಬೇಕು ನೀನು! ಹೀಗೆ" ಅನ್ನುತ್ತ ಸಿಗರೇಟು ಹೊಗೆ ಸುರುಳಿಯಲ್ಲೇ ಹುಡುಗಿ ನಡಿಗೆಯ ಗತ್ತನ್ನು ಸೃಷ್ಟಿಸಲೆತ್ನಿಸಿ ವಿಫಲನಾದ. ಆ ಸುರುಳಿಯನ್ನು ಕೈಬೀಸಿ ಕೆಡಿಸಿ ಇನ್ನೊಂದು ಸುರುಳಿ ಸುತ್ತಿದ.

"ನೋಡಿದೆಯಾ, ಇದು ಕಬ್ಬಿನ ಜಲ್ಲೆ ಹೆಣಿಗೆ. ಆಮೇಲೆ ಇದನ್ನ ಸ್ವಲ್ಪ ನೋಡು, ಹಗ್ಗದ ಹೆಣಿಗೆ. ನಡುತಲೆಯಿಂದಲೇ ಈ ಜಡೆ ಪ್ರಾರಂಭವಾಗುತ್ತೆ. ತಲೆಗೆ ಸೇರಿದ ಹಾಗೆ ಇರೊಲ್ಲ ಈ ಜಡೆ. ಆಹಾ, ಈ ಜಡೆ ಹಾಕ್ಕೊಂಡು ಬರೋ ಹುಡುಗಿ ಒಬ್ಬ ಅಪ್ಸರೆಯೇ ಸರಿ" ಅನ್ನುತ್ತ ಮಾರಪ್ಪ ಕಣ್ಣು ಮುಚ್ಚಿಕೊಂಡು ತನ್ನ ಕಲ್ಪನಾ ಪ್ರಪಂಚದಲ್ಲಿ ಮುಳುಗಿದ.

ಹಗ್ಗದ ಜಡೆ ಗಾಳಿಗೆ ಕರಗಿ ಹೋದ ಕೂಡಲೆ ಬಂತು ಇನ್ನೂ ಒಂದು ಹೊಗೆ ಸುರುಳಿ. ಜಡೆಯಿಲ್ಲದ ಗುಂಗುರು ಕೂದಲಿನ ಬುಟ್ಟಿ.

"ಇದೂ ಒಂದು ತಲೆಯೇ?" ಅರ್ಥವಾಗದೆ ಕೇಳಿದೆ.

ಮಾರಪ್ಪ "ಇದೇನೋ ತಲೆಯೇ. ಆದರೆ ನೀನು ಆ ಹುಡುಗೀನ ನೋಡಿದರೆ, ನಿನಗೆ ತಿಳಿಯದ ಹಾಗೆ ಶಿಳ್ಳುಹಾಕಿ ಬಿಡ್ತಿ ! ಅಷ್ಟು ವಯ್ಯಾರ ! " ಅಂದ

ವಯ್ಯಾರಿ ಹೋದ ಮೇಲೆ, ಬಂದ ವೇಣಿಬಂಧಗಳ ವೈಖರಿ ಒಂದೊಂದು ಒಂದೊಂದು ಬಗೆಯದು. ವೈನಾಗಿ ತಲೆಬಾಚಿ ಹಿಂದುಗಡೆಗೆ ಬ್ರೆಡ್‌ಸ್ಲೈಸಿನಾಕಾರದಲ್ಲಿ ಹಾಕಿದ ಗಂಟು, ತಲೆಯೇ ಬಾಚದೆ ಮುಕ್ತವಾಗಿ ಹರಿಯ ಬಿಟ್ಟ ತುಂಬುಗೂದಲನ್ನು ಎರಡುಭಾಗ ಮಾಡಿ, ಆ ಕಡೆ ಈ ಕಡೆ ತೂಗು ಬಿಟ್ಟ ಜಡೆಗಳು, ಇನ್ನೂ ಹಲವಾರು ಆಕೃತಿಗಳನ್ನು ಮಾರಪ್ಪ ಹೊಗೆಯಲ್ಲಿ ಸೃಷ್ಟಿಸಿದ.

ಸಿಗರೇಟು ಉರಿದು ಚಿಕ್ಕದಾಗಿ, ಇನ್ನೇನು ಕೈ ಸುಡಬೆಕು ಎನ್ನುವಾಗ ಮಾರಪ್ಪ ದೀರ್ಘವಾಗಿ ಹೊಗೆಯೆಳೆದುಕೊಂಡು, ಸಿಗರೇಟು ತುಂಡನ್ನು ಬಿಸಾಡಿ ಒಂದು ದಿವ್ಯಾಕಾರದ ಹೊಗೆ ಸುರುಳಿ ಸುತ್ತಿದ. ಅದನ್ನು ನೋಡಿ ಉನ್ಮತ್ತನಂತೆ ನಾನು



"ಮೆರಿಲೀನ್ ಮನ್ರೋ !" ಅಂತ ಉದ್ಗರಿಸಿದೆ.

"ಹೌದು, ಮೆರಿಲೀನ್ ಮನ್ರೋ ತಲೆಗೂದಲೇ ಅದು"

"ಆಹಾಹಾ ! ಈ ಹುಡುಗೀನೂ ಹಾಲಿಗೆ ಬರುತ್ತದೆಯೆ?"

"ಹೌದು, ದಿನವೂ ಬರುತ್ತೆ, ಆರು ಗಂಟೆಗೆ. ನನ್ನ ಫ್ರೆಂಡು !"

ಗಾಳಿಯಲ್ಲಿ ಕರಗಿಹೋಗುತ್ತಿದ್ದ ಮೆರಿಲೀನ್ ಮನ್ರೋ ಆಕೃತಿಯಲ್ಲೇ ಕಣ್ಣಿಟ್ಟು ನಾನಂದೆ.

"ಇನ್ಮೇಲೆ ನಾನೂ ಆರುಗಂಟೆಗೆ ಅಲ್ಲೇ ಬರ್ತೀನಿ"

"ಧಾರಾಳವಾಗಿ ಬಾ. ನಿನಗೂ ಆ ಹುಡುಗೀನ ಇಂಟ್ರೋಡ್ಯೂಸ್ ಮಾಡ್ತೀನಿ"

"ಈ ಮೆರಿಲೀನ್ ಮನ್ರೋಗೆ ಎಷ್ಟು ವಯಸ್ಸಿದ್ದೀತೋ "

"ಐದೋ ಆರೋ ಇರಬಹುದೂಂತ ನನ್ನ ಅಂದಾಜು" ಅಂತ ಹೇಳಿ, ನನ್ನ ಉತ್ಸಾಹವನ್ನು ಭಂಗಮಾಡಿ ಮಾರಪ್ಪ ಇನ್ನೊಂದು ಸಿಗರೇಟು ಹಚ್ಚಿದ.

ಡಿಸೆಂಬರ್ 7 ರಂದು ನಡೆದದ್ದು

—ಪ್ರಕ್ಕಿ

"ಒಡೆ
ದು ಕಟ್ಟಬೇಕು ಹೊಸದಾಗಿ"
ಹೇಳಿದ ಹೂಂಕರಿಸಿ
ಹೋಟೆಲ್ಲಿನ ಗಿರಾಕಿ
ಪೇಪರೋದತ್ತ ಹಾಟ್ ಆಗಿ

ಕಟ್ಟಿ
ಕೊಟ್ಟೇ ಬಿಟ್ಟ
ಹೋಟೆಲ್ಲಿನ ಭಟ್ಟ
ಕ್ಷಣ ಮಾತ್ರದಲ್ಲಿ
ಬಿಸಿ ವಡೆ
ಯ ಹೊಸದಾಗಿ
ಸುತ್ತಿ ಪೇಪರಿನಲ್ಲಿ
ಅಚ್ಚು ಕಟ್ಟಾಗಿ.



ಶರಲೇಖನ ಸಾಹಸ

-ಪ್ರಕಾಶ್

"ಥತ್!" ಎನ್ನುತ್ತ, ಓದುತ್ತಿದ್ದ ಪೇಪರ್ನ್ನ ದೂರಕ್ಕೆ ಎಸೆದ ಶರಲೇಖ. ನಾನು ಹುಬ್ಬೇರಿಸಿದೆ. "ಗೊತ್ತು !" ಅಂದೆ ನಾನು. 'ಮೂರು ತಿಂಗಳಿಂದ ಒಂದು ತಂಗಳು ಕೇಸೂ ಇಲ್ಲ! ನನಗೂ, ನಿನಗೂ ಬೇಜಾರು. ಇವತ್ತಿನ ನೀರಸ ಪೇಪರ್ ಓದಿ ಕೋಪ ಶಿಖರ ಮುಟ್ಟಿ, ನೀನು ಪೇಪರ್ ದೂರ ಎಸೆದೆ!' ಅಂದೆ. ಶರಲೇಖ ಮಂದಸ್ಮಿತನಾದ (ಆಗಾಗ್ಗೆ ಆಗುತ್ತಿದ್ದ ಹೀಗೆ). ಬಾಗಿಲ ಕರಗಂಟೆ ಟ್ರೀನ್ ಅಂತು. ನಾನು ಥಂಗನೆ ಎದ್ದೆ. 'ಸೋಫ ಸ್ಪ್ರಿಂಗ್ ಹಾಳಾಗುತ್ತೆ, ವತ್ಸನ! ನಿಧಾನ!' ಅಂದ ಶರಲೇಖ. ಬಾಗಿಲು ತೆರೆದೆ. ಮಧ್ಯ ವಯಸ್ಸಿನ, ಗೌರವರ್ಣದ (ಇದು ಯಾವ ಕಲರ್ ಅಂತ ನನಗೂ ಗೊತ್ತಿಲ್ಲ, ಆದರೆ ಪತ್ತೇದಾರೀಲಿ ಇದು ಸೇಫ್ ಕಲರ್) ವ್ಯಕ್ತಿ ಒಳಗೆ ಬಂತು. ಕಪ್ಪು ಕನ್ನಡಕ, ಮೀಸೆ, ಉದ್ದನೆ ಗಡ್ಡ. "ಶರಲೇಖ?" ಅಂತು. ಶರಲೇಖ ಬಲಗೈ ಎತ್ತಿದ. ವ್ಯಕ್ತಿ ಕೂತುಕೊಂಡಿತು. "ನಮ್ಮದೊಂದು ಸಮಸ್ಯೆ. ನೀವು ದಯಮಾಡಿ ಪರಿಹಾರ ಮಾಡಬೇಕು. ಎಷ್ಟು ಹಣ ಕೇಳಿದರೂ ನಾವು ತಯಾರು!" ಶರಲೇಖ ನಸುನಕ್ಕ. ಭಾರೀ ಕೇಸೊಂದು ಇರಬಹುದು ಅಂದಾಗಲೆಲ್ಲ ಅವನ ಕಣ್ಣಲ್ಲಿ ಕಾಣುತ್ತಿದ್ದ ಮಿಂಚು (ಇದು ಆ ವ್ಯಕ್ತಿಗೆ ಕನ್ನಡಕದ ದೆಸೆಯಿಂದ ಕಂಡಿರಲಾರದು!) ಪುನಃ ಕಂಡಿತು. ಶರಲೇಖ ಹೇಳಿದ : "ವತ್ಸನ, ನಮ್ಮ ಸಚಿವರಿಗೆ ಕಾಫಿ ತರಿಸು!" ಆಗಂತುಕ ವ್ಯಕ್ತಿ ಬೆಚ್ಚಿಬಿತ್ತು! "ನಿಮಗೆ......? ಹೇಗೆ.......?" ಅಂತ ತೊದಲಿತು. ಸೋಫಾದಿಂದ ಕೆಳಗೆ ಬಿದ್ದಿದ್ದ ನಾನು ಚೇತರಿಸಿಕೊಂಡು ಕಾಫಿಗೆ ಹೇಳಿದೆ. ಶರಲೇಖ ನಕ್ಕ. "ನಿಮ್ಮ ಗಡ ಕೃತಕ ಮೀಸೆಗಳು ನನ್ನನ್ನಲು ಮೋಡಿ ಮಾಡಕ್ಕಾಗೊಲ್ಲ! ನೀವು ನಂ ರೂಮಿಗೆ ಬಂದಾಗಲೇ ನನಗೆ ನಿಮ್ಮ ಪರಿಚಯ ಆಯ್ತು!" ನಾನು ಬಾಯಿ ಬಾಯಿ ಬಿಡುತ್ತ ಕೂತಿದ್ದೆ. ಶರಲೇಖ ನನ್ನ ಕಡೆ ತಿರುಗಿ ಹೇಳಿದ. "ಇವರು ನಮ್ಮ ದೇಶದ ವಿದೇಶ ಮಂತ್ರಿಗಳು. ಅವರ ಸಮಸ್ಯೆಯೇನು ಅಂತ ಕೇಳೋಣ!"

ಸಚಿವರು ಕಾಫಿ ಹೀರುತ್ತ ಹೇಳಿದರು. "ನಮ್ಮ ಆಫೀಸಿನಿಂದ ಒಂದು ಬಹಳ ಗಹನವಾದ ಡಾಕ್ಯುಮೆಂಟ್ ಕಳವಾಗಿದೆ. ಅದನ್ನ ಯಾರಾದರೂ ಬೇರೆ ದೇಶಕ್ಕೆ ಮಾರಿದರೆ ನಮ್ಮ ಗತಿ ಗೋವಿಂದ! ಏನಾದರೂ ಮಾಡಿ ಅದನ್ನ ಪತ್ತೆ ಮಾಡಿದರೆ ನಂ ಜೀವ ಉಳಿಯುತ್ತೆ! ಇಲ್ಲದಿದ್ರೆ ಹಲವು ತಲೆಗಳು ಉರುಳೋದರಲ್ಲಿ ಸಂಶಯವಿಲ್ಲ" ಈ ಉರುಳೋ ತಲೆಗಳನ್ನ ಮನಸ್ಸಿನಲ್ಲಿ ಚಿತ್ರಿಸುತ್ತಾ ನಾನು ಗಾಬರಿಯಾದೆ. ಶರಲೇಖ ಕೇಳಿದ. "ಆ ಡಾಕ್ಯುಮೆಂಟ್‌ನಲ್ಲಿ ಏನಿದೆ?" ಸಚಿವರು ತಲೆ ಅಲ್ಲಾಡಿಸಿದರು. "ಇಲ್ಲ, ಅದನ್ನ ನಾನು ಹೇಳೋ ಹಾಗಿಲ್ಲ! ಅದು ಟಾಪ್ ಸೀಕ್ರೆಟ್!" ಶರಲೇಖ ಎದ್ದ. "ಹಾಗಾದರೆ ನೀವು ಬೇರೆ ಪತ್ತೇದಾರನ್ನ ಪತ್ತೇ ಮಾಡೋದು ಸೂಕ್ತ" ಅನ್ನುತ್ತ, ನೀರೋ ತರಹ ಪಿಟೀಲು ಬಾರಿಸಲು ಶುರುಮಾಡಿದ. ಸಚಿವರು 'ಬೇಡ, ಬೇಡ!' ಅಂದರು. ಶರಲೇಖನ ಪಿಟೀಲು ನಿಲ್ಲಿಸಲು ಹಾಗೆ ಹೇಳಿದರೋ ಗೊತ್ತಾಗಲಿಲ್ಲ! ಸಚಿವರು ಗಂಟಲು ಸರಿಮಾಡಿಕೊಂಡು ಹೇಳಿದರು. "ಆ





ಶರಲೇಖ ಕೇಳಿದ "ಆ ಡಾಕ್ಯುಮೆಂಟ್‌ನಲ್ಲಿ ಏನಿದೆ?"

ಪೇಪರ್‌ನಲ್ಲಿ ಭಾರತದ ಆರ್ಥಿಕ ಪರಿಸ್ಥಿತಿ, ಪಂಜಾಬ್ ಸಮಸ್ಯೆ, ಅಯೋಧ್ಯ ಗಲಾಟೆ, ಕಾಶ್ಮೀರದ ಗಲಭೆ ಇವನ್ನೆಲ್ಲ ಪರಿಹರಿಸೋ ಬಗ್ಗೆ ಒಂದು ಮಾಸ್ಟರ್ ಪ್ಲಾನಿದೆ. ಇನ್ನು ಒಂದು ವರ್ಷದಲ್ಲಿ ನಂ ದೇಶ ಉದ್ಧಾರ ಆದ ಹಾಗೇ! ಆದರೆ ಯಾರೋ ದುರಾತ್ಮರು ಅದನ್ನ ಕದ್ದಿದ್ದಾರೆ. ವಿದೇಶೀ ಕೈವಾಡ ಇರಲೇ ಬೇಕು!" ಶರಲೇಖ ಗಂಭೀರನಾಗಿ ಕುಳಿತ. "ವತ್ಸನ, ಇದು ನಂ ಪ್ರೆಸ್ಟೀಜ್ ಪ್ರಶ್ನೆ! ನಾವು ಇವತ್ತೇ ಈ ಕೇಸ್‌ನ ಸಾಲ್ವ್ ಮಾಡೊಕ್ಕೆ ಶುರು ಮಾಡಲೇಬೇಕು!" ಅಂದ. ನಾನು ಎದ್ದೆ. ನನ್ನ ಕೋಣೆಯಿಂದ ರಿವಾಲ್ವರ್ ತಂದೆ. ಸಚಿವರು (ಎರಡನೇ ಸಲ) ಬೆಚ್ಚಿದರು. ನಾನು "ಗಾಬರಿ ಪಡಬೇಡಿ! ನಂ ಕೆಲಸದಲ್ಲಿ ಈ ಆಯುಧಗಳೆಲ್ಲ ಅತ್ಯಗತ್ಯ!" ಅಂದೆ.

ಸಚಿವಾಲಯದ ಕೋಣೆ ಕೋಣೆಗಳಲ್ಲೂ ಶರಲೇಖ ಶತಪಥ ನಡೆದ. ಕ್ಸೀರಾಕ್ಸ್ ಯಂತ್ರಗಳನ್ನು ಮೂಸಿನೋಡಿದ. ಗೂರ್ಖನ ಕುಕ್ರಿಯನ್ನು ತೆಗೆಸಿ ನೋಡಿದ. ಕ್ಯಾಂಟೀನ್‌ನಲ್ಲಿ ಟೀ ಕುಡಿದ. ಆ ಸಂಜೆ ನಾನು ಸುಸ್ತಾಗಿ ಕೂತಿದ್ದೆ. ಶರಲೇಖ ಮಧ್ಯಾಹ್ನ ಹೊರಗೆ ಹೋದೋನು ಇನ್ನೂ ಬಂದಿರಲಿಲ್ಲ. ಎಂಟು ಗಂಟೆಗೆ ಬಾಗಿಲು ಬಡೆದ ಸದ್ದು. ನಾನು ಧಡಬಡ ಎದ್ದು ಬಾಗಿಲು ತೆಗೆದೆ. ಒಬ್ಬ ಸೇನಾಧಿಕಾರಿ ನಿಂತಿದ್ದ. ಭರ್ಜರಿ ಮೀಸೆ, ಕೈಲಿ ಕೋಲು, ಮುಖದಲ್ಲಿ ದರ್ಪ! ನನಗೆ ಒಂದು ಕ್ಷಣದಲ್ಲಿ ಹೊಳೀತು! ಇವನು ಯಾವ ಸೇನಾಧಿಪತೀನೂ ಅಲ್ಲ! ನಂ ಶರಲೇಖ ಇನ್ ಡಿಸ್‌ಗೈಸ್! ನಗುತ್ತ ಮೀಸೆ ಹಿಡಿದು ಎಳೆದೆ! ಅಧಿಕಾರಿ ರೌದ್ರಾವತಾರ ತಾಳಿದ. ಇನ್ನೆರಡು ನಿಮಿಷ ಆಗಿದ್ರೆ ನನ್ನ ಕತೆ ಮುಗಿದು, ಶರಲೇಖ ತನ್ನ ಕತೆಗಾರನಾಗಿ ಬೇರೆ ಯಾರನ್ನಾದ್ರೂ ಹುಡುಕಬೇಕಾಗಿರೋದು! ನನ್ ಲಕ್ಕಿಗೆ ಶರಲೇಖ



ಹಿಂದಿನಿಂದ ಬಂದ. ನನ್ನನ್ನ ಕಷ್ಟದಿಂದ ಬಿಡಿಸಿದ. ಆ ಅಧಿಕಾರಿ ಪಾಪ ಶರಲೇಖನ ಸ್ನೇಹಿತ! ನೋಡೊಕ್ಕೆ ಬಂದಿದ್ದ. ಅವನೂ, ಶರಲೇಖನೂ (ಗಹನವಾಗಿ) ಹತ್ತು ನಿಮಿಷ ಮಾತಾಡ್ತಾ ಇದ್ದರು.

ಸೇನಾಧಿಕಾರಿ ಹೊರಟ. ಶರಲೇಖ ಕೂಡಲೇ ಎದ್ದ. 'ಬಾ, ಅವನ ಹಿಂದೆ ಮೆಲ್ಲಗೆ ಫಾಲೋ ಮಾಡಬೇಕು' ಅಂದ. ಡೆಲ್ಲಿ ಚಳೀಲಿ ಹೊರಟೆವು. ಅಧಿಕಾರಿ ಓಣಿಗಳಲ್ಲೆಲ್ಲ ಅಲದಾಡಿದ. ಕೊನೆಗೆ ಒಂದು ಸಣ್ಣ ಮನೆಗೆ ಹೊಕ್ಕ. ನಾವು ಹೊರಗೆ ನಿಂತು ನೋಡಿದೆವು. ಹಿಂದಿನಿಂದ ಹೋಗೋಣ ಅಂತ ಶರಲೇಖ ನನ್ನೂ ಕರಕೊಂಡು ಹೋದ. ಕಿಟಕಿಯಿಂದ ನೋಡ್ತೀವಿ. ರೂಂ ಒಳಗೆ ಒಂದು ಭಾರೀ ಕಂಪ್ಯೂಟರ್, ಅದರ ಮುಂದೆ ಇಬ್ಬರು ಧಾಂಡಿಗರು; ಜತೆಗೆ ನಂ ಫ್ರೆಂಡು ಸೇನಾಧಿಪತಿ! ಶರಲೇಖ ಇದನ್ನೆಲ್ಲ ಅವಲೋಕಿಸಿದ. ನಾನು ರಿವಾಲ್ವರ್ ಕೈಗೆ ತಗೊಂಡೆ, ಒಳಗೆ ನುಗ್ಗೋಣ ಅಂತ! ಶರಲೇಖ ಬೇಡ ಅಂತ ಸನ್ನೆ ಮಾಡಿದ!

ಸಂಜೆ ಆರುಗಂಟೆ, ಸಚಿವರು ಮನೆಗೆ ಬಂದರು ಆತಂಕದಿಂದ ಕೇಳಿದರು. ಫೈಲು ಸಿಕ್ಕಿತೇ? ಕಳ್ಳ ಯಾರು? ಶರಲೇಖ ನಿಧಾನವಾಗಿ ನುಡಿದ. 'ವತ್ಸನ, ನನ್ನ ಬ್ರೀಫ್‌ಕೇಸ್‌ನಲ್ಲಿದೆ ಫೈಲು!' ನಾನು ತೆಗೆದುಕೊಟ್ಟೆ. ಸಚಿವರು ಆನಂದದಿಂದ ಕುಣಿದಾಡಿದರು! ಅಷ್ಟು ದಪ್ಪ ವ್ಯಕ್ತಿ (ಗೌರವರ್ಣ ಬೇರೆ!) ಕುಣಿಯಕ್ಕೆ ಆಗುತ್ತೆ ಅಂತ ನಾನು ಚಕಿತನಾದೆ. ಶರಲೇಖ ಹೇಳಿದ. 'ಕಳ್ಳ ಯಾರು ಅಂತ ನಾನು ನಿಮಗೆ ಹೇಳೋ ಹಾಗಿಲ್ಲ!'

ಸಚಿವರು ಹೋದ ಮೇಲೆ ನಾನು ಹುಬ್ಬೇರಿಸಿದೆ. ಈ ರೀತಿ ಏರಿಸಿ, ಏರಿಸಿ ನನ್ನ ಹುಬ್ಬುಗಳು ಮೇಲೇ ನಿಲ್ಲದೆ ಇದ್ದುದು ಆಶ್ಚರ್ಯ. ಶರಲೇಖ ಹೇಳಿದ. 'ನೋಡು ವತ್ಸನ, ಈ ನಂ ದೇಶದ ಮಾಸ್ಟರ್ ಪ್ಲಾನ್ ಜಗತ್ತಿನ ಇನ್ನಾವ ದೇಶಕ್ಕೂ ಉಪಯೋಗ ಇಲ್ಲ! ಅಂದ್ರೆ ವಿದೇಶೀ ಕೈವಾಡ ಎಲ್ಲಿಂದ ಬರುತ್ತೆ? ಹಾಗಾದರೆ ಯಾರಿಗೆ ಈ ತರಹಾನೇ ಪ್ರಾಬ್ಲಂಸ್ ಇರಬಹುದು ಹೇಳು?' ನಾನು ಬ್ರೇನ್ ರ್‍ಯಾಕಿದೆ, ಆದಷ್ಟು! ಏನೂ ಹೊಳೆಯಲಿಲ್ಲ. ಶರಲೇಖ ನಕ್ಕ. 'ವತ್ಸನ, ಈ ಯೂನಿವರ್ಸ್‌ನಲ್ಲಿ ನಂ ಭೂಮಿ ತರಹ ಇರೋದು ಒಂದೇ ಅಂತ ನಾವು ತಿಳ್ಕೊಳೋದು ಸರಿಯೇ?'

ನಾನು ಬೆರಗಾಗಿ ಸೋಫದಿಂದ ಥಂಗನೆ ಎದ್ದೆ. 'ಇನ್ನೊಂದು ಇನ್ನೊಂದು.....!' ಅಂತ ತೊದಲಿದೆ. ಭಾರೀ ಕ್ರೈಂ ಸಾಲ್ವ್ ಮಾಡಿದ ಪತ್ತೇದಾರನಂತೆ ಶರಲೇಖ ತಲೆದೂಗಿದ.




'ಹೌದು ವತ್ಸನ! ನಂ ಜಗತ್ತಿನ ತರಹಾನೇ ಇನ್ನೊಂದಿದೆ! ಬಹಳ ದೂರದಲ್ಲಿದೆ. ಅಲ್ಲಿಯೂ ನಂ ಸಮಸ್ಯೆಗಳೇ ಇರೋದು! ಪಾಪ ಆ ಜನರು ನಮ್ಮನ್ನು ನಂಬಿ ಸೂಪರ್ ಕಂಪ್ಯೂಟರ್ ಮೂಲಕ ಫೈಲ್ ಟ್ರಾನ್ಸ್‌ಫರ್ ಮಾಡ್ತಿದ್ರು. ಅವರ್ನ ಹಿಡಿದೇನು ಮಾಡೋದು ಅಂತ ಫೈಲ್ ನನ್ ಕೈಗೆ ಬಂದಮೇಲೆ ಸುಮ್ಮನೆ ಬಂದೆ.'

'ಆ ಸೇನಾಧಿಕಾರಿಯ ಪಾತ್ರ?'

‘ಅವನು ‘ಆ’ ದೇಶದ್ರೋಹಿ! ನಮ್ಮ ಹತ್ರ ಬಂದು ಏಜೆಂಟ್ ತರಹ ಇದಾನೆ ಕೆಲವು ವರ್ಷದಿಂದ. ನನ್ನ ಕಾಂಪ್ಲೆಕ್ಸ್ ಕೇಸುಗಳಲ್ಲಿ ಸಹಾಯ ಕೂಡ ಮಾಡ್ತಾನೆ! ‘ಈ ಕೇಸ್ ಬಗ್ಗೆ ತಿಳಿದ ತಕ್ಷಣ, ನನ್ನ ಸಚಿವರು ಮೀಟ್ ಮಾಡಿದರು ಅಂತ ಗೊತ್ತಾದ ತಕ್ಷಣ ನನ್ ಹತ್ರ ಓಡಿಬಂದ ಪಾಪ!’

ನನಗೆ ಅಚ್ಚರಿ. ‘ಹಾಗಾದರೆ ಅಲ್ಲೂ ಎಂ.ಟಿ.ಆರ್. ಕಾಮತ್, ಬಿಸಿಬೇಳೆ ಎಲ್ಲ ಇದೆಯೇ?’ ಅಂದೆ. ಶರಲೇಖ ಗಂಭೀರನಾದ. ‘ನಿನಗೆ ಹ್ಯೆಯರ್ ವ್ಯಾಲ್ಯೂಸ್ ಇಲ್ಲ!’ ಅಂತ ನಿಟ್ಟುಸಿರು ಬಿಟ್ಟು ಪಿಟೀಲು ಕೈಗೆ ತಗೊಂಡ. ನಾನು ಹತ್ತಿ (ಕಿವಿಗೆ) ಹುಡುಕಲು ಹೊರಟೆ!



“ಯಾವಾಗ ಬಂದ್ ಆಗುತ್ತೋ ಅಂತ ವಾರಕ್ಕೆ ಪೂರ ತರಕಾರಿ ತಂದೆ ಕಣೆ!”



ಅಷ್ಟಮಿ ಶನಿ

–ಕೆ.ಎಸ್. ಶ್ರೀಕಂಠಯ್ಯ

ಕುದುರೆಗಿನ್ನ ಲದ್ದಿ ಬಿರಸು. ಎಸ್ಪಿ ಸಾಹೇಬರು ಚಿನ್ನದಂತಹ ಮನುಷ್ಯ. ಡಿ.ವೈ.ಎಸ್ಪಿ ಮಕ್ಕಳು ಮರಿ ಹೆತ್ತ ಸಂಸಾರೊಂದಿಗ. ನೀನು ಯಾವ ದೇವರ ಒಕ್ಕಲು ಎಂದು ಮಾತಾಡಿಸಿದವರಲ್ಲ ಈ ಇವರಿಬ್ಬರು. ಇದಾರೆ ನೋಡಿ ಚಂಡಾಲರು ಸರ್ಕಲ್ ಇನ್‌ಸ್ಪೆಕ್ಟರು, ಸೆಮಿ ಸರ್ಕಲ್ ಇನ್‌ಸ್ಪೆಕ್ಟ್ರು, ಮನೆಹಾಳರು. ತಂಪು ಹೊತ್ನಲ್ಲಿ ನೆನೆಸಬಾರದು ಅವರನ್ನ. ನನ್ನ ಮುಖ ನೋಡ್ತಿದ್ದ ಹಾಗೇ :– "ಎಲ್ಲಿ ಕೇಸು? ಡಿಪಾರ್ಟ್‌ಮೆಂಟಲ್ಲಿರಬೇಕು ಅಂತಿದೀಯೋ ಹೇಗೆ? ಯೂನಿಫಾರಂ ಹಾಕಿಕೊಳ್ಳೋಕೆ ನಾಚಿಕೆ ಆಗಲ್ವೆ" ಈ ರೀತಿ ಜನ್ಮ ಜಾಲಾಡಿಬಿಡ್ತಾರೆ. ಅವರು ಇವರು ಇದ್ದುಬಿಟ್ಟರನ್ಕ ಅವರ ನಾಲಿಗೆ ಸೇಂದಿ ಲಾರಿ ಹಾಗೆ ಓಡಿಬಿಡುತ್ತೆ.

ಇಲಾಖೆ ರೂಲೇನೋ ಇತ್ತು. ಹದಿನೈದು ಕೇಸಿಗೆ ಒಂದು ಬ್ಲಾಕ್‌ಮಾರ್ಕು, ಹತ್ತು ಬ್ಲಾಕ್ ಮಾರ್ಕ್‌ಗೆ ಒಂದು ಇಂಕ್ರಿಮೆಂಟು, ನಾಕು ಇಂಕ್ರಿಮೆಂಟಿಗೆ ಒಂದು ಡಿಸ್ಮಿಸಲ್ಲು. ಈ ಹಾಳು ಪಾಪರ್ಸ್ನಮ್ಮಗನ ಊರಿಗೆ ಬಂದಲಾಗಾಯ್ತು ಒಂದು ಕಳವೆ, ಖೂನಿಯೆ, ಕಿಡ್ನಾಪೇ, ರೇಪೆ, ದರೋಡ್ಯೆ ಏನೂ ಇಲ್ಲ. ಕಣ್ಣಲ್ಲಿ ಕಣ್ಣಿಟ್ಟು ನೋಡಿದರೂ ಒಬ್ಬ ಕಳ್ಳ ಇಲ್ಲ. ಒಬ್ಬ ಸುಳ್ಳ ಇಲ್ಲ. ಶಿಲಾಯುಗದ ನನ್ಮಕ್ಕಳು. ಹೊಳೆಸ್ನಾನ, ಮಠದ ಊಟ ಭಜನೆ ಇವನ್ನ ಬಿಟ್ಟರೆ ಬೇರೆ ಏನ್ನೂ ತಿಳಿದುಕೊಂಡಿರಲಿಲ್ಲ ಇಲ್ಲೀ ಜನ.

ಊಟ ಮುಗಿಸಿ ಡ್ರೆಸ್ ಮಾಡ್ಕೊಂಡು ಇನ್ನೇನು ಹೊರಡಬೇಕು ಅಷ್ಟರಲ್ಲಿ "ರೀ ಇವತ್ತು ಕಡೇದಿನಾನಂತೆ. ಎರಡು ಪಾಸ್ ತೊಗೊಂಬನ್ರಿ. ಗಿರಿಜಮ್ಮಂಗೆ ಹೇಳಿಬಿಟ್ಟಿದೀನಿ" ಅಂದಳು ಸೌಭಾಗವತಿ. ನನಗೆ ನೌಕರಿಯಿಂದಲೇ ಗೇಟ್‌ಪಾಸ್ ಆಗುತ್ತಿರುವಾಗ ಇವಳಿಗೆ ಸಿನಿಮಾ ಪಾಸು! ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ. ಕೇಳಿಸಿಕೊಳ್ಳದವನಂತೆ ಹೊರಟೆ. ಆದರೆ ಇವಳು ಬಿಡಬೇಕಲ್ಲ ಜಿಗಣೆ.

"ರೀ ಸುನಂದಮ್ಮ ಹೇಳಿದಾರೆ ಕೇಸು ಹಾಕದೆ ಬಹಳ ಸಂಕಟ ಪಡ್ತೀದಾರೆ ಅಂತ, ನೋಡಿ ನಿಮಗೆ ಕೇಸು ಕೊಡುವ ಭಾರ ನಂದು. ಪಾಸು ತಂದು ಕೊಡುವ ಜವಾಬ್ದಾರಿ ನಿಮ್ಮದು" ಅಂದಳು. ಕೇಸಿನ ಭರವಸೆ ಕೇಳಿ ರಾಜಸ್ಥಾನದ ಲಾಟ್ರೀಲಿ ಅರವತ್ತೇಳು ಲಕ್ಷದ ಪ್ರಥಮ ಬಹುಮಾನ ಬಂದಷ್ಟು ಆನಂದವಾಯಿತು. "ಏನೇ, ಎಲ್ಲೇ, ಹೇಗೆ, ಯಾವಾಗ್ಲೇ ಅಂತ ಹತ್ತಾರು ಪ್ರಶ್ನೆ ಕೇಳಿ ಹೊಸಲಲ್ಲೇ ನಿಂತೆ.



"ನೋಡ್ರೀ, ನಿಮಗೆ ಬೇಕಾದ್ದು ಕೇಸು ತಾನೆ. ಷರೀಫ್‌ಗಲ್ಲೀ ಪತ್ತಿರ ರಾತ್ರಿ ಎಂಟಕ್ಕೆ ಡ್ಯೂಟಿ ಮೇಲಿರಿ. ನಾನು ಆ ಕಡೆಯಿಂದ ಸೈಕಲ್ ಮೇಲೆ ಲೈಟಿಲ್ಲದೆ ಬರ್ತೀನಿ. ಓಡೀರಿ. ಕೇಸು ಹಾಕಿ. ಕೋರ್ಟ್‌ನಲ್ಲಿ ತಪ್ಪು ಒಪ್ಕೋತೀನಿ. ಐದು ರೂಪಾಯಿ ತಾನೆ. ಕೊಡೋಣ" ಅಂದಳು. "ಪಾಸ್ ಮಾತ್ರ ಮರೀಬೇಡಿ ಅಂತ ನೆನಪು ಕೊಟ್ಟು.

"ಎಲಾ ಇವಳ. ನನಗಿನ್ನ ಇವಳೇ ವಾಸಿ" ಅನ್ಕೊಂಡು ಹೊರಟೆ.

ಅವತ್ತು ಸಂತೆ. ಹೇಗಾದರೂ ಮಾಡಿ ಒಂದು ಕೇಸು ಹಿಡಿಯಬೇಕು– ಅಂತ ಮನಸ್ಸಿನಲ್ಲಿ ಸಂಕಲ್ಪಮಾಡಿಕೊಂಡು ಬಾಲಾಜಿ ಸಿನಿಮ ಹತ್ತಿರ ನಿಂತೆ. ಮೂರಾಯ್ತು, ನಾಲ್ಕಾಯಿತು ಆರೂ ಆಯ್ತು. ಉಹೂಂ ಈ ತಲೆ ಮಾಸಿದ ನನ್ಮಗನ ಊರಲ್ಲಿ ಇರುವವರೆಲ್ಲಾ ಹರಿಶ್ಚಂದ್ರರು ಅಂತ ಘಟ್ಟಿಮಾಡಿಕೊಂಡು ಒಂದು ಲೋಟ ಕಾಫಿ ಕುಡಕೊಂಡು ಬರೋಣ ಅಂತ ಹೊರಟೆ. ನಾಲ್ಕು ಹೆಜ್ಜೆ ಹಾಕಿರಬೇಕು. ಅದೃಷ್ಟ ಕುಲಾಯಿಸಿದ ಹಾಗೆ ಕಾಣ್ತು. ಅಷ್ಟು ದೂರದಲ್ಲಿ ಕುಡಿದು ಅನುಮಾನಾಸ್ಪದವಾಗಿ ಕಳ್ಳ ಕಳ್ಳನ ಹಾಗೆ ಒಬ್ಬ ಮುಂದೆ, ಕೊಂಚ ಹಿಂದೆ ಒಬ್ಬಳು– ಪ್ರಾಯಶಃ ಕಸುಬುದಾರಳೇ ಇರಬೇಕು ಬರ್ತಾ ಇದ್ದರು. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು ಅನ್ನುವಂತೆ ಆಗಬಾರದು. ಕಾಫೀನೂ ಬೇಡ, ಟೀನೂ ಬೇಡ ಅಂತ ಹ್ಯಾಟು ಸರಿಮಾಡಿಕೊಂಡು ಖಾಲಿ ರಿವಾಲ್ವರ್ ಕೇಸ್‌ನ ಕಾಣುವ ಹಾಗೆ ಬಿಟ್ಕೊಂಡು ಲಟ್ಟ ಕೈಲಿ ಹಿಡಿದುಕೊಂಡು ದೀಪದ ಹುಳುವನ್ನ ಹಿಡಿಯುವ ಕಪ್ಪೆಯ ಹಾಗೆ ಏಕ್ದಂ ಹೋಗಿ ಗಂಡಿನ ಭುಜದ ಮೇಲೆ ಕೈ ಹಾಕಿ "ಗೊತ್ತು ಕಣೋ ನಿನ್ನ ಆಟ. ಎಷ್ಟು ದೂರದಿಂದ ನಿನ್ನನ್ನ ಫಾಲೋ ಮಾಡಿಕೊಂಡು ಬರ್ತಾ ಇದೀನಿ ಗೊತ್ತ? ಮಗನೇ ಬಾ ಟೇಸನ್‌ಗೆ. ಏ ಬಾರೇ ನೀನೂ" ಅಂತ ಅವರಿಬ್ಬರನ್ನೂ ಮುಂದೆ ಬಿಟ್ಟುಕೊಂಡು ಹಿಂದೆ ನಾನು ಹೊರಟೆ.

ಆ ಘಳಿಗೆಗೆ ನಾನೇ ರಾಜಕುಮಾರ್ !

ಈ ಕೇಸು ರೇಪಿಗೆ ಬರುತ್ತಾ ಅಂತ ಯೋಚನೆ ಮಾಡಿನೋಡಿದೆ. Against her will and without her consent – ಇದ್ದರೆ ಮಾತ್ರ ರೇಪು. ಇಲ್ಲಿ ಈ ಎರಡೂ ಇಲ್ಲ. ರಾಜಿ ಕಬೂಲೀಲಿ ಹೋಗ್ತಿದಾರೆ. ಹೋಗಲಿ ರೇಪ್ ಬೇಡವೇ ಬೇಡ. ಅಡಲ್ಟ್ರೀನೇ ಆಗಲಿ. ಕೇಸು ಅಂತ ಬಿದ್ದರೆ ಆಯಿತು.

ರೈಟರ್ ಸಾಹೇಬರಿಗೆ ಟಪ್ ಅಂತ ಸೆಲ್ಯೂಟ್ ಹೊಡೆದು "ಕಳ್ಳ ಕಳ್ಳಿ"ಯರನ್ನ ಮುಂದೆ ನೂಕಿ ಅಷ್ಟು ದೂರ ಹೋಗಿನಿಂತೆ. ಅಶ್ವಮೇಧಯಾಗ ಮಾಡಿದ ಸಮಾಧಾನ.

ರೈಟರು "ರೇಪ" ಅಂತ ಕೇಳಿದರು. ಆ "ಕಳ್ಳ"ನಿಗೆ ಏನು ಅರ್ಥವಾಯಿತೋ ಏನೋ ಸಡನ್ನಂತ "ರೇಪು ವಸ್ತಾನಂಡಿ ಇಸ್ಪೆಕ್ಟರುಗಾರು. ಬಾಗುನ್ನಾರ ಇಸ್ಪೆಕ್ಟರುಗಾರು" ಅಂದು ಹಲ್ಲುಕಿರಿದ.

"ಮುಚ್ಕೊಂಡು ನಿಂತ್ಕಾಳಯ್ಯ, ರೇಪಂತೆ ರೇಪು ಹತ್ತು ವರ್ಷ ಸಜ, ಹತ್ತು ಸಾವಿರ ಜುಲ್ಮಾನೆ" ಅಂತ ಹೇಳಿ ಬೀಡಿ ಹಚ್ಚಿದರು.

ಜುಲ್ಮಾನೆ, ಸಜ ಈ ಮಾತುಗಳನ್ನು ಕೇಳಿ "ಕಳ್ಳಿಯ" ಕಡೆಯಿಂದ ಒಂದು ಚಂಬು ಕಣ್ಣೀರು ರೈಟರನ ಕಡೆಗೆ ಹರಿದುಹೋಯಿತು.



ಧರ್ಮ ಕರ್ಮಸಂಯೋಗ. ಆ ವೇಳೆಗೆ ಅಲ್ಲಿಗೆ ಇನ್‌ಸ್ಪೆಕ್ಟರು ಬಂದರು.

“ಏನು ಮೇಷ್ಟರೆ ಈ ಅವೇಳೇಲಿ ದಂಪತಿ ಸಮೇತ ಬಂದಿದೀರಿ” ಅಂದರು.

ರೈಟರು “ಶುಕ್ರವಾರ ಅಲ್ಲವೇ ಸಾರ್, ಪೂಜೆ ಮಾಡಲು ಬಂದಿದಾರೆ” ಅಂತ ತೇಲಿಸಿಬಿಟ್ಟ.

ಪೂಜೆ ಮಾಡಿ ಕಾಯಿ, ಬಾಳೇಹಣ್ಣು, ನಾಲ್ಕು ರೂಪಾಯಿ ದಕ್ಷಿಣೆ ಸಮೇತ ಪೋಲಿಸ್ ಜೀಪಿನಲ್ಲಿ ಮೇಷ್ಟರು ಮತ್ತು ಅವರ ಪತ್ನಿ ಮನೆಗೆ ಹೋದರು.

ಆ ಕೇಸೂ ನೆಗೆದು ಬಿದ್ದುಹೋಯಿತು.

ನಾಳೆ ನಮ್ಮೋಳು ಲೈಟಿಲ್ದೆ ಬರೋದನ್ನ ಕಾಯ್ತಿದೀನಿ.





“ಷೇರು ಮಾರ್ಕೆಟ್‌ನಲ್ಲಿ ಎಲ್ಲಾ ಕಳಕೊಂಡೆ ಅಂತ ಹೇಳಬೋದು ಈಗ !”

ಅಪರಂಜಿಯ ವಿಜ್ಞಾನ ವಿಭಾಗ
(ಸೀರಿಯಸ್ ಓದುಗರಿಗೆ ಮಾತ್ರ)

ಸೀ.ಆರ್. ಸತ್ಯ

ಅಂಗಡಿ ಮಾಲೀಕ ಬನ್ನೀಮ್ಮ.. ಬನ್ನಿ. ಇದೇ ನೋಡಿ ಲೇಟೆಸ್ಟ್ ವಾಶಿಂಗ್ ಕಮ್ ಐರನಿಂಗ್ ಕಮ್ ಕುಕಿಂಗ್ ಮೆಶಿನ್ನು.. ಜಪಾನ್‌ನಿಂದ ತರಿಸಿದ್ದೀವಮ್ಮಾ. ನೀವು ರಾತ್ರಿ ಮಲಗೋಕ್ಕೆ ಮುಂಚೆ ಕೊಳೆ ಬಟ್ಟೆಗಳು, ಸ್ವಲ್ಪ ಸೋಪ್ಪು, ಅಕ್ಕಿ, ಬೇಳೆ, ತರಕಾರಿಗಳು ಎಲ್ಲಾ ಈ ಕಂಟೈನರ್‌ನಲ್ಲಿ ಹಾಕಿ, ಸ್ವಿಚ್ ಹಾಕಿ ಹಾಯಾಗಿ ನಿದ್ರೆ ಮಾಡೀಮ್ಮಾ. ಬೆಳಿಗ್ಗೆ ಏಳೋ ಹೊತ್ತಿಗೆ ಬಟ್ಟೆಗಳು ಆಟೋಮ್ಯಾಟಿಕ್ ಆಗಿ ಒಗೆದು ಐರನ್ ಆಗಿರುತ್ತೆ. ಅಡಿಗೇನೂ ತಯಾರಾಗಿ ಬಡಿಸೋಕ್ಕೆ ರೆಡಿ! ವಗ್ಗರಣೆ ಮಾತ್ರ ನೀವು ಸಪರೇಟಾಗಿ ಮಾಡ್ಕೋಬೇಕು ಅಷ್ಟೆ.

ಆಕೆ ಗಂಡ : ಯಾಕೆ, ವಗ್ಗರಣೆಗೆ ಅಂತ ಬೇರೆ ಅಟಾಂಚ್‌ಮೆಂಟ್ ಬರಲ್ಲವೇನೂ..?

ಆಕೆ (ಗಂಡನಿಗೆ): ನೀವು ಸ್ವಲ್ಪ ಸುಮ್ಮನೆ ಇರ್ರೀ!

(ಮಾಲೀಕನಿಗೆ): ತುಂಬಾ ಥ್ಯಾಂಕ್ಸಪ್ಪಾ. ರಾತ್ರಿ ಎಲ್ಲಾ ಮನೇಲಿ ವರ್ಷಾಪೂರ್ತಿ ಕರೆಂಟೇ ಇರಲ್ಲ. ಇನ್ನು ಈ ಮೆಶಿನ್ ಬೇರೆ ಕೆಲಸ ಮಾಡದೇ ಕೂತಿರುತ್ತೆ. ಅದು ಹೋಗಲಿ ಅಂದರೆ, ಈಗ ಈ ಕೆಲಸಗಳನ್ನೆಲ್ಲಾ ನಮ್ಮ ಯಜಮಾನರೇ ಮಾಡೋದು. ಈ ಮೆಶಿನ್ ತಗೊಂಡರೆ ಅವರಿಗೆ ಬೇರೆ ಯಾವ ಕೆಲಸವೂ ಇಲ್ಲದ ಹಾಗೆ ಆಗಿ ಊಟ, ತಿಂಡಿ, ಕಾಫಿ ಅಂತ ಯಾವಾಗಲೂ ನನ್ನನ್ನೇ ಗೋಳು ಹೊಯ್ಕೋತಾರೆ. ಬೇಡಪ್ಪ.. ಥ್ಯಾಂಕ್ಸ್!

****

ಸ್ಟುಡಿಯೋ ಓನರ್ : ವೆಲ್‌ಕಮ್ ಮ್ಯಾಡಂ. ನಿಮ್ಮಂತಹವರ ಫೋಟೋ ತಗೊಳಕ್ಕೆ ಅಂತಲೇ ಅಮೇರಿಕಾ ಇಂದ ಒಂದು ಲೇಟೆಸ್ಟ್ ಕ್ಯಾಮರಾ ತರಿಸಿಟ್ಟಿದ್ದೀವಿ ಮ್ಯಾಡಂ. ನಿಮ್ಮ ಫೋಟೋ ತಯಾರಾಗೋವಾಗ ನಮ್ಮ ಕಂಪ್ಯೂಟರ್‌ನಲ್ಲಿ ಸುಮ್ಮನೆ ಬಟನ್‌ಗಳನ್ನು ಒತ್ತಿದರೆ ಸಾಕು ಮ್ಯಾಡಂ. ನೀವು ಸಣ್ಣದಾಗಿ ಕಾಣಿಸ್ಕೋಬೇಕು ಅಂತ ಇಟ್ಕೊಳ್ಳಿ. ಇಲ್ಲಾ ಉದ್ದಕ್ಕೋ ಚಿಕ್ಕದಾಗೋ ಕಾಣಿಸ್ಬೇಕು ಅಂತ ಹೇಳಿ. ಇಲ್ಲಾ ಬಿಳುಪು, ಕಪ್ಪು ಅಡ್‌ಜಸ್ಟ್ ಮಾಡ್ಬೇಕು ಅಂತ ಹೇಳಿ. ಎಲ್ಲಾ ಈ ಕಂಪ್ಯೂಟರ್ರು ಕಂಟ್ರೋಲ್ ಮಾಡ್ಬಿಡುತ್ತೆ ಮ್ಯಾಡಂ!



ಮ್ಯಾಡಂ : ವೆರಿ ಇಂಟರೆಸ್ಟಿಂಗು! ಹಾಗಾದರೆ, ನಂದೂ ಒಂದು ಫೋಟೋ ತಗೊಳ್ಳಿ ನೋಡೋಣ. ನಮ್ಮನೇ ಪಕ್ಕದ ಮನೆ ಜಲಜ ಇದಾಳಲ್ಲ–ಅವಳ ಎತ್ತರ ಬೇಕು ನನಗೆ. ಆಚೆ ಮನೆ ಲೇಪಾಕ್ಷಿ ಬಣ್ಣ ಹಚ್ಚಿ. ನಮ್ಮ ಅಸೋಸಿಯೇಶನ್ ಪ್ರೆಸಿಡೆಂಟು ಸರೋಜ ಅವಳ ತೂಕ ಸಾಕು. ಆ ಬ್ಯೂಟಿ ಪಾರ್ಲರ್ ಸಬೀನಾ ಇದಾಳಲ್ಲ–ಅವಳ ಸೊಂಟ

ಬೇಕು. ಆ ಹಿಂದಿ ಟೀಚರ್ ಕವಿತಾ ಇದ್ದಾಳಲ್ಲ–ಅವಳ ಬಸ್ಟ್‌ಲೈನ್ ಬೇಕು. ಏನಾದರೂ ಈ ಐಟಮ್ಸ್ ಎಲ್ಲಾ ಮಿಕ್ಸಪ್ ಆದರೆ ನಾನು ನಿಮ್ಮನ್ನು ಸುಮ್ಮನೇ ಬಿಡಲ್ಲ, ಓಕೆ?

ಓನರ್ ಓಕೇ ಮ್ಯಾಡಂ, ಓಕೇ ಮ್ಯಾಡಂ. ಏನೂ ಹೆಚ್ಚು ಕಮ್ಮಿ ಆಗಲ್ಲ ಮ್ಯಾಡಂ. ಡೆಫನಟ್ ಮ್ಯಾಡಂ. ಏನಾದರು ಹೆಚ್ಚು ಕಮ್ಮಿ ಆದರೆ ಕಂಪ್ಯೂಟರ್ ಆಟೋಮ್ಯಾಟಿಕ್ ಆಗಿ ಆ ಫೋಟೋನೇ ಹರಿದುಬಿಡುತ್ತೆ ಮ್ಯಾಡಂ! ಅದಕ್ಕೂ ಒಂದು ಸ್ವಿಚ್ ಇಟ್ಟಿದಾರೆ ಮ್ಯಾಡಂ!

****

ಒಂದು ಎಮ್ಮೆ (ಇನ್ನೊಂದು ಎಮ್ಮೆಗೆ) ತುಂಬಾ ಸಾರ್‍ರೀ ಚಿಕ್ಕಪ್ಪ. ನಿಮಗೆ ಡಾಕ್ಟ್ರು ಬರೆದುಕೊಟ್ಟ ಔಷಧಿ ಯಾವ ಅಂಗಡೀಲೂ ಸಿಕ್ತಿಲ್ಲ. ಎಲ್ಲಾ ಕಡೇನೂ ಶಾರ್ಟೇಜ್ ಅಂತೆ.

ಇನ್ನೊಂದು ಎಮ್ಮೆ ಏನು ಶಾರ್ಟೇಜೋ ಏನೋ. ಹೀಗಾದರೆ ನನ್ನ ಹೊಟ್ಟೆನೋವು ಹೇಗೆ ಕಮ್ಮಿ ಆಗುತ್ತೆ ಅಂತೀನಿ? ಅಂದ್ಹಾಗೆ, ಇದ್ದಕ್ಕಿದ್ದಹಾಗೆ ಈ ಶಾರ್ಟೇಜ್ ಯಾಕಪ್ಪಾ ಬಂತೂ?

ಮೊದಲ ಎಮ್ಮೆ : ಗೊತ್ತಿಲ್ವೆ ಚಿಕ್ಕಪ್ಪಾ? ಇಲ್ಲಿ ತನಕ ಮನುಷ್ಯರು ತಗೋತಿದ್ದ ಔಷಧಿಗಳು ಈಗ ಅವರ ಮೇಲೆ ಅಷ್ಟು ಪರಿಣಾಮಕಾರಿಯಾಗಿ ಇಲ್ಲವಂತೆ. ಅದಕ್ಕೆ ಪ್ರಾಣಿಗಳಿಗೆ ಕೊಡೋ ಔಷಧವನ್ನ ಉಪಯೋಗಿಸ್ತಿದಾರಂತೆ. ಅದರಲ್ಲೂ ಹೊಟ್ಟೆನೋವು ಬ್ಲಡ್‌ಪ್ರಶರ್‌ಗಂತೂ ನಮ್ಮ ಔಷಧಿಗಳಿಂದ ಒಳ್ಳೇ ಕಂಟ್ರೋಲ್ ಸಿಗುತ್ತಂತೆ. ಇದರಿಂದಾಗಿ ನಮ್ಮ ಔಷಧಿಗಳೆಲ್ಲಾ ಈಗ ಜಾಸ್ತಿ ಡಿಮಾಂಡ್‌ನಲ್ಲಿ ಇದ್ದು ಶಾರ್ಟೇಜ್ ಆಗಿದೆಯಂತೆ ಚಿಕ್ಕಪ್ಪಾ.

ಇನ್ನೊಂದು ಎಮ್ಮೆ ಇದೆಲ್ಲಾ ನಿನಗೆ ಹೇಗೆ ಗೊತ್ತಾಯ್ತೋ?

ಮೊದಲ ಎಮ್ಮೆ : ಮೊನ್ನೆ ಆ ವೆಟರಿನರಿ ಕಾಲೇಜಿನಲ್ಲಿ ಒಂದು ಸೆಮಿನಾರ್ ಇತ್ತು ಚಿಕ್ಕಪ್ಪ. ಅಲ್ಲೇ ಕ್ಯಾಂಟೀನ್ ಪಕ್ಕ ಹುಲ್ಲು ತಿಂತಾ ಕಾಲ ಕಳೀತಿದ್ದೆ. ಕಾಫಿ ಕುಡಿಯೋಕ್ಕೆ ಅಂತ ಬಂದ ವೆಟರಿನರಿ ಡಾಕ್ಟರುಗಳೆಲ್ಲಾ ಈ ವಿಷಯವನ್ನೇ ಮಾತಾಡ್ತಿದ್ದರು. ಕಾಂಟ್ರಾ ಇಂಡಿಕೇಶನ್ಸ್ ಆಫ್ ವೆಟರಿನರಿ ಟ್ರೀಟ್‌ಮೆಂಟ್ ಆನ್ ಸೆಲೆಕ್ಟೆಡ್ ಹ್ಯೂಮನ್ಸ್ ಅಂತ ಸ್ಪೆಶಲ್ ಸೆಶನ್ ಬೇರೆ ಇತ್ತಂತೆ!

ಇನ್ನೊಂದು ಎಮ್ಮೆ ಏನೋಪ್ಪ. ಆ ಮಹಿಷಾಸುರನೇ ಕಾಪಾಡ್ಬೇಕು ನಮ್ಮನ್ನ.

****

"ಆಕಾಶವಾಣಿ, ತಿಪಟೂರು, ನಮ್ಮ ಆಂಟೆನಾ ಮೇಲೆ ಒಂದು ತೆಂಗಿನಕಾಯಿ ಬಿದ್ದು ಸ್ವಲ್ಪ ಸಮಯ ಪ್ರಸಾರಕ್ಕೆ ಅಡಚಣೆ ಆಗಿದ್ದಕ್ಕೆ ವಿಷಾದಿಸುತ್ತೇವೆ..."



****

ಒಂದು ಪತ್ರಿಕಾ ವರದಿ

ಅಖಿಲ ಭಾರತೀಯ ಆಧುನಿಕ ವಿಜ್ಞಾನ ಪರಿಷತ್ತಿನ ವಾರ್ಷಿಕೋತ್ಸವ ಸಮಾರಂಭ ವಿಜ್ಞಾನದ ತವರೂರಾದ ಬೆಂಗಳೂರಿನಲ್ಲಿ ಭರ್ಜರಿಯಾಗಿ ನಡೆಯಿತು. ಬೆಳಿಗ್ಗೆ ವಿಶೇಷ ತಿಂಡಿ ಪಾನೀಯಗಳಾದಮೇಲೆ ಊಟಕ್ಕೆ ಹಳೇ ಮೈಸೂರಿನ ಅಡಿಗೆ ಮಾಡಲಾಗಿತ್ತು. ಮಧ್ಯಾಹ್ನ ಧಾರವಾಡದ ಪೇಢ, ಚಹಾ ಕುಡಿದು ನಂತರ ಮಂಗಳೂರು ಬಜ್ಜಿಗೆ ಮನಸೋತ ವಿಜ್ಞಾನಿಗಳಿಗೆ ಸಂಜೆ ಯಕ್ಷಗಾನ, ಮಾರಮ್ಮನ ಕುಣಿತದ ಮನೋರಂಜನೆಯ ಕೊಡುಗೆ; ನಂತರ ಉತ್ತರ ಕರ್ನಾಟಕದ ಶೈಲಿಯಲ್ಲಿ ರಸದೂಟ; ರಾತ್ರಿ ಶಹನಾಯ್ ವಾದನ.

ಮಾರನೆಯ ದಿನ ಎದ್ದ ತಕ್ಷಣ, ಚಿಕ್ಕಮಗಳೂರು ಕಾಫಿಯಿಂದ ಚುರ್ ಎನಿಸಿಕೊಂಡ ವಿಜ್ಞಾನಿಗಳಿಗೆ ನಂತರ ರವೆ ಇಡ್ಲಿ, ಕೇಸರಿ ಭಾತ್‌ನ ಉಪಹಾರ; ಊಟಕ್ಕೆ ಮುಂಚೆ ತಿಪಟೂರಿನಿಂದ ತರಿಸಿದ ಐಸ್ ಕೋಲ್ಡ್ ಎಳನೀರು; ಊಟವಾದ ಮೇಲೆ ಮೈಸೂರಿನಿಂದ ಬಂದ ಏಲಕ್ಕಿ ಬಾಳೆ ಹಾಗೂ ವಿಳ್ಯೇದೆಲೆ ತಾಂಬೂಲ. ಮುಕ್ತಾಯ ಸಮಾರಂಭದಲ್ಲಿ ಮಾತನಾಡುತ್ತ ಆಧುನಿಕ ವಿಜ್ಞಾನ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಚುನಾಯಿತರಾದ ಡಾ. ಸುಗಾನಂದ್ ರಾಯ್ ಅವರು "ಮುಂದಿನ ವರ್ಷ ನಾವು ರಸಗುಲ್ಲಾದ ತವರಾದ ಕಲಕತ್ತೆಯಲ್ಲಿ ಭೇಟಿ ಮಾಡಲಿದ್ದೇವೆ. ಪ್ರತಿ ವರ್ಷ ಭಾರತದ ಉದಯೋನ್ಮುಖ ವಿಜ್ಞಾನಿಗಳೆಲ್ಲರೂ ಹೀಗೆ ಪ್ರೀತಿ ವಿಶ್ವಾಸದಿಂದ ಒಂದಾಗಿ ಕೂಡಿ ಬಾಳುವುದನ್ನು ಕಲಿತರೆ, ನಮ್ಮ ದೇಶದಲ್ಲಿ ಆಧುನಿಕ ವಿಜ್ಞಾನ ಕೀರ್ತಿ ಶಿಖರವನ್ನೇರುವುದರಲ್ಲಿ ಯಾವ ಸಂಶಯವೂ ಇಲ್ಲ" ಅಂತ ಆಶಾವಾದವನ್ನು ವ್ಯಕ್ತಪಡಿಸಿ ಹೊರನಾಡುಗಳಿಂದ ವಿಜ್ಞಾನ ಸೇವಕರಾಗಿ ಇಲ್ಲಿ ಬಂದು ನೆರೆದಿರುವ ಅನೇಕ ಕನ್ನಡೇತರ ವಿಜ್ಞಾನಿಗಳಿಗೆ ಬೆಂಗಳೂರಿನಲ್ಲಿ ನಡೆದ ಈ ಒಕ್ಕೂಟದ ನೆನಪಿಗಾಗೆಂದು ಯಾವುದೋ ಖಾಸಗಿ ಉದ್ಯಮದವರು ದಾನ ಮಾಡಿದ ಅರ್ಧ ಕೆ.ಜಿ. ಬೆಲ್ಲದ ಒಬ್ಬಟ್ಟಿನ ಪ್ಯಾಕೆಟ್‌ಗಳನ್ನು ವಿತರಿಸಿದರು. ಸಂತೃಪ್ತರಾದ ವಿಜ್ಞಾನಿಗಳು ಒಕ್ಕೊರಲಿನಿಂದ ರಾಷ್ಟ್ರಗೀತೆಯನ್ನು ಹಾಡಿ ವಾರ್ಷಿಕೋತ್ಸವವನ್ನು ಮುಕ್ತಾಯಗೊಳಿಸಿದರು.

ಊಟ – ಆಟ

ಎಚ್. ಡುಂಡಿರಾಜ್

ಊಟ ಅಂದ್ರೆ
ನೆನಪಾಗುತ್ತೆ
ತಂಡೂರಿ ಚಿಕನ್



ಆಟ ಅಂದ್ರೆ
ನೆನಪಾಗುತ್ತೆ
ತಂಡೂಲ್ಕರ್ ಸಚಿನ್!

ಗಂಡಂದಿರ ಜೇಬು ಮತ್ತು ಹೆಂಡಂದಿರು

(ಟೈಂಪಾಸ್‌ಗಾಗಿ ಮುಂದುವರಿಸಲಾದ ಒಂದು ಹಳೆಯ ಚರ್ಚೆ)

-ಭುವನೇಶ್ವರಿ ಹೆಗಡೆ

If a man makes a stupid mistake men say "What a fool that man is! If a woman does the same; men say "what fools women are!"

-Mark Twain

ಜಗತ್ತಿನಾದ್ಯಂತದ ಸ್ತ್ರೀ ಕುಲಕ್ಕೆ ಅಂಟಿಸಲಾದ ಅನೇಕ ಕಳಂಕಗಳಿಗೆ ಶಾಸ್ತ್ರೀಯ ಕಾರಣವನ್ನು ಕೊಡುವ ಈ ಮೇಲಿನ ಮಾರ್ಕ್ ಟ್ವೇನ್ ಮಹಾಶಯನ ಹೇಳಿಕೆ ನನ್ನ ಕಣ್ಣಿಗೆ ಬಿದ್ದ ದಿನದಿಂದ ನಾನು ಸ್ವಕುಲಸಂಬಂಧೀ ಬೇಗುದಿಗೆ ವಿದಾಯ ಹೇಳಿ ತಣ್ಣಗೆ ನಿದ್ರಿಸಲು ಸಾಧ್ಯವಾಗಿದೆ. ಇಂಥದೊಂದು ಮಾನಸಿಕ ದೌರ್ಬಲ್ಯದಿಂದಲೇ ನಮ್ಮ ವಿಲಿಂಗಿ ಬಂಧುಗಳು ತಲತಲಾಂತರದಿಂದ ಸ್ತ್ರೀ ಕುಲಕ್ಕೆ ಅನೇಕಾನೇಕ ಅವಗುಣಗಳನ್ನು ಆರೋಪಿಸುತ್ತ ಬಂದಿದ್ದಾರಿರಬೇಕು.

ಇಲ್ಲದಿದ್ದರೆ ಪ್ರತಿಶತ ಪ್ರಮಾಣದಲ್ಲಿ ನಿಖರವಾಗಿ ಲೆಕ್ಕ ಹಾಕಿದರೆ ಇವತ್ತಿಗೂ ಲಟ್ಟಣಿಗೆಯಲ್ಲೇ ತಮ್ಮ ಗಂಡಂದಿರಿಗೆ ಬಾರಿಸುವ 'ಟ್ರೆಡಿಶನಲ್ ವೆಪನ್' ನಾರಿಯರು ಎಷ್ಟು ಜನ ಸಿಕ್ಕಾರು? ಆದರೆ ನಮ್ಮ ವ್ಯಂಗ ಚಿತ್ರಕಾರರು ಗಂಡಂದಿರಿಗೆ ಬೀಳುವ ಹೊಡೆತಗಳಿಗೇನಿದ್ದರೂ ಲಟ್ಟಣಿಗೆಯೊಂದೇ ಅಸ್ತ್ರ ಎಂಬಂತೆ ಚಿತ್ರ ಬಿಡಿಸಿಕೊಂಡೇ ಇದ್ದಾರೆ.

ಎಲ್ಲೋ ಯಾವುದರಲ್ಲೋ ಒಬ್ಬಾಕೆ ಚಪಾತಿ ಲಟ್ಟಿಸಿ ಲಟ್ಟಿಸಿ ಕೈ ಸೋತು ಬಂದ ಸಮಯದಲ್ಲಿ, ಮಾಡಿ ಹಾಕಿದ ಚಪಾತಿಯನ್ನೆಲ್ಲ ತಿಂದಾದ ಮೇಲೆ ತೇಗುತ್ತ ಅವಳ ಪತಿರಾಯ "ಥೂ ಇದೇನು ಚಪಾತೀನೇ ರಬ್ಬರ್ ಶೀಟೇ? ಎಂದು ವಿಮರ್ಶಿಸಿದ ಕ್ಷಣದಲ್ಲಿ ಹತ್ತಿರದಲ್ಲಿ ಇನ್ನೇನೂ ಸಿಗದೇ ಕೈಯಲ್ಲಿದ್ದ ಲಟ್ಟಣಿಗೆಯಲ್ಲೇ ಗಂಡನ ತಲೆಗೆ ಒಂದು ಬಾರಿಸಿರಬಹುದು. ಆ ಖಾಸಗಿ ಹೊಡೆದಾಟವನ್ನು ಯಾವುದೋ ವ್ಯಂಗ್ಯಚಿತ್ರಕಾರ ಕಂಡು ಆ ದೃಶ್ಯದ ಸಮಯ ಸಂದರ್ಭಗಳನ್ನು ಅರಿಯುವ ಗೋಜಿಗೆ ಹೋಗದೇ ಕೇವಲ ಲಟ್ಟಣಿಗೆಯಲ್ಲಿ ಗಂಡನನ್ನು ಬಾರಿಸುತ್ತಿರುವ ಮಾನಿನಿಯ ಚಿತ್ರವನ್ನು ಬಿಡಿಸಿ ಪ್ರಕಟಿಸಿಬಿಟ್ಟ. ತಗೊಳ್ಳಿ ಅದನ್ನು ನೋಡಿದ ಸ್ತ್ರೀಯೇತರರ ಜಗತ್ತು "ಎಲ್ಲಾ ಹೆಂಗಸರೂ ತಮ್ಮ ಗಂಡಂದಿರಿಗೆ ಲಟ್ಟಣಿಗೆಯಲ್ಲಿ ಬಾರಿಸುತ್ತಾರೆ" ಎಂಬ ದೃಢ ನಂಬಿಕೆಯನ್ನು ತಾಳಿಬಿಟ್ಟಿತು. ಮಾರ್ಕ್ ಟ್ವೇನ್ ಸಂಶೋಧಿಸಿದ್ದು ಪುರುಷರ ಈ ಬಗೆಯ ಜನರಲೈಜೇಶನನ್ನೇ.



ಈ ಅಭಿಪ್ರಾಯವನ್ನೇ ಒಂದು ಅಪೂರ್ವ ಆಸ್ತಿಯೆಂಬಂತೆ ಕಾಪಾಡಿಕೊಂಡು ಬಂದ ನಮ್ಮ ವಿಕಟ ಕಲಾವಿದರು ಇವತ್ತೂ ಅದೇ ಕಲ್ಪನೆಗೇ ಜೋತುಬಿದ್ದು ವ್ಯಂಗ್ಯಚಿತ್ರ ರಚಿಸುವುದು ಖಂಡಿತವಾಗಿಯೂ ಅವರ ಕಲ್ಪನಾ ದಾರಿದ್ರ್ಯವನ್ನಲ್ಲದೇ ಇನ್ನೇನನ್ನು ಸೂಚಿಸೀತು?

ಹಾಗೆ ನೋಡಿದರೆ ಇವತ್ತಿನ ದಿನಗಳ 'ಸೊಫಿಸ್ಟಿಕೇಟೆಡ್ ಗಂಡಂದಿರನ್ನು' ಬಾರಿಸಲು ಲಟ್ಟಣಿಗೆಯಂಥ ಸಾಂಪ್ರದಾಯಿಕ ಅಸ್ತ್ರಗಳಿಗಿಂತಲೂ ಹೆಚ್ಚು ಸಶಕ್ತವಾದ ಹೆಚ್ಚು ಪರಿಣಾಮಕಾರಿಯಾದ ಚೂಪಾದ 'ವಾಗಸ್ತ್ರಗಳು' ಬಳಕೆಯಲ್ಲಿವೆ. ತನ್ನ ಹೆಂಡತಿ ಅಲ್ಲಿಲ್ಲವೆಂದು ಭಾವಿಸಿದ್ದ ಪತಿ ಮಹಾಶಯನೊಬ್ಬ ಮಕ್ಕಳ ಬಳಿ

"ನೋಡಿದ್ರೇನ್ರೋ ನಿಮ್ಮಮ್ಮನ ಕೆಲಸಾನ? ಹೀಗೇ ಮಾಡ್ತಾಳೆ. ಒಂದಾದರೂ ನೆಟ್ಟಗೆ ಮಾಡಿ ಮುಗಿಸ್ತಾಳಾ.....

ಎಂದೇನಾದರೂ ಪ್ರಾರಂಭಿಸಿದ್ದ ಅನ್ನಿ. ಆಗ ಅಲ್ಲಿ ಪ್ರತ್ಯಕ್ಷವಾಗುವ ಹೆಂಡತಿಗೆ ಅದು ಕಿವಿಯ ಮೇಲೆ ಬೀಳುತ್ತದೆ. ಆಗ ಅವಳು

"ಸಾಕು ಸುಮ್ಮನಿರ್ರೀ ಕಂಡಿದೀನಿ"

ಎಂಬ ಮೂರೇ ಮೂರು ಪದಪುಂಜಗಳಲ್ಲಿ ಪತಿರಾಯನ ಬಾಯಿ ಮುಚ್ಚಿಸಿ ಹೊಲಿದು ಬೀಗ ಹಾಕಿ ನಿಶ್ಚೇಷ್ಟಿತನನ್ನಾಗಿಸಿ ಆತ ತಣ್ಣಗೆ ಅಲ್ಲೇ ಇದ್ದ ಪೇಪರಿನಲ್ಲಿ ತಲೆ ಹುಗಿಸಿ ಕೂತುಕೊಳ್ಳುವಂತೆ ಮಾಡಬಲ್ಲಳು. ಕೆಲವು ಸಲ ಒಂದೂ ಪದದ ಅಗತ್ಯವಿಲ್ಲದೆ ಕೇವಲ ಒಂದು ಬೀರುನೋಟದಿಂದ, ಗಂಟಲಿನಿಂದಾಚೆ ಹೊರಬೀಳದ ಒಂದು ಬಗೆಯ ಹೂಂಕಾರದಿಂದ ಸಹ ಹೀಗೆ ಬಾಯ್ಮುಚ್ಚಿಸಬಲ್ಲಳು. ಇಂಥ ಅಸ್ತ್ರಗಳನ್ನೆಲ್ಲ ನಮ್ಮ ವ್ಯಂಗ್ಯಚಿತ್ರಕಾರರು ಸೆರೆ ಹಿಡಿಯಬಲ್ಲರೇ?

ಹೋಗಲಿ ಇದು ಹೊಡೆದಾಟದಂಥ ಅಪಾಯಕಾರಿ ಸಂಗತಿಯ ಕುರಿತು ಇರುವ ತಪ್ಪು ಅಭಿಪ್ರಾಯವಾದ್ದರಿಂದ ಒತ್ತಟ್ಟಿಗಿಡೋಣ. ಇನ್ನೊಂದು ಅತ್ಯುಪಯುಕ್ತವಾದ ಆರ್ಥಿಕ ವಿಷಯದಲ್ಲೂ ಇಂಥದೇ ಒಂದು ಬಗೆಯ ತಲತಲಾಂತರದಿಂದ ಬಂದ ನಂಬಿಗೆಯಿದೆ. ಅದೆಂದರೆ ಹೆಂಡಂದಿರು (ಬಹುವಚನವನ್ನು ಗಮನಿಸಬಹುದು) ತಂತಮ್ಮ ಗಂಡಂದಿರ ಜೇಬುಗಳನ್ನು ದೈನಂದಿನ ತನಿಖೆಗೊಳಪಡಿಸಿ ಅತಿಕ್ರಮಿತ ಕಾರ್ಯಾಚರಣೆ ನಡೆಸುತ್ತಾರೆ ಎಂಬುದು. ಹೀಗೆ ಜೇಬು ಜಾಲಾಟ ನಡೆಸಿ ಮರುದಿನ ಸಿಟಿಬಸ್ಸಿಗೆ ಆಗುವಷ್ಟು ದುಡ್ಡನ್ನು ಮಾತ್ರ ಜೇಬಿನಲ್ಲಿಟ್ಟು ಉಳಿದದ್ದನ್ನು ಲಪಟಾಯಿಸಿ ಸಾಸಿವೆ ಡಬ್ಬಿಗೆ ವರ್ಗಾಯಿಸುತ್ತಾರೆ ಎಂಬುದು ಪ್ರಚಲಿತವಿರುವ ಇನ್ನೊಂದು ಸಾರ್ವತ್ರಿಕ ನಂಬಿಗೆ.

ಇಲ್ಲಿ ಎರಡು ಸಂಶಯಗಳೇಳುತ್ತವೆ. ಇಂದಿನ 'ಆರ್ಥಿಕ ಪ್ರಗತಿ'ಯ ಯುಗದಲ್ಲಿ ದುಡಿದು ತರಬಲ್ಲ ಗಂಡನು ಆಫೀಸು, ಕ್ಯಾಂಟೀನು, ಮಾರ್ಕೆಟ್ಟುಗಳನ್ನು ಹಾದು ಮನೆಗೆ ಬಂದ ಮೇಲೂ ಅವನ ಜೇಬಿನಲ್ಲಿ ಏನಾದರೂ ಉಳಿದಿರಲು, ಸಾಧ್ಯವೇ ಎಂಬುದು. ಎರಡನೆಯದು ಹೆಂಗಸರು ತಮ್ಮ ಗಂಡಂದಿರ ಜೇಬುಗಳನ್ನು ದೈನಂದಿನ



ತನಿಖೆಗೆ ಒಳಪಡಿಸುವುದು ಕೇವಲ ಹಣಕ್ಕಾಗಿ ಮಾತ್ರ ಎಂಬ ಕೀಳು ಅಭಿಪ್ರಾಯವನ್ನು ಹೊಂದುವದು ತಪ್ಪಲ್ಲವೆ ಎಂಬುದು.

ಹೋಗಲಿ ಬಿಡಿ ಗಂಡಂದಿರ ಜೇಬನ್ನ ಸ್ವಚ್ಛಗೊಳಿಸೋದು ಧರ್ಮಪತ್ನಿಯರ ಸಾಂಸಾರಿಕ ಭಾದ್ಯತೆಯಲ್ಲವೆ ಎಂಬ ಉದಾರ ನೀತಿ ತಾಳಲು ಸಾಧ್ಯವಾಗದವರು ಹಾಗೆ ತನಿಖಾ ಕಾರ್ಯದಲ್ಲಿ ಲಪಟಾಯಿಸಲ್ಪಡುವ ಹಣವನ್ನು ಹೆಂಡಂದಿರು ಏನು ಮಾಡುತ್ತಾರೆ ಎಂಬುದನ್ನಾದರೂ ಗಮನಿಸಬೇಕು. ರೈತನು ಬೆಳೆದ ಕಾಳುಗಳನ್ನು ಸ್ವಚ್ಛಗೊಳಿಸಿ ಜಳ್ಳು ಕಾಳು ಬೇರ್ಪಡಿಸಿ, ಕಾಳುಗಳನ್ನು ಸಂರಕ್ಷಿಸಿಡುವ ಕೆಲಸವನ್ನು ರೈತಪತ್ನಿಯರು ಮಾಡುತ್ತಾರೆ. ಅಂತೆಯೇ ಉದ್ಯೋಗಸ್ಥ ಪತಿಯ ಜೇಬಿನಲ್ಲಿರುವ ದಿನನಿತ್ಯ ಸೇರಿಕೊಳ್ಳಬಹುದಾದ ಜಳ್ಳು ಕಾಳುಗಳನ್ನು ಬೇರ್ಪಡಿಸಿ ಇಲಿ, ಹೆಗ್ಗಣಗಳ ಪಾಲಾಗದಂತೆ ಸಂರಕ್ಷಿಸಿ ಕಡ್ಡಾಯ ಉಳಿತಾಯ ಅಥವಾ ಉಪಯುಕ್ತ ವಿನಿಯೋಗದ ಕಾರ್ಯದಲ್ಲಿ ಪ್ರವರ್ತಿಸುವ ಕೆಲಸವನ್ನು ಹೆಂಡಂದಿರು ತಮ್ಮ ಪವಿತ್ರ ಕರ್ತವ್ಯವೆಂಬಂತೆ ಭಾವಿಸಿ ಮಾಡುತ್ತ ಬಂದಿದ್ದಾರೆ. ವ್ಯರ್ಥವಾಗಿ ಕ್ಲಬ್ಬಿನಲ್ಲೋ ಬಾರಿನಲ್ಲೋ ನೀರಿನಂತೆ ಸೋರಿ ಹೋಗಬಹುದಾದ ದ್ರವ್ಯರಾಶಿಯ ಪ್ರವಾಹದ ದಿಕ್ಕನ್ನು ಅದೃಶ್ಯ ರೂಪದಲ್ಲೇ ಇರಲಿ, ಅತಿಕ್ರಮಿತ ರೂಪದಲ್ಲೇ ಇರಲಿ ವ್ಯರ್ಥವಾಗದಂತೆ ಎತ್ತಿ ತೆಗೆದು ಸಾಸಿವೆ ಡಬ್ಬಿಯ ಆಪದ್ಧನಕ್ಕೋ, ಉಳಿತಾಯದ ಕರಡಿಗೆಯ ಹನಿಯಿಂದ ಹಳ್ಳಕ್ಕೋ ವರ್ಗಾಯಿಸುವ ಆರ್ಥಿಕವಾಗಿ ಉಪಯುಕ್ತವಾಗಬಹುದಾದ ಕ್ರಿಯೆಯಲ್ಲಿಯೇ ತೊಡಗಿಕೊಂಡಿದ್ದಾರೆ.

ಪತ್ನಿಯರು ಕೈಗೊಳ್ಳುವ ಈ ಸಾಂಸಾರಿಕ (ಹಕ್ಕು ಅಥವಾ ಕರ್ತವ್ಯ ಏನೇ ಕರೆಯಬಹುದು) ಕೃತ್ಯವೊಂದನ್ನು ಹೆಂಗಸರು ಮಾಡುವ ಕುಕೃತ್ಯಗಳಲ್ಲಿಯೇ ಪ್ರಧಾನವಾದುದು ಎಂಬಂತೆ ನಿಂದೆಗೆ ಗುರಿಮಾಡುತ್ತ ಬಂದಿರುವದು ನಿಜಕ್ಕೂ ವಿಷಾದನೀಯ. ಅಲ್ಲದೆ ಪ್ರಸ್ತುತ ಹಾವಳಿಯೆಬ್ಬಿಸಿ ಗಂಡಸರನ್ನು ಬಲೆಗೆ ಬೀಳಿಸಿ ಹಿಂಡಿ ಹಿಪ್ಪೆ ಮಾಡುತ್ತಿರುವ ಬೀದಿ ಬದಿಯ ಡೈಲಿ ಲಕ್ಷ್ಮಿಯರ ಹಾವಳಿಯಿಂದ ತಂತಮ್ಮ ಪತಿಗಳನ್ನು ರಕ್ಷಿಸಿಕೊಳ್ಳಬೇಕಾದ ಅಗತ್ಯ ಇಂದಿನ ಗೃಹಲಕ್ಷ್ಮಿಯರ ಪಾಲಿಗೆ ಬಂದಿದೆ. ಇಂದಿನ ಪತಿಗಳ ಜೇಬಿನಲ್ಲಿ ಇರೋದಾದ್ರೂ ಏನು?

ಮೇಲ್ಭಾಗದ ಕಿಸೆಯಲ್ಲಿ ಸಿಕ್ಕೋದು ಸಿಕ್ಕಿಂ ಲಕ್ಷ್ಮಿ; ಪ್ಯಾಂಟಿನ ಕಿಸೆಯಲ್ಲಿ ಪಂಜಾಬ್ ಲಕ್ಷ್ಮಿ ಎಡಗಡೆ ಜೇಬ್ನಲ್ಲಿ ಮಿಜೋರಾಂ ಲಕ್ಷ್ಮಿ ಬಲಗಡೆ ಜೇಬ್ನಲ್ಲಿ ಭೂತಾನ್ ಲಕ್ಷ್ಮಿ......

ಇವನ್ನೆಲ್ಲ ತೆಗೆದು ಎಸೆದು ಮಾಡಬೇಕಾದ ಗೃಹಲಕ್ಷ್ಮಿ ಪಾಪ ಈಗೀಗ ಬರಿಗೈ ಲಕ್ಷ್ಮಿ. ಪಾಪ ಕನಿಕರಕ್ಕೆ ಅರ್ಹಳಾದವಳು ಇವಳೇ ಅಲ್ಲವೇ?

ಕನ್ನಡಿ



ಕನ್ನಡಿಯಲಿ ಕಾಣುವುದು ಎಡ ಬಲ ಬಲ ಎಡ
ಕಾಣಲೊಲ್ಲದೇಕೋ ಬುಡ ಮೇಲೆ ತಲೆ ಬುಡ, ನೌನ ಹಡ!

–ಜೀಪಿ

ನಮ್ಮ ಮೂಣುಮಲೈ ಮುತ್ತಣ್ಣ

–ಡಾ. ಎಚ್.ಕೆ. ರಂಗನಾಥ್

ನೀವು ನಮ್ಮ ಬಡಾವಣೆಯಲ್ಲಿ ಇದ್ದಿದ್ದರೆ, ಮೂಣುಮಲೈ ಮುತ್ತಣ್ಣನನ್ನು ಅನುಸರಿಸದೇ ಇರಲು ಸಾಧ್ಯವೇ ಇಲ್ಲ. ನಮ್ಮ ಬಡಾವಣೆಯ ವಾಟರ್ ಮ್ಯಾನೇಜ್‌ಮೆಂಟು ಅವನದೇ ಪೀಸಲು. ಸಂಪು, ಪಂಪು, ನಲ್ಲಿ, ಗಲ್ಲಿ, ಪೈಪು, ಟ್ಯಾಂಕು ಹೀಗೆ ನೀರಿಗೆ ಸಂಬಂಧಪಟ್ಟ ಏನೆಲ್ಲ ವಿಷಯಗಳಲ್ಲಿ ಅವನದು ಸಿದ್ಧಹಸ್ತ. ರಿಪೇರಿ ಅಂದರೆ ಹೆಸರುವಾಸಿ. ತನ್ನ ಗುಜರಿ ಅಂಗಡಿಯ ಹಿಂಭಾಗದಲ್ಲಿಯೇ ಮೂಣುಮಲೈ ಮುತ್ತಮ್ಮನೊಂದಿಗೆ ಆತನ ಸಂಸಾರ. ಸಾಲಾಗಿ ಏಳು ಮಕ್ಕಳು. ಬೆಂಗಳೂರಿನಲ್ಲಿಯೇ ಇಪ್ಪತ್ತು ವರುಷಗಳಿಂದ ಬೀಡುಬಿಟ್ಟಿರುವುದರಿಂದ ಕನ್ನಡ ಬರುವುದಿಲ್ಲ. ಬಂದರೂ ನಮಗೆ ಅರ್ಥವಾಗುವುದು ಕಷ್ಟ.

ಮೊನ್ನೆ ಭಾನುವಾರ, ತಿಂಗಳ ಅಭ್ಯಂಜನದ ಕಾರಣ, ವಿಪರೀತ ಚೌಕಾಶಿ ಮಾಡಿ ಪೈಸೆಗೆ ಒಂದು ತೊಟ್ಟಿನಂತೆ ಬೆಲೆಕಟ್ಟಿ, ಹನ್ನೆರಡು ರೂಪಾಯಿಗೆ ನೂರಾ ಇಪ್ಪತ್ತು ತೊಟ್ಟು + ಎರಡು ತೊಟ್ಟು ಕೂಸರು ಹೀಗೆ ಒಟ್ಟು ನೂರಾ ಇಪ್ಪತ್ತೆರಡು ತೊಟ್ಟು ಕೊಬರಿ ಎಣ್ಣೆಯನ್ನು ಚಿಂಗಲುಪೇಟೆ ಚಿನ್ನಪ್ಪಸಾಮಿಯ ಅಂಗಡಿಯಿಂದ ಕೊಂಡುತಂದೆ. ಮನೆಯಲ್ಲಿ ನಾನೇ ನಾನು. ಉಳಿದವರೆಲ್ಲ ಊರಿಗೆ. ಆದರಿಂದ ಹಿಂದಿರುಗಿ ಬರುತ್ತ, ಬತ್ತಾಸಿನಂಥ ಎರಡು ಇಡಲಿ ದೊಡ್ಡ ತೂತಿನ ಎರಡು ಸಣ್ಣ ವಡೆ, ಪುಟ್ಟ ಲೋಟದಲ್ಲಿ ಒಂದು ಔನ್ಸು ಕಾಫಿ, ಹೀಗೆ ಒಂಭತ್ತೂವರೆ ರೂಪಾಯಿಗಳಿಗೆ ಗಡದ್ದಾಗಿ ನಾಷ್ಟಾ ಹೊಡೆದೆ. ಹೊಟ್ಟೇನ ವಟ್ಟೆ ಮಾಡಿಕೊಳ್ಳೋಣ ಅಂದರೆ ಪುತ್ತೂರು ಶಾರಂಗಪಾಣಿ, ನೀರನ್ನೂ ರೇಷನ್ ಮಾಡಿಬಿಟ್ಟಿದಾನೆ. ಹೋಗಲಿ ಬಿಡಿ, ನೋಡದೆಯೆ ಕುಡಿಯಬೇಕಾದ ನೀರು ಅದು!

ಬೀಗ ತೆಗೆದು ಒಳಗೆ ಬಂದರೆ ಇಂಥ ಚಳಿಗಾಲದಲ್ಲೂ ಮನೆಯಲ್ಲಿ ಬೆಚ್ಚಗಿನ ಹಬೆ! ನೋಡಿದರೆ ಬಚ್ಚಲಮನೆಯ ಬಾಯ್ಲರ್‌ನಲ್ಲಿ ನೀರು ಕೊತಕೊತ ಕುದೀತಿದೆ. ಸ್ವಿಚ್ ಆರಿಸಿ, ಪಂಪಿನ ಸ್ವಿಚ್ ಆನ್ ಮಾಡಿ, ಬಟ್ಟೆ ತೆಗೆದು, ಅಷ್ಟೂ ಎಣ್ಣೆಯನ್ನು ತಲೇಮೇಲೆ ಸುರಿದುಕೊಂಡು ಅದರಿಂದಲೇ ಮೈ ಕೈಗಳಿಗೆ ಸವರಿಕೊಂಡು ಹತ್ತು ನಿಮಿಷಗಳಲ್ಲಿ ಬಚ್ಚಲಿಗೆ ಇಳಿದೆ. ಬಕೀಟಿಗೆ ಕುದಿನೀರು ಬಿಟ್ಟುಕೊಂಡು ತಣ್ಣೀರಿಗಾಗಿ ನಲ್ಲಿ ತಿರುಗಿಸಿದರೆ ಬರೀ ಗಾಳಿ! ಬಿಸೀ ಗಾಳಿ! ನಾನು ನಂತರ ಮಾಡಿದ ಏನೇನು ಸರ್ಕಸ್ಸಿಗೂ ಅದು ಮಣಿಲಿಲ್ಲ. ಭಗವಂತಾ ಅಂತ ಬಿಸುಸುಯ್ದು ಒಣಗಿದ ಟವಲ್ಲಿನಿಂದ ತಲೆ, ಮೈಕೈ ಒರಸಿಕೊಂಡು ಹಳೆಯದನ್ನೇ ಮತ್ತೆ ಉಟ್ಟು ತೊಟ್ಟು ಬೀದಿಗೆ ಬಿದ್ದದ್ದು ನಾನು ಮೂಣುಮಲೈ ಹೆಸರನ್ನು ಜಪಮಾಡುತ್ತ.



ಅಂಗಡೀ ಮಧ್ಯದಲ್ಲಿ ಮಗುಚಿ ಹಾಕಿದ್ದ ಮುರುಕಲು ಡ್ರಮ್ಮಿನ ಮೇಲೆ ಥಾಳಾಗಿ ಕುಳಿತಿದ್ದ. ದ್ವಾದಶೀ ಮೇಲೆ ಅಮಾವಾಸ್ಯೆ ಏರಿಕೊಂಡ ಹಾಗೆ ಅವನ ಹೊಟ್ಟೇ ಮೇಲಿನ ಮುಖ. ಕತ್ತೇ ಪತ್ತೇ

ಇಲ್ಲಿ. "ಬಾಸಾರ್" ಅಂದ ನನ್ನನ್ನು ನೋಡಿ – "ಏನು ಕೆಟ್ಟಿದೆ? 'ಏ' ಕಳಿಸಲೋ 'ಬಿ' ಕಳಿಸಲೋ?" ಎಂಬ ಅರ್ಥದ ಮಿತಕ (ಮಿಶ್ರ ತಮಿಳು ಕನ್ನಡ) ಆಡಿದ. ತನ್ನ ಮಕ್ಕಳ ಜೊತೆಗೆ ಇನ್ನೂ ಮೂವರು ಪುಟ್ಟ ವಯಸ್ಸಿನ ಪಡ್ಡೆ ಹುಡುಗರನ್ನ ಸೇರಿಸಿಕೊಂಡು ಮೇಟ್ರನ್ ಮುತ್ತಮ್ಮನ ಮೇಲು ವಿಚಾರಣೆಯಲ್ಲಿ 'ಮೆಕ್ಯಾನಿಕ್ ಬ್ರಿಗೇಡ್' ಕಟ್ಟಿಕೊಂಡಿದ್ದಾನೆ. ಟ್ರೇಸಿಂಗು ಅವಲಂಬಿಸಿ. ಏ.ಬೀ.ಸೀ. ಎಂಬ ಮೂರು ಕ್ಯಾಟಗರಿಯಲ್ಲಿ ಅವುಗಳನ್ನು ಮಡಗಿಕೊಂಡಿದ್ದಾನೆ. 'ಏ','ಬೀ' ಗಳ ಅನುಭವ ನನಗೆ ಚೆನ್ನಾಗಿದೆ. ಸರಿಯಾಗಿದ್ದ ಏನನ್ನೂ ತೋರಿದರೂ ಅವು ಕೆಡಿಸಿ ಹಾಳುಗೆಡವುತ್ತವೆ. ಅನಂತರ 'ಸಿ' ಹುಡುಗನನ್ನು ಒಂದು ಸಣ್ಣ ಸುತ್ತಿಗೆ ಒಂದು ಸ್ಪ್ಯಾನರ್ ಜೊತೆ ಕಳುಹಿಸುತ್ತಾನೆ. ಅವನು ಕೆಡದೆ ಉಳಿದದ್ದನ್ನು ಪೂರಾ ಕೆಡಿಸಿದ ನಂತರ ಸ್ವತಃ ತಾನೇ ಬಂದು, ಆ ಕ್ಯಾಟಗರಿಗಳನ್ನು ಕ್ಯಾಕರಿಸಿ ಬೈಯುತ್ತ ತಾನೇ ಸ್ವತಃ ರಿಪೇರಿ ಕೆಲಸದಲ್ಲಿ ತೊಡಗುತ್ತಾನೆ. ನಿಮ್ಮ ಪುಣ್ಯ ಚೆನ್ನಾಗಿದ್ದರೆ ಅದು ಸರಿಹೋಗಲೂಬಹುದು. ಸರಿಹೋದರೂ, ಹೋಗದಿದ್ದರೂ **ಒಟ್ಟು ಟೀಂ ಕೆಲಸಕ್ಕೆ** ಛಾರ್ಜು ಮಾಡುವುದು ಅವನಿಟ್ಟುಕೊಂಡಿರುವ ಸಂಪ್ರದಾಯ. ಈ ಎಲ್ಲ ಕೂಡಿದರೆ ಕೇವಲ ನಲ್ಲೀ ರಿಪೇರಿಗೇ ಒಂದೊಂದು ಸಲ 75ರಿಂದ 130ರವರೆಗೆ ಮುಟ್ಟುತ್ತದೆ. ಅದರಿಂದ ಹೇಳಿದೆ ಅವನಿಗೆ–

" 'ಏ' ನೂ ಬೇಡ – 'ಬೀ' ನೂ ಬೇಡ – ಸ್ವತಃ ನೀನೇ ಬರಬೇಕಪ್ಪಾ. ವಿಪರೀತ ಅರ್ಜೆಂಟು" ಅಂತ ತಲೆ ತೋರಿಸಿದೆ. ಅಸಹ್ಯಪಟ್ಟುಕೊಂಡು, "ಅರೆ ಮಣಿ ತಾಳು ಸಾರ್– ಅಲೇ ಮೇಲೆ ಟವಲ್ ಪೋಟ್ಟು ಉಕ್ಕಾರ್" ಅಂದ. ಅಲ್ಲಿ ಅವನ ಬಿಡುವಿಗಾಗಿ ಕಾಯುತ್ತ ಕೂತೆ. ಮೇಟ್ರನ್ ಮುತ್ತಮ್ಮ ಬಂದು ಅವನನ್ನ ಬಿಡುಗಡೆ ಮಾಡುವವರೆಗೂ.

ಅಂತೂ ಬಂದ. ದೊಡ್ಡ ಸುತ್ತಿಗೆ, ಸ್ಪ್ಯಾನರ್ ತಂದ. ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಪಂಪನ್ನು ಮುಟ್ಟಿ ಮುಟ್ಟಿ ತಕ್ಕೈಸಿದ. ಬಚ್ಚಲು ನಲ್ಲಿಯನ್ನು ಮೂಸಿ ನೋಡಿದ. ಕಡೆಗೊಮ್ಮೆ, ಪಂಪಿನ ಹಿಂಭಾಗವನ್ನು ಬೆರಳುಗಳಿಂದ ಮುಟ್ಟಿ – ತಡಕಾಡಿ, ಪರೀಕ್ಷಿಸಿ, ದೊಡ್ಡ ಸುತ್ತಿಗೆಯಿಂದ ಗುರಿಹಿಡಿದು ಒಂದು ಭಾರೀ ಹೊಡೆದ ಬಡಿದ ಅದಕ್ಕೆ. ನಂಬಿದರೆ ನಂಬಿ – ಬಿಟ್ಟರೆ ಬಿಡಿ ಸಾರ್. ಹೌದು – ತಾವು ಊಹಿಸಿದ್ದು ಸರಿ. ಛಟೀರನೆ ಅಲ್ಲಿಂದ ನೀರು ಚಿಮ್ಮಿತು. "ಇಪ್ಪೋ ಸ್ವಿಚ್ ಹಾಕು ಸಾರ್" ಅಂದ. ಹಾಕಿದೆ. ಒಂದು ಸಲ ಧಡಕ್ ಅಂತ ಶಬ್ದಮಾಡಿ, ಕಜ್ಜೀನಾಯಿ ತನ್ನ ಕಿವೀನ ಕಾಲಿಂದ ಕೆರಕೊಳ್ಳೋವಾಗ ಹೊರಡಿಸುವ "ಕುಯ್ಯೋ" ಅಂತ ಮಧ್ಯಮದಿಂದ ತಾರಸ್ಥಾಯಿಾ ಷಡ್ಜದವರೆಗಿನ ಚೂಪು ಶಬ್ದ ಹೊಮ್ಮಿಸಿ, ಛಟರ್, ಛಟರ್ ಅಂತ ನೀರು ಉಗ್ಗಿಸಿ, ಕೆಲಸ ಶುರುಮಾಡಿತು. "ಇಪ್ಪೊ ಬಚ್ಚಲು ಪೋಯಿ ನೋಡು ಸಾರ್" ಅಂದ. ನೋಡಿದರೇ – ಮೈಗಾಡ್! ನಿಜವಾಗಿ ಮೂಣುಮಲೇನ ಅಪ್ಪಿಕೊಂಡು ಮುದ್ದಾಡಬೇಕು ಅನ್ನಿಸಿತು. ಸ್ವಲ್ಪ ತಡಕೊಂಡೆ.



ಇದು ಆಶ್ಚರ್ಯ ನೋಡಿ. ಹೇಳಿದ ಮಾತು ಕೇಳದೆ, ಏನೇನು ಉಪಚಾರಕ್ಕೂ ಮಣಿಯದೇ ಇರೋ ಮಿಷೀನುಗಳಿಗೆ ಇಂಥ

ಒದಿಕೆಗಳೇ ಉತ್ತರ ಅನ್ನೋದು ನನ್ನ ಅನುಭವ. ಜನಕ್ಕೆ ಕೂಡ ಈ ಮಾತನ್ನ ಅನ್ವಯಿಸಬಹುದು – ಅನ್ವಯಿಸಬೇಕೂ ಅನ್ನೋ ನಿರ್ಣಯಕ್ಕೆ ಸುಪ್ರಸಿದ್ಧ ಸಂಶೋಧಕ ಶಂಕರತೀರ್ಥಾನಂದ ಸನ್ಯಾಸಿ ಸ್ವಾಮಿಗಳವರು ಬಂದಿದ್ದಾರೆ ಅಂತ ಮೊನ್ನೆ ಪೇಪರಿನಲ್ಲಿ ಬಂದಿತ್ತು.

ನೋಡಿ, ಹೀಗೇ ಆಯಿತು ಧಾರವಾಡದ ಆಕಾಶವಾಣೀಲಿ ನಾನಿದ್ದಾಗ. ಛೀಫ್ ಇಂಜನಿಯರು ಇನ್ಸ್‌ಪೆಕ್ಷನ್‌ಗೆ ಬಂದಿದ್ದರು. ನಮ್ಮ ಕೆ. ರಾಮಸ್ವಾಮಿ ಕೇಂದ್ರದ ಇನ್‌ಛಾರ್ಜ್. ಅವರ ಹಿರಿತನದಲ್ಲಿ ನೆಲ–ಗೋಡೆ ಮೊದಲುಗೊಂಡು ಏನೆಲ್ಲವನ್ನೂ ತಿಕ್ಕಿಸಿ ತೊಳೆಸಿ, ಪಾಲಿಷ್ ಹೊಡೆಸಿ, ಅವತ್ತು ತಾವೂ ಸ್ನಾನ ಮಾಡಿ, ಬಿಳಿ ಬಿಳಿ ಬಟ್ಟೆ ಧರಿಸಿ, ಹೊಳೆಹೊಳೆವ ಕಪ್ಪು ಷೂ ಏರಿಸಿ, ಛೀಫ್‌ನ ಎದುರುಗೊಂಡು, ಸ್ಟುಡಿಯೋ ಕಂಟ್ರೋಲ್ ರೂಮು, ಕಾರಿಡಾರು, ಸ್ಟೋರ್ ರೂಮು ಎಲ್ಲ ಸಾವಕಾಶವಾಗಿ ತೋರಿಸಿಕೊಂಡು ಬಂದು ಹೊಳೆಹೊಳೆಯುತ್ತಿದ್ದ ತಮ್ಮ ರೂಮಿಗೆ ಕರೆತಂದು ಭರ್ಜರಿ ಮೇಜವಾಗಿ ಹೊಡೆಸೋದರಲ್ಲಿದ್ದಾಗ, ಛೀಫು "ಅದೆಲ್ಲ ಸರಿ, ಸ್ಟೋರ್ ರೂಮಿನ ಪಕ್ಕದ ಕೋಣೆಯ ಕತ್ತಲು ಮೂಲೆಯಲ್ಲಿ ಕೂತಿದೆಯಲ್ಲ ಗುಪ್ಪೆ!– ಏನದು?" ಅಂತ ಕೇಳಿದರು. ಅದೊಂದೇ ಪ್ರಾಣಪ್ರಶ್ನೇನೇ ರಾಮಸ್ವಾಮಿ ತಪ್ಪಿಸಿಕೊಳ್ಳೋಕೆ ಪ್ರಾಣಬಿಡ್ತಿದ್ದದ್ದು! ಆ ಪ್ರಶ್ನೆ ಕಿವೀಗೆ ಬಿದ್ದ ತಕ್ಷಣ, ಕೈಕಾಲುಗಟ್ಟು, ಕಂಗಾಲಾಗಿ, ಕಣ್ಣುಕಣ್ಣು ಬಿಟ್ಟು, ಕಳವಳಿಸುತ್ತ ಬಾಯಿ ಒಣಗಿ "ಸಾರ್ ಅದು ಜನರೇಟರ್ರು!" ಅಂದರು. "ಅದನ್ಯಾಕೆ ಅಲ್ಲಿ ಹಾಗೆ ಗೌನು ಕಟ್ಟಿ ಕೂರಿಸಿದೀರಿ?" ಛೀಫ್ ಸಾಹೇಬರ ಪ್ರಶ್ನೆ! "ಅದು ಸ್ವಲ್ಪ ಕೆಟ್ಟಿತ್ತು ಸಾರ್" ಕೆ.ರಾ. ಉತ್ತರ. "ಯಾವಾಗ ಕೆಟ್ಟಿದ್ದು?" ಪ್ರಶ್ನೆ. "ಇವತ್ತು ಬೆಳಿಗ್ಗೆ ತಾನೆ ಸಾರ್" ಸುಳ್ಳು ಉತ್ತರ! "ಬೆಳಿಗ್ಗೇ ಇಂದ ಅದನ್ನ ರಿಪೇರಿ ಮಾಡದೆ ನನ್ನ ಹಿಂದೆ ಮುಂದೆ ತಗರುಬುಗರಿ ಮಾಡ್ತಾ ಇದ್ದೀರಾ, ಯು ಅನ್‌ಫಿಟ್. ಮೊದಲು ಅಟೆಂಡ್ ಟು ದಟ್ ಯು ಸ್ಟುಪಿಡ್" ಅಂದವರೇ ಮೇಜವಾಗಿ ತಳ್ಳಿಹಾಕಿ, ಕಾರು ತರಿಸಿ, ತಾವೇ ಬಾಗಿಲು ತೆಗೆದುಕೊಂಡು, ಒಳಗೆ ಕುಸಿದು ಇನ್ಸ್‌ಪೆಕ್ಷನ್ ಬಂಗಲೋಗೆ ದೌಡಾಯಿಸಿಬಿಟ್ಟರು. ಕೆ.ರಾಗೆ ಹೇಗೆ ಆಗಿರಬೇಡ! ಕಾದ ಸರಳುಗಳು ಕಿವಿಗಳನ್ನು ಇರಿದಂತಾಗಿ, ಹೊಟ್ಟೆಗೆ ಬೆಂಕಿ ಬಿದ್ದು, ಬೆನ್ನು ಮೇಲೆ ಚಾಟಿ ಏಟುಗಳನ್ನು ಬಾರಿಸಿದಂತಾಗಿ, ಕಣ್ಣೀರು ಸುರಿಸುತ್ತ, ದಾಪುಗಾಲು ಹಾಕಿ ಧಾವಿಸಿದ ರಾಮಸ್ವಾಮಿ ಸ್ಟೋರ್ ರೂಮಿನ ಕತ್ತಲೆ ಮೂಲೆಗೆ ನುಗ್ಗಿ, ಮುಸುಗನ್ನು ಕಿತ್ತೆಸೆದು ಜನರೇಟರಿಗೆ ಕೆಟ್ಟ ಪೋಲಿ ಮಾತು ಬೈದು ಗುರಿ ಇಟ್ಟು ಝಾಡಿಸಿ ಒದ್ದರು. ನೋಡಿ ಆ ಕ್ಷಣದಲ್ಲಿ, ತಿಂಗಳಿನಿಂದ ಯಾವ ಯಾವ ಯಾರ ಯಾರ ಕೈವಾಡಗಳಿಗೂ ಮಣಿಯದೆ ಹಟ ಹಿಡಿದು ಕೂತಿದ್ದ ಜನರೇಟರ್ರು ಫಿರ್ ಘರ್ ಭಢ ಭಢ ಎಂದು ಘೋರವಾದ ಶಬ್ದ ಮಾಡಿ ಸ್ಟಾರ್ಟ್ ಆಯಿತು. ಆ ಸಂಜೆ ದಿಲ್ಲಿಗೆ ಹೊರಡುವ ಮೊದಲು ಛೀಫ್ ಇಂಜನೀರ್ ಸಾಹೇಬರು, ಸ್ವತಃ ಸಿವಿಲ್ ಆಸ್ಪತ್ರೆಗೆ ತೆರಳಿ, ಕಾಲಿನ ಮಲ್ಟಿಪಲ್ ಫ್ರಾಕ್ಚರುಗಳ ಕಾರಣ ಯಮಯಾತನೆಯಲ್ಲಿದ್ದ ರಾಮಸ್ವಾಮಿಯನ್ನು ತುಂಬು ತೃಪ್ತಿಯಿಂದ ಕಾಂಪ್ಲಿಮೆಂಟಿಸಿದರು.



ನೆನಪಿನಿಂದ ನೆಲಕ್ಕೆ ಇಳಿದು ಮೂಣುಮಲೈಯನ್ನು ಮನಸಾರೆ ಹೊಗಳಿ, 'ಎಷ್ಟು ದಿನ ಗ್ಯಾರಂಟಿ?' ಎಂದು ಕೇಳಿದ್ದಕ್ಕೆ ಆತ ಒಂದು ವೇಳೆ ಮನೆ ಕುಸಿದು ಕೆಡವಿಕೊಂಡು ಬಿದ್ದರೂ ಪಂಪಿನ ಆರೋಗ್ಯಕ್ಕೆ ಏನೇನೂ ಧಕ್ಕೆ ಇಲ್ಲ ಮತ್ತೆ ಕೆಡುವವರೆಗೆ ಅಂತ ಹಟಕಟ್ಟಿ ಕ.ಮಿ.ತ. (ಕನ್ನಡ ಮಿಶ್ರಿತ ತಮಿಳು) ಮಾಡಿದ. ಆತನ ಆ ಸುತ್ತಿಗೆ ಹೊಡೆತಕ್ಕೆ ಪಂಪು ಪೈಪುಗಳ ಜಾಯಿಂಟ್ ಕಳಚಿಕೊಂಡು ಸಣ್ಣಗೆ ಲೀಕ್ ಆಗುತ್ತಿದ್ದ ನೀರಿನ ಬಗ್ಗೆ ನನ್ನ ಗಾಬರಿಯನ್ನು ಗಮನಿಸಿ, "ಅತು ರೊಂಬ ಮೈನರ್ ಪ್ರಾಬ್ಲಮ್ಮು ಸಿಮೆಂಟು ಕೊಡು ಸಾರ್" ಎಂದ. ಎಲ್ಲಿಂದ ತರಲಿ? ಸಿಮೆಂಟು! ಮಟಮಟ ಮಧ್ಯಾಹ್ನ; ಭಾನುವಾರ! "ತಾಳು ಸಾರ್ ದಾರ ಕೊಡು ಸಾರ್ ಸುತ್ತಿ ಸುತ್ತಿ ಕೊಡುವೆ" ಎಂದ. ಪಂಚೆ ಅಂಚಿನಿಂದ ಎಳೆದುಕೊಟ್ಟೆ ಲೊಚಗುಟ್ಟಿದ.

ಈ ಎಲ್ಲ ರಿಪೇರಿಗೆ ಅದೆಷ್ಟು ಕೇಳುತ್ತಾನೋ ಏನೋ ಅಂತ ಸ್ವಲ್ಪ ಗಾಬರಿಯಿಂದಲೇ ಕೇಳಿದೆ. "ನೂರಾಮೂವತ್ತೈದು ರೂಪಾಯಿ ಅರವತ್ತೈದು ಪೈಸೆ" ಅಂದ. ಬವಳಿ ಬಂದ ಹಾಗಾಯಿತು. ಆದರೆ ಚೂಪಾಗಿ ಚಿಲ್ಲರೆ ಮಾಡಿದನೋಡಿ ಬಾಟಾ ಆಸಾಮಿ. ಅಷ್ಟು ದುಡ್ಡು ಅದನ್ನ ಹೇಗೆ ಲೆಕ್ಕ ಹಾಕಿದ? ಬಂದಿದ್ದಕ್ಕೆ ನಿಂತಿದ್ದಕ್ಕೆ ನೋಡಿದ್ದಕ್ಕ ಮುಟ್ಟಿದ್ದಕ್ಕೆ ಸ್ಪೆಸಿಫಿಕ್ ರೇಟು ಹಾಕೇ ಹಾಕುತ್ತಾನೆ. ಬಿಡ್ತಾನೆಯೇ? 'ಅದ್ಯಾಕಪ್ಪಾ ಅಷ್ಟೊಂದು' ಅಂದೆ. ಅನ್ನಬಾರದಾಗಿತ್ತು.

"ಇದೇನು ಪಡಪೋಶಿ ಕೆಲಸವಾ? ಕಾಲೇಜಿನಲ್ಲಿ ಪಾಠ ಹೇಳಿದ ಹಾಗಾ? ಅಥವಾ ಮೂತಿ ನೋಡಿ ಇಂಜಕ್ಷನ್ ಚುಚ್ಚಿ ಕಾಸು ಕಿತ್ಕೊಳೋ ರೀತೀನಾ? ಇಲ್ಲವೆ, ಸುಳ್ಳು ತಟವಟ ಮಾಡಿ ಕಾಸು ಕಮಾಯಿಸಿ ಮನೇ ಮುಂದೆ ಬೋರ್ಡು ಸಿಕ್ಕಿಸಿಕೊಳ್ಳೋ ಹಾಗಾ? ಅಥವಾ ಮೂರಕ್ಕೆ ತಂದು ಆರಕ್ಕೆ ಮಾರೋ ದಳ್ಳಾಳಿಗಳ ಲೆಕ್ಕಾನಾ? ಇಲ್ಲ ಲಂಚಾನಾ? ಖುಷುವತ್ತಾ? ಕೈ ಕೆಲಸ ಇದು ನೋಡು ಸಾರ್ ಬುದ್ದೀ ಕೆಲಸ" ಅಂತ ಎಲ್ಲಾ ಪ್ರೊಫೆಷನ್ನುಗಳನ್ನೂ ಒಟ್ಟಿಗೆ ಗುಡಿಸಿ ಚರಂಡಿಗೇ ತಳ್ಳಿ ತಾನೊಬ್ಬನೇ ಉದ್ಧಾರಕ, ನಿಸ್ಪೃಹ ಅಂತ ಬಾವುಟ ಎತ್ತಿ ಮಹಾಕೆಟ್ಟ ಸ್ಪೀಡಿನಲ್ಲಿ ತಮಿತ (ತಮಿಳು ಮಿಶ್ರಿತ ತಮಿಳು) ಮಾಡಿದ.

ಇದೇ ಥರಾ ಆಯಿತಂತೆ ಸಾರ್, ಲಂಡನ್ನಿನಲ್ಲಿ ಕಳೆದ ವರ್ಷ. ಹಳೇ ಕಾಲದ ನೀರಿಂಜನ್ನು ನಿಂತೇ ಹೋಯಿತಂತೆ ರೈಲ್ವೇಯಾರ್ಡಿನಲ್ಲಿ. ಯಾರ್‍ಯಾರು ಏನೇನು ಮಾಡಿದರೂ ಜಗ್ಗಲಿಲ್ಲ. ಕಡೇಗೆ ಎಲ್ಲಾ ಇಂಜಿನೀರುಗಳೂ ತಲೆ ಮೇಲೆ ಕೈಹೊತ್ತು ಯೋಚನೆ ಮಾಡೀ ಮಾಡೀ ಸಾಗದೆ, ಅಂಥ ಇಂಜನ್ ಹಿಂದೆ ನಡೆಸುತ್ತಿದ್ದು ಹದಿನೈದು ವರ್ಷದ ಹಿಂದೆಯೇ ರಿಟೈರ್ ಆಗಿದ್ದ ಹಳೇ ಮೆಕ್ಯಾನಿಕ್ ಮುದುಕನನ್ನು ಹಿಡಿತರಿಸಿ ಇಂಜನ್ ಒಳಗೆ ಬಿಟ್ಟರು! "ನೀನು ಎಷ್ಟು ಬೇಕಾದರೂ ಛಾರ್ಜು ಮಾಡು ಆದರೆ ಇದನ್ನ ಸರಿಮಾಡಿಕೊಡು ಷಂಟಿಂಗೇ ನಿಂತುಹೋಗಿದೆ" ಅಂತ ಅವನ ಎದುರಿಗೆ ಹಲುಬಿದಾಗ ಅವನ ತರ್ಜನಿಯಿಂದ ಅಲ್ಲಿ ಇಲ್ಲಿ ಮುಟ್ಟಿ ತಟ್ಟಿ ಟಕ್ ಟಕ್ ಮಾಡಿ, ನಾಲಿಗೆಯನ್ನ ತನ್ನ ಬಾಯಿಯೊಳಗೇ ಅಲ್ಲಾಡಿಸುತ್ತ, ಮೂಗು ಅರಳಿಸಿ, ಎಡಗಿವಿಯಲ್ಲೊಮ್ಮೆ ಬೆರಳಾಡಿಸಿ, ಬಲಗಣ್ಣನ್ನು ಮೆಳ್ಳೆ ಮಾಡಿ, ದೊಡದಾಗಿ ಶೀನಿ, ನಂತರ ಸಣ್ಣದಾಗಿ ಒಮ್ಮೆ ಕೆಮ್ಮಿ, ಒಂದೇ ಒಂದು ಕೆಟ್ಟ ಪೋಲೀ ಮಾತು ಬೈದು ಕಲ್ಲಿದ್ದಲ ಗಟ್ಟಿಯಿಂದ



ನಿರ್ದಿಷ್ಟವಾದ ಒಂದು ಕಡೆಗೆ ಸಣ್ಣ ಕ್ರಾಸ್ ಬರೆದು, ಇಂಜಿನ್ ನಡುಗುವ ಹಾಗೆ ದೊಡ್ಡ ಸುತ್ತಿಗೆಯಿಂದ ಅಲ್ಲಿ ಒಂದು ದನಬಡಿತ ಬಡಿದ. ತಕ್ಷಣ ಸುತ್ತಿಗೆ ಮುರಿಯಿತು ಇಂಜಿನ್ ಹೊರಟಿತು. ಎಲ್ಲರಿಗೂ ವಿಪರೀತ ಆಶ್ಚರ್ಯ. ಸಿಕ್ಕಾಪಟ್ಟೆ ಹೊಗಳಾಟ! "ಅದೆಲ್ಲ ಇರಲಿ ರಿಪೇರಿ ಮಾಡಿದ್ದಕ್ಕೆ ನೂರು ಪೌಂಡು ಮಡಗಿ" ಅಂತ ಕೈಯಲ್ಲೇ ಬರೆದು ಬಿಲ್ಲು ಕೊಟ್ಟನಂತೆ! "ಅಲ್ಲಯ್ಯಾ ಒಂದೇ ಒಂದು ಏಟು ಬಡಿದಿದ್ದಕ್ಕೆ ನೂರು ಪೌಂಡು ಅಂದರೆ ವಿಪರೀತ ದುಬಾರಿ ಆಯ್ತಲ್ಲಪ್ಪಾ ಅಂದದ್ದಕ್ಕೆ ಅವನೂ ನಮ್ಮ ಮೂಣುಮಲ್ಲೈ ತರಹಾನೆ ಸಿರ್‍ರಂತ ಕೆರಳಿ "ಅಲ್ರೀ ಸುತ್ತೆ ಏಟಿಗೆ ಒಂದೇ ಪೌಂಡು ರೀ ಛಾರ್ಜು. ಆದರೆ ಎಲ್ಲಿ ಕರೆಕ್ಟಾಗಿ ಎಲ್ಲಿ ಹೊಡೀಬೇಕೂಂತ ನಿರ್ಧರಿಸಿದ ತಲೇ ಬೆಲೆ ತೊಂಭತ್ತೊಂಭತ್ತು ಪೌಂಡು ರೀ ಛಾರ್ಜು ಮೊದಲು ಮಡಗಿ" ಅಂತ ಕೈ ನೀಡಿದನಂತೆ.

ನನ್ನದೂ ಅದೇ ಆಯಿತು ಕಥೆ. ಇಂಡಿಯನ್ ವರ್ಷನ್ ಅಷ್ಟೆ! ನೇಟಿವ್ ಸೊಗಡು ಸೇರಿ, ಮುಂದಿನ ಅರ್ಧಗಂಟೆಯವರೆಗೆ ಘನಘೋರವಾದ ಚೌಕಾಶಿ ಮಾಡಿದ ನಂತರ, ಅರವತ್ತೈದು ಪೈಸೆ ಬಿಟ್ಟುಕೊಡಲು ಒಪ್ಪಿದ.

ಇನ್ನೂ ಲೀಕ್ ಆಗುತ್ತಿದ್ದ ನೀರನ್ನು ತೋರಿ "ಇದನ್ನ ಯಾವಾಗಪ್ಪ ರಿಪೇರಿ ಮಾಡಿಕೊಡುತ್ತೀಯೆ ನನ್ನ ಮುದ್ದು ಮೂಣುಮಲೈ" ಅಂತ ಬೆಣ್ಣೆ ಹಚ್ಚಿದೆ. ಬಿರಿದ ಪೈಪನ್ನು ನಿಟ್ಟಿಸಿ ನೋಡಿದ ರಿಪೇರಿ ಸಾರ್ವಭೌಮ, "ಅದೆಂಥ ಚಿಲ್ರೆ ಕೆಲಸ. ಈ ಜುಜುಬಿ ಕೆಲಸಕ್ಕೆ ನಮ್ಮಂಥವರು ಬೇಕಾ? ಯಾವ ಹಳ್ಳೀ ಮಂಗ ಬೇಕಾದರೂ ಯಾಕೆ ನೀನು ಕೂಡ ರಿಪೇರಿ ಮಾಡಬಹುದು ಸಾರ್. ಸಿಮೆಂಟು ತಂದು ತೆಳ್ಳಗೆ ಕಲಸಿ ಒತ್ತಿ ಹಚ್ಚಿ, ಅದರ ಮೇಲೆ ಸಿಮೆಂಟಿನ ಧೂಳು ಹಚ್ಚು ಸಾರ್" ಅಂದವನೇ, ಮತ್ತೆ ಹಿಂದಿರುಗಿಯೂ ನೋಡದೆ, ಮೂಣುಮಲ್ಲೈ ಮುತ್ತಮ್ಮನತ್ತ ನಡೆದುಬಿಟ್ಟ.

ಲಾಜಿಕ್ಕು!

–ಎಚ್. ಗೋಪಾಲಕೃಷ್ಣ

ಸಿನೇಮಾ ತಾರೆ
ಅಂದರೆ ಸೌಂದರ್ಯ
ಸೌಂದರ್ಯ ಅಂದರೆ
ಲಕ್ಸ್ ಸಾಬೂನು
ಲಕ್ಸ್ ಸಾಬೂನು
ಅಂದರೆ ಐದ್ರೂಪಾಯಿ
ಸಿನಿಮಾ ತಾರೆ ಅಂದರೆ
ಐದ್ರೂಪಾಯಿ




ಯುಗಾದಿ ಸಂದೇಶಗಳು

-ಆರತಿ



ನರಸಿಂಹರಾವ್

ಕಾಫಿಗೆ ಸಕ್ಕರೆ ಬೇಕೇ ಬೇಡವೇ
ನಿರ್ಧರಿಸಲೊಲ್ಲ ಎಂದು ಜನ ನಕ್ಕರೆ
ಹೊಸವರುಷ ಹೊಸನಿರ್ಧಾರ ತರಲಿ ನಿಮಗೆ
ನಿರ್ಧರಿಸಿರಿ ಇಂದೇ – ಒಂದೇ ಚಮಚ
ಸಕ್ಕರೆ



ಮನಮೋಹನ ಸಿಂಗ್

ಹೊಸ ವರುಷವು ಹೊಸ ಹರುಷವ ತರುವುದು
ಬೇಡವು ನಿಮಗೆ ಶಂಕಿ
ಐ.ಎಂ.ಎಫ್. ನೀಡಿದ ಸಾಲದ ಪತ್ರಕೆ
ಬೀಳಲಿ ಬೇಗನೆ ಬೆಂಕಿ



ವಿ.ಪಿ. ಸಿಂಗ್

ಯುಗಾದಿ ಶುಭಾಶಯ ರಾಜಾ ಸಾಹೇಬ್ರೆ
ಇನ್ಮುಂದೆ ಮಾತ್ರ ದಳ ವಿಭಜಿಸ್ಬೇಡಿ
ಅಣುಗಿಂತ ದಳ ಚಿಕ್ಕದಾದ್ರೆ
ಸ್ಫೋಟ ಆಗುತ್ತೆ ಅನ್ನೋದ್ ಮರೀಬೇಡಿ



ಬಿಲ್‌ಕ್ಲಿಂಟನ್

ಬಾಸ್ನಿಯಾಗೆ ಸೇನೆ ಕಳಿಸಿದ್ರು
ಅಂತೇನ್ ನಮಗ್ ಕೋಪ ಇಲ್ಲರಿ
ನೀವೇನ್ ಮಾಡ್ತೀರ್ ಕೋಳಿಕುಕ್ರು
ಪಾಪ-ನಿಮ್ಮ ಜಮಾನ್ರು-ಹಿಲ್ಲರಿ



ಮೋನಿಕಾ ಸೆಲ್ಲೆಸ್

ಸ್ಟೆಫೀನೇ ಆಗ್ಲಿ, ಗ್ಯಾಬೀನೇ ಆಗ್ಲಿ
ಎಲ್ಲಾರೂ ಕಾಲ್ ಕಸ ನಿಂಗೆ
ಕೂಗೋದ್ ಮಾತ್ರ ನಿಲ್ಸು ತಾಯಿ
ಗಂಟ್ಲು ಅರಿದೋಗೋ ಹಂಗೆ



ವೀರಪ್ಪ ಮೊಯ್ಲಿ

ಯುಗಾದಿ ಶುಭಾಶಯಗ್ಳು ಮೊಯ್ಲಿ ರಾಯರ್ಗೆ
ವಿಶ್ವಾಸ ಏಕರೀತಿ ಇರ್ಲಿ ನಿಮ್ಮ ನಮ್ದು
ಫೈಂಟ್ ಸಂಪು ಮಾತ್ರ ಆಗ್ದಿರ್ಲಿ ಮುಂದೆ
ಹೇಗಿದ್ರೂ ಏರ್‌ಬಸ್ ಮಿನಿಷ್ಟ್ರಿ ನಿಮ್ದು



ಪ್ರಿನ್ಸ್ ಚಾರ್ಲ್ಸ್

ಶುಭಾಶಯಗ್ಳು ಚಾರ್ಲ್ಸ್ ರಾಜಕುಮಾರ್ರೆ
ಒಳ್ಳೇದಾಗ್ಲಿ ನಿಮ್ಗೆ, ಡಯಾನಕ್ಕಾಪ್ರಿಗೆ
ಫೋನ್ ಮಾಡೋವಾಗ್ ಮಾತ್ರ ಹುಷಾರಾಗಿರಿ
ಕೆಮೇಲಿಯಾ ಪಾರ್ಕರ್ ಬೋಲ್ಸ್‌ರವರ್ಗೆ

ಫ್ರೂಟ್ ಲಾಯರಿ

–ನಾಗಶ್ರೀ ಸೂರಿ

ಪರಮಾತ್ಮನಿಗೆ ಅವತ್ತು ದೇವತೆಗಳ ಮೇಲೆ ಎಂದೂ ಇಲ್ಲದ ಕೋಪ ಬಂದಿತ್ತು.

ಅಲ್ಲಿ, ತಾನೇನೋ ಹೇಳಿದ್ದು ನಿಜ, ಏಕಾದಶಿ ದಿನ ಸತ್ತವರನ್ನು, ಪುಣ್ಯಕ್ಷೇತ್ರಗಳಲ್ಲಿ ಪ್ರಾಣಬಿಟ್ಟೋರನ್ನ ಯಾವುದೇ ರೀತಿಯ ತೊಂದರೇನೂ ಕೊಡದೀರ ಸ್ವರ್ಗದೊಳಕ್ಕೆ ಬಿಡಬಹುದು ಅಂತ. ಆದರೆ ಅದು ಸುಮಾರು ಸಾವಿರ ವರ್ಷಗಳ ಹಿಂದಿನ ಮಾತು. ಈ ನಡುಮಧ್ಯೆ ಸ್ಥಿತಿಗಳು ಬದಲಾಯಿಸಿರುತ್ತವೆ, ಸ್ವರ್ಗದ ಬಾಗಿಲಿಗೆ ಬರೋ ಜನಗಳು ಮುಂಚಿನ ಥರಾ ಇರೊಲ್ಲ, ಸ್ವಲ್ಪ ವಿಚಾರಿಸಿ ಒಳಗೆ ಬಿಡೋದು ವಾಸಿ ಅಂತ ಒಬ್ಬರಿಗಾದರೂ ಹೊಳೆಯೋದೇ ಬೇಡವೇ? ಈಗ ನೋಡಿ, ಹೊಡಕೋತಾ ಇದಾರೆ ಊರ ಲಫಂಗಗಳೆಲ್ಲ ಸ್ವರ್ಗದೊಳಕ್ಕೆ ನುಗ್ಗಿ ಬಿಟ್ಟಿದಾರೆ, ಹಳಬರಿಗೆ ಔಷಧಕ್ಕೆ ಬೇಕೂ ಅಂದ್ರೂ ಒಂದು ಚಮಚಾ ಸೋಮರಸ ಸಿಗತಾ ಇಲ್ಲ ಈ ಹೊಸಬರುಗಳ ಗಲಾಟೇಲಿ, ಇನ್ನ ಆ ಅಪ್ಸರೆಯರ ಗತಿಯೋ .... ಗೋವಿಂದ! ಹಾಡು ಹಗಲಲ್ಲೇ ಮಾನವಾಗಿ ಓಡಾಡೋ ಹಾಗಿಲ್ಲ, ಅಂತೆಲ್ಲಾ.

ಸರಿ ಇನ್ನ ಇವರುಗಳನ್ನ ನಂಬಿಕೊಂಡರೆ, ಅಷ್ಟೆ – ಸ್ವರ್ಗಾನ ನಾಕೇ ದಿನದಲ್ಲಿ ಗಬ್ಬೆಬ್ಬಿಸಿ ಬಿಡತಾರೆ. ಇದಕ್ಕೆ ಇರೋದು ಒಂದೇ ಇಲಾಜು – ಪ್ರತಿಯೊಂದಕ್ಕೂ, ಅದು ಎಷ್ಟೇ ಸಣ್ಣ ವಿಷಯಾನೆ ಇರಲಿ, ಏನು ಮಾಡಬೇಕು ಅಂತ detailed procedures ನ establish ಮಾಡಿ ಅವನ್ನ ಬರೆದಿಡಬೇಕು. ಅದನ್ನ ಮಕ್ಕೀ ಕಾ ಮಕ್ಕೀ follow ಮಾಡಿ, ಸ್ವಂತ ಬುದ್ಧಿ ಅಂತ ಅನ್ನೋದು ಏನಾದರೂ ಇದ್ರೆ ಅದನ್ನು ಬೇರೆ ಕಡೆ ಉಪಯೋಗಿಸಿಕೊಳ್ಳಿ. ಇಲ್ಲಿ ಬೇಡ ಅಂತ ಖಡಾ ಖಂಡಿತವಾಗಿ ದೇವತೆಗಳಿಗೆ ಹೇಳಿ ಬಿಡಬೇಕು.

ಅದನ್ನು ಮಾಡಬೇಕು ಅಂತಲೆ ಪರಮಾತ್ಮ ನಾಕು ದಿನ ಹಗಲು ರಾತ್ರಿ ಕೂತುಕೊಂಡು ಇನ್ನೂರು ಪೇಜಿನಷ್ಟು ದಪ್ಪದ್ದು Procedure book ಅನ್ನೋದನ್ನ ಬರೆದು ಮುಗಿಸಿದ. ಭೂಲೋಕದಲ್ಲಿ ಎಂಥಾ ಪುಣ್ಯದ ಕೆಲಸ ಮಾಡಿದ್ರೆ ಎಂಥಾ ಸ್ವರ್ಗದಲ್ಲಿ ಎಷ್ಟು ದಿನ ಸುಖದ ಪ್ರಾಪ್ತಿ, ಇಲ್ಲ. ಅದೇ ಯಾವುದಾದ್ರೂ ಪಾಪದ ಕೆಲಸ ಅಂತ ಮಾಡಿದ್ರೆ ಯಾವ ನರಕದಲ್ಲಿ ಎಷ್ಟು ದಿನ ಅಂತನ್ನೋದರ ಬಗ್ಗೆ ಸಂಬಂಧಪಟ್ಟ ದೇವತೆಗಳು ತಲೆಕೆಡಿಸಿಕೊಳ್ಳೊ ಅಗತ್ಯಾನೆ ಆಗ ಬರೊಲ್ಲ. ಪುಸ್ತಕ ನೋಡು, ಸ್ವರ್ಗಕ್ಕೆ ಕಳಿಸು. ಅಥವಾ ಪುಸ್ತಕ ನೋಡು, ನರಕಕ್ಕೆ ದಬ್ಬು. ಮಸಲಾ ಇದುವರೆಗೂ ಎಲ್ಲರಿಗೂ ಗೊತ್ತಿತ್ತು, ಬಾಯಾರಿಕೆ ಅಂತ ಬಂದು ನೀರು ಕೇಳಿದೋರಿಗೆ ಅದನ್ನು ಕೊಡದೆ ಹೋದವರಿಗೆ ಹಲ್ಲಿ ಜನ್ಮ ಕಟ್ಟಿಟ್ಟದ್ದು ಅನ್ನೋದು. ಆದರೆ ಯಾರಿಗೂ ಸರಿಯಾಗಿ ಗೊತ್ತಿರಲಿಲ್ಲ, ಅದು ಎಷ್ಟು ದಿನ ಅನ್ನೋದು ಈಗ ಆ ಸಂಬಂಧವಾಗಿ



ಯಾರಿಗೂ ಯಾವ ಸಂದೇಹಾನು ಬರೋ ಹಾಗಿಲ್ಲ ಹಲ್ಲಿ ಜನ್ಮದ ಅವಧಿ ಎಂಟು ತಿಂಗಳು, ಹದಿನಾರು ದಿವಸ.

ಈ ಪುಸ್ತಕ ಬರೀತಾ ಇದ್ದ ಹಾಗೇನೆ, ಅದರ ಇನ್ನೊಂದು ಉಪಯೋಗಾನೂ ಪರಮಾತ್ಮನಿಗೆ ಹೊಳೀತು. ಎಷ್ಟೇ ವಿವರವಾಗಿ Procedure ಗಳನ್ನು ಬರೆದಿದ್ರೂನೂವೆ, ಅದನ್ನು ಎಲ್ಲ ಸಂದರ್ಭದಲ್ಲೂ ಸಂಬಂಧಪಟ್ಟ ದೇವತೆಗಳು ಸರಿಯಾಗಿ ಓದಿಕೊಂಡಿರುತ್ತಾರೆ ಅನ್ನೋದು ಏನು ಗ್ಯಾರಂಟಿ? ಹಾಗಾಗಿ ಸ್ವರ್ಗಕ್ಕೆ ಹೋಗಬೇಕಾದವರನ್ನ ನರಕಕ್ಕೆ, ನರಕಕ್ಕೆ ಹೋಗಬೇಕಾದವರನ್ನ ಸ್ವರ್ಗಕ್ಕೆ ಅಂತ ಒಂದೊಂದು ಸಲ ಆಗಬಹುದಲ್ಲವೆ? ಅಂಥಾ ಸಮಯದಲ್ಲಿ ಆ aggrieved party ಗಳು, ಅಥವಾ ಅವರ ಪರವಾಗಿ ಯಾರಾದರೂ ಸರಿಯೆ, ಸ್ವಾಮಿ, ನಿಮ್ಮ ನಿರ್ಣಯ ಈ ಪುಸ್ತಕದಲ್ಲಿ ಬರೆದಿರೋದಕ್ಕೆ ವಿರೋಧವಾಗಿದೆ ಅಂತ ಸಾಬೀತು ಮಾಡಿ, ಬಚಾವಾಗಬಹುದು. ಅಂದರೆ ಏನಾಯಿತು? ಎಲ್ಲಾ ಪುಸ್ತಕದ ಪ್ರಕಾರ to the letter. ಯಾವುದೇ ಬಗೆಯ interpretation ಗೂ ಅವಕಾಶ ಇಲ್ಲ, ಯಾರಿಗೂ.

ಈ ಹೊಸ ಪದ್ಧತಿ ಜಾರಿಗೆ ಬಂದು ಸುಮಾರು ಎರಡು ವರ್ಷನೆ ಆಗಿದೆ ಅಂತೀನಿ. ಈಗ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ. ಮುಂಚೆ ಬರುತ್ತಿದ್ದಷ್ಟು ದೂರುಗಳು ಈಗ ಬರುತ್ತಿಲ್ಲ.

ಆ ದಿನ ಗುರುವಾರ ನ್ಯಾಯದೇವತೆ ಮುಂದೆ ಸುಮಾರು ಜನಗಳೇ ಸೇರಿದ್ದರು. ಎಲ್ಲರ ಮುಖದಲ್ಲೂ ಏನೋ ಒಂದು ಥರಾ ಕಳವಳ, ಒಂದು ಥರಾ ಆತಂಕ ಸ್ವರ್ಗಕ್ಕೆ ಹೋಗತೀವೊ ಇಲ್ಲಾ ಏನಾದ್ರೂ ಎಡವಟ್ಟು ಅಂತ ಆಗಿ ನರಕದಲ್ಲಿ ಒದ್ದಾಡಬೇಕೋ ಏನೋ ಅಂತ.

ದಿನದ ಮೊದಲನೆ ಕೇಸು, ವಿಧಾನ ಸೌಧದಲ್ಲಿ ಕೆಲಸ ಮಾಡ್ತಾ ಇದ್ದ ಶಂಕರಪ್ಪನದು. ಅವನಿಗೆ ಸುಮಾರು ನಲವತ್ತು ವರ್ಷ. ಹಿಂದಿನ ದಿನ ರಸ್ತೇನಲ್ಲಿ ಎಲ್ಲೋ ನೋಡತಾ ಹೋಗ್ತಾ ಇದ್ದಾಗ ಬಿ.ಟಿ.ಎಸ್. ಬಸ್ಸು ಹೊಡೆದಿತ್ತು. ಹಾಗಾಗಿ ಅವನು ಅವತ್ತು ಅಲ್ಲಿ ಬಂದಿದ್ದು.

ಪ್ರಾಸಿಕ್ಯೂಟರ್‌ದೇವತೆ ಶುರು ಮಾಡಿದ, ಅವನ ವಾದವನ್ನು.

"Your honour, ಭೂಲೋಕದಲ್ಲಿದ್ದಾಗ ಈ ಶಂಕರಪ್ಪ ಮದುವೆಯಾಗಿ ಮಕ್ಕಳು ಮರೀ ಅಂತ ಇದ್ರೂ ಅದೇನೋ ಹಾಳು ಚಪಲಕ್ಕೆ ಬಿದ್ದು ಮೂರು ಹೊತ್ತೂ ರಸ್ತೇಲಿ ಹೋಗೋ ಬರೋ ಹೆಣ್ಣು ಮಕ್ಕಳನ್ನ ನೋಡತಾ ಕಾಲ ಹಾಕತಾ ಇದ್ದ. ಅದೇನೋ ಹೇಳ್ತಾರಲ್ಲ Roadside Romeo ಅಂತಾರಲ್ಲ, ಆ ಥರಾ .... ಒಂದು ದಿನಾನಾದ್ರೂ ಪರಮಾತ್ಮನ ಧ್ಯಾನ ಅನ್ನೋದನ್ನ ಮಾಡಲಿಲ್ಲ"



"ಎಷ್ಟು ವರ್ಷದಿಂದ ನಡೀತಾ ಇತ್ತು. ಈ ವ್ಯಾಪಾರ?" ನ್ಯಾಯದೇವತೆಯ ಪ್ರಶ್ನೆ

“ಹಯ್ಯೋ, ಅದು ಹೆಚ್ಚು ಕಡಿಮೆ ಅವನು ವಯಸ್ಸಿಗೆ ಬಂದಾಗಲಿಂದಲೂ ನಡಕೊಂಡೇ ಬಂದಿದೆ. ಆದರೆ .... ಮದುವೆಗೆ ಮುಂಚೆ ಅವನು ಏನು ಮಾಡತಾ ಇದ್ದ ಅನ್ನೋದನ್ನ ನಾವು ಲೆಕ್ಕಕ್ಕೆ ತೆಗೆದುಕೋತಿಲ್ಲ ಇವನಿಗೆ ಮದುವೆಯಾಗಿ ಇವತ್ತಿಗೆ ಹದಿನೈದು ವರ್ಷ ಆಯಿತಲ್ಲ, ಆವಾಗಲಿಂದಲೂ ಇದೇ ಕಥೆ. ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸಲ ಈ ಥರಾ ಆಗಿದೆ ಅನ್ನಬಹುದು”


ನ್ಯಾಯ ದೇವತೆ Procedure book ತೆಗೆದು ನೋಡಿದ ಅಯ್ಯೋ ಅನ್ನಿಸ್ತು ಶಂಕರಪ್ಪನಿಗೆ ಹತ್ತು ವರ್ಷ ನರಕ ಗ್ಯಾರಂಟಿ.

“ಅಲ್ಲಾ ಶಂಕರಪ್ಪ, ಮಾನವ ಜನ್ಮ ಅನ್ನೋದು ಸಿಗೋದು ಬಹಳ ಅಪರೂಪ ಅಂಥದ್ದನ್ನ ಯಾರಾದ್ರೂ ವ್ಯರ್ಥ ಮಾಡಿಕೋತಾರಾ?”

”ನನಗೂ ಅದೇ ಅನ್ನಿಸ್ತು. Your honour. ಯಾವುದೇ ಜನ್ಮದ ಪುಣ್ಯ, ಮನುಷ್ಯನಾಗಿ ಹುಟ್ಟಿದ್ದೇನೆ, ಇನ್ನು ಮುಂದಿನ ಜನ್ಮದಲ್ಲಿ ಹ್ಯಾಗೋ ಏನೋ, ಇರೋವಾಗಲೇ ಚಾನ್ಸು ಬಿಡದೆ ಮಜಾ ಮಾಡಿಬಿಡಬೇಕೂ ಅಂತಲೇ ನನಗೂ ...... ಹಾಳಾದ್ದು ಧೈರ್ಯಸಾಲದು, ಜತೆಗೆ ಕೈಯಲ್ಲಿ ಕಾಸು ಬೇರೆ ಇಲ್ಲ .... ಇಲ್ಲದೇ ಇದ್ದಿದ್ರೆ ....”

“ಥತ್, ಬಾಯಿ ಮುಚ್ಚೋ, ಲಫಂಗ. ನಾನು ಹೇಳಿದ್ದು ಆ ಅರ್ಥದಲ್ಲಲ್ಲ. .... ಆಯಿತು ನಿನಗೆ ಇದಕ್ಕೆ ರೂಲ್ಸ್ ಪ್ರಕಾರ ನರಕದಲ್ಲಿ Crank case oil ನಲ್ಲಿ ಹತ್ತು ವರ್ಷ ಹುರೀಬೇಕು. ......ಜತೆಗೆ, ಮಾಡಿದ ಪಾಪಕ್ಕೆ ಪಶ್ಚಾತ್ತಾಪ ಪಡದೀರ ನಾನು ಮಾಡಿದ್ದೇ ಸರಿ ಅಂತ ವಾದ ಮಾಡಿದ್ದಕ್ಕೆ ಇನ್ನೆರಡು ವರ್ಷ both sentences run concurrently ...... ಆಯಿತು, ಯಾರಲ್ಲಿ .... ಇವನ್ನ ಎಳಕೊಂಡು ಹೋಗಿ ನರಕದಲ್ಲಿ ದಬಿ ಬಿಟ್ಟು ಬನ್ನಿ ...... ”

“Objection your honour” ಅಲ್ಲೇ ನೆರೆದಿದ್ದ ಮನುಷರ ಮಧ್ಯದಿಂದ ಒಡಕು ಧ್ವನಿ.



ನ್ಯಾಯದೇವತೆಗೆ ಆಶ್ಚರ್ಯವಾಯಿತು. ಈ ಲಾಗಾಯ್ತಿನವರೆಗೂ ಯಾರೂ ತಾನು ಹೇಳಿದ್ದಕ್ಕೆ ಎದುರು ಹೇಳಿರಲಿಲ್ಲ. ಇದ್ಯಾವನು ಈವತ್ತು ಈ ಥರಾ ಮಾತಾಡ್ತಾ ಇರೋದು, ಅನ್ನೋ ಅರ್ಥದಲ್ಲಿ bench clerk ಕಡೆಗೆ ತಿರುಗಿದ.

ಬೆಂಚ್ ಕ್ಲಾರ್ಕ್ ಫೈಲು ತೆಗೆದು ನೋಡಿ, "ಇವನಾ ಸಾರ್? ಇವನು ಕೃಷ್ಣಪ್ಪ ಅಂತ ಸಾರ್, ಲಾಯರಾಗಿದ್ದೋನು ...... ಥರಲೆ ಅಂದ್ರೆ ಥರಲೆ ಸಾರ್, ನಂಬರ್ ಒನ್ ಥರಲೆ ......"

"ವಿಚಾರಣೆಗೆ ಮುಂಚೇನೆ ಈ ಥರಾ Prejudiced opinion ಕೊಡಬಾರದು ಅಂತ ನಿಮ್ಮ ಸ್ಟಾಫಿಗೆ ಸ್ವಲ್ಪ ಅಡ್ವಯಸ್ ಮಾಡಿ, Your honour ...."

"Objection sustained, ಆಯಿತು. ಈಗ ಶಂಕರಪ್ಪನ್ನು ನರಕಕ್ಕೆ ಕಳಿಸೋಕ್ಕೆ ಆಗೊಲ್ಲ ಅಂತ ಯಾವ ಆಧಾರದ ಮೇಲೆ ಹೇಳ್ತಾ ಇದೀರಿ"

"ಅವನ ಮೇಲಿನ chargesheet ನಲ್ಲಿರೋ ಒಂದೊಂದು ಐಟಮ್ಮನ್ನು ಡೀಟೇಲ್ಲಾಗಿ ನೋಡಿದ್ರೆ ನಿಮಗೇ ಅದು ಗೊತ್ತಾಗುತ್ತೆ, Your honour"

ನ್ಯಾಯದೇವತೆ, ಆಯಿತು, ಅಂತ ತಲೆಯಾಡಿಸಿದ ಮೇಲೆ ಬೆಂಚ್ ಕ್ಲಾರ್ಕ್ ಶುರೂ ಮಾಡಿದ:

"ಮೊದಲನೇ Offence ಉ ...... ಕೆಂಪೇಗೌಡ ರಸ್ತೇನಲ್ಲಿ ಹೋಗತಾ ಇದ್ದ ಹದಿನೆಂಟು ವರ್ಷದ ಹುಡುಗೀನ ನೋಡಿ ರಾಮ, ರಾಮ, ಎಷ್ಟು ಚಂದ ಇದೆ ಅಂತ ಅಂದುದಕ್ಕೆ ಇಲ್ಲಿ ದಾಖಲೆ ಇದೆ "

"ಮತ್ತೆ ಎರಡನೆಯದು ...... ಅದೇ ವಾರದಲ್ಲಿ ಅಲ್ಲೇ ಒಂದು ಸಿನಿಮಾಗೆ ಅಂತ ಟಿಕೆಟ್ಟಿಗೆ ಕ್ಯೂ ನಿಂತಿದ್ದ ಹುಡುಗೀ ಒಬ್ಬಳನ್ನ ನೋಡಿ "ಯಾ ಅಲ್ಲಾ ಕಿತನೀ ಖೂಬ್ ಸೂರತ್ ಕೀ ಚೀಸ್ ಹೈ" ಅಂದ ಅಂತಲೂ ದಾಖಲೆ ಇದೆ".

"ಮೂರನೆಯದು ಬ್ರಿಗೇಡ್ ರೋಡ್‌ನಲ್ಲಿ ಚಟ್ಟೀಗಾರ ಹುಡುಗೀನ್ನ ನೋಡಿ, Jesus, what a beautiful chick ಅಂತ ಅಂದಿದ್ದು ಇಲ್ಲಿ ಬರದಿದೆ"

"ನಾಕನೆಯದು .... ಅಂತ ಬೆಂಚ್ ಕ್ಲಾರ್ಕ್ ಹೇಳೋಕ್ಕೆ ಶುರು ಮಾಡತ್ಲೂ ಕೃಷ್ಣಪ್ಪನೇ ಮಧ್ಯ ಬಾಯಿ ಹಾಕಿ ಹೇಳಿದ

"ಸಾಕು ಸಾಕು – ಎಲ್ಲಾ ಕೇಸೂ ಓದೋ ಅಗತ್ಯ ಇಲ್ಲ. ಹೆಚ್ಚು ಕಡಿಮೆ ಸಾವಿರ ಇಂಥಾ incident ಆಗಿದೆ ಅಂತ ನೀವೇ ಹೇಳಿದ್ರಿ. ಎಲ್ಲಾ ಸಂದರ್ಭದಲ್ಲಿ ಕೂಡ ಅವನ ಡಯಲಾಗ್ ಹೀಗೇ ಇತ್ತು ತಾನೆ? ಆ ಆಧಾರದ ಮೇಲೆ ನಾನು ಹೇಳ್ತೀನಿ, ಕೃಷ್ಣಪ್ಪನಿಗೆ ಸಿಗಬೇಕಾಗಿದ್ದು ನೀವು ಹೇಳೋ ಥರಾ ನರಕಾ ಅಲ್ಲ ಮೋಕ್ಷ ಮೋಕ್ಷ, Liberation, ಇಲ್ಲಾ ಸ್ವಲ್ಪ ಚೌಕಾಸಿ ಅಂತ ಅಂದ್ರೆ ಕಡೇ ಪಕ್ಷ ನೂರು ವರ್ಷ ಸ್ವರ್ಗದಲ್ಲಿ ಸುಖ ...... "



“ಅದು ಹಾಗೆ ಕೃಷ್ಣಪ್ಪನವರೇ? ಇಂಥ ಲಫಂಗನಿಗೆ ಮೋಕ್ಷ? ಸ್ವರ್ಗ? ”

“ನಿಮ್ಮ Procedure book ನ ತೊಂಭತ್ತನೆ ಪೇಜು ತೆಗೆದು ನೋಡಿ ಪರಮಾತ್ಮ ಏನು ಹೇಳಿದಾನೆ ಅಂತ ..... ನನ್ನ ಹೆಸರನ್ನ ನೂರೆಂಟು ಸಲ ನೆನಸಿಕೊಂಡರೆ ಅಂಥವರಿಗೆ ಮೋಕ್ಷ, ಅಥವಾ ಅವರು ಕೇಳೋ ಅಂಥ ಸ್ವರ್ಗದಲ್ಲಿ ನೂರು ವರ್ಷ ಸುಖ ಲಭ್ಯ” ಈಗ ನೀವೇ ಹೇಳಿದ ರೀತೀನಲ್ಲಿ ಶಂಕರಪ್ಪ ನೂರೆಂಟಕ್ಕೂ ಹೆಚ್ಚು ಸಲ ಪರಮಾತ್ಮನ್ನ ನೆನಸಿಕೊಂಡಿದ್ದಾನೆ”

“ಅದು ಯಾವ ಸೀಮೆ ಲೆಕ್ಕ ಕೃಷ್ಣಪ್ಪನವರೇ? ರಾಮು, ಜೀಸಸ್, ಅಲ್ಲಾ ಅಂತ ಬೇರೆ ಬೇರೆ ಹೆಸರನ್ನ ಅಲ್ಲವೇ ಶಂಕರಪ್ಪ ಹೇಳ್ತಾ ಇದ್ದದ್ದು?”

“ಅಲ್ಲೇ ಇರೋದು ನಿಮ್ಮ ಮಿಸ್ಟೇಕ್, Your honour. ಪರಮಾತ್ಮನೆ ಅಪ್ಪಣೆ ಕೊಡಿಸಿಲ್ಲವೇ ನಾನು ಒಬ್ಬನೇ ಆದ್ರೆ ನನ್ನ ಹೆಸರುಗಳು ಹಲವಾರು, ಯಾವ ಹೆಸರಿನಿಂದ ನನ್ನನ್ನ ಕರೆದ್ರೂ ಅದು ನನಗೆ ಮುಟ್ಟುತ್ತೇ ಅಂತ”

ನ್ಯಾಯದೇವತೆಗೆ ಈಗ ಜ್ಞಾಪಕಕ್ಕೆ ಬಂತು ಹೌದು ಅದೇ ಮಾತನ್ನ ಪರಮಾತ್ಮನೆ ಎಷ್ಟೋ ಸಲ ಹೇಳಿ ಹೇಳಿ ಎಲ್ಲರಿಗೂ ಕೊರೆದಿರಲಿಲ್ಲವೇ? ಸಾಲದಕ್ಕೆ ಆ Procedure book ನಲ್ಲೂ ಕೂಡ ಅದನ್ನು ಒಂದು ಕಡೆ ಎಲ್ಲೋ ಬರೆದದ್ದನ್ನು ನೋಡಿದ ನೆನಪು.

“ಆಯಿತು, ಅದನ್ನು ಒಪ್ಪೋಣವಂತೆ. ಆದರೆ ಇವನು ಲಫಂಗತನ ಮಾಡತಿರೋವಾಗ ಪರಮಾತ್ಮನನ್ನ ಜ್ಞಾಪ್ಕಾ ಮಾಡಿಕೊಂಡರೆ ಅದು ಊರ್ಜಿತವಾಗುತ್ಕೆ?”

“ಕಷ್ಟದಲ್ಲಿ ನನ್ನನ್ನು ಜ್ಞಾಪಿಸಿಕೊಳ್ಳೋರು ಭೂಲೋಕದಲ್ಲಿ ಬೇಕಾದಷ್ಟು ಜನ ಇದ್ದಾರೆ. ಆದರೆ ಸಂತೋಷದ ಸಮಯದಲ್ಲಿ ನನ್ನನ್ನ ಎಷ್ಟು ಜನ ಹಾಗೆ ಮಾಡತಾರೆ? ಅದರಿಂದಾಗಿ ಅಂಥೋದನ್ನ ಕಂಡರೆ ನನಗೆ ಪ್ರೀತಿ ಅಂತ ಪರಮಾತ್ಮ ಹೇಳಿರೋದನ್ನ ತಾವು ಮರೆತು ಬಿಟ್ಟ ಹಾಗೆ ಕಾಣತ್ತೆ Procedure book ನ ನೂರ ಮೂವತ್ತನೆ ಪೇಜು ನೋಡಿದ್ರೆ ಇದರ ಬಗ್ಗೆ ದಾಖಲೆ ಇದೆ.”

“ಆಯಿತು ಕೃಷ್ಣಪ್ಪನವರೇ, ಶಂಕರಪ್ಪ ತಗಲೂಫಿ ಕೆಲಸ ಮಾಡಿದ್ರೂನೂವೆ, ಈ ರೂಲ್ಸ್ ಪ್ರಕಾರ ಅವನನ್ನ ನರಕಕ್ಕೆ ಕಳುಹಿಸೋಕ್ಕೆ ಆಗೊಲ್ಲ. ಅಂತೂ ನಿಮ್ಮಿಂದಾಗಿ ಅವನು ಬಚಾವಾದ ಹಾಗಾಯಿತು ...... ಆದ್ರೆ ನಿಮ್ಮನ್ನ ಬಚಾವು ಮಾಡಬೇಕು ಅಂತಂದ್ರೆ ಆ ಪರಮಾತ್ಮನ ಕೈಲೂ ಆಗೊಲ್ಲ ಅಂತ ಕಾಣತ್ತೆ ಯಾಕೇ ಅಂದ್ರೆ ಈ ಚಾರ್ಜ್‌ಶೀಟ್ ಪ್ರಕಾರ .....”



“ಅದು ನೀವು ಹೇಳೋ ಅಗತ್ಯಾನೆ ಇಲ್ಲ. Your honour. ನಾನೇ ಒಪ್ಕೋತಾ ಇದೀನಲ್ಲ. ನನ್ನ ಕಕ್ಷಿಗಾರರ ದುಡ್ಡು ತಿನ್ನತಾ ಇದ್ದೆ, ಕೇಸುಗಳು ಹಿಯರಿಂಗ್‌ಗೆ ಬಂದಾಗ ಚಕ್ಕರ್ ಹಾಕತಾ ಇದ್ದೆ. ಹುಂ, ಇನ್ನೂ ಬೇಕಾದಷ್ಟು ಇದೆ. ಸರಿಯಾಗಿ ನೋಡಿದ್ರೆ, ನಿಂ ರೂಲ್ಸ್ ಪ್ರಕಾರ ನರಕದಲ್ಲಿ ಇಪ್ಪತ್ತು ವರ್ಷ RI ...... ಇಲ್ಲಿ ಬಂದಾಗ ನನಗೆ ಅದೇ

ಭಯಾನೆ ಇತ್ತು. ಆದ್ರೆ ಈಗ ನನಗೆ ಅದು ತಪ್ಪಿದ ಹಾಗಾಯಿತು. ಅದರ ಬದಲು ಈಗ ಹದಿದನಾರು ವರ್ಷ ಸ್ವರ್ಗ ಪ್ರಾಪ್ತಿ''

"ಅದು ಹೇಗೆ ಸಾಧ್ಯ, ಕೃಷ್ಣಪ್ಪನವರೇ?"

"ದಾರುಣವಾದ ಕಷ್ಟದಿಂದ ಮತ್ತೊಬ್ಬರನ್ನು ಪಾರು ಮಾಡಿದರೆ ಅದರ ಪುಣ್ಯದ ಫಲ ಏನಿಲ್ಲಾ ಅಂದರೂ ಹದಿನಾರು ವರ್ಷ ಸ್ವರ್ಗ ಅಂತ ಪರಮಾತ್ಮನೆ ಖುದ್ದಾಗಿ ಹೇಳಿದ್ನಲ್ಲ? ಬೇಕೊ ಅಂತಂದ್ರೆ ನಿಂ ಬುಕ್ಕಲ್ಲಿ ನೂರ ಎಪ್ಪತ್ತೆಂಟನೆ ಪೇಜು ತೆಗೆದು ನೋಡಿ"

"ಅಂಥಾ ಘನಂದಾರಿ ಕೆಲಸ ಅನ್ನೋದು ಯಾವದನ್ನು ಮಾಡಿದ್ದೀನಿ ಅಂತೀರಿ"

ಈ ಲಫಂಗ ಶಂಕರಪ್ಪನ್ನ ನರಕದಿಂದ ಉಳಿಸಿದ್ದು ಎಂಥಾ ಕೆಲಸ ಅಂತ ಆಗುತ್ತೆ, ನಿಮ್ಮ ಲೆಕ್ಕದಲ್ಲಿ ......"

ಈಗ ಪರಮಾತ್ಮ ಆ Procedure book ಗೆ amendment ಬರೀತಾ ಕೂತಿದ್ದಾನೆ.



"ಮೇಯರ್ ಸ್ಥಾನಕ್ಕೆ ಪ್ರಯತ್ನಿಸಿ ಈಗ!"

ರೋಡುಬ್ಬರಗಳ ವೈಖರಿ

ಬಿ.ಜಿ. ರುದ್ರಪ್ಪ

ಕೆಲವು ವರ್ಷಗಳ ಹಿಂದೆ, ರಾಜ್ಯಪಾಲರಾಗಿದ್ದ ಧರ್ಮವೀರರು ಕರ್ನಾಟಕ ಜನತೆಗೆ ಇತ್ತ ಕೊಡುಗೆಗಳು ಎರಡು. ಮೊದಲನೆಯದು ಸರ್ಕಾರಿ ನೌಕರ ವರ್ಗಕ್ಕೆ ವಾರಕ್ಕೆ ಐದು ದಿನ ಕೆಲಸ ಮಾಡುವ ಸೌಲಭ್ಯ. ಎರಡನೆಯದು ರೋಡುಬ ರಗಳು. ನೌಕರರಿಗೆ ಕೊಟ್ಟ ಸೌಕರ್ಯವನ್ನು ಅನಂತರ ಬಂದ ಸರ್ಕಾರ ಎಂದೋ ಹಿಂತೆಗೆದುಕೊಂಡಿತು. ಆದರೆ ಎರಡನೆಯ 'ಸೌಲಭ್ಯ' ಮಾತ್ರ ಮುಂದುವರಿಯುತ್ತಾ ಬಂದಿದೆ.

ಟೈಮು, ಲೇಟು, ಫ್ರೆಷು, ಮುಂತಾದ ಇಂಗ್ಲೀಷ್ ಪದಗಳನ್ನು ನಾವು ಹೇಗೆ ಕನ್ನಡಕ್ಕೆ ಅಳವಡಿಸಿಕೊಂಡಿರುವ ಹಾಗೆ, ರೋಡ್ ಹಂಪ್ಸ್ ಮತ್ತು ರಂಬ್ಲರ್ಸ್ ರೋಡುಬ್ಬರಗಳಿಗಿಂತ ನಮ್ಮ ಜನಕ್ಕೆ ಹೆಚ್ಚು ಪರಿಚಯ. ಏತಕ್ಕೆಂದರೆ, ರಾಜ ದ ಪ್ರತಿಯೊಬ್ಬ ಪಟ್ಟಣವಾಸಿಗೂ, ಅದರಲ್ಲೂ ಬೆಂಗಳೂರಿಗನಿಗೂ, ಮನೆ ಬಿಟ್ಟರೆ ಸಾಕು ಮುಖ್ಯರಸ್ತೆ, ಬೈಲೇನು, ಪಾರ್ಕು, ಎಲ್ಲೆಲ್ಲಿಯೂ ರೋಡುಬ್ಬರಗಳ ಸ್ವಾಗತ.

ನಮ್ಮ ರಾಜ್ಯದ ಜನಕ್ಕೆ ಶಿಸ್ತು ಎಂದರೆ ಅಲರ್ಜಿ. ಎಲ್ಲಿಯಾದರೂ, ಹಾಲ್ಟ್ ಬೋರ್ಡ್ ಇರಲಿ, ಅಥವಾ ನಿಧಾನವಾಗಿ ಚಲಿಸಿ ಎಂಬ ಸೂಚನೆ ಇರಲಿ, ಅಲ್ಲಿ ವೇಗ ಹೆಚ್ಚಿಸುವ ಚಪಲ. ಈ ರೀತಿಯ ಅಶಿಸ್ತಿನಿಂದ ಒಂದು ಸುಪ್ತ ರೀತಿಯ ಸಂತೋಷ. ಹೀಗೆ ಮುನ್ನುಗ್ಗಿ ಕೈಕಾಲು ಮುರಿದುಕೊಳ್ಳುವರಲ್ಲಾ ಅಥವಾ ಸಾಯುವರಲ್ಲಾ ಎಂಬ ಕಾತರತೆಯಿಂದ ಪಾಪ ಧರ್ಮವೀರರು ಕರ್ನಾಟಕಿಗಳ ಮೇಲಿನ ಪ್ರೀತಿಯಿಂದ ರೋಡುಬ್ಬರಗಳನ್ನು ಸೃಷ್ಟಿಸಿದರು.

ಸರ್ಕಾರ, ಕಾರ್ಪೋರೇಷನ್, ಮತ್ತು ಮುನಿಸಿಪಾಲಿಟಿಗಳು, ಜನ ಸೇವೆ ಮಾಡುವ ಈ ಸದವಕಾಶವನ್ನು ಉಪಯೋಗಿಸಿಕೊಳ್ಳಲು ಹಿಂಜರಿಯುವುದೇ? ಚಾನ್ಸ್ ಸಿಕ್ಕಿದ್ದೇ ಸಾಕು ಎಲ್ಲೆಂದರಲ್ಲಿ, ರೋಡುಬ್ಬರಗಳು, ಮತ್ತು ರಂಬ್ಲರುಗಳು ಉದ್ಭವಿಸಿದುವು. (ಅಂದ ಹಾಗೆ ರಂಬ್ಲರುಗಳೆಂದರೆ ಒಂದೇ ಕಡೆಯಲ್ಲಿ ಎರಡು ಮತ್ತು ಹೆಚ್ಚು ರೋಡುಬ್ಬರಗಳನ್ನು ಹಾಕುವುದು.)



ಇಂಡಿಯನ್ ಸ್ಟ್ಯಾಂಡರ್ಡ್ಸ್ ಇನ್ಸಿಟ್ಯೂಟ್ ಇವುಗಳ ಬಗ್ಗೆ ಗಮನಹರಿಸಿಲ್ಲವಾದ್ದರಿಂದ, ಯಾವ ಇಂಜಿನಿಯರ್‌ಗೆ ಹೇಗೆಹೊಳೆಯುತ್ತದೆಯೋ ಅದೇ ಸ್ಟ್ಯಾಂಡರ್ಡ್. ಇದರಿಂದಾಗಿ ಕುವೆಂಪು ತಮ್ಮ "ಬೊಮ್ಮನ ಹಳ್ಳಿ ಕಿಂದರಿಜೋಗಿ" ಯಲ್ಲಿ ನಾನಾ ರೀತಿಯ ಇಲಿಗಳನ್ನು ವರ್ಣಿಸಿರುವಂತೆ, ನಾವು ಅನೇಕ ವಿಧವಾದ ರೋಡುಬ್ಬರಗಳನ್ನು ಕಾಣಬಹುದು, ಅನುಭವಿಸಬಹುದು ಕೂಡ. ಸಾಹೇಬರ ಆಜ್ಞೆಯ ಮೇರೆಗೆ, ಇಂಜಿನಿಯರ್‌ಗೆ ಇಷ್ಟವಿಲ್ಲದ ರೋಡುಬ್ಬರ ತುಂಬಾ ಚಿಕ್ಕದು. ಕಂಡೂ ಕಾಣದೇ ಇರುವಂತೆ,

ಕುವೆಂಪುವರ ಪುಟ್ಟಿಲಿಯಂತೆ. ಕಾರು ಮತ್ತು ಇತ್ಯಾದಿ ವಾಹನಗಳು ಇವನ್ನು ಲಕ್ಷಿಸುವುದೇ ಇಲ್ಲ. ಮನಸ್ಶಾಂತಿ ಇಲ್ಲದ ಇಂಜಿನಿಯರು ಸೃಷ್ಟಿಸುವ ರೋಡುಬ್ಬರಗಳ ಗಾತ್ರ ದೊಡ್ಡದು. ಎತ್ತರದಲ್ಲಿ ಮತ್ತು ಅಗಲದಲ್ಲಿ ವಾಹಕ ಎಚ್ಚರ ತಪ್ಪಿದರೆ ಅವರ ಬೆನ್ನೋ ಅಥವಾ ವಾಹನದ ಸ್ಪ್ರಿಂಗೋ ಮುರಿಯುವ ಸಂಭವ ಹೆಚ್ಚು. ಈ ರೀತಿಯ ಉಬ್ಬರಗಳಿಗೆ ಮನೆಹಾಳು ರೋಡುಬ್ಬರಗಳೆಂದು ಕರೆಯಬಹುದು. ಆತನಿಗೆ ಸಮಾಜದ ಮೇಲೆ ಕೋಪ ಇನ್ನೂ ಹೆಚ್ಚಾದರೆ, ರಂಬ್ಲರುಗಳು ಸೃಷ್ಟಿಸಲ್ಪಡುತ್ತವೆ. ಬಿಡದಿಯ ಹತ್ತಿರ ರಸ್ತೆ ಓವರ್‌ಬ್ರಿಡ್ಜ್ ಮುಂದೆ ಹತ್ತು ಉಬ್ಬರಗಳುಳ್ಳ ರಂಬ್ಲರ್‌ನ್ನು ಕಟ್ಟಿ ಪ್ರಾಯಶಃ ಪ್ರಪಂಚ ದಾಖಲೆಯನ್ನೇ ಸ್ಥಾಪಿಸಿರಬಹುದು. ಇತ್ತೀಚೆಗೆ ಇದನ್ನು ತೆಗೆದು ಹಾಕಿದ್ದಾರೆ. ಸಣ್ಣಲಿ ಮತ್ತು ಹೆಗ್ಗಣಗಳ ಮಧ್ಯೆ ಅನೇಕ ರೀತಿಯ ಇಲಿಗಳಿರುವಂತೆ, ನಾನಾ ರೂಪುಗಳ, ಸೈಜುಗಳ ರೋಡುಬ್ಬರಗಳನ್ನು ನಮ್ಮ ರಸ್ತೆಗಳಲ್ಲಿ ಅನುಭವಿಸಬಹುದು.

ಈ ಉಬ್ಬರಗಳನ್ನು ಹಾಕುವ ಸ್ಥಳವನ್ನು ನಿರ್ಧರಿಸುವ ರೀತಿ, ಸ್ವಾರಸ್ಯಕರ. ಯಾವುದಾದರೂ ಎರಡು ರಸ್ತೆಗಳ ಕ್ರಾಸಿಂಗ್‌ನಲ್ಲಿ ಒಂದು ಆಕ್ಸಿಡೆಂಟ್ ಆಯಿತೆಂದು ಇಟ್ಟುಕೊಳ್ಳಿ ತಕ್ಷಣವೇ ಇವುಗಳು ಕಂಡು ಬರುತ್ತವೆ ಯಾವುದಾದರೊಂದು ರಸ್ತೆಯಲ್ಲಲ್ಲ ಕ್ರಾಸಿಂಗ್‌ನ ನಾಲ್ಕು ಕಡೆಗಳಲ್ಲೂ. ಸ್ಕೂಲುಗಳಿರುವ ಸ್ಥಳಗಳಲ್ಲಿ ಉಬ್ಬರಗಳನ್ನು ಕೂರಿಸುವುದು ಸಾಮಾನ್ಯ. ಒಂದು ರೀತಿಯಲ್ಲಿ ಸರಿಯೂ ಕೂಡ. ಅಲ್ಲಿಯೂ ಕೂಡ ಕೆಲವು ಕಡೆ ವೈಶಿಷ್ಟ್ಯ ಕಂಡು ಬರುತ್ತದೆ.

ಸ್ಕೂಲಿನ ಮೈನ್‌ಗೇಟಿನ ಇಬ್ಬದಿಗಳಲ್ಲಿ ಇವುಗಳನ್ನು ಹಾಕುವುದು ಸರಿಯಾದ ರೀತಿ. ಆದರೆ ಹಲವೆಡೆ ರೋಡುಬ್ಬರ, ಒಂದೇ ಕಡೆ ಕಾಣಬರುತ್ತದೆ. ಮಕ್ಕಳನ್ನು ರಕ್ಷಿಸುವ ಈ ವ್ಯವಸ್ಥೆ ಒಂದೇ ಕಡೆ ಇದ್ದರೆ ಸಾಕೆಂದೇನೋ? ಕಾರಣ ಗೊತ್ತಿಲ್ಲ. ಇನ್ನೊಂದು ಗಣನೀಯ ಅಂಶವೆಂದರೆ ಈ ರೋಡುಬ್ಬರಗಳ ಭಾಗ ಬಡವರ ಸ್ಕೂಲುಗಳಿಗೆ ಸಾಮಾನವಾಗಿ ಸಿಗುವುದಿಲ್ಲ.

ಗೌರವ ಸೂಚಿತಾರ್ಥವಾಗಿಯೋ ಏನೋ ಈ ನಡುವೆ, ದೇವಸ್ಥಾನ, ಮಸೀದಿ, ಚರ್ಚುಗಳ ಹತ್ತಿರ, ಈ ಉಬ್ಬರಗಳು ಕಾಣಬರುತ್ತಿವೆ. ದೇವರ ಧ್ಯಾನದಲ್ಲಿ ಅನ್ಯಮನಸ್ಕರಾಗಿ ಭಕ್ತಾದಿಗಳು ರಸ್ತೆಗಡ್ಡಲಾಗಿ ಬಂದಲ್ಲಿ ಲಾರಿ ಮತ್ತು ಕೆ.ಎಸ್.ಆರ್.ಟಿ.ಸಿ ಬಸ್ಸುಗಳಿಂದ ರಕ್ಷಣೆ ಪಡೆಯಲೆಂದೋ ಏನೋ. ಅಥವಾ ಈ ಮಂದಿರಗಳ ಮುಂದೆ ಬರುವ ವಾಹಕರು ಅವರವರ ನಂಬಿಕೆಗೆ ಅನುಸಾರವಾಗಿ ವಾಹನಗಳನ್ನು ನಿಧಾನಿಸಿ ಕ್ಷಣಮಾತ್ರ ದೇವರನ್ನು ಜ್ಞಾಪಿಸಿಕೊಳ್ಳಲೆಂದೋ ಏನೋ, ಆದರೆ ಮಾತ್ರ ಮರೆತು ಗಾಡಿಗಳನ್ನು ನಿಧಾನಿಸದೆ ಹೋದ ವಾಹಕರು (ದ್ವಿಚಕ್ರ) ಬಿದ್ದ ನಿದರ್ಶನಗಳು ಅನೇಕ.

ಒಂದೊಂದು ಸಲ ಕ್ಲಬ್ಬಿಗೆ ಹೋಗುವವರಿಗೂ ರೋಡುಬ್ಬರಗಳ ಸಂರಕ್ಷಣೆ ದೊರೆತಿದೆ. ಖ್ಯಾತ ತಾತಾ ವಿಜ್ಞಾನ ಮಂದಿರದ ವಿಜ್ಞಾನಿಗಳು ತಮ್ಮ ಮನೋವಿಕಾಸಕ್ಕಾಗಿ, ರಾಷ್ಟ್ರೀಯ ಹೆದ್ದಾರಿಯನ್ನು ದಾಟಿ ಕ್ಲಬ್ಬಿಗೆ ಹೋಗಬೇಕು. ಅವರಿಗೆ ಅಪಾಯವಾಗದಿರಲೆಂದು ಇಕ್ಕೆಡೆಗಳಲ್ಲೂ ಈ ಹೆದ್ದಾರಿಗೆ ಭಾರಿ ರೋಡುಬ್ಬರಗಳನ್ನು ಅಳವಡಿಸಲಾಗಿದೆ. ಭಾರವಾದ



ಟ್ರಕ್ಕುಗಳು ಈ ರಸ್ತೆಯಲ್ಲಿ ಓಡಾಡುವುದರಿಂದ, ಮತ್ತೆರಡು ರೋಡುಬ್ಬರಗಳು ತಾವಾಗಿಯೇ ಉದ್ಭವವಾಗಿರುವುದು ಗಮನೀಯ. ಇತ್ತೀಚೆಗೆ ವಿಜ್ಞಾನಿಗಳಿಗೆ ಯಾವ ರೀತಿಯ ಅಪಾಯವಾಗದಿರಲೆಂದು ಒಂದು ವಾಕಿಂಗ್ ಓವರ್ ಬ್ರಿಡ್ಜ್ ಕಟ್ಟಿದ್ದಾರೆ. ಆದರೆ ರೋಡುಬ್ಬರಗಳು ಮತ್ತು ಅವುಗಳ ಮರಿಗಳು ಇನ್ನೂ ಇವೆ.

ಸಾಮಾನ್ಯವಾಗಿ ಹೆದಾರಿಗೆ ಸೇರುವ ಕ್ರಾಸ್‌ರೋಡುಗಳಿಗೆ ಸ್ಪೀಡ್ ಬ್ರೇಕರ್ ಹಾಕುವುದು ಪದ್ಧತಿ. ಆದರೆ, ಇಲ್ಲಿ ಮಾತ್ರ ಇದಕ್ಕೆ ವ್ಯತಿರಿಕ್ತ ಕಾರಣ ಹಾಕಿದವರಿಗೇ ಗೊತ್ತು.

ರೋಡುಬ್ಬರ ಹಾಕಿದ ಮೇಲೆ, ಸ್ವಲ್ಪ ದೂರದಲ್ಲಿ ವಾಹಕರಿಗೆ ಸುಲಭವಾಗಿ ಕಾಣುವಂತೆ ಒಂದು ಸೂಚನೆಯ ಬೋರ್ಡ್ ಹಾಕಬೇಕು. ಮುಕ್ಕಾಲು ಪಾಲು ಇವುಗಳು ಇಲ್ಲವೇ ಇಲ್ಲ. ಇದ್ದ ಕೆಲವು ಕಡೆ ಅವು ತೀರ ಹತ್ತಿರದಲ್ಲಿದ್ದು ಸ್ಪೀಡ್ ಕಮ್ಮಿ ಮಾಡಲು ಅವಕಾಶವಿಲ್ಲ ಹಾಗೂ ನಿಧಾನ ಮಾಡಲು ಪ್ರಯತ್ನ ಪಟ್ಟರೆ, ಒಂದಿನಿಂದ ಮತ್ತೊಂದು ವಾಹನದಿಂದ ಗುದ್ದಲ್ಪಡುವ ಭಯ.


ಈ (ಅ) ವ್ಯವಸ್ಥೆಗಳಿಂದ ಒಂದು ಅನುಮಾನ ಬರುತ್ತೆ. ರೋಡುಬ್ಬರಗಳನ್ನು ಹಾಕುವವರಿಗೂ, ಆಟೋ ಗ್ಯಾರೇಜಿನವರಿಗೆ, ಡಾಕ್ಟರುಗಳಿಗೂ ಒಂದು ಅಲಿಖಿತ ಒಪ್ಪಂದವಿದೆಯೋ ಎಂದು. ಮರೆತು ಯಾರಾದರೂ ತಮ್ಮ ವಾಹನಗಳನ್ನು ಸ್ಪೀಡ್ ಕಮ್ಮಿ ಮಾಡದೆ ಬಿಟ್ಟರೆ, ಸ್ಪ್ರಿಂಗೋ ಮತ್ತಿತರ ಭಾಗವೋ ಮುರಿಯುವ ಸಂಭವ ಹೆಚ್ಚು. ಇದರಿಂದ ಗಾರೇಜಿಗಳಿಗೆ, ಬಿಸಿನೆಸ್ಸು ಹೆಚ್ಚು. ಆಕಸ್ಮಾತ್ ಗಾಡಿಗಳಿಗೆ ಏನೂ ಆಗದೆ ಹೋದರೆ, ಪ್ರಯಾಣಿಕರ ಬೆನ್ನು ಮೂಳೆ ಜಾರುವ (ಸ್ಲಿಪ್ ಡಿಸ್ಕ್) ಸಂಭವಗಳಿವೆ. ಆಗ ಡಾಕರುಗಳಿಗೆ ಪ್ರಾಕ್ಟೀಸ್ ಜಾಸ್ತಿ.

ಮುಖ್ಯವಾಗಿ ಈ ತಡೆಗಳನ್ನು ಹಾಕಿರುವುದು ಜನ ಕಂಟಕ ಬಸ್ಸು ಮತ್ತು ಲಾರಿಗಳು ನಿಧಾನವಾಗಿ ಹೋಗಲೆಂದು. ಆದರೆ ಈ ವಾಹನಗಳು ರೋಡುಬ್ಬರಗಳನ್ನು ಗಮನಿಸುವುದೇ ಇಲ್ಲ. ಈ ವಾಹಕ ಕುಲಕ್ಕೇ ವೈಯಕ್ತಿಕ ನಷ್ಟವೇನಿಲ್ಲ. ವಾಹನಗಳನ್ನು ಸರಿಪಡಿಸಲು ಮಾಲೀಕರಿದ್ದಾರೆ. ಪ್ರಯಾಣಿಕರನ್ನು ಗುಣಪಡಿಸಲು ಡಾಕ್ಟರುಗಳು ಇದ್ದಾರೆ.

ಹೀಗೆ ರೋಡುಬ್ಬರಗಳಿಂದ, ಅನೇಕರಿಗೆ ಅಂದರೆ, ಕಂಟ್ರ್ಯಾಕ್ಟರುಗಳಿಗೆ, ಆ ಮೂಲಕ ಇಂಜಿನಿಯರುಗಳಿಗೆ (ಕೆಲವರು ಮಾತ್ರ), ಗ್ಯಾರೇಜುಗಳಿಗೆ, ಮತ್ತು ಡಾಕ್ಟರುಗಳಿಗೆ ಅಷ್ಟೇ ಅಲ್ಲ ಪೆಟ್ರೋಲ್ ಡೀಲರುಗಳಿಗೂ ಇದರಿಂದ ಲಾಭ. ಹೇಗೆಂದರೆ ಪ್ರತಿಯೊಂದು ರೋಡುಬ್ಬರದ ಹತ್ತಿರ ಸ್ಪೀಡ್ ಕಮ್ಮಿ ಮಾಡಬೇಕು. ಗೇರು ಚೇಂಜು ಮಾಡಬೇಕು. ಇದರಿಂದ ಪೆಟ್ರೋಲು ಹೆಚ್ಚು ಖರ್ಚಾಗುತ್ತೆ. ಪರೋಕ್ಷವಾಗಿ ಪರದೇಶಗಳಿಗೂ ಲಾಭ. ಏತಕ್ಕೆಂದರೆ ದೇಶ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುತ್ತದೆ. (ಆಮದು ಮಾಡಿಕೊಳ್ಳಲು ಅಂತಹ ಕಷ್ಟವೇನಿಲ್ಲ, ಪ್ರಪಂಚದಲ್ಲಿ ಸಾಲ ಕೊಡುವವರು ಬೇಕಾದಷ್ಟಿದ್ದಾರೆ.)



ರೋಡುಬ್ಬರಗಳ್ ಗೆಲ್ಗೆ!



ಕೃಪೆ - ಪಂಚ್

ಚಕ್ರವರ್ತಿ ವಜ್ರ

–ಅ.ರಾ.ಸೇ

ಪಾರ್ಟ ಡೆಡ್ ನಿಜ ಆದರಾ ಗ್ರೇಟಾರ್ಟು ಡೆಡ್ಡೇ?

[ಅಪರಂಜಿಯ ಐವತ್ತೊಂದನೆಯ ಯುಗಾದಿ ಸಂಚಿಕೆಗೆ ಅದರ ಆರಂಭಕಾಲದ ಕನ್ನಡ ಸಾಹಿತ್ಯ ಪ್ರಪಂಚವನ್ನು ಕುರಿತು ಶ್ರೀ ಸೇಶೇಕು ಅವರು ಬರೆದ ಲೇಖನ ಸಾಕಷ್ಟು ಗಮನ ಸೆಳೆದಿದೆ. ಈ ಸಂಚಿಕೆಗೂ ಅದೇ ರೀತಿಯ ಸಂಶೋಧನ ಲೇಖನವನ್ನು ಬರೆದು ಕಳಿಸಲು ಶ್ರೀಯುತರನ್ನು ಕೇಳಿಕೊಂಡಿದ್ದೆವು. ಆಕರ ಗ್ರಂಥಗಳ ಅನುಪಲಬ್ಧಿಯ ದೆಸೆಯಿಂದಾಗಿ ಅದು ಅಸಾಧ್ಯವೆಂದು ಅವರು ಬರೆದರು. ನಮ್ಮ ಒತ್ತಾಯದಿಂದಾಗಿ ಅವರು ತಮ್ಮ ಪತ್ರವ್ಯವಹಾರವೊಂದನ್ನು ಮಾತ್ರ ಕಳಿಸಿದ್ದಾರೆ. ಪಾಲಿಗೆ ಬಂದದ್ದೇ ಪಂಚಾಮೃತವೆಂದು ನಾವು ಅದನ್ನೇ ಪ್ರಕಟಿಸುತ್ತಿದ್ದೇವೆ. –ಸಂಪಾದಕ]

ಇಂದ

ಡಾ॥ ಸೇಶೇಕು,

ಸಂಶೋಧನ ವಿದ್ಯಾರ್ಥಿ

ಆಕಾಶಗ್ರಾಮ (ಕರ್ನಾಟಕ)

ಪ್ರಿಯ ವಿಲ್ ಎಡ್ಮಾಂಟನ್,

ನಿಮ್ಮ ಪತ್ರ ಕೈಸೇರಿ ಅಪರಿಮಿತ ಆಶ್ಚರ್ಯವುಂಟಾಗಿದೆ. ನನ್ನ ಸಂಶೋಧನೆಯನ್ನು ಗಮನಿಸುವವರು ಅಲಾಸ್ಕಾದಲ್ಲಿಯಾದರೂ ಇರುವರೆಂಬ ಒಂದು ಆನಂದ ನನ್ನದಾಗಿದೆ. ಕವಿಕುಲಲಾಮನ ಬಗೆಗೆ ಇಲ್ಲಿ ಯಾವ ಆಸಕ್ತಿಯೂ ಇಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ ಇಲ್ಲಿ, ಎಲ್ಲ ಕಡೆಯಿಂದ, ಯಾವುದರಲ್ಲೂ ಆಸಕ್ತಿಯಿಲ್ಲ–ದುಡ್ಡೊಂದನ್ನು ಬಿಟ್ಟು.

ಆದರೆ ನನ್ನ ಮಾತೃ ವಿಶ್ವವಿದ್ಯಾಲಯವಾದ ಫುಜಿಯಾಮ ವಿಶ್ವವಿದ್ಯಾಲಯ ನನಗೆ ಒಂದು ಪ್ಲಾಸ್ಟಿಕ್ ಚೀಲವನ್ನು ಕಳಿಸಿದೆ. ಕನ್ನಡದಲ್ಲಿ ಅಚ್ಚಾದ ಕೆಲವು ಬಿಲ್‌ಗಳು ಅದರಲ್ಲಿವೆ. ಕೆಲವು ಮಹಾಪುರುಷರ ಛಾಯಾಚಿತ್ರಗಳೂ ಇವೆ. ಬುದ್ಧ, ಮಹಾವೀರ, ಮೊದಲಾದ ಕೆಲವರ ಚಿತ್ರಗಳನ್ನು ಗುರುತಿಸಬಹುದು. ಅವುಗಳೊಡನೆ ಒಂದು ಕಟ್ಟು ಇದೆ. ತೆಂಗಿನ ನಾರಿನಿಂದ ಕಟ್ಟಿದ ಈ ಕಾಗದಗಳ ಕಂತೆಯಿಂದ ಕೆಳಕಂಡ ವಿಷಯಗಳನ್ನು ಸಂಗ್ರಹಿಸಿದ್ದೇನೆ.



ಪ್ರತಿಜ್ಞೆ: ಚಕ್ರವರ್ತಿ ವಜ್ರನಿಗೆ ಸಂಬಂಧಿಸಿದ ಲೇಖನವನ್ನು ಬರೆಯುತ್ತೇವೆ.

ಚಕ್ರವರ್ತಿ ವಜ್ರನು ಯಾರು? ನಮಗೆ ಗೊತ್ತಿಲ್ಲ. ಅವನ ಹೆಸರು ಮಾತ್ರ ಗೊತ್ತಿದೆ. ಅವನು ಹೇಳಿದ ಕೆಲವು ಮಾತುಗಳು ಹೀಗಿವೆ:

(ಅ) 'ಕೆಸರೇ ಕಮಲವಲ್ಲ, ಹೊಲಸೇ ಹಾಸ್ಯವಲ್ಲ'.

(ಆ) ನಾನು ಭೀಮಸೇನ ಅಲ್ಲ. ದುರ್ಯೋಧನನೂ ಅಲ್ಲ. ನಾನು ನಾನೇ ಚಕ್ರವರ್ತಿ ವಜ್ರ. ಇದನ್ನು ಮಧ್ಯಮ ವ್ಯಾಯೋಗ ಅನ್ನು. ಈ ಅಪ್ಪ ಯಾರು ಅಂತ ಆ ಮಗನಿಗೆ ಗೊತ್ತಿಲ್ಲವಾದರೂ ಆ ಮಗ ಯಾರು ಅಂತ ಅಪ್ಪನಿಗೆ ಗೊತ್ತು.

ಇದು ನಮಗೆ ಬಿಡಿಸಲಾರದ ಒಗಟು.

ಇವನು ರತ್ನನೇ? ಕನ್ನಡದಲ್ಲಿ ಪ್ರಸಿದ್ಧ ಪುರಾತನ ಕವಿಯಾದ 'ರತ್ನ'ನಿಗೆ ಪುರುಷ ಸರಸ್ವತಿ ಪ್ರತ್ಯಕ್ಷನಾದನೆಂದು ಹೇಳುವ ಆರನೆಯ ಮುನ್ನುಡಿಯ ಮೂವತ್ತೊಂಬತ್ತನೆಯ ಪುಟದಲ್ಲಿ ಹೇಳಿದೆ. ಅವನು ಭಾಮಿನಿಯ ಮಾನರಕ್ಷಕನಾದ ಎಂದೂ ಅಲ್ಲಿ ಹೇಳಿದೆ. ಇದು 'ಡ್ಯಾಂಸೆಲ್ ಇನ್ ಡಿಸ್ಟ್ರೆಸ್'ನ ಕನ್ನಡ ರೂಪಾಂತರವಾಗಿರಲಾರದು. ಏಕೆಂದರೆ ಸುಮಾರು ಸಾವಿರದ ಒಂದುನೂರು ವರ್ಷಗಳ ಕೆಳಗೆ ವೃತ್ತಗಳಲ್ಲಿ ಬರೆಯುತ್ತಿದ್ದ ರತ್ನನಿಗೆ ಆಗ ಇನ್ನೂ ಒಂದು ರೂಪವನ್ನೇ ತಾಳದ ಇಂಗ್ಲಿಷಿನ ಇಪ್ಪತ್ತನೆ ಶತಮಾನದ ಒಂದು ಜನಪ್ರಿಯ ಪ್ರತಿಮೆ ಗೊತ್ತಿರುವುದು ಅಸಂಭವ.

ಆದರೆ ವಜ್ರವು ನವರತ್ನಗಳಲ್ಲಿ ಒಂದು. ಈ ರತ್ನನೇ ವಜ್ರನಾಗಿರಬಾರದೇಕೆ? ಇನ್ನು ಚಕ್ರವರ್ತಿಗಳು ನಾಮಮಾತ್ರರಾಗಿದ್ದ ಕಾಲದಲ್ಲಿ, ಇಷ್ಟ ಬಂದಂತೆ ವರ್ತಿಸುತ್ತಿದ್ದ ರಾಜಕಾರಣಿಗಳು, ಪತ್ರಿಕೆಗಳ ದೊರೆಗಳು ಮತ್ತು ಕೆಲಸ ಮಾಡಿಸಿಕೊಳ್ಳಲು ಆರಿಸಿದ ಬಲಿಪಶುವನ್ನು "ರಾಜ" ಎಂದು ಕರೆಯುತ್ತಿದ್ದ ಕಾಲವದು. ಆದುದರಿಂದ ಚಕ್ರವರ್ತಿ ವಜ್ರನು ರತ್ನರಾಜನೋ ಅಥವಾ ರಾಜರತ್ನನೋ ಆಗಿರುವ ಸಂಭವವಿದೆ.

ಪುರುಷ ಸರಸ್ವತಿ ಯಾರು? ಕನ್ನಡದ ಪುರಾತನ ಕವಿಗಳು ಯಾವ ಮತೀಯರು, ಅವರು ಶೈವರೇ ವೈಷ್ಣವರೇ, ಹಳೇ ಮೈಸೂರಿನವರೇ, ಉತ್ತರ ಕರ್ನಾಟಕದವರೇ, ಕಾವ್ಯ ಬರೆದರೇ ಇಲ್ಲವೇ, ಅವರು ಮಹಾ ಕವಿಗಳೇ, ಅಲ್ಲವೇ ಎಂಬ ಜಿಜ್ಞಾಸೆ ನಡೆಯುತ್ತಿತ್ತು – ಇಪ್ಪತ್ತನೆಯ ಶತಮಾನದ ಮಧ್ಯದಲ್ಲಿ. ಇದು ರಾಷ್ಟ್ರೀಯ ಪ್ರಜ್ಞೆಗೆ ವಿರೋಧವೆಂದು ಕೆಲವರು ಹೇಳುತ್ತಿದ್ದರು. ಶತಮಾನದ ಅಂತ್ಯದಲ್ಲಿ ಲೇಖಕನು ತಮ್ಮ ಜಾತಿಯವನಾಗಿದ್ದರೆ ಜನಪರನೆಂದು, ಬೇರೆ ಜಾತಿಯವನಾದರೆ ಜನವಿರೋಧಿ ಎಂದೂ ಕರೆಯುತ್ತಿದ್ದರು.



ಆದರೆ ಇವನು ಪುರುಷನೆಂಬ ಹೆಸರಿರುವುದರಿಂದ ಗಂಡಸು ಎಂದೂ, ಸರಸ್ವತಿ ಎಂದಿರುವುದರಿಂದ ಹೆಂಗಸು ಎಂದೂ ಅನುಮಾನವು ಬರುವಂತಹ ಹೆಸರನ್ನು ಹೊಂದಿದವನು. ಗಂಡು ಶಾರದೆ ಎಂಬ ಒಬ್ಬ ಹಳೆಯ ಕನ್ನಡ ಕವಿಯಿದ್ದನೆಂದು ಕೆಲವರು

ಹೇಳುತ್ತಾರೆ. ಐರೋಪ್ಯ, ಅಮೇರಿಕ್ಯ, ಇತ್ಯಾದಿ ಲೇಖಕರನ್ನು ಪೂರಾ ಚೋರತನ ಮಾಡಿದವರನ್ನು, ಆಧುನಿಕರೆಂದೂ ಕರೆಯುತ್ತಿದ್ದ ಪ್ರಸಂಗಗಳನ್ನು ಕನ್ನಡ ಸಾಹಿತ್ಯ ಚರಿತ್ರಕಾರನಾದ ಮಿಲೋಸೆವಿಕ್ ಸ್ಕೋಪಾ ಹೇಳುತ್ತಾನೆ. ಆದ್ದರಿಂದ ಈ ಚಕ್ರವರ್ತಿ ವಜ್ರನು, ಭಾರತೀಯ ಎಂದು ಧೈರ್ಯವಾಗಿ (in spirit) ಹೇಳಬಹುದು. ಈತನು ಭಾರತೀಯ ಸಂತನೊಬ್ಬನ ಅನುಯಾಯಿಯಾಗಿದ್ದುದರಿಂದ, ಭೀಮನೆಂಬುವನ ಆಗ್ರಹಕ್ಕೆ ಪಾತ್ರನಾಗಿದ್ದನೆಂಬ ಅನುಮಾನವೂ ಇದೆ.

ಕಂಟಕಕೆ ಕಡುಡೈನಮೈಟ್ ಎಂದು ಆರಂಭವಾಗುವ ಪದ್ಯದಲ್ಲಿ ಈತನು ಗಣಪತಿಯನ್ನು ಸ್ತುತಿಸಿರುವುದರಿಂದ ಈತನಿಗೆ ಇಂಗ್ಲಿಷ್ ಬರುತ್ತಿತ್ತು ಎಂದು ಹೇಳಬಹುದು.

ರತ್ನನ ಪದಗಳು ಇಪ್ಪತ್ತನೆಯ ಶತಮಾನದ ಮಧ್ಯದಲ್ಲಿ ಬರೆಯಲ್ಪಟ್ಟವೆಂದು ಊಹಿಸಬಹುದಾದ ಈ ಪದಗಳು ಇನ್ನೂ ಹಳೆಯ ಕ್ಯಾಸೆಟ್‌ನಲ್ಲಿವೆ. ಇವನ್ನು ಚಕ್ರವರ್ತಿ ವಜ್ರ ಉರುಫ್ ಪುರುಷ ಸರಸ್ವತಿ ಉರುಫ್ ರಾಜರತ್ನನು ಬರೆದನೆಂದು ಊಹಿಸಿದರೆ ಒಂದು ದೊಡ್ಡ ಪ್ರಶ್ನೆಯೇಳುತ್ತದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಒಬ್ಬ ನೇತಾರರಾದ ಮಹಾತ್ಮಾ ಗಾಂಧಿಯವರು ಪಾನ ನಿರೋಧಕ್ಕೆ ಬಹಳ ಆದ್ಯತೆ ಕೊಟ್ಟಿದ್ದರಷ್ಟೆ.

ಆದರೆ ಈ ರತ್ನನು 'ಬ್ರಮ್ಮ ನಿಂಗೆ ಜೋಡಿಸ್ತೀನಿ ಎಂಡ ಮುಟ್ಟಿದ್ಕೆನ'' ಎಂದು ಬರೆದಿದ್ದಾನಂತೆ. ಕೈ ಹೆಂಡವನ್ನು ಮುಟ್ಟಿದವರನ್ನು ತಮ್ಮ ಮಿತ್ರಕೂಟದಲ್ಲೇ ಸೇರಿಸದವರು ಹೇರಳವಾಗಿ ಇಪ್ಪತ್ತನೆ ಶತಮಾನದ ಅಂತ್ಯದಲ್ಲಿದ್ದರೆಂದು ಸ್ಕೋಪಾ ಹೇಳುತ್ತಾನೆ.

ಈ ರತ್ನನಿಗೆ ಎಂಡ, ಎಂಡ್ತಿ, ಕನ್ನಡ ಪದ್ಗೊಳ್ ಈ ಮೂರೂ ಪ್ರಾಣವಾಗಿದ್ದವಂತೆ. ಇವನು 'ಬುಂಡೆ'ಯನ್ನು ಎತ್ತಿ ಕುಡಿಯುತ್ತಿದ್ದನಂತೆ.

ಈ ಎಲ್ಲಾ ವಿವರಗಳೂ ಸಂಬಂಧವಿಲ್ಲದ್ದೆಂದು ದೂರ ಬಿಡಬಹುದಾಗಿತ್ತು. ಆದರೆ ಇವು ಎಂದರೆ ರತ್ನನ ಪದಗಳು.

(೧) ಉಮರ್ ಖಯಾಮನ ಕೃತಿಚೌರ್ಯ

(೨) ಕೈ ಎಂಬಾತನೇ ಬರೆದದ್ದು

ಎಂಬ ಆಪಾದನೆಗಳಿವೆ. ಇಂಥಾ ಆಪಾದನೆಗಳು ಸಂಶೋಧನೆಗೆ ಗ್ರಾಸ.

ಬೌದ್ಧ ಭಿಕ್ಷು ಈ ಚಕ್ರವರ್ತಿ ವಜ್ರನೆಂಬುವವನನ್ನು ರಾಶಿಯೆನ್ನುವವರು ಭನ್ತೇ ಎಂದು ಕರೆಯುತ್ತಿದ್ದರಂತೆ.



ಅಲ್ಲದೆ ಕವಿಕುಲಲಾಮನು ತನ್ನ ಅಖಿಲ ಕರ್ನಾಟಕ ವಿಫಲ ಪ್ರೇಮಿ ಜನ ಪರಿಷತ್ತಿನ ಅಧ್ಯಕ್ಷನನ್ನು ಕಾರ್ಯದರ್ಶಿಯು ಭನ್ತೇ ಎಂದೂ ಅಧ್ಯಕ್ಷನು ಕಾರ್ಯದರ್ಶಿಯನ್ನು ಭಿಕ್ಕು ಎಂದು ಕರೆಯುತ್ತಿದ್ದನೆಂದೂ ಹೇಳುತ್ತಾನೆ.

ಇವೆರಡಕ್ಕೆ ಸಬಂಧವುಂಟೇ? ಆದರೆ ಪುರುಷ ಸರಸ್ವತಿಯ ರಟ್ಟಿನ ಒಂದೆ ಬುದ್ಧನ ಕತೆಗಳು ಎಂಬ ಪುಸ್ತಕದ ಜಾಹಿರಾತಿದೆ. ಇದರಿಂದ ಈತನು ಬೌದ್ಧನಿರಲೇಬೇಕು.

ಪ್ರತಿಕ್ರಿಯಿಸುವಿರಾ?

ನಿಮ್ಮ ವಿಶ್ವಾಸದ

ಸೇಶೇಕು

ಗೆ–

ಶ್ರೀ ವಿಲ್ ಎಡ್ಮಾಂಟನ್

ಅಲಾಸ್ಕಾ ಯೂನಿವರ್ಸಿಟಿ

ಅಲಾಸ್ಕಾ (ಉತ್ತರ ಅಮೆರಿಕ)

ಹಿಂದಿನಿಂದ ದಯೆಯಿಟ್ಟು ಪರಿಶಿಷ್ಟವನ್ನೋದಿ.

ಇಂದ–

ಡಾ॥ ವಿಲ್ ಎಡ್ಮಾಂಟನ್

ಅಲಾಸ್ಕ

ಪ್ರಿಯ ಸೇಶೇಕು,

ನೀವು ಮಾಡಿರುವ ಕಲ್ಪನೆಗಳು ಹಾಗೂ ಹೀಗೂ ಇವೆ. ಒಂದೇ ಸಂತೋಷವೆಂದರೆ, ನೀವಿರುವ ನಾಡಿನ ವಿಮರ್ಶಕರ ಅಭಿಪ್ರಾಯಗಳಂತೆ ಪೂರ್ವಗ್ರಹಪೀಡಿತವಾಗಿಲ್ಲ. ಈ ಮಾತನ್ನು ಇಪ್ಪತ್ತನೆಯ ಶತಮಾನದ ಕೊನೆಯ ಪಾದದ ವಿಮರ್ಶಕರಿಗೆ ಅನ್ವಯಿಸುವಂತೆ ಹೇಳುತ್ತಿದ್ದೇನೆ.

1. ಚಕ್ರವರ್ತಿ ವಜ್ರನು, ಜಪಾನಿನವನೆಂಬುದು ನಿರ್ವಿವಾದ. ಏಕೆಂದರೆ ಸದ್ಯಕ್ಕೆ ಆ ಕಾಲ ವಿಭಾಗದ ಕೆಲವಾದರೂ ಪೂರ್ಣ ಗ್ರಂಥಗಳು ಅಲಾಸ್ಕಾದಲ್ಲಿವೆ. ಅಲಾಸ್ಕಾ ಜಪಾನಿಗೆ ಹತ್ತಿರ.

2. ಈತನು ಕೃತಿಚೌರ್ಯಮಾಡಿದವನೆಂಬ ಅಪಾದನೆಗಳು ಹಾಸ್ಯಾಸ್ಪದವಾದವು. ಆ ಕಾಲದ ಕೆಲ ವಿಮರ್ಶಕರಿಗೆ ಅಧ್ಯಯನ ಮಾಡದೆ ಸ್ವಕಪೋಲ ಕಲ್ಪಿತ, ಅವಿಚಾರಿತ, ಆಪಾತರಮಣೀಯ ಬುದ್ಧ ವಿಚಾರ (?) ಧಾರೆಯನ್ನು ಹರಿಬಿಡುವುದು, ಕಾಗದ ಕಾರ್ಖಾನೆಗೆ ತನ್ನ ಕೊಳೆಯನ್ನು ನದಿಗೆ ಬಿಡುವಷ್ಟೇ ಸಹಜವಾಗಿತ್ತು.



3. ಈತನು ಬೌದ್ಧ ಭಿಕ್ಷುವೆಂದು ನೀವು ತೀರ್ಮಾನಿಸುವುದು ಸರಿಯಲ್ಲ. ನೀವೇ ಹೇಳುವಂತೆ ಈತನು ಭಾರತೀಯ ಸಂತನೊಬ್ಬನ ಅನುಯಾಯಿಯಾಗಿದ್ದನೆಂಬುದಕ್ಕೆ ದಾಖಲೆಗಳಿವೆ. ಇವನು ಸರ್ವಧರ್ಮ ಸಮನ್ವಯಕಾರ ಎಂದರೆ ಹಿಂದೂ.

4. ಪುರುಷ ಸರಸ್ವತಿ ಎಂದರೆ ಪುರುಷನಾದರೂ ಸರ್ವ ವಿದ್ಯಾಪಾರಂಗತ ಎಂಬ ಲಕ್ಷಾರ್ಥದಲ್ಲಿ ತೆಗೆದುಕೊಳ್ಳಬೇಕು. ಸರ್ವ ವಿದ್ಯೆ ಎಂದರೆ ಎಲ್ಲಾ ಸದ್ವಿದ್ಯೆಗಳು ಎಂದು ತಿಳಿಯಬೇಕು. ಇವನಿಗೆ ಮೋಸ, ದಗಾ ಗೊತ್ತಿರಲಿಲ್ಲ.

5. ಚಕ್ರವರ್ತಿ ವಜ್ರ ಎಂದರೆ ರಾಜರತ್ನ ಎಂದು ನೀವು ಊಹಿಸಿದ್ದು ಆಶ್ಚರ್ಯ.

6. ನಮಗೆ ತಿಳಿದಿರುವಂತೆ (ಸಾಕ್ಷ್ಯಾಧಾರಗಳಿವೆ) ಈತನು ಪಂಪ, ರನ್ನ ಇತ್ಯಾದಿ ಕವಿಗಳ ಕಾವ್ಯಗಳನ್ನು ವಿಮಾನ ಕಾರ್ಖಾನೆಯ ನೌಕರರಿಗೆ ವಿವರಿಸಿ, ಅವರಿಗೆ ಸಾಹಿತ್ಯಾಭ್ಯಾಸದಲ್ಲಿ ಆಸಕ್ತಿ ಹುಟ್ಟಿಸಿದ್ದ.

7. ದಿವ್ಯಾನುಭವದ ಸುಳಿವೇ ಇಲ್ಲದ ಪ್ರಾಕೃತರು, ಪುಸ್ತಕ ಓದಿಕೊಂಡು ಏನೇನೋ ಬರೆಯುತ್ತಾರೆ. ಹಾಗೆಯೇ ಈತನು ಕುಡುಕರೊಡಗೂಡಿ ಕುಡಿಯದೇ ರತ್ನನ ಪದಗಳನ್ನು ಬರೆದಿರಬಹುದು. ಈತನಿಗೂ ಕುಡಿಯುವ ಮಹತ್ತಾದ್ದನ್ನು ಅಲ್ಪವೆಂದು ತಿರಸ್ಕರಿಸುವ ಚಟವಿದ್ದಿದ್ದರೆ ಯಾರೂ ಈತನನ್ನು ವಿರೋಧಿಸುತ್ತಿರಲಿಲ್ಲ.

8. ಈ ಕಾಗದಕ್ಕೆ ಪರಿಶಿಷ್ಟವಿಲ್ಲ

ವಂದನೆಗಳೊಂದಿಗೆ,

ನಿಮ್ಮವ

ವಿಲ್

ಗೆ–

ಶ್ರೀ ಸೇಶೇಕು,

ಆಕಾಶಗ್ರಾಮ, (ಭಾರತ)

ಪರಿಶಿಷ್ಟ 1

(ಇದೊಂದು ಕಾರ್ಬನ್ ಕಾಪಿ. ಮೂಲ ನಿಮ್ಮಲ್ಲಿರಬಹುದು)



ಸಂಜೆ ನಾಲ್ಕೂವರೆ ಗಂಟೆ. ಚಳಿಗಾಲ. ನಾನು ಮಲ್ಲೇ........ ಹೋಟೆಲಿನಲ್ಲಿ ಕುಳಿತಿದ್ದೆ. ಬಲಗೈಲಿ ಕಾಫಿ ಬಟ್ಟಲು, ಎಡಗೈಲಿ ಹೊಗೆಯಾಡುವ ಸಿಗರೇಟ್.

ಅವರು ಕಂಡರು. ಸಿಗರೇಟು ಕೆಳಬಿತ್ತು. ಕಾಲಿಂದ ಅದನ್ನಾರಿಸಿದೆ. ಮೈ ರೋಮಾಂಚನಗೊಂಡಿತ್ತು. ಇವರಿಂದಲೇ ಅಲ್ಲವೇ

ನಾನು ಹಳೆಗನ್ನಡ ಕಲಿತದ್ದು. ಇವರೇ ಅಲ್ಲವೇ ನಮ್ಮ ಕ್ಲಾಸಿನ ಪೈಲ್ವಾನನನ್ನು ಕತ್ತು ಹಿಡಿದು........... ಇವರೇ ಅಲ್ಲವೆ : ಕಲ್ಲಿ ವೆಡು ಕವೀಶ್ವರಗೆ ಬಲು ಬಲ್ಲಿಬಾಡಿ, ಬ್ರದರ್ಲಿ ಫೀಲಿಂಗ್ಸ್!

ಎದ್ದು ಹೋಗಿ 'ನಮಸ್ಕಾರ ಸಾ' ಎಂದೆ. ಆ ಗಂಭೀರ ಮುಖಮುದ್ರೆ ಸ್ವಲ್ಪವೂ ಬದಲಾಯಿಸಲಿಲ್ಲ. 'ಏನು ಬೇಕಿತ್ತು? ನೀನು ಯಾರು?' ಎಂದರು.

ನಾನು ಯಾರೆಂದು ಹೇಳಲಿ? ಹೇಳದೆ ವಿಧಿಯಿಲ್ಲ. ಹೇಳಿದೆ. ಅವರು ನನ್ನ ಕೈಗಳೆರಡನ್ನೂ ಹಿಡಿದು ನಸುನಗುತ್ತಾ, ಒಂದು ಮೇಜಿನ ಬಳಿ ಕರೆದುಕೊಂಡು ಹೋಗಿ 'ಕೂತುಕೋ, ಓದು' ಎಂದು ಮೇಜಿನ ಮೇಲೆ ಒಂದು ಪುಸ್ತಕ ಬೋರಲು ಹಾಕಿ, ಮಾಣಿಗೆ 'ಎರಡು ದೋಸೆ ತಾ' ಎಂದರು.

ಓದಿದೆ: 'ಮನದೊಳಗೆ ನಸುನಗುತಲಾ

ಮೂರ್ಖನ ಗುಣಂಗಳ ನೇನಮಾಡುವೆನೆನುತ ವಜ್ರನು

.... ಭೀಮನ ತಲೆಯ' ಎಂದಿತ್ತು.

'ಸಾ, ಈ ಗುಬ್ಬಿ ಮೇಲೇಕೆ ಬ್ರಹ್ಮಾಸ್ತ್ರ. ಅದಕ್ಕೆ ಈ ಅಲ್ಯೂಷನ್ಸ್ ಅರ್ಥವಾಗುತ್ತವೆಯೇ' ಎಂದೆ.

ಆ ಇಲ್ಯೂಷನ್ ನನಗಿಲ್ಲ' ನೀನು ಓದಿ ಹೇಳು ಎಂದರು.

[ಟಿಪ್ಪಣಿ– ಈ ಕಾಗದದಲ್ಲಿರುವ ಬರವದ ನಡುವೆ ಚುಕ್ಕಿಗಳು ಇರುವೆಡೆ ಕಾಫಿಯ ಕಲೆಯಿದೆ ಎಂದು ರಾಸಾಯನಿಕ ವಿಶ್ಲೇಷಣೆಯಿಂದ ತಿಳಿದುಬಂದಿದೆ. ಈ ಬರವ ಯಾರದು? ಗೊತ್ತಿಲ್ಲ. 'ಸಾ' ಎಂಬ ಪ್ರಯೋಗವಿರುವುದರಿಂದ ಇದು ಕವಿಕುಲಲಾಮನೋ ಅವನ ಅನುಕರಣಕಾರರಲ್ಲಿ ಒಬನೋ ಆಗಿರಬೇಕು.]

ಪರಿಶಿಷ್ಟ 2

ಇಲ್ಲ.

ಪರಿಶಿಷ್ಟ 3

ಅಪರಂಜಿಯ ಸಂಪಾದಕರು, ಚಕ್ರವರ್ತಿ ವಜ್ರನೇ ರಾಜರತ್ನನೇ ಎನ್ನುವುದನ್ನು ಖಚಿತವಾಗಿ ಕಂಡುಹಿಡಿಯಲು ವೈಜ್ಞಾನಿಕ ವಿಧಾನವನ್ನನುಸರಿಸಿ, ರಾಣಿ ರೂಪಾಯಿಯನ್ನು ಮೂರು ಬಾರಿ ತೂರಿ ಫಲಿತಾಂಶವನ್ನು ಪಟ್ಟಿ ಮಾಡಿದರು.



1 ಹೊಡೆತ (heads)

2 ಸತ್ತ (tails)

3 – ಹೊಡೆತ


ಇದರಿಂದ ಚಕ್ರವರ್ತಿ ವಜ್ರಸೇ ರಾಜರತ್ನ ಮತ್ತು ಪುರುಷ ಸರಸ್ವತಿಯೆಂದು ನಿರ್ವಿವಾದವಾಗಿ ತೀರ್ಮಾನಿಸಲಾಯ್ತು.

–ಸಂಪಾದಕ





"ಪಾನ ನಿರೋಧದ ಬಗ್ಗೆ ನಿಮ್ಮ ಅಭಿಪ್ರಾಯ?"



ನಾಮಾಂಕಣ

-ಶೀನೂ

ಮೊನ್ನೆ ಸಂಜೆ ವೆರಾಂಡದಲ್ಲಿ ಪೇಪರು ಓದುತ್ತ ಕುಳಿತಿದ್ದೆ. ಸುತ್ತಮುತ್ತ ಕಾಲೋನಿಯ ಮಕ್ಕಳು "ಏ ಬಂಟೀSS-- ವಿನ್ನೀSS-- ವೆಂಕಿ ಬಂದ ನೋಡೇ ಪಿಂಕಿಗೆ ಬಾಲ್ ಕೊಡೆSS--" ಎಂದು ಚೀರಾಡುತ್ತಿದ್ದವು. ನನಗೆ ಕ್ಷಣಹೊತ್ತು ಇವೇನು ಹೆಸರುಗಳು? ಈ ಬಂಟಿ ಪಿಂಕಿ ವೆಂಕಿಯರಲ್ಲಿ ಗಂಡು ಹುಡುಗರಾರು ಹೆಣ್ಣು ಯಾರು ಎಂದು ವಿವಂಚನೆಯಾಯಿತು. ನಾವು ಮಕ್ಕಳಿದ್ದು ಇಂತಹದೇ ಆಟವಾಡುತ್ತಿದ್ದಾಗ "ಲೇ ಹಣಮಾ ರಾಘ್ಯಾ ಚಂಡ ಬಗೀರ್‍ಯೋ-- ಬಸ್ಸ್ಯಾS-- ಕಮಲೀS- ಗಂಗೀ ಬರ್‍ರಿ" ಎಂದೆಲ್ಲ ನೆಗೆದಾಡುತ್ತಿದುದು ನೆನಪಿಗೆ ಬಂತು. ಅಲ್ಲಿಂದ ಮನಸ್ಸು ಹೆಸರಿನಿಂದ ಹೆಸರಿಗ ಜಿಗಿಯುತ್ತ ನಾಮೋಲ್ಲಂಘನೆಗೆ ತೊಡಗಿತು.

ನಲವತ್ತರ ದಶಕದಲ್ಲಿ ನಾವು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ತಲೆ ತುಂಬ ರುಮಾಲು ಹಣೆಯ ಅಗಲಕ್ಕೂ ವಿಭೂತಿಪಟ್ಟೆ ಮುಖದ ತುಂಬ ಕಲ್ಲೀ ಮೀಶೆ ತುಂಬಿದ ಕಲ್ಮಠ ಮಾಸ್ತರರು ವರ್ಗದಲ್ಲಿ ದಿನದ ಹಾಜರಿ ತೆಗೆದು ಆಪ್ತತೆಯಿಂದ "ಹಣಮಂತ ಗೋಪಾಲಾಚಾರ್ಯ ಬಾಪಗಂಡಿ" "ರಾಘವೇಂದ್ರ ಪ್ರಲ್ಹಾದ ಜಾಗೀರದಾರ" ಬಸಪ್ಪ ಶಂಕರೆಪ್ಪ ಹುನಗವಾಡಿ" ಕಮಲಾ ಶ್ರೀನಿವಾಸ ಕುಲಕರ್ಣಿ" ಹಸನ ಸಾಹೇಬ ಹುಸೇನ ಸಾಹೇಬ ಮೂಲಿಮನಿ" ಎಂದು ಒಂದೊಂದೇ ಒಂದೊಂದೇ ಹೆಸರನ್ನು ತಮ್ಮ ಕಂಚಿನ ಕಂಠದಲ್ಲಿ ದನಿಯೆತ್ತರಿಸಿ ಕರೆಯುವಾಗ ರಾಷ್ಟ್ರಪತಿಗಳು ಪದ್ಮಶ್ರೀ ವಿಜೇತರನ್ನು ವೇದಿಕೆಗೆ ಆಹ್ವಾನಿಸುತ್ತಿರುತ್ತಾರಲ್ಲ ಅಂತಹದೇ ವಾತಾವರಣವೇರ್ಪಟ್ಟಿರುತ್ತಿತ್ತು. ನಾವು ಹುಡುಗರೆಲ್ಲ "ಯಸ್ಸSS" "ಯಸ್ಸSS" "ಹಜರಸ್ವಾಮಿ" ಎನ್ನುತ್ತ ಎದ್ದೂ ಕುಳಿತೂ ಮಾಡುತ್ತಿದ್ದೆವು. ಈ ಮಧ್ಯೆ ಹುಡುಗರು ಯಾರಾದರೂ ಸರಿಯಾಗಿ ದನಿಗೊಡದಿದ್ದರೆ ಅಥವಾ ಏನಾದರೂ ಕುಚೋದ್ಯದಲ್ಲಿ ಮೈಮರೆತಿದ್ದರೆ ರಾಷ್ಟ್ರಪತಿಗಳು ಕ್ರುದ್ಧರಾಗಿ "ಲೇ ಪರಶ್ಯಾ ನ್ಯಾರಿ ಮಾಡಿ ಬಂದಿಯಿಲ್ಲೊ-- ಕತ್ತೆS-- ಒಂದೀಟು ಗಟ್ಟಿಸಿ ಒದರು" "ಏ ಗೋಪ್ಯಾ ಬಟ್ಟ ನನಮಗನSS ತಗದೇನ ನಿನ ಆಟS ಮತ್ತ----", "ಲೇ ಹಸನ್ಯಾ ಸಾಬರ ಬುದ್ಧಿ ಒಂದೀಟS ಬಿಡ ಸಾಲಿಗೆ ನಮಾಜ ಮಾಡಾಕ ಬರತೀಯೇನಲೇSS ಕಡಿತತೇನ ಮಗನSS ನೆಟ್ಟಗ ಕುಂದರು" ಎಂದೆಲ್ಲ ಮಂತ್ರಪುಷ್ಪಗಳನ್ನುದುರಿಸುತ್ತಾ ಪದ್ಮಶ್ರೀಯ ಜತೆಗೆ ಆಗೀಗ ಭಾರತರತ್ನವನ್ನೂ ಕೊಡುತ್ತಿದ್ದರು.



ಅಂದಿನ ಹೆಸರುಗಳಲ್ಲಿ ಏನು ಆಪ್ತತೆ, ಐಟು, ರಾಜಠೀವಿ; ಅದೇನು ಗಾಂಭೀರ್ಯ "ಬಳವಂತ ರಾಮಚಂದ್ರ ಸರದೇಶಪಾಂಡೆ"------

"ಗುರುಪಾದಯ್ಯ ನೀಲಗಂಗಯ್ಯಾ ಗುರುಸಿದ್ದನ ಮಠ"---- "ಮುಕುಂದ ಯಶವಂತರಾವ ಸೂರ್ಯವಂಶಿ --- ಆಹಾ! ಒಂದೊಂದೂ ಡಬಲ್ ಬ್ಯಾರೆಲ್ ಹೆಸರು. ಈ ಹೆಸರುಗಳ ಮೇಲಿಂದ

ಬರೀ ಗಂಡು ಹೆಣ್ಣಷ್ಟೇ ಅಲ್ಲ, ನಾಮಧಾರಿಯ ಜಾತಿ, ಕುಲ, ಗೋತ್ರ ಎಲ್ಲ ತಿಳಿಯುತ್ತಿತ್ತು. ಆದರೆ ಈ ಡಬಲ್ ಬ್ಯಾರಲ್ ಹೆಸರುಗಳನ್ನೆಲ್ಲ ಅಪಭ್ರಂಶಗೊಳಿಸಿ ಮೊಟಕುಗೊಳಿಸಬಿದ್ದರೆ, ಅವುಗಳಲ್ಲಿಯ ಆತ್ಮೀಯತೆ ನಷ್ಟವಾಗಿ ಅವೆಲ್ಲ ದೇಸಾಯರ ವಾಡೆದೊಳಗಿನ ದಿವಾಣಖಾನೆಯಲ್ಲಿ ತೂಗುಹಾಕಿದ ವಿಕ್ಟೋರಿಯಾ ರಾಣಿಯ ಭವ್ಯ ತೈಲಚಿತ್ರಗಳಂತೆ ಅಸಹಜವಾಗಿ ಕಾಣುತ್ತಿದ್ದವು.

ಅಂತೆಯೇ ಈ ಹೆಸರುಗಳನ್ನು ಹೊತ್ತ ಹುಡುಗರು ನಮ್ಮ ಪಾಲಿಗೆ "ಬಾಳ್ಯಾSS"-- "ಗುರಪ್ಯಾS"-- "ಮುಕ್ಯಾS"-- "ಕಮಲೀ"-- ಚಂಪೀSS"-- ಆಗಿರುತ್ತಿದ್ದರು. ಏನೇ ಆದರೂ ಆಗಿನ ದಿನಗಳಲ್ಲಿ ಈ ಹೆಸರು ಕೆಡಿಸುವ ವಿದ್ಯೆಯಲ್ಲಿ ಕೂಡ ಒಂದು ಶಿಸ್ತು, ವ್ಯವಸ್ಥಿತತೆ ಇರುತ್ತಿತ್ತು. ಅಂತೆಯೇ ಗಂಡು ಹುಡುಗರೆಲ್ಲ "ಆ"ಕಾರಾಂತರಾಗಿರುತ್ತಿದ್ದರೆ ಹೆಣ್ಣು ಹುಡಿಗೆಯರು "ಈ" ಕಾರಾಂತೆಯರಾಗಿರುತ್ತಿದ್ದರು. ಮತ್ತು ಈ ರೀತಿ ವಿಕಾರಾಂತರಾಗದ ಬರೀ ಕಾರಂತರು ಆಗ ಇರಲೇ ಇಲ್ಲ. ಆದರೆ ಇಂದಿನ ಈ ವೆಂಕಿ, ಬಂಟಿ, ಪಿಂಕಿ ಇವರೆಲ್ಲ ಯಾರು? "ವೆಂಕಮ್ಮ-- ಪಿನಾಕಿ-- ಬಂಟಾವತಿ" ಎಂದಿರಲಿಕ್ಕಿಲ್ಲ ತಾನೆ?

ಏನೇ ಇರಲಿ, ಇತ್ತೀಚಿನ ವರುಷಗಳಲ್ಲಿ ನಾಡಿನ ತುಂಬೆಲ್ಲ ವ್ಯಕ್ತಿಗತ ಅಂಕಿತನಾಮಗಳಲ್ಲಿ ಒಂದು ಏಕರೂಪತೆ ಕಂಡುಬರುತ್ತಿದೆ. ಎಲ್ಲೆಡೆ ಸತೀಶ, ಕುಮಾರ, ಅರುಣ, ಭಾವನಾ, ಆರತಿ ಇತ್ಯಾದಿ ಆಧುನಿಕ ಹೆಸರುಗಳು ಕೇಳಿಬರುತ್ತಿವೆ. ಆದರೂ ನಮ್ಮ ನಾಡಿನ ಉತ್ತರ ದಿಕ್ಕಿಗೆ, ಧಾರವಾಡದೆಡೆ ಮಾತ್ರ 'ಅಡ್ಡ-ಹೆಸರು'ಗಳು ತಮ್ಮ ಎಂದಿನ ವೈಶಿಷ್ಟ್ಯವನ್ನೇ ಇಂದೂ ಕಾಯ್ದುಕೊಂಡುಬಂದಿವೆ.

ಅಂತೆಯೇ ಇಲ್ಲಿ 'ಮೆಣಸಿನ ಕಾಯಿ', 'ಉಳ್ಳಾಗಡ್ಡಿ', 'ಕೋತಂಬರಿ', 'ಬೆಳ್ಳುಳ್ಳಿ'ಯರ ಜತೆಗೇ 'ರೊಟ್ಟಿ'ಯವರೂ 'ಬೆಣ್ಣೆ'ಯವರೂ ಇರುತ್ತಾರೆ. 'ತಟ್ಟಿ' ಮತ್ತು 'ಕಟ್ಟಿ'ಯವರ ಮಿತ್ರರಾಗಿ 'ಮಟ್ಟಿ'ಯವರಿರುತ್ತಾರೆ. 'ಯುಮ್ಮಿ' 'ಕತ್ತಿ'ಯವರ ಕೂಡ 'ಗಜೇಂದ್ರಗಡ'ರಿದ್ದಾರೆ. 'ಹಾಳಭಾವಿ'ಯವರೂ 'ಸೂಳಿಭಾವಿ'ಯವರೂ ಕೂಡೇ ಇರತಾರ. 'ಬೆಳಗಾವಕರ'ರು ಧಾರವಾಡದಾಗ ಇದ್ದರ 'ಧಾರವಾಡಕರ'ರು ಬಿಜಾಪೂರದಾಗ ಇರತಾರ. 'ಗೋಕಾಕ'ರು ಸವಣೂರಾಗ ಇದ್ದರ 'ಹಾನಗಲ್ಲ'ರು ಕಿತ್ತೂರಾಗ ಇರತಾರ. 'ದೊಡ್ಡಮನಿ' ಅನಂತಾಚಾರ ಅಂಗಳದಾಗ 'ಕೆಳಗಿನ ಮನಿ' ನೂರುದ್ದೀನನ ಕೋಳಿ ಕಾದಾಡತಿರತಾವ. 'ಬೆಟಗೇರಿ'ಯವರೂ 'ಕಟಗೇರಿ'ಯವರೂ ಕೂಡಿ 'ಚಿಟಗೇರಿ'ಯವರ ಮನಿಗೆ ಹೊರಟಿರತಾರ. 'ಜರತಾರ ಘರ' ಕುಬೇರಸಾನ ಮನೀ ಮುಂದS 'ಧಾಬಳಿ' ಕೃಷ್ಣಾಚಾರೀಮನೀ ಇರತSದ. 'ಮಜ್ಜಿಗಿ'ಯವರಿಗೂ 'ತಂಬಾಕ'ದ ಅವರಿಗೂ ಬೀಗತನ ಆಗತಿರತದ. 'ಮಡ್ಡಿ'ಯವರು ಶಾಣ್ಯಾರಿದ್ದರ 'ಶಹಾಣೆ' ಮಡ್ಡರಿರತಾರ. 'ಹಾವನೂರ' ಚಂಪಿಗೆ 'ಗರೂಡ' ರಾಘ್ಯಾ ಲಾಯಿನ ಹೊಡೀತಿರತಾನ. 'ಮಂಡಿಗಿ'ಯವರ ಮನೀ ಪಿತ್ತಲದಾಗSನ 'ಪತ್ರಾವಳಿ'ಯವರ ಮನಿ ಇರತದ. 'ಕೂಡಲ ಮಠ'ದ ಹತ್ತಿರನೇ 'ಚರಂತಿ ಮಠ' ಇರತSದ. 'ಅಡಿಕೆ'ಯವರಿಗೂ 'ಎಲಿಗಾರ'ರಿಗೂ ದೋಸ್ತಿ ಇರತದ. 'ಅಂಗಡಿ'ಯವರು 'ಸಾಲಿ' ಮಾಸ್ತ್ರ ಇರತಾರ. ಮತ್ತೂ 'ಗುಬ್ಬಿ' ಮತ್ತು 'ಕಾಗಿ'ಯವರ ಹುಡುಗರು



'ಸಾಲೀಮಠ'ಕ್ಕ ಹೋಗತಿರತಾರ. 'ಎತ್ತಿನಗುಡ್ಡ'ದವರ ಮನೀಗೆ 'ಕರಡೀಗುಡ್ಡ'ದವರ ಕನ್ಯಾ ಕೊಟ್ಟಿರತದ. 'ಹೊಸಬಾಳ ಮಠ'ದ ಕಾಂಪೌಂಡಿಗೆ ಹತ್ತಿಯೇ 'ಪ್ರಳಯಕಾಲ ಮಠ' ಇರತದ.

ಇಷ್ಟೆಲ್ಲ ವಿಧವಿಧವಾದ, ಅಂಕೆಗೇ ನಿಲುಕದ ನಾಮಾವಳಿಯೇ ಇದ್ದರೂ ಅದೇಕೋ ಧಾರವಾಡದಾಗ 'ಕುಲಕರ್ಣಿ' 'ಪಾಟೀಲ', 'ದೇಸಾಯಿ', 'ದೇಶಪಾಂಡೆ', 'ಹಿರೇಮಠ', ಈ ಹೆಸರುಗಳಿಗೇ ಗದ್ದಲ ಮುಕರಿರತದ. ಎರಡು ವರುಷಗಳ ಹಿಂದಿನ ಜನಗಣತಿಯ ಪ್ರಕಾರ ಇಡೀ ಧಾರವಾಡ ಹುಬ್ಬಳ್ಳಿಗೆ ಕೂಡಿಯೇ ಒಟ್ಟ ಆರು 'ಸಜ್ಜನ ಶೆಟ್ಟ'ರೂ ಮೂರು 'ಸಾತ್ವಿಕ'ರೂ, ಇಬ್ಬರು 'ಸಜ್ಜನ'ರೂ ಇದ್ದರೆ ಉಳಿದವರೆಲ್ಲ 'ಕುಲಕರ್ಣಿ' 'ಪಾಟೀಲ', 'ದೇಸಾಯಿ', 'ಹಿರೇಮಠ' ಇತಾದಿ ಇತ್ಯಾದಿ ಬೇರೆ ಬೇರೆಯವರಿದ್ದಾರೆ.

ಮತ್ತೂ ಈ ಅಡಾತಿಡ್ಡೀ ಅಡ ಹೆಸರುಗಳ ಧಾಂಧಲೆಯಲ್ಲಿ ನಿರಂತರ ಗೊಂದಲ ನಡದಿರತದೆ. ಅಂತೇನೇ ಅಂದಿನ ಮುಂಬಯಿ ಪ್ರಾಂತ್ಯದ ಘನ ಸರಕಾರದವರು, ಈ ಭಾಗದ ಜನರಿಗೆಲ್ಲ ಉಪಯೋಗವಾಗಲೆಂದು ಒಂದು ಸುಸಜ್ಜಿತವಾದ ಬೃಹತ್ತಾದ 'ಹುಚ್ಚಾಸ್ಪತ್ರೆ' ಕಟ್ಟಿಸಿದ್ದಾರೆ. ಇರಲಿ.

ಈ ಅಡ್ಡಹೆಸರುಗಳು ಸಾಕಷ್ಟು ಅಡ್ಡಡ್ಡವಾಗಿಲ್ಲವೆಂತಲೋ ಏನೋ ಈ ಜನರಿಗೆ ಈ ಹೆಸರುಗಳಿಗೆ ಇನ್ನೊಂದಿಷ್ಟು ಬಾಲಂಗೋಚಿ ಅಂಟಿಸುವ ಚಟ. ಅಲ್ಲದೇ ಒಂದೇ ಹೆಸರಿನವರು ಒಬ್ಬರಿಗಿಂತ ಹೆಚ್ಚಿಗಿರುವಲ್ಲಿ ಈ ಬಾಲಂಗೋಚಿಯು ಗುರುತಿನ ಚೀಟಿ ಒಮ್ಮೊಮ್ಮೆ ಅವಶ್ಯಕವೂ ಹೌದು.

ಅಂತೆಯೇ ನಾವು ಸ್ಕೂಲಿನಲ್ಲಿದ್ದಾಗ ನಮ್ಮ ಜತೆಗಿದ್ದ ಇಬ್ಬರು ಎಂ.ಜಿ. ಪಾಟೀಲರಲ್ಲಿ ಒಬ್ಬ 'ಮಹಾತ್ಮಾ ಗಾಂಧಿ ಪಾಟೀಲ'ನಾಗಿದ್ದರೆ ಇನ್ನೊಬ 'ಮಬ್ಬಗೋಪಸೆ ಪಾಟೀಲ'ನಾಗಿದ್ದ.

'ಶಂಕರ ಬಾಬೂರಾವ ದೇಸಾಯಿ' ಹಾಗೂ 'ಶ್ರೀಕಾಂತಬಾಬೂರಾವ ದೇಸಾಯಿ' ಎಂದು "ಎಸ್.ಬಿ. ದೇಸಾಯಿ"ಯಾಗಿದ್ದ ಇಬ್ಬರು ಅಣ್ಣತಮ್ಮಂದಿರಲ್ಲಿ ದುಂಡು ಮುಖದ ಕನ್ನಡಕ ಧರಿಸುವ ಅಣ್ಣ 'ಸುಭಾಸಬೋಸ'ನಾದರೆ ಹುಳುಕು ಮುಖದ ಅವನ ತಮ್ಮ 'ಸುಡುಗಾಡು ಬೋಸ'ನಾದ.

ಆದರೆ ಈ ಬಹುರೂಪಿ ಏಕನಾಮಿಗಳನ್ನು ತಿರಿಚುವ ಒಂದು ಕ್ಲಾಸಿಕ್ ಉದಾಹರಣೆ ನಮ್ಮೂರಿನ ಕುಲಕರ್ಣಿ ವಕೀಲರದ್ದು. ಊರಲ್ಲಿ ಮೂರು ಜನ



ಕುಲಕರ್ಣಿ ವಕೀಲರಿದ್ದು ಇವರು "ಬಡಿಗೀ ಕುಲಕರ್ಣಿ" "ಟೊಪಿಗಿ ಕುಲಕರ್ಣಿ" ಹಾಗೂ "ಹೆಂಡತಿ ಕುಲಕರ್ಣಿ" ಎಂದೇ ಊರಲ್ಲೆಲ್ಲ ಚಿರಪರಿಚಿತರಾಗಿದ್ದರು. ಕೋರ್ಟಿನಲ್ಲಾಗಲೀ ಬಾರ್ ರೂಮಿನಲ್ಲಾಗಲೀ ಇವರನ್ನು ಆಗೊಮ್ಮೆ ಈಗೊಮ್ಮೆ ಕೇಳಿಕೊಂಡು ಬರುತ್ತಿದ್ದ ಕಕ್ಷಿದಾರರು ಕೂಡ, "ಟೊಪಿಗಿ ಕುಲಕರ್ಣಿ" "ವಕೀಲರು ಯಲ್ಲಿ ಅದಾರ್ರೀ--?-- "ಬಡಿಗೀ ಕುಲಕರ್ಣಿ ವಕೀಲರು ಬಂದು ಹೋದರೇನ್ರಿ?" ಎಂದೇ ಕೇಳುತ್ತಿದ್ದರು.

ಬಡಿಗಿ ಕುಲಕರ್ಣಿ ವಕೀಲರ ಕೈಯಲ್ಲಿ ಸದೋದಿತವಾಗಿ ದಿನ ಬೆಳಗ್ಗೂ ಒಂದು ಕೈಕೋಲು (Walking stick) ಇರುತ್ತಿತ್ತು. ಆಗಿನ ಕಾಲಕ್ಕೆ ಕೈಕೋಲು ಹಿಡಿಯುವುದು ತುಂಬ fashionable ಆಗಿತ್ತು. ಕೋರ್ಟಿನಲ್ಲಿ, ಕ್ಲಬ್ಬಿನಲ್ಲಿ, ಸಂಜೆ ತಿರುಗಾಟದಲ್ಲಿ, ತರಕಾರಿ ಮಾರುಕಟ್ಟೆಗೆ ಹೋದಾಗ ಅಂತೂ ಎಲ್ಲೆಂದರಲ್ಲಿ ಇವರು ಬಡಿಗೆಧಾರಿಗಳಾಗಿಯೇ ಇರುತ್ತಿದ್ದರು. ಬಡಿಗೆ ರಹಿತ ಕುಲಕರ್ಣಿ ವಕೀಲರನ್ನು ಕಂಡವರು ವಿರಳ. ಹಾಗಾಗಿ ಇವರು ಬಡಿಗೀ ಕುಲಕರ್ಣಿಯವರಾದರು.

ಅದೇ ರೀತಿ "ಟೊಪಿಗಿ ಕುಲಕರ್ಣಿ" ವಕೀಲರು. ಇವರ ದೇಹದ ಮೇಲೆ, ಅರ್ಥಾತ್ ಉತ್ತಮಾಂಗದ ಮೇಲೆ ಯಾವಾಗಲೂ ಒಂದು ರಟ್ಟಿನಿಂದ ಮಾಡಿದ ಕರೀಬಣ್ಣದ ಟೊಪ್ಪಿಗೆ ವಿರಾಜಮಾನವಾಗಿರುತ್ತಿತ್ತು.

ಆದರೆ ಅದು ಸರಿಯಾಗಿ ಅವರ ಸಂಪೂರ್ಣ ತಲೆಯನ್ನು ಮುಚ್ಚುತ್ತಿದ್ದುದು ತೀರ ವಿರಳ. ಒಮ್ಮೊಮ್ಮೆ ತೀರ ಮುಂದೆ ಹಣೆಯ ಮೇಲೆ, ಇನ್ನೊಮ್ಮೆ ತೀರ ಹಿಂದೆ ಕುತ್ತಿಗೆಯ ಆಯಾಲಗಳ ಬಳಿ, ಕೆಲವು ಸಲ ಎಡಕ್ಕೆ ವಾಲಿದ್ದರೆ, ಇನ್ನು ಹಲವು ಸಲ ಬಲಕ್ಕೆ, ಅಂತೂ ಟೊಪ್ಪಿಗೆ ಇವರ ಭುಜದ ಮೇಲೆ ಕುತ್ತಿಗೆಯನ್ನು ದಾಟಿ, ತಲೆ, ಕಿವಿ, ಹಣೆ, ಕಣ್ಣು, ಮೂಗು ಹೀಗೆ ಯಾವದಾದರೊಂದು ಅವಯವವನ್ನು ತಬ್ಬಿಕೊಂಡಿರುತ್ತಿತ್ತು. ಆಗೀಗ ಕುಲಕರ್ಣಿ ವಕೀಲರು ಕಾಲು ಮಡಿಚಿ ಆರಾಮಕುರ್ಚಿಗೊರಗಿ ತೂಕಡಿಸುತ್ತಿದ್ದಾಗ ಟೊಪ್ಪಿಗೆ ಅವರ ಮೊಣಕಾಲಿಗೆ ಒರಗಿರುತ್ತಿತ್ತು. ಇನ್ನು ಕೆಲವು ಸಲ ಇವರು ಬಾರ್ ರೂಮಿನಲ್ಲಿ ಲೋಡಿಗೊರಗಿ ನಿದ್ರಿಸುತ್ತಿರುವಾಗ ಟೊಪ್ಪಿಗೆ ಅವರ ಹೊಟ್ಟೆಯ ಮೇಲೊರಗಿ ವಕೀಲರ ಗೊರಕೆಯ ತಾಳಕ್ಕೆ ತಕ್ಕಂತೆ ನರ್ತಿಸುತ್ತಿತ್ತು. ಅಂತೂ ಪಾಪ ಟೊಪ್ಪಿಗೆ ನಿರ್ಜೀವ ವಸ್ತು, ತಲೆ, ಹೊಟ್ಟೆ, ಕಾಲು ಎಲ್ಲೆಂದರಲ್ಲಿ "ನೀ ಇತ್ತಾಂಗ ಇರುವೆನೋ ಹರಿಯೇ" ಎಂಬ ದಾಸೋಕ್ತಿಯಂತೆ ನಿರ್ವಿಕಾರಿಯಾಗಿ, ಕುಲಕರ್ಣಿ ವಕೀಲರ ಬರೀ ದೇಹದ್ದಷ್ಟೇ ಅಲ್ಲ ಅವರ ಸಮಗ್ರ ವ್ಯಕ್ತಿತ್ವದ ಒಂದು ಅವಿಭಾಜ್ಯ ಅಂಗವೇ ಆಗಿತ್ತು. ಕುಲಕರ್ಣಿ ವಕೀಲರು ತಮ್ಮ ಶಿರಸ್ಸಂಗಾತಿಯಾದ ಈ ಟೊಪ್ಪಿಗೆಯನ್ನು, ಕೈತಾಗಿಸದೇ ತಲೆ, ನೆತ್ತಿ, ಮೂಗು, ಹಣೆ, ಆಯಾಲ ಹೀಗೆ ಎಲ್ಲೆಂದರಲ್ಲಿ ಜಾರಿಸಿ ಏರಿಸಿ ಇಳಿಸಿ ಸರಿಸಿ ಜಗ್ಗಿಸಿ ನುಗ್ಗಿಸಿ ಅಂತೂ ಟೊಪ್ಪಿಗೆ ನೆಲಕ್ಕೆ ಬೀಳದಂತೆ ಧರಿಸುತ್ತಿದ್ದ, ಲೀಲಾಜಾಲವಾದ ಆ Balancing act ಉ ಅಥವಾ ಡೊಂಬರಾಟ, ನೋಡತಕ್ಕಂತಹದ್ದಿರುತ್ತಿತ್ತು.

ಮೊದಲೇ ಹೇಳಿದಂತೆ ಅದು ನಲವತ್ತರ ದಶಕದ ಕಾಲ. ಆಗ ಈಗಿನಂತೆ ಜಾನಪದ ಕಲೆಗಳಿಗೆ ಅಷ್ಟಾಗಿ ಪ್ರೋತ್ಸಾಹವಿರಲಿಲ್ಲ. ಹಾಗಾಗಿ ಪಾಪ ನಮ್ಮ 'ಟೊಪಿಗಿ ಕುಲಕರ್ಣಿ' ವಕೀಲರು ಅನಾಮಧೇಯರಾಗಿಯೇ ಉಳಿಯಬೇಕಾಯಿತು. ಇವತ್ತಾಗಿದ್ದರೆ ನಮ್ಮ ವಕೀಲರು ಪ್ರಜಾರಾಜ್ಯೋತ್ಸವದ ದೆಹಲಿ ಪರೇಡಿನಲ್ಲಿ ವಿಜಯ ಟ್ಯಾಂಕಿನ ಹಿಂದೆಯೋ ಅಥವಾ ಸೇನಾ ತುಕಡಿಯ ಮುಂದೆಯೋ, ತಮ್ಮ ಟೊಪ್ಪಿಗೆಯನ್ನು ಕುಣಿಕುಣಿಸುತ್ತ ನಡೆದು ರಾಷ್ಟ್ರಪತಿಗಳಿಂದ ವಂದನೆ ಸ್ವೀಕರಿಸುತ್ತಿದ್ದರು. ಮತ್ತೂ ಇವರ ಈ ಟೊಪ್ಪಿಗೆ ನೃತ್ಯವನ್ನು ನೋಡಿ



ಬೆದರಿ ಕಂಗಾಲಾದ, ನೌಕಾ–ಸೇನಾ–ವಾಯುದಳಾಧಿಕಾರಿಗಳೂ ಜವಾನರೂ, ಪೋಲೀಸರೂ ಮತ್ತೆ ಮತ್ತೆ ತಮ್ಮ ತಲೆಯ ಟೊಪಿಗೆಗಳನ್ನು ಮುಟ್ಟಿ ಮುಟ್ಟಿ ಸರಿಪಡಿಸಿಕೊಳ್ಳುತ್ತಿದ್ದರು. ಅಲ್ಲದೇ ನಮ್ಮ ಕರ್ನಾಟಕ ಸರಕಾರ ನಾಡಿಗೆ ಗೌರವ ತಂದ ಈ "ಟೊಪ್ಪಿಗೆ–ವೀರ"ನನ್ನು ಎಷ್ಟೆಷ್ಟೋ ರಾಜ್ಯಪ್ರಶಸ್ತಿಗಳನ್ನಿತ್ತು ಸತ್ಕರಿಸುತ್ತಿತ್ತು. ಮತ್ತೂ ಮುಂದೆ ಅದೆಷ್ಟೋ ದಿನಗಳವರೆಗೆ ಯಾವುದೇ ಪೇಪರಿನಲ್ಲಿಯೂ, ಅಭಿನಂದಿತ ಟೊಪ್ಪಿಗೆ ಕುಲಕರ್ಣಿಯವರ ಮೂಗುಭರಿತ ಮುಖದ ಭಾವಚಿತ್ರವನ್ನು ನೋಡುವ ಭಾಗ್ಯ ನಮ್ಮೆಲ್ಲರದಾಗಿರುತ್ತಿತ್ತು. ಇರಲಿ ಇದಿಷ್ಟು 'ಟೊಪಿಗೆ ಕುಲಕರ್ಣಿ'ವಕೀಲರ ಕತೆ.

ಇನ್ನು 'ಹೆಂಡತೀ ಕುಲಕರ್ಣಿ' ವಕೀಲರ ಬಗ್ಗೆ. ಇವರು ಅತ್ಯಂತ ಸೌಮ್ಯಸ್ವಭಾವದ, ಸರಳ ಮನಸ್ಸಿನ ಮೃದುಭಾಷಿಯೂ, ಮಿತಭಾಷಿಯೂ ಆಗಿದ್ದರು. ಕನ್ನಡದಲ್ಲಿ ಹೇಳಬೇಕೆಂದರೆ "ಡರಪುಕ್" ಆಗಿದ್ದರು. ಇವರು ವಕೀಲರಾಗಿದ್ದರೇ ಹೊರತು ವೃತ್ತಿಯನ್ನು ಕೈಗೊಂಡವರಲ್ಲ. ಆದರೆ ಇವರಿಗೊಬ್ಬಳು ತ್ರಾಟಕಿಯೂ, ಗಯಾಳಿಯೂ, ಬೊಂಬಾಟ ಬಾಯಿಯುವಳೂ ಆದ ಒಬ್ಬ ಧರ್ಮಪತ್ನಿ ಇದ್ದಳು. ವಕೀಲರು ಈ ತ್ರಾಟಕಿಗೆ ಹೆದರಿ ಮನೆಯಲ್ಲಿರಲಾರದೇ ಕೋರ್ಟಿಗೆ ಹೋಗುತ್ತಿದ್ದರೇ ವಿನಃ ವೃತ್ತಿ ನಡೆಸಲೆಂದಲ್ಲ. ಇಷ್ಟಾದರೂ ಈ ದಂಪತಿಗಳ ಮನೆಗೆ ಯಾವನೋ ಒಬ್ಬ ತಲೆಮಾಸಿದ ಕಕ್ಷಿಕಾರ ಬಂದು ಒಂದು ಕೇಸು ಕೊಟ್ಟ. ಸರಿ, ಭಾರತೀಯ ನ್ಯಾಯಾಲಯವೇ ಆದರೂ ಎಷ್ಟು ವರುಷಾಂತ ಸುಮ್ಮನೇ ಕುಳಿತಾರು? ಮುಂದೆ ನಾಲ್ಕಾರು ವರುಷಗಳಾದ ಮೇಲೆ ನಮ್ಮ ತಲೆಮಾಸಿದ ಕಕ್ಷಿಕಾರನ ಕೇಸು ವಿಚಾರಣೆಗೆ ಬಂತು. ಪಾಪ! ಅವತ್ತೇ ನಮ್ಮ ವಕೀಲರ ಮನೆಯಲ್ಲಿ ಅವರ ತಾಯಿಯ ತಿಥಿ. ವಕೀಲರಿಗೋ ವಿಚಾರಣೆಯನ್ನು ಮುಂದಕ್ಕೆ ತಳ್ಳಿಸಿ adjurnment ಕೇಳುವುದಕ್ಕೂ ಹೆದರಿಕೆ. ಸರಿಯಾಗಿ ಕೋರ್ಟಿನ ಸಮಯಕ್ಕೆ ಅವರಿಗೆ ಕಾಲುನಡುಕ ಶುರುವಾಗಿ ಚಳಿ ಹಿಡಿದು ಬಾಯಿ ಬಿದ್ದುಹೋಯಿತು.

ಸರಿ, ಅಂದು ಕರೆಕ್ಟಾಗಿ ಕೋರ್ಟು ಪ್ರಾರಂಭವಾಗಿ ನ್ಯಾಯಾಧೀಶರು ಆಸನಾರೂಢರಾಗಿ ಪ್ರಸ್ತುತ ಕೇಸನ್ನು ಕೂಗುತ್ತಲೂ, ನಮ್ಮ ಕುಲಕರ್ಣಿ ವಕೀಲರ ಹೆಂಡತಿ ನ್ಯಾಯಾಲಯದಲ್ಲಿ ಪ್ರತ್ಯಕ್ಷಳಾಗಿ ನ್ಯಾಯಾಧೀಶರಿಗೆ "ನೋಡರವ್ವಾSS ನಮ್ಮನೀ ಒಳಗ ಇವತ್ತS ನಮ್ಮ ಅತ್ತೀ ಶ್ರಾದ್ಧ ಅದ. ನಮ್ಮ ಯಜಮಾನರು ಪಾಪ, ಬಾಯಿಸತ್ತ ಭೋಳೆ ಮನಿಶಾರು. ಅದಕ್ಕS ಈ ತಲೆಮಾಶಿದ ಕಕ್ಷಿಕಾರನ ಕೇಸು ಮುಂದ ಹಾಕರೆಪSS" ಎಂದು ಕೇಳಿಕೊಂಡಳು.



ನ್ಯಾಯಾಧೀಶರು ಒಂದು ಕ್ಷಣ ಅಪ್ರತಿಭರಾದರು, ದಿಕ್ಕೆಟ್ಟರು, ಕಿಂಕರ್ತವ್ಯ ಮೂಢರಾದರು. ಮತ್ತೂ ಇವನ್ನೆಲ್ಲ ಅವರು ಒಮ್ಮೆಲೇ ಏಕಕಾಲಕ್ಕೆ ಆದರು. 'ನ್ಯಾಯಾಸ್ಥಾನದ ಗೌರವವೇನು? ಕಾಯ್ದೆ ಕಟ್ಟಳೆಗಳೇನು? ಪ್ರೊಸೀಜರ್ ಏನು? ತಮ್ಮೆದುರು ನಿಂತ ಈ ಹಿಡಿಂಬೆ ಯಾರು?' ಏನೂ ತಿಳಿಯದೇ ಕಕ್ಕಾಬಿಕ್ಕಿಯಾದರು. ನಂತರ ಅವರು ಸಾವರಿಸಿಕೊಂಡರು. ಅವರ ನಿಷ್ಪಕ್ಷಪಾತ, ನಿಖರ

ನ್ಯಾಯಬುದ್ಧಿ ಜಾಗೃತವಾಯಿತು. "ಓರ್ವ ಕರ್ತವ್ಯನಿಷ್ಠ ನ್ಯಾಯಾಧೀಶನಾಗಿ ಯಾವುದೇ ಕೇಸಿನಲ್ಲಿ ತನ್ನ ಕರ್ತವ್ಯವೇನು? ಕೇಸನ್ನು ಮುಂದಕ್ಕೆ ತಳ್ಳಿ ಮುದ್ದತು (ವಾಯಿದಾ) ಕೊಡುವದು ಅಲ್ಲವೇ. ಅದಕ್ಕೆ ವಕೀಲರೇ ಬರಬೇಕು. ಅವರ ಹೆಂಡತಿ-ಯಾ-ಅನ್ಯ ವ್ಯಕ್ತಿ ಬರಬಾರದೆಂದು ಯಾರು ಹೇಳಿದ್ದಾರೆ" ಎಂದು ಕ್ಷಣಕಾಲ ಯೋಚಿಸಿ ಸದರೀ ಕೇಸನ್ನು ಮೂರು ವರುಷಕ್ಕೆ ಮುಂದೂಡಿ ಕೈತೊಳಕೊಂಡರು.

ಇದೆಲ್ಲ ನಾನು ಚಿಕ್ಕವನಿದ್ದಾಗ ಕೇಳಿದ ಅಂತೆ ಕಂತೆಗಳ ಬೊಂತೆ. ಅಂತೂ ಅವತ್ತಿನಿಂದ ನಮ್ಮ ಓಬವ್ವನ ಗಂಡ ಕುಲಕರ್ಣಿ ವಕೀಲರು "ಹೆಂಡತಿ ಕುಲಕರ್ಣಿ ವಕೀಲ"ರೆಂದು ಪ್ರಸಿದ್ಧರಾದರು.

ಮುಂದೆ ಬರ್‍ತಾ ಬರ್‍ತಾ ಕುಲಕರ್ಣಿ ಎಂಬ ಇವರುಗಳ ಅಡ್ಡ ಹೆಸರುಗಳು ಅಳಿಸಿಹೋಗಿ ಅವರು ಕೇವಲ "ಬಡಿಗೀ ವಕೀಲ" "ಟೊಪಿಗಿ ವಕೀಲ" ಹಾಗೂ "ಹೆಂಡತಿ ವಕೀಲ"ರಾದರು.

ಅಂತೂ ಉತ್ತರ ಕರ್ನಾಟಕದ ಅಡ್ಡ ಹೆಸರುಗಳ ಬಗ್ಗೆ ಹಬ್ಬಿದ ಐತಿಹ್ಯ ಅಡಕತೆಗಳ ಬಗ್ಗೆ ಬರೆದರೆ ಅದೇ ಒಂದು ಹೊತ್ತಿಗೆಯಾದೀತು.

ಒಂದು ಕಾಲಕ್ಕೆ ಆಯಾ ಹೆಸರುಗಳನ್ನು ಅವರವರೇ ಇಟ್ಟುಕೊಳ್ಳಬೇಕೆಂಬ ಒಂದು ಅಲಿಖಿತ ನಿಯಮವನ್ನು ಎಲ್ಲರೂ ಒಪ್ಪಿಕೊಂಡಂತಿತ್ತು. ಆದರೆ ಈಗ ನಾಡಿನಾದ್ಯಂತ ಹೆಸರುಗಳ ಸಾಮಾಜೀಕರಣವೂ ಸರಳೀಕರಣವೂ ಆಗಿದೆ. ಯಾರು ಬೇಕಾದರೂ ಯಾವ ಹೆಸರನ್ನಾದರೂ ಇಟ್ಟುಕೊಳ್ಳಬಹುದು. ಆದರೆ ಆ ಹೆಸರುಗಳು ಉಚ್ಚರಿಸಲು ಕಷ್ಟವಾಗಿರದೇ ಸುಲಭವಾಗಿರಬೇಕು ಅಷ್ಟೆ. ಅಂತಲೇ ಈಗ ಎಲ್ಲಿ ನೋಡಿದಲ್ಲಿ, ರಾಜೂ, ಮಾಯಾ, ಛಾಯಾ, ಗೀಥಾ, ಸುಝಾತಾ, ಭಾರಥಿ, ಆನಂಥ, ಅನಂಥ; ಬೇಕಾದ್ದು ತೆಗೆದುಕೊಳ್ಳಿ ಆಯ್ಕೆ ನಿಮ್ಮದು ಅಪಭ್ರಂಶಗೊಳಿಸುವ ಹಕ್ಕು ನಮ್ಮದು.

ಪ್ರಲ್ಹಾದ, ಆಹ್ಲಾದ, ಜಯತೀರ್ಥ, ಉದ್ಧವ, ತ್ರ್ಯಂಬಕಾಚಾರ್ಯ ಎಂಬ ಹೆಸರುಗಳು ಸ್ವಾಭಾವಿಕವಾಗಿಯೇ ಜನಮನದಿಂದ ಅಳಿಸಿಹೋಗುತ್ತಿವೆ. ಆದರೂ ಇನ್ನೂ ಅಲ್ಲೊಬ್ಬರು ಇಲ್ಲೊಬ್ಬರು ಈ ಹೆಸರುಗಳನ್ನು ಹೊತ್ತ ಹಳಬರು 'ಪರಲಾದ', 'ಅಲಹಾಬಾದ', 'ತಿರಕೊಂಬಾಚಾರಿ'ಗಳಾಗಿ ದಿನದೂಡುತ್ತಿದ್ದಾರೆ. ಆದರೆ ಅದೊಂದು ಕಾಲವಿತ್ತು. ಅಂದು ಕಷ್ಟಮಯವಾದ, ಕ್ಲಿಷ್ಟಮಯವಾದ ಹೆಸರುಗಳ ಸ್ಪರ್ಧೆಯೇ ಏರ್ಪಟ್ಟಂತಿರುತ್ತಿತ್ತು. ಸುಮಾರು ನಲವತ್ತು ನಲವತ್ತೈದು ವರುಷಗಳ ಹಿಂದಿನ ಒಂದು ಲಗ್ನ ಪತ್ರಿಕೆ ಇನ್ನೂ ನನ್ನ ನೆನಪಿನಲ್ಲಿ ಉಳಿದಿದ್ದರೆ ಅದಕ್ಕೆ ಇಂತಹ ಹೆಸರುಗಳೇ ಕಾರಣ.

'ಕಲಾಣಾದ್ಭುತಗಾತ್ರಾಯ'ನನ್ನು ಒಂದಿಸಿ ವಿವಾಹ ಪತ್ರಿಕೆ;

ಚಿ. ಭಯಕೃತ್ ಭಯನಾಶಕಾಚಾರ್ಯ, ಸಾಕೀನ, ಪಾಥ್ರಾಪೂರ ಇವರ ವಿವಾಹವನ್ನು



ಚಿ.ಕುಂ.ಸೌ.ಕಾ. ವಿಷ್ಣುಪ್ರಿಯಾ ಸಂತುಷ್ಟಲಕ್ಷ್ಮೀ ಹಯಗ್ರೀವಾಚಾರ್ಯ ಸಾಕೀನ ತಿರ್ಲಾಪುರ ಎಂಬ ವಧುವಿನೊಂದಿಗೆ ಗುರು ಹಿರಿಯರು ನಿಶ್ಚಯಿಸಿದ್ದರ ಬಗ್ಗೆ ಸಾಂಪ್ರತಾಗಿತ್ತು.

ಒಂದು ವೇಳೆ ಇವತ್ತಿನ ಮಿತಿಗಾಗಿದ್ದರೆ, ಇಂತಹ ಹುಚ್ಚು ಹುಚ್ಚು ಹೆಸರಿನ ವ್ಯಕ್ತಿಗಳೇ ಇರುತ್ತಿದ್ದಿಲ್ಲ. ಒಂದು ವೇಳೆ ಯಾರಾದರೂ ಇದ್ದಿದ್ದರೆ ಅವರಿಗೆ ಅನುರೂಪ ಹೆಸರಿನ ಸಂಗಾತಿಯೇ ದೊರಕುತ್ತಿರಲಿಲ್ಲ. ಒಂದು ವೇಳೆ ಇಂತಹ ಹೆಸರಿನವರು ದೊರಕಿ ಅವರ ವಿವಾಹ ನಿಶ್ಚಿತಾರ್ಥವಾಗಿದ್ದರೆ ಅಖಂಡ ಕರ್ನಾಟಕದಲ್ಲಿ ಯಾವುದೇ ಪ್ರಿಂಟಿಂಗ್ ಪ್ರೆಸ್ಸಿನಲ್ಲೂ ಇವರ ಲಗ್ನ ಪತ್ರಿಕೆ ಅಚ್ಚುಹಾಕಿಸಲು ಒಬ್ಬಾನೊಬ್ಬ ಮೊಳೆ ಜೋಡಿಸುವವರೂ, ಕರಡು ತಿದ್ದುವವರೂ (Proof readers) ಸಿಕ್ಕುತ್ತಿರಲಿಲ್ಲ.

ಅಲ್ಪಪ್ರಾಣ ಮಹಾಪ್ರಾಣಗಳು ಗತಪ್ರಾಣವಾದ ಇಂದಿನ ದಿನಗಳಲ್ಲಿ ಇಂತಹ ಹೆಸರುಗಳಷ್ಟೇ ಅಲ್ಲ. ಆ ಹೆಸರು ಹೊತ್ತ ವ್ಯಕ್ತಿಗಳೂ ಕೂಡ ಹಾಸ್ಯಾಸ್ಪದರಾಗಿದ್ದಾರೆ.

ಹಿಂದೆ ನಾನು ಉದ್ಯೋಗವನ್ನರಸಿ ಅಲ್ಲಲ್ಲಿ ಒದ್ದಾಡುತ್ತಿದ್ದ ದಿನಗಳಲ್ಲಿ ಕೆಲವು ದಿನ ರಾಯಚೂರಿನ ನಗರ ಸಭೆಯಲ್ಲಿ ಮತದಾರರ ಯಾದಿ ತಯಾರಿಸುವ ಕೆಲಸದ ಮೇಲ್ವಿಚಾರಕನಾಗಿದ್ದೆ. ಅಲ್ಲಿದ್ದಾಗಲೇ ಅಂದಿನ ನನ್ನ ಸಹೋದ್ಯೋಗಿ ಬಶೀರನ ಗುರುತು ಪರಿಚಯವಾಗಿ ಮುಂದೆ ಗಾಢ ಸ್ನೇಹದಲ್ಲಿ ಪರಿಣಮಿಸಿದ್ದು. ಒಂದು ದಿನ ಕೆಲಸದಲ್ಲಿ ಮಗ್ನನಾಗಿದ್ದಾಗ ಬಶೀರ ಓಡೋಡುತ್ತ ಬಂದು ಏದುಸಿರುಬಿಡುತ್ತ "ಶೀನೂ ಒಬಾಂವ ಯಾವನೋ ಬಮ್ಮನ್ ಬುಡಾ ಬಂದಾನ 'ನಾಮು ಕ್ಯಾ ಬೋಲೋಜಿ' ಅಂದರ ಹೆಸರ ಹೇಳೋದು ಬಿಟ್ಟು ಏನೇನೋ ಹಲಕಟ್ ಮಾತಾಡತಾನS ಜರಾ ದೇಖೋಬಾ" ಎಂದು ದೂರಿತ್ತ. ನಾನು ಬಶೀರನ ಟೇಬಲ್ಲಿಗೆ ಹೋಗಿ ನೋಡಿದೆ. ಸುಮಾರು ಐವತ್ತು ದಾಟಿದ, ಟೊಮೆಟೋ ಬಣ್ಣದ, ದೊಡ್ಡ ಹೊಟ್ಟೆಯ, ನೇರ ಮೂಗಿನ, ತೀಕ್ಷ್ಣ ಕಣ್ಣುಗಳ, ಬ್ರಹ್ಮತೇಜದಿಂದೊಪ್ಪುವ ವಿಪ್ರೋತ್ತಮರೊಬ್ಬರು, ಒಂದು ಕೈಯಿಂದ ತಮ್ಮ ಚಂಡಿಕೆಯ ಗಂಟನ್ನು ಸರಿಪಡಿಸುತ್ತ ಇನ್ನೊಂದು ಕೈಯಿಂದ ತಾವು ಹೊದ್ದ ಜರೀ ಅಂಚಿನ ಕೆಂಪು ಶಾಲನ್ನು ನೇವರಿಸುತ್ತ ನಿಂತಿದ್ದರು. ಅವರ ಶ್ರೀಮದ್ಗಾಂಭೀರ್ಯದಿಂದೊಪ್ಪುವ ವರ್ಚಸ್ವಿ ವ್ಯಕ್ತಿತ್ವವನ್ನು ಕಂಡು ನಾನೇ ಅವರ ಹೆಸರು ಬರೆಯಲು ಕುಳಿತೆ.

"ಹೇಳ್ರಿ ಸ್ವಾಮಿ ಹೆಸರೇನು?" ಎಂದೆ.



"ಗೋಪೀ ಕುಚಮರ್ದನ----- ಆಚಾರ್ಯರು ಹೇಳಲುಪಕ್ರಮಿಸಿದರು. ನಾನು ಅವಾಕ್ಕಾಗಿ ಅವರನ್ನು ಅರ್ಧಕ್ಕೇ ತರುಬಿ "ಸ್ವಾಮಿ ನಾನು ಕೇಳಿದು ತಮ್ಮ ಹೆಸರನ್ನು, ವೃತ್ತಿಯನ್ನಲ್ಲ" ಎಂದೆ.

ಆಚಾರ್ಯರು ಗಹಗಹಿಸಿ ನಗುತ್ತ "ಏನಪಾ ಅಂತಂದ್ರS ಹುಡುಗ ಬುದ್ಧಿ--- ಚಾಷ್ಟಿ ಸ್ವಭಾವ ಕಾಣಸ್ತSದ. ಈಗ ನಾನು

ಹೇಳೋದು ಹೆಸರss ತಮ್ಮಾs ಬರಕೋ'' ಎಂದರು. ವಿಪ್ರೋತ್ತಮರು ಹೇಳಿದ ಹೆಸರನ್ನು ನಾನು ಬರಕೊಂಡೆ. ''ಗೋಪೀ ಕುಚಮರ್ದನ ಗೋಕುಲನಂದನ ಬಾಲಗೋಪಾಲಾಚಾರ್ಯ, ತಂದೆ ಕೃಷ್ಣದ್ವೈಪಾಯನಾಚಾರ್ಯ, ಅಘಝುಲಪುರಕರ''

ಬಶೀರ ಅವತ್ತೇ ನೌಕರಿಗೆ ರಾಜೀನಾಮೆ ಕೊಟ್ಟು ರಾಯಚೂರಿನ ಬಸ್ ನಿಲಾಣದ ಬಳಿ ಒಂದು ಹಣ್ಣಿನ ಅಂಗಡಿ ಇಟ್ಟ.

ಕೃಷ್ಣದ್ವೈಪಾಯನರು ಎಂದೊಡನೆ ನನಗೆ ಮಹಾಭಾರತದ ನೆನಪಾಗಿ, ಕುಂತಿ–ಮಾದ್ರಿ–ಗಾಂಧಾರಿ ಎಂಬ ಹೆಸರುಗಳು ನೆನಪಿಗೆ ಬರುತ್ತವೆ. ಕುಂತಳ ದೇಶದವಳು ಕುಂತಿಯೆಂದೂ, ಮಾದ್ರ ನಾಡಿನವಳು ಮಾದ್ರಿಯೆಂದೂ, ಗಾಂಧಾರ ರಾಜಕುಮಾರಿ ಗಾಂಧಾರಿ ಎಂದೂ ಕೇಳಿದ್ದೇವಷ್ಟೆ. ನಾಡಿನ ಹೆಸರನ್ನು ಅಲ್ಲಿಯ ಹೆಣ್ಣುಮಕ್ಕಳಿಗೆ ಇಡುವ ಪದ್ಧತಿ ನಿಂತುಹೋದದ್ದು ಒಳ್ಳೆಯದೇ ಆಯಿತೆನ್ನಬೇಕು. ಇಲ್ಲದಿದ್ದರೆ ಧಾರವಾಡದವಳು ''ಧಡ್ಡಿ''ಯಾಗಿ, ಮಂಡ್ಯದವಳು ''ಮಂಡಿ''ಯಾಗಿ, ಮೈಲಾಪುರದವಳಿಗೆ ''ಮೈಲಿಗೆ'' ಬಂದು, ಮೈಸೂರಿನವಳಿಗೆ ''ಮುಸುರಿ''ಯಾಗಿರುತ್ತಿತ್ತು. ಮತ್ತೂ ನಮ್ಮ ಕೊಡಗಿನ ಚಲುವೆಯರು ಖಂಡಿತಕ್ಕೂ ಕೋಡಂಗಿಯರಾಗಿರುತ್ತಿದ್ದರು.

ಮೈಸೂರು, ಮಂಡ್ಯ, ಎಂದೆಲ್ಲ ಹೇಳಿದ ಮೇಲೆ ಬೆಂಗಳೂರು ಭಾಗದ ಹೆಸರುಗಳ ಬಗ್ಗೆ ಹೇಳದಿದ್ದರೆ ಅನುಚಿತವಾದೀತು. ನಮ್ಮ ಹಳೆ ಮೈಸೂರಿನ ಮಿತ್ರರು ಧಾರವಾಡದವರಂತೆ ಅಷ್ಟು ಹೆಸರುಗಳ ರೋಮಾನ್ಸಿಗಾಗಲೀ, ಜಂಜಾಟಕ್ಕಾಗಲೀ, ತುತ್ತಾಗದೇ ''Matter of fact'' ಅಥವಾ ''Business life'' ಎನ್ನುತ್ತಾರಲ್ಲ ಹಾಗೆ, 'ಕೆ. ಸತೀಶ್' 'ಆರ್. ಮಂಜುಳ'— 'ಬಿ. ಕೃಷ್ಣಪ್ಪ' ಎಂದೆಲ್ಲ ಚಿಕ್ಕದಾದ ಚೊಕಟವಾದ ಹೆಸರು ಹೊತ್ತಿರುತ್ತಾರೆ. ಹಾಗೆಂತ ಇಲ್ಲಿ ''ದೊಡ್ಡಮೋಟಕುರ್ಕಿಯ ಅಪ್ಪಾಜಪ್ಪಂದಿ''ರಾಗಲೀ ''ಜರ್ಕ ಬಂಡೇಕಾವಲಿನ ಮರಿತಿಪ್ಪಯ್ಯ''ನವರಾಗಲೀ ಇಲ್ಲವೆಂತಲ್ಲ. ಆದರೆ ಅವರೆಲ್ಲ 'ಡಿ.ಎಂ.ಕೆ.ಎ.ಜಪ್' ಅಥವಾ 'ಜೆ.ಬಿ.ಕೆ.ಎಂ.ತಿಪ್' ಆಗಿ ಬಿಟ್ಟಿರುತ್ತಾರೆ.

ಉತ್ತರ ಕರ್ನಾಟಕದ ಕಡೆಗೆ ಪಾಟೀಲ–ಕುಲಕರ್ಣಿಗಳ ಹಾವಳಿ ಹೇಗೊ ಹಾಗೆ ಬೆಂಗಳೂರು ಮೈಸೂರು ತುಂಬೆಲ್ಲ ಮೂರ್ತಿಗಳೂ ಸ್ವಾಮಿಗಳೂ ತುಂಬಿದ್ದಾರೆ. ಮೊದಮೊದಲು ನನಗೆ ಈ 'ಮೂರ್ತಿ' ಎಂಬ ಹೆಸರು ತೀರ ಮೆಚ್ಚಿಕೆಯದಾಗಿತ್ತು. ಏಕೆಂದು ಆಗ ಹೆಚ್ಚಾಗಿ 'ಕೃಷ್ಣಮೂರ್ತಿ'ಗಳು ಮಾತ್ರ ಇರುತ್ತಿದ್ದರು. ಅಂತೆಯೇ ಮೂರ್ತಿ ಎಂದೊಡನೆ ಘನನೀಳ, ವೇಣುವಾದಕ, ಗೋಪಾಲಬಾಲನ ಮುದ್ದು ಮೂರ್ತಿ ಕಣ್ಣಮುಂದೆ ಕಟ್ಟುತ್ತಿತ್ತು. ಬರ್ತಾ ಬರ್ತಾ ರಾಮಮೂರ್ತಿಗಳೂ ಗೋಪಾಲಮೂರ್ತಿಗಳೂ ಅನಂತ ಮೂರ್ತಿಗಳೂ, ಈ ಮೂರ್ತಿಗಳ ಸಾಲಿಗೇ ಸೇರಿದರು. ಇವರ ಜತೆಜತೆಗೇ ನರಸಿಂಹ ಮೂರ್ತಿ ತಾಂಡವ ಮೂರ್ತಿ, ರುದ್ರ ಮೂರ್ತಿಗಳೂ ಬಂದರು. ಇಷ್ಟೇ



ಸಾಲದೆಂಬಂತೆ ಮಾರುತಿ ಮೂತಿ, ವರಾಹ ಮೂತಿಗಳು ಕೂಡ ಮೂರ್ತಿಗಳಾದರು.

ಇದೇ ರೀತಿ ಸ್ವಾಮಿಗಳು. ತಮ್ಮ ಹೆಸರಿಗೊಂದು "ಸ್ವಾಮಿ"ಯನ್ನು ಜೋಡಿಸಿ ಯಾರೂ ಸ್ವಾಮ್ಯ ಮೂಡಬಹುದು. ನಾರಾಯಣಸ್ವಾಮಿ, ಗೋವಿಂದ ಸ್ವಾಮಿ, ರಾಮಸ್ವಾಮಿ, ಲಕ್ಷ್ಮಣ ಸ್ವಾಮಿ, ರಂಗಸ್ವಾಮಿ, ಏಸೂ ಸ್ವಾಮಿಗಳ ಹಾಗೆ. ಮೊನ್ನೆ ಶಿವಾಜಿನಗರದ ಬಸ್ಸಿನಲ್ಲಿ ಒಬ್ಬ ಎ.ಬಿ. ಸ್ವಾಮಿ ಸಿಕ್ಕಿದ್ದರು. ಅಲ್ಲಾಬಕ್ಷಸ್ವಾಮಿ!

ಮೂರ್ತಿಗಳ ಹಾವಳಿಯ ಬಗ್ಗೆ ಮೊನ್ನೆಯಷ್ಟೇ ನಡೆದ ಒಂದು ಘಟನೆಯನ್ನು ಹೇಳಲೇಬೇಕು.

ಈಗ್ಗೆ ಕೆಲವು ದಿನಗಳ ಹಿಂದೆ ಬೆಳಗಾಂವಿಯಿಂದ ಕೆಲಸದ ನಿಮಿತ್ತ ಬೆಂಗಳೂರಿಗೆ ಬರುವಾಗ ನನ್ನ ಬೀಗರು ನನ್ನ ಕೈಗೊಂದು ಪಾರ್ಸಲ್ ಕೊಟ್ಟು ಅದನ್ನು ಬೆಂಗಳೂರಿನಲ್ಲಿ ಕೆ.ಆರ್. ಸರ್ಕಲ್ ಬಳಿ ಸರಕಾರೀ ಕಟ್ಟಡದಲ್ಲಿಯ ಯಾವುದೋ ಒಂದು ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವ 'ಮೂರ್ತಿ' ಯವರಿಗೆ ಮುಟ್ಟಿಸಬೇಕೆಂದು ಹೇಳಿದ್ದರು. ಈಗ ನನಗೆ ಉಳಿದ ವಿವರಗಳೆಲ್ಲ ಮರೆತಿವೆ. ಆದರೆ ಆ ಪಾರ್ಸಲ್ ಆಯುರ್ವೇದದ ಔಷಧದ ಕಟ್ಟೆಂದೂ ಮೂರ್ತಿಯವರಿಗೆ ವಿಪರೀತ ಅರೆತಲೆಶೂಲೆ ಬಂದು, ಒಮ್ಮೊಮ್ಮೆ ತಲೆಗೇ ತೊಂದರೆಯಾಗುತ್ತದೆಂದೂ ಮತ್ತೂ ಹಾಗೆಲ್ಲ ಆದಾಗ ಹುಚ್ಚೆದ್ದು ಕುಣಿಯುತ್ತಾರೆಂದು ನನ್ನ ಬೀಗರು ಹೇಳಿದ ನೆನಪು. ಅಲ್ಲದೇ ಈ ಮೂರ್ತಿ ಎಂಬುವರು ನನ್ನ ಬೀಗರ ಬಾಲ್ಯ ಸ್ನೇಹಿತರೆಂದೂ ತುಮಕೂರಿನಲ್ಲಿ ಒಟ್ಟಿಗೇ ಓದುವಾಗ ಚಿಕ್ಕಂದಿನಿಂದಲೇ ಈ ತಲೆನೋವಿನಿಂದಾಗಿ ಕಣ್ಣು ಸರಿಯಾಗಿ ಕಾಣದೇ ಕನ್ನಡದ ಧರಿಸುತ್ತಿದ್ದರೆಂದೂ ಕೇಳಿದ್ದ ನೆನಪು.

ನನ್ನ ಬೆಂಗಳೂರಿನ ನಾಲ್ಕು ದಿನದ ವಾಸ್ತವ್ಯ ಮುಗಿಯುತ್ತಾ ಬಂದಿದ್ದರೂ ಈ ಮೂರ್ತಿಯವರನ್ನು ಸಂಪರ್ಕಿಸಿ ಅವರ ಪಾರ್ಸಲ್ ಮುಟ್ಟಿಸಲಾಗಿರಲೇ ಇಲ್ಲ. ಕೊನೆಯ ದಿನ ಅವರನ್ನೇ ನನ್ನ ಹೋಟೇಲಿಗೆ ಕರೆಯುವೆನೆಂದು ಹವಣಿಸಿ ದೂರವಾಣಿಯಲ್ಲಿ ಮೂರ್ತಿಯವರನ್ನು ಸಂಪರ್ಕಿಸಲೆತ್ನಿಸಿದೆ.

"ಹಲೋ-- ಅದು ಇಂತಿಂಥ ಆಫೀಸೇ?" ಎಂದೆ

"ಹಲೋ- ಎಸ್' ಎಂದಿತು ಆಚೆಯಿಂದ ಹೆಣ್ಣು ದನಿಯೊಂದು.

"ಸ್ವಲ್ಪ ದಯವಿಟ್ಟು ಮೂರ್ತಿಯವರನ್ನು ಕರೆಯಲಾದೀತೇ" ಎಂದೆ.

"ಸ್ಸಾರಿ ಸರ್ ಆಗದು" ಎಂದಿತು ಟೆಲಿಫೋನ್ ಆಪರೇಟರ ಹೆಣ್ಣು.

"ಯಾಕೆ ಮಡೇಮ್" ಎಂದೆ ನಾನು ಹಟವಲ್ಲಿ.



"ನೋಡಿ ಸರ್ ಈ ಆಫೀಸಿನಲ್ಲಿ ಮಿಸ್ಟರ್ರೂ-- ಮಿಸೆಸ್ಸೂ-- ಮಿಸ್ಸೂ ಎಲ್ಲ ಒಟ್ಟು ಸೇರಿ ನಲವತ್ತೆಂಟು ಮೂರ್ತಿಗಳಿದ್ದಾರೆ. ಬರಿಯ ಮೂರ್ತಿ ಎಂದರೆ ಹೇಗೆ-- ಎಂದು ದಬಾಯಿಸಿತು ಹೆಣ್ಣು.

ನಾನು ಧೃತಿಗೆಡದೆ "ನನಗೆ ಬೇಕಾದವರು ಗಂಡು ಮೂರ್ತಿ-- ಮಿಸ್ಟರ್ ಮೂರ್ತಿ" ಎಂದೆ.

"ಮುವತ್ತೈದು ಗಂಡು ಮೂರ್ತಿಗಳು––" ನಿರ್ವಿಕಾರ ಚಿತ್ತದಿಂದ ಹೇಳಿದಳು ಟೆಲಿಫೋನಿ.

"ಅಮ್ಮಾ ನನಗೆ ಬೇಕಾದ ಮೂರ್ತಿ ಬಹುಶಃ ತುಮಕೂರಿನವರು ಎಂದ ಮೇಲೆ ಅವರು ಯಾವುದೋ ಒಂದು ಟಿ. ಮೂರ್ತಿಯಾಗಿರಬೇಕು" ಎಂದೆ ಅನುನಯದಲಿ.

"ಹನ್ನೊಂದು ಟಿ. ಮೂರ್ತಿಗಳಿದ್ದಾರೆ ಅಂಕಲ್" ಎಂದಳು ಹುಡುಗಿ. ನನ್ನ ದನಿಯಲ್ಲಿನ ಅಸಹಾಯ ನಡುಕವನ್ನು ಕಂಡೋ ಏನೋ ಅಂತೂ ಹುಡುಗಿ ನನ್ನನ್ನು ಅಂಕಲ್ ಎಂದಳು.

"ನೋಡಮ್ಮಾ ನನಗೆ ಇವತ್ತು ಅವರನ್ನು ಕಾಣಲೇಬೇಕು" ಎಂದೆ ದೈನ್ಯದಲ್ಲಿ.

"ನಾನು ಬೇಡಾ ಎಂದೆನೆ ಅಂಕಲ್. ಸ್ವಲ್ಪ ಸರಿಯಾಗಿ ಗುರುತು ಪರಿಚಯ ಹೇಳಿ"

"ನನಗೆ ಬೇಕಾದ ಮೂರ್ತಿ ಕನ್ನಡದ ಧರಿಸುತ್ತಾರಮ್ಮಾ" ಎಂದೆ ಅಸಹಾಯನಾಗಿ.

"ಅದೂ ಒಂದು ಗುರುತೇ ಅಂಕಲ್?" ಎಂದು ಛೇಡಿಸಿದಳು ದೂರವಾಣಿ.

ನನಗೆ ಒಮ್ಮೆಲೆ ಮೂರ್ತಿಯವರು ನನ್ನ ಬೀಗರ ಸಮವಯಸ್ಕರಾದದ್ದರಿಂದ ಪಿಂಚಣಿಗೆ ಬಂದಿರಬಹುದೆಂದೂ ಮತ್ತು ಅಷ್ಟೆಲ್ಲ ಸರ್ವಿಸ್ ಆಗುವಾಗ ಯಾವುದೋ ಒಂದು ಆಫೀಸರ್ ಆಗಿರುತ್ತಾರೆನಿಸಿ ಮುಳುಗುವವನ ಹುಲ್ಲು ಕಡಿಯಂತೆ;

"ನೋಡಮ್ಮಾ ನನಗೆ ಬೇಕಾದ ಮೂರ್ತಿ ಆಫೀಸರ್ ಇದ್ದಾರಮ್ಮಾ" ಎಂದೆ.

"ಇಲ್ಲಿ ಗಂಡೂ ಹೆಣ್ಣು ಸೇರಿ ಒಟ್ಟು ಇಪ್ಪತ್ತೆಂಟು ಆಫೀಸರ ಮೂರ್ತಿಗಳಿದ್ದಾರೆ ಗೊತ್ತೇ ಅಂಕಲ್" ಎಂದಳು ಹುಡುಗಿ.

"ಕೇಳು ತಾಯಿ ನಾನು ಹುಡುಕುತ್ತಿದ್ದ ಮೂರ್ತಿ ಬಹುಶಃ ರಿಟೈರಿಗೆ ಬಂದಿದಾರಮ್ಮಾ" ಎಂದೆ ಹತಾಶನಾಗಿ.

"ಈ ವರುಷ ಆರು, ಮುಂದಿನ ವರುಷ ಒಂಭತ್ತು ಜನ ರಿಟೈರ್ ಆಗುವ ಮೂರ್ತಿಗಳಿದ್ದಾರೆ. ನಿಮಗೆ ಯಾರನ್ನು ಕೊಡಲಿ ಅಂಕಲ್" ಕೆಣಕಿದಳು ವಾಣಿ.

ನಾನು ತಾಳ್ಮೆಗೆಟ್ಟು ಕ್ರುದ್ಧನಾಗಿ "ನೋಡಮ್ಮಾ ನನಗೆ ಬೇಕಾದ ಗಂಡು ಮೂರ್ತಿ ವಯಸ್ಸಾದವರು, ತುಮಕೂರಿನಲ್ಲಿ ಬಾಲ್ಯ ಕಳೆದವರು, ಇನ್ನೇನು ರಿಟೈರ್ ಆಗುತ್ತಾರೆಂದಮೇಲೆ ಯಾವುದೋ ಆಫೀಸರ ಇರಬೇಕು, ಕನ್ನಡಕ ಧರಿಸುತ್ತಾರೆ ಮತ್ತೂ ಅವರಿಗೆ ಪದೇ ಪದೇ ವಿಪರೀತ ತಲೆನೋವು ಬರುತ್ತಿದು ಆಗೀಗ ಹುಚ್ಚರಂತೆ ಆಡುತ್ತಾರೆ" ಎಂದು ಆಕ್ರೋಶಿಸಿದೆ.



"ಥೂ ! ಅಂಕಲ್ ಮತ್ತೆ ಮೊದಲಿನಿಂದ ಶುರುಮಾಡಬೇಕು" ಎಂದಳು ತರುಣಿ.

"ಯಾಕಮ್ಮ ಏನಾಯಿತು? ಎಂದೆ ತಿಳಿಯದೆ.

"ಇಲ್ಲಿ ಯಾವುದೇ ಮೂರ್ತಿಗೂ ತಲೆ ಸರಿಯಿರುವುದಿಲ್ಲ ಅಂಕಲ್. ಆಫೀಸರ್ ಆಗಿದ್ದರಂತೂ ಪೂರ್ತಿ ಕೆಟ್ಟಿರುತ್ತದೆ" ಎಂದಳು ಹುಡುಗಿ.

ಬಹುಶಃ ಅದಕ್ಕಾಗಿಯೇ ಏನೋ, ಇಂದಿನ ಕರ್ನಾಟಕ ರಾಜ್ಯದ ಘನ ಸರ್ಕಾರದವರು, ಈ ಭಾಗದ ಜನರಿಗೆಲ್ಲ ಉಪಯೋಗವಾಗಲೆಂದು ಒಂದು ಸುಸಜ್ಜಿತವಾದ ಬೃಹತ್ತಾದ------------

(ಯಾರನ್ನೂ ಕುರಿತಾಗಿ ಬರೆದದ್ದಲ್ಲ)

ಪದ್ಯ ಮೀಮಾಂಸೆ


–ವಿಕಟಕವಿ

ಪದ್ಯ ಅಂದ್ರೆ ಪದ್ಗೊಳ್ ನಗ್ತ
ಅರಿಯೋ ಝರೀ ಅಂಗ್ ಕುಣೀತ
ಏಳ್ತಾ ಬೀಳ್ತಾ ಸದಾ ಬಳುಕ್ತ
ಅನ್ನೋ ಜಾತಿ ನಂದು !

ಕಾವ ಮೊನೆ ಮಂದಗಮನದಿಂ
ಭವ ಪದಮಾಲೆಗಳಿಂದಲಂಕೃತಂ
ಕವಿಹೃದಯ ಧಾರೆ
ಯವತರಣದಿಂದಾತ್ಮಗಳ್ ಪುಳಕಿತಂ
ಅಂತ ಬರದ್ರೆ ನಂಗೆ
ಉರಿದ್ಹೋಗ್ತೈತೆ ಮೈಯಿ !

(ಒಗ್ಲಿ ಬಿಡಿ ಯಾಕ್ ಜಗಳ !)
ಕವನ ಅಂದ್ರೆ ಏಂಗಿರಬೇಕು ?
ಈ ಪ್ರಶ್ನೆನೇ ತಪ್ಪು !
ಕಾಮನ ಬಿಲ್ಲನ್ನೇಳ್ಬಾಗಾಗಿ
ನೋಡೋಣ್ ಕರೆಕ್ಟ್ ಬೆಪ್ಪು !!





ಒಂದು ಪ್ರಣಯದ ಕಥೆ

ಶಿವು

ಶಿವರಾತ್ರಿಯ ಮರುದಿನದ ರಜೆ. ಬೆಳಿಗ್ಗೆ ಪ್ರಜಾವಾಣಿಯ ಪದರಂಗ ಬಿಡಿಸುತ್ತಾ ಕುಳಿತಿದ್ದೆ. ಹೊರಬಾಗಿಲ ಕರೆಗಂಟೆ 'ಟ್ರೀಂ' ಅಂತ ಕೂಗಿತು. ಹೋಗಿ ನೋಡಿದರೆ ನಾಲ್ಕು ಮಂದಿ ತರುಣರು. ಹೊರಪಾದ, ಎಣ್ಣೆಗಾಣದ ಕೂದಲು, ನುಣ್ಣಗೆ ಷೇವ್ ಮಾಡಿದ್ದ ಮಿರುಗುವ ಮುಖಗಳು, ನೀಲಿ ಜೀನ್ಸ್, ದೊಗಳೆ ಷರಟು, ವೃಥಾ ವಿವರಣೆ ಏಕೆ, ಒಟ್ಟಿನಲ್ಲಿ ನವಭಾರತದ ನಾಲ್ಕು ಆಶಾಜ್ಯೋತಿಗಳು ನಮ್ಮ ಬಾಗಿಲಿಗೆ ಬಂದಿದ್ದವು. 'ನಾನೇ ಧನ್ಯ' ಎಂದು ಕೊಳ್ಳುತ್ತಾ,

'ಯಾರಪ್ಪಾ ನೀವು? ಏನು ಬೇಕಾಗಿತ್ತು?' ಅಂತ ಕೇಳಿದೆ.

" 'ಅಪರಂಜಿ' ಯ ಸಂಪಾದಕರು ನೀವೇನಾ ಸಾರ್?" ಅಂತ ಕೇಳಿದ ಆಶಾಜ್ಯೋತಿ ನಂಬರ್ ಒನ್.

"ಹೌದಪ್ಪಾ, ಬನ್ನಿ ಒಳಗೆ. ಚಂದಾ ಕೊಡುಕ್ಕೆ ಬಂದಿದ್ದೀರ? ಸಂತೋಷ, ಸಂತೋಷ. ಕೂಡಿ. ಆ ಬೆತ್ತದ ಕುರ್ಚಿ ಬೇಡ, ಮೊಳೆ ಎದ್ದಿದೆ ಅದಕ್ಕೆ. ಪಕ್ಕದ ಕುರ್ಚಿಲಿ ಕೂಡಿ. ಮೂರೇ ಕುರ್ಚಿ ಇರೋದು. ಇನ್ನೊಂದು ತರ್ತೀನಿ" ಅಂತ ಬೀಗರ ಮುಂದೆ ಚಡಪಡಿಸೋಹಾಗೆ ಗಡಿಬಿಡಿಯಿಂದ ಓಡಾಡಿದೆ.

ಎಲ್ಲಾ ಸುಖಾಸೀನರಾದ ಮೇಲೆ, ಆಶಾಜ್ಯೋತಿ ನಂಬರ್ ಟೂ, ಪ್ರಾರಂಭಿಸಿದ.

"ನಾವೆಲ್ಲಾ 'ಅಪರಂಜಿ' ಅಭಿಮಾನಿಗಳು ಸಾರ್. ಒಟ್ನಲ್ಲಿ ಪತ್ರಿಕೆ ಚೆನ್ನಾಗಿದೆ ಅಂತ ನಮ್ಮ ಅಭಿಪ್ರಾಯ. ಆದ್ರೆ ಒಂದೇ ಒಂದು ಕೊರತೆ ಇದೆ. ಅದನ್ನು ನಿಮಗೆ ತಿಳಿಸಿ ಪರಿಹರಿಸಿ ಅಂತ ಕೇಳೋಣ ಅಂತ ಇಲ್ಲಿಗೆ ಬಂದ್ವಿ. ತಪ್ಪು ತಿಳಿಯೋಲ್ಲ ಅಂದ್ರೆ ಹೇಳ್ತೀವಿ"

"ಹೇಳಿ, ಅಗತ್ಯವಾಗಿ ಹೇಳಿ, ಪತ್ರಿಕೆ ನಿಮ್ಮದೇ ಅಂತ ತಿಳಿದು ಏನು ಬೇಕಾದ್ರೂ ಹೇಳಿ" ಅಂದೆ. ಒಟಿಗೆ ನಾಲು ಜನ ಅಪರಂಜಿ ಓದುಗರನ್ನು ಇದೇ ಮೊದಲ್ನೇ ಬಾರಿ ನೋಡಿದ್ದು.



ಆಶಾಜ್ಯೋತಿ ನಂಬರ್ ಒನ್, ಗಂಟಲು ಸರಿಮಾಡಿಕೊಂಡ. ಸ್ವಲ್ಪ ಹಿಂದೆ ಮುಂದೆ ನೋಡಿದ. ಆಮೇಲೆ ಧೈರ್ಯಮಾಡಿ,

"ಸಾರ್ ನಿಮ್ಮ ಪತ್ರಿಕೆಯಲ್ಲಿ ಲವ್‌ಸ್ಟೋರಿ ಯಾವ್ದೂ ಇರ್ಲಿಲ್ಲ. ತಿಂಗಳಿಗೊಂದು ಲವ್‌ಸ್ಟೋರಿ ಕೊಟ್ರೆ ಬಂಬಾಟಾಗಿರುತ್ತೆ" ಅಂದ.

ಅರೆ, ಹೌದಲ್ಲಾ, ಅಪರಂಜಿ ಬರಹಗಾರ ಬಳಗದೋರ್‍ಯಾರೂ ಈ ಜ್ವಲಂತ ಕೊರತೆ ಬಗ್ಗೆ ಗಮನ ಹರಿಸಿದಂತೆ ಕಾಣಲಿಲ್ಲ.

"ಆಗಲಪ್ಪ. ಯುಗಾದಿ ಸಂಚಿಕೆಗಾದ್ರೂ ಒಂದು ಪ್ರಣಯದ ಕಥೆ ಕೊಡೋಣಂತೆ" ಅಂದೆ. ಜ್ಯೋತಿಗಳು ನಿರ್ಗಮಿಸಿದವು.

ನಮ್ಮ ಚಿಕ್ಕಂದಿನಲ್ಲಿ ಈ ಲವ್‌ಸ್ಟೋರಿನ ಪ್ರಣಯದ ಕಥೆ ಅಂತ ಕರೀತಾ ಇದ್ರು. ಇದನ್ನ ಬರಿಬೇಕಾದ್ರೆ, ಈ ಬಗ್ಗೆ ಚೆನ್ನಾಗಿ ಓದಿ ಪರಿಚಯ ಪಡೆದಿರಬೇಕು. ಮೊದಲು ಕೆಲವು ಪ್ರಣಯ ಕಥೆ, ಕಾದಂಬರಿಗಳನ್ನು ಓದಿ, ಅದರ ಮರ್ಮ ಅರಿತು, ಆಮೇಲೆ ಬರಿಯೋದೇ ಜಾಣತನ ಅಂತ ಪುಸ್ತಕದ ಅಂಗಡಿಗೆ ಹೋದೆ.

"ಬನ್ನಿ, ಬನ್ನಿ, ಸಂಪಾದಕರಿಗೆ ಏನು ಬೇಕಾಗಿತ್ತು?" ಅಂತ ಪುಸ್ತಕದ ಅಂಗಡಿಯವ ಸ್ವಾಗತಿಸಿದ.

"ಕೆಲವು ಪ್ರಣಯ ಕಾದಂಬರಿಗಳು ಬೇಕಾಗಿತ್ತು"

"ಎಷ್ಟು ಕೆ.ಜಿ.?"

ಓಹೋ ! ಹೀಗೋ ಸಮಾಚಾರ ! ಎರಡು ಕೆ.ಜಿ. ತೂಗಿಸಿಕೊಂಡು ಬಂದೆ. ಮುಂದಿನ ಎರಡು ದಿನಗಳು ಪ್ರಣಯ ಕಾದಂಬರಿಗಳ ಆಳವಾದ ಅಭ್ಯಾಸ ನಡೆಸಿದೆ. ಪ್ರಣಯ ಜಗತ್ತಿನ ಹಲವು ವಿಶೇಷಗಳು, ಈ ಸಂಶೋಧನೆಯ ಫಲವಾಗಿ ಬೆಳಕಿಗೆ ಬಂದವು.

ಮೊಟ್ಟ ಮೊದಲಿಗೆ ನಾಯಕನ ಹೆಸರು. ನಮ್ಮ ನೈಜ ಜಗತ್ತಿನಲ್ಲಿ ನಾಲ್ಕು ಹೆಸರು ಹೇಳಿ ಅಂತ ಕೇಳಿದರೆ, ವೈ.ಎಂ. ರಾಮಕೃಷ್ಣ, ಬಿ.ಜಿ. ಮುನಿವೆಂಕಟರೆಡ್ಡಿ, ಎಸ್.ವೈ. ಶರಣಪ್ಪ, ಕೆ.ಎ. ದೇಸಾಯಿ ಅಂತ ಬಾಯಿಗೆ ಬರುತ್ತೆ ಅಲ್ವೇ. ಪ್ರಣಯ ಜಗತ್ತಿನಲ್ಲಿ ಹಾಗಲ್ಲ. ಅಲ್ಲಿನ ಹೀರೋಗಳಿಗೆ ಇನಿಷಿಯಲ್ಸೇ ಇರೋದಿಲ್ಲ. ಇಲ್ಲಿನ ಹೀರೋಗಳೆಲ್ಲಾ ಅರುಣ, ರಮೇಶ, ಸತೀಶ, ಹೀಗೆ ಮೂರು ಅಕ್ಷರಗಳ ಪ್ರಭೃತಿಗಳು. ನಾಯಕಿಯರೂ ಸಹಾ ಇದಕ್ಕೆ ಹೊರತಲ್ಲ. ಉತ್ಪಲಾ, ಮಾಲಿನಿ, ಶಾಲಿನಿ, ರಾಗಿಣಿ ಹೀಗೆ ಮೂರಕ್ಷರಗಳ ಮುಗುದೆಯರು. ಒಟ್ಟಿನಲ್ಲಿ ಎರಡು ಕೆ.ಜಿ. ಸಂಶೋಧನಾ ಸಾಮಗ್ರಿಯಲ್ಲಿ ಏಳು ಅರುಣ, ಮೂರು ಶಾಲಿನಿ ಸಿಕ್ಕಿದವು. ಡಿ.ಎನ್. ವೆಂಕಟಲಕ್ಷ್ಮಿ ಅನ್ನೋ ನಾಯಕಿ, ಮೈಕ್ರೋಸ್ಕೋಪಿನಲ್ಲಿ ಹುಡುಕಿದರೂ ಸಿಗಲಿಲ್ಲ.

ಇನ್ನು ಕೇಶವಿನ್ಯಾಸಕ್ಕೆ ಬರೋಣ – ನನಗೆ ಸಿಕ್ಕಿದ ಹದಿನಾಲ್ಕು ಹೀರೋಗಳಲ್ಲಿ ಎಂಟಕ್ಕೆ ಗುಂಗುರು ಕೂದಲು. ನಾಲ್ಕು ಜನರಿಗೆ 'ತೀಡಿದ' ಕ್ರಾಪು, ಇಬ್ಬರಿಗೆ ಕೆದರಿದ ಕೂದಲು. ಹದಿನೈದು ನಾಯಕಿಯರಲ್ಲಿ ಎಲ್ಲರಿಗೂ ನೀಳಕೇಶ. ಎಂಟು ಜನಕ್ಕೆ ನಾಯಕನ ಭೇಟಿಯಾದರೆ ಸಾಕು, ಮುಂಗುರುಳು ಹಾರಾಡೋಕೆ ಪ್ರಾರಂಭ. ಅಲ್ಲ ಸ್ವಾಮಿ, ವೈವಿಧ್ಯತೆಗಾದ್ರೂ, ಒಬ್ಬಿಬ್ಬರು ಬಾಬ್ ಮಾಡಿಸ್ಕೊಂಡಿದ್ಲು, ಇಬ್ರು ಪೋನೀಟೇಲ್ ಬಿಟ್ಟಿದ್ಲು, ಇನ್ನು ಒಬ್ಬಳಾದ್ರೂ 'ಕೇಶವರ್ಧಿನಿ' ಉಪಯೋಗಿಸಿ ಕೂದ್ಲೆಲ್ಲಾ ಉದುರಿಹೋಗಿ, ಟೋಫಿನ್ ಧರಿಸಿದ್ಲು ಅಂತ ಬರೀಬಹುದಾಗಿತ್ತಲ್ಲ. ಅದ್ಸರಿ, ಹದಿನಾಲ್ಕು ಹೀರೋಗಳಿಗೆ ಹದಿನೈದು ಹೀರೋಯಿನ್‌ಗಳು ಹೇಗೆ ಸಾಧ್ಯ ಅಂತ ಕೇಳಬೇಡಿ. ಕೊನೆಯೋಳು ಹೀರೋ ದಕ್ಕಲಿಲ್ಲ



ಅನ್ನೋ ಕೋಪದಲ್ಲಿ ಹೊಳೆಗೆ ಬಿದ್ದು, ಮೋಹಿನಿಯಾಗಿ ಹೀರೋನ ಕಾಡೋಕ್ಕೆ ಪ್ರಾರಂಭಿಸ್ತಾಳೆ.

ಇನ್ನು ಹೀರೋ ಮತ್ತು ಹೀರೋಯಿನ್‌ಗಳ ದೈನಂದಿನ ವ್ಯವಹಾರ. ನಮ್ಮ ಪ್ರಣಯ ಕಾದಂಬರಿಗಳಲ್ಲಿನ ಹೀರೋಗಳು ಸುಖಪುರುಷರು. ಅವರಿಗೆ ಹಾಲಿನ ಬೂತ್‌ಗೆ ಹೋಗಿ ಹಾಲು ತರುವ ಕೆಲಸ, ಕಾರ್ಪೊರೇಷನ್ ಆಫೀಸಿನಲ್ಲಿ ಕ್ಯೂ ನಿಂತು ತೆರಿಗೆ ಕಟ್ಟುವ ಕೆಲಸ, ಹಲ್ಲುನೋವು, ಹೈಪರ್ ಅಸಿಡಿಟಿ ಇದಾವುದೂ ಇರುವುದಿಲ್ಲ. ಅವರ ಒಂದೇ ಚಿಂತೆಯೆಂದರೆ,

"ಶಾಲಿನಿಯ ಮೇಜಿನ ಡ್ರಾನಲ್ಲಿ ರಮೇಶನ ಫೋಟೋ ಇತ್ತು. ಇನ್ನು ನಾನು ಬದುಕಿ ಏನು ಫಲ?"

ನಾಯಕಿಯರ ಚಿಂತೆ ಸ್ವಲ್ಪ ಬೇರೇ ತರಹದ್ದು

"ಕಬ್ಬನ್‌ಪಾರ್ಕಿನಲ್ಲಿ ಸತೀಶ ಕಾದಿದ್ದಾನೆ. ವಿಧಾನಸೌಧದ ಹಿಂದೆ ಅರುಣ ನಿಂತಿದ್ದಾನೆ. ಎಲ್ಲಿಗೆ ಹೋಗಲಿ?" ಬಿ.ಟಿ.ಎಸ್ ಬಸ್ಸು ಹಿಡಿದು ಮನೆಗೆ ಹೋಗಮ್ಮ ತಾಯಿ, ಪೀಕ್ ಅವರ್ ಶುರು ಆದರೆ, ಇನ್ನು ಸಂಜೆವರೆಗೂ ಕಬ್ಬನ್‌ಪಾರ್ಕಿನ ಮರಗಳನ್ನೇ ಎಣಿಸುತ್ತಾ ಇರಬೇಕು ಅಂತ ಹೇಳುಕ್ಕೆ ಅವಳ ಬಳಿ ನಾನಿರಲಿಲ್ಲ.

ನಾಯಕಿಯ ದಿನಚರಿಯಲ್ಲಿ ಇನ್ನೊಂದು ವಿಚಿತ್ರ ನನ್ನ ಗಮನಕ್ಕೆ ಬಂತು. ಈ ಸನ್ನಿವೇಶ ಒಂದು ಪ್ರಣಯ ಕಾದಂಬರಿಯಲ್ಲಿ ಒಂದು ಬಾರಿಯಾದರೂ ಬಂದೇ ಬರುತ್ತದೆ. ಅದೇನು ಅಂತ ಕೇಳಿದ್ರಾ? ಸುಮ್ನೆ ಕನ್ನಡಿ ಮುಂದೆ ನಿಲ್ಲೋದು. ಹೆಣ್ಣು ಮಕ್ಕಳು ಮೇಕಪ್ ಮಾಡಿಕೊಳ್ಳೊಕ್ಕೆ ಕನ್ನಡಿ ಮುಂದೆ ನಿಲ್ಲೋದು ಸರಿ. ಆದರೆ,

'ಉತ್ಪಲಾ, ನಿಲುವುಗನ್ನಡಿಯ ಮುಂದೆ ನಿಂತಿದ್ದಳು. ಕಾಲಿನ ಬೆರಳುಗಳ ಉಗುರಿಗೆ ಆಗತಾನೇ ಹಚ್ಚಿದ್ದ ಗೋರಂಟಿ, ಕೆಂಪಗೆ ಮಿರಮಿರನೆ ಹೊಳೆಯುತ್ತಿತ್ತು ಹೀಗೆ ಪಾದದಿಂದ ವರ್ಣನೆ ಪ್ರಾರಂಭವಾಗಿ ಹಂತಹಂತವಾಗಿ ಮೇಲಕ್ಕೇರುತ್ತಾ ಉತ್ಪಲಳ ಶರೀರ ಸಂಪತ್ತನ್ನು ಅತಿ ವಿವರವಾಗಿ ಬಣ್ಣಿಸಿ, ಕೊನೆಗೆ

'ಅವಳ ನೀಳಕೇಶ ಬೆನ್ನ ಮೇಲೆ ಹರಡಿ ಕಚಗುಳಿಯಿಡುತ್ತಿತ್ತು' ಅಂತ ಮುಗಿಯುವವರೆಗೆ ಉತ್ಪಲಾ ಕನ್ನಡಿಯ ಮುಂದೆ ನಿಂತೇ ಇರುತ್ತಾಳೆ. 'ಶೀತ ಆದೀತು, ಬಟ್ಟೆ ಹಾಕಿಕೋಮ್ಮ' ಅಂತ ಅವರಮ್ಮ ಹೇಳೋದೇ ಇಲ್ಲ.

ಸಂಶೋಧನೆಯ ಅಂಗವಾಗಿ ನಾನು ಓದಿದ ಎಲ್ಲ ಪ್ರಣಯ ಕಾದಂಬರಿಗಳ ಸರಾಸರಿ ಪುಟಸಂಖ್ಯೆ ಇನ್ನೂರ ಹದಿಮೂರು. ಇದರಲ್ಲಿ ಮೊದಲ ಎಪ್ಪತ್ತೊಂದು ಪುಟಗಳಲ್ಲಿ ನಾಯಕ ಮತ್ತು ನಾಯಕಿ, ಒಬ್ಬರನ್ನೊಬ್ಬರು ಪರಿಚಯಿಸಿಕೊಳ್ಳುವ ಆತುರದಲ್ಲಿರುತ್ತಾರೆ. ಈ ಪ್ರಥಮ ಸಮಾಗಮದ ಸನ್ನಿವೇಶ ಕೂಡ ಕುತೂಹಲಕಾರಿ. ಹೀರೋ ಸಾಮಾನ್ಯವಾಗಿ ಆಫೀಸ್ ಮೇಲ್ವಿಚಾರಕನಾಗಿದ್ದರೆ, ಹೀರೋಯಿನ್ ಟೈಪ್ ತರುಣಿಯಾಗಿರುತ್ತಾಳೆ. ಅಥವಾ ಹೀರೋ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕನಾಗಿದ್ದರೆ ಹೀರೋಯಿನ್ ಅವನ ಆಪ್ತ ವಿದ್ಯಾರ್ಥಿನಿಯಾಗಿರುತ್ತಾಳೆ.



(ಯಾವಾಗಲೂ ಇಂಗ್ಲೀಷ್ ಉಪನ್ಯಾಸಕರಿಗೇ ನಾಯಕಿ ಸಿಗುವುದು ಏಕೆಂದು ತಿಳಿಯಲಿಲ್ಲ. ಕನ್ನಡ ಉಪನ್ಯಾಸಕರು ಈ ಬಗ್ಗೆ ಚಳುವಳಿ ಹೂಡಬೇಕಾದ್ದು ಅಗತ್ಯ) ಎಂಭತ್ತರ ದಶಕದಲ್ಲಿ 'ದ್ವಿ ಚಕ್ರ ವಾಹನ ಕ್ರಾಂತಿ' (Two-Wheeler revolution) ಶುರುವಾದ ಮೇಲೆ ಪ್ರಣಯ ಕಾದಂಬರಿ ಬರಹಗಾರರಿಗೆ, ಈ ಪ್ರಥಮ ಭೇಟಿಯನ್ನು ಏರ್ಪಡಿಸುವ ಕೆಲಸ ಸುಗಮವಾಯಿತು. ಒಂದು ಉದಾಹರಣೆ –



'ಮಾಲಿನಿ ಕೆಂಪೇಗೌಡ ರಸ್ತೆಯಲ್ಲಿ ಹೋಗುತ್ತಿದ್ದಾಗ ಹಠಾತ್ತನೆ ಅವಳ ಮೊಪೆಡ್ ಸಂಪು ಹೂಡಿತು. ಹಿಂದೆ ಬಸ್ಸು, ಪಕ್ಕದಲ್ಲಿ ಆಟೋ, ಸರ್ರನೆ ಹಾಯ್ದು ಹೋಗುತ್ತಿದ್ದವು. ಮಾಲಿನಿಗೆ ಪಾಪ, ದಿಕ್ಕೇ ತೋಚಲಿಲ್ಲ. ಅಳುವೇ ಬರುವಂತಾಯಿತು. ಆಗ ಒಮ್ಮೆಲೆ ಚಿಗುರುಮೀಸೆಯ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ಅಲ್ಲಿ ಪ್ರತ್ಯಕ್ಷನಾದ. ಪರಿಸ್ಥಿತಿಯನ್ನು ಅವ ಗಮನಿಸಿದ. ಹಿಂದೆ ಮುಂದೆ ನೋಡದೆ, ಮಾಲಿನಿಯ ಮೊಪೆಡ್‌ನ್ನು ಎರಡು ಕೈಗಳಿಂದ ಎತ್ತಿ, ಪಕ್ಕದ ಫುಟ್‌ಪಾತ್ ಮೇಲಿಟ್ಟ. ಮಾಲಿನಿಗೆ 'ಅವ ತನ್ನನ್ನೂ ಹಾಗೆಯೇ ಎತ್ತಿ ಇಟ್ಟಿದ್ದರೆ ಅನ್ನುವ ಭಾವನೆ ಹೊಳೆದು ಕೆನ್ನೆ ಕೆಂಪಾಯಿತು. (ಕರೀ ಕೆನ್ನೆ ಕೆಂಪಾಗೋದು ಹೇಗೆ ಅನ್ನೋದು ಬೇರೆ ವಿಷಯ !) ಅವಳು ಇನ್ಸ್‌ಪೆಕ್ಟರನ್ನು ಕುರಿತು "ಬಹಳ ಧನ್ಯವಾದಗಳು ಇನ್ಸ್‌ಪೆಕ್ಟರ್ ...." ಅಂತ ಹೇಳಿ ತಡೆದಳು. ಚಿಗುರು ಮೀಸೆ "ರಮೇಶ್" ಅಂತ ಹೇಳಿ ಅವಳ ವಾಕ್ಯವನ್ನು ಪೂರ್ಣಗೊಳಿಸಿದ. ವಾಕ್ಯದಂತೆ ತನ್ನ ಬಾಳೂ ಸಹ ರಮೇಶ ಇಲ್ಲದೆ ಪೂರ್ಣಗೊಳ್ಳಲಾರದು ಅನ್ನುವ ಖಚಿತತೆಯ ಅರಿವು ...." ಹೀಗೆ ಹೋಗ್ತಾನೇ ಇರುತ್ತೇರಿ ಆ ಪುರಾಣ.

Deriliction of Duty ಗೆ ರಮೇಶನ್ನ ಡಿಸ್‌ಮಿಸ್ ಮಾಡಿದ್ದು, ಪೋಲೀಸ್ ಯೂನಿಯನ್ ಮೂಲಕ ಅವ ಪುನಃ ಕೆಲಸ ಸಂಪಾದಿಸಿದ್ದು, ಅವನನ್ನು ಮೇಲಾಧಿಕಾರಿ ಗುಲ್ಬರ್ಗಕ್ಕೆ ವರ್ಗ ಮಾಡಿದ್ದು, ಅಲ್ಲಿ ಬಾಡಿಗೆ ಮನೆ ಸಿಗದೆ ಅವ ತೊಳಲಾಡಿದ್ದು, ಇದಾವುದೂ ಆ ಕಾದಂಬರಿಕಾರ್ತಿಗೆ ಹೊಳೆಯೋದೇ ಇಲ್ಲ. ಆಕೆಯ



ಪ್ರಣಯ ಜಗತ್ತಿನಲ್ಲಿ ಮಾಲಿನಿ–ರಮೇಶರ ಜೀವನ 'ರಾಧಾಕೃಷ್ಣ' ರಂತೆ ನಿರಂತರವಾಗಿ ಸುಖವಾಗಿರಬೇಕೆಂಬ ಆಶಯ ಹೊರಹೊಮ್ಮುತ್ತಿರುತ್ತದೆ.

ಪ್ರಥಮ ಸಮಾಗಮ ಆದಮೇಲೆ ಇನ್ನು ಖಳನಾಯಕ (ವಿಲನ್) ಒಬ್ಬ ಯಾ ಒಬ್ಬಳು ಬರಬೇಕಲ್ಲ. ಕಾದಂಬರಿಗಳಲ್ಲಿ ಬಹುಸುಲಭವಾಗಿ ಸಿಗುವ ಖಳನಾಯಕ/ನಾಯಕಿಯರೆಂದರೆ ಹಿರಿಯರು ಈ ಪ್ರಣಯಿಗಳಿಗೆ ತಿಳಿಸದೇ ಗೊತ್ತು ಮಾಡಿರುವ ವರ ಅಥವಾ ವಧು. ಈ ಬಡಪಾಯಿಗಳ ಹೆಸರು ಯಾವಾಗಲೂ ನಾಲ್ಕು ಅಕ್ಷರಗಳಿಗೆ ಮೇಲ್ಪಟ್ಟು ಇರುತ್ತದೆ. ಇವರೆಲ್ಲರ ನಡುವೆ ನಡೆಯುವ (ಅ)ವ್ಯವಹಾರಗಳಲ್ಲಿ ಇನ್ನೂ ನೂರು ಪುಟಗಳು ಹಾರಿ ಹೋಗುತ್ತವೆ.

ಕೊನೆಯ ನಲವತ್ತೆರಡು ಪುಟಗಳು ಜಗತ್ತಿನ ವಿಷಾದವನ್ನು ಬಹು ಧಾರಾಳವಾಗಿ ವರ್ಣಿಸುತ್ತವೆ. ಎಲ್ಲ ಕಷ್ಟ ಕೋಟಲೆಗಳನ್ನು ದಾಟಿ ಕೊನೆಗೆ ನಾಯಕಿ, ನಾಯಕನನ್ನು ಮದುವೆಯಾಗುವುದು ಕಾದಂಬರಿಕಾರ್ತಿಯ ದೃಷ್ಟಿಯಲ್ಲಿ ಸುಖಾಂತ. ನಮ್ಮ ಅನುಭವದಲ್ಲಿ ಮದುವೆ ಎನ್ನುವುದು ಎಲ್ಲ ವಿಷಾದಾಂತ ಕಥೆಗಳ ಮೊದಲ ಹೆಜ್ಜೆ. ಹೀಗೆ ಮೂಲಭೂತವಾಗಿ ಬೇರೆ ಅಭಿಪ್ರಾಯವಿರುವುದರಿಂದ ಈ ಬಗ್ಗೆಗಿನ ನನ್ನ ಅನಿಸಿಕೆಗಳು ನನಗೇ ಇರಲಿ.

ಸಂಶೋಧನೆ ಮುಗಿಸಿದೆ. ಆಶಾಜ್ಯೋತಿಗಳಿಗೆ ನಾನು ನೀಡಿದ ಭಾಷೆಯನ್ನು ಪೂರ್ಣಗೊಳಿಸುವ ಸಲುವಾಗಿ ಒಂದು ಪ್ರಣಯಕಥೆಯನ್ನು ನೀಡಿದ್ದೇನೆ. ಓದಿ ನೋಡಿ.

ಟಿ. ರಾಮಿರೆಡ್ಡಿಯ ಪ್ರಣಯಪ್ರಸಂಗ

ಟಿ. ರಾಮಿರೆಡ್ಡಿ, ಹಾಲಿನ ಬೂತಿನಿಂದ ಹಾಲನ್ನು ತಂದು, ಸ್ಕೂಟರಿನಲ್ಲಿ ತನ್ನ ಕಾರ್ಖಾನೆಗೆ ಹೋದ. ಕಳೆದ ಒಂದು ವರ್ಷದಿಂದ ಕೆ.ಎಸ್.ಎಫ್.ಸಿ.ಯ ಸಾಲದ ಕಂತುಗಳನ್ನು ಕಟ್ಟಿರದ ಪ್ರಯುಕ್ತ ಅವನಿಗೆ ಹೊಟ್ಟೆಯಲ್ಲಿ ಹೈಪರ್ ಅಸಿಡಿಟಿ ಶುರುವಾಗಿತ್ತು. ಕಾರ್ಖಾನೆಯಲ್ಲಿ ಅಂದು ಟ್ರಾನ್ಸ್‌ಫಾರ್ಮರ್ ಬ್ರೇಕ್‌ಡೌನ್. ವಿದ್ಯುತ್ ಇಲ್ಲದೇ ಮಾಡಬೇಕಾದ ಚೂರುಪಾರು ಉತ್ಪಾದನೆಗೂ ಬಂತಲ್ಲಾ ಸಂಚಕಾರ ಅಂತ ತನ್ನ ಅದೃಷ್ಟವನ್ನು ಹಳಿಯುತ್ತಾ, ರೆಡ್ಡಿ ಕಾಮತ್ ಹೋಟೆಲಿಗೆ ಕಾಫಿ ಕುಡಿಯಲು ಹೋದ. ಸಾಮಾನ್ಯವಾಗಿ ಕತ್ತಲು ಗವಿಯಂತಿದ್ದ ಕಾಮತ್ ಹೋಟೆಲ್ ಸ್ಪೆಷಲ್ ರೂಮು, ಅಂದು ಕೋಟಿ ಸೂರ್ಯರಿಗೆ ಸಮನಾದ ಪ್ರಭೆಯಿಂದ ಕೋರೈಸುತ್ತಿತ್ತು. ರೆಡ್ಡಿ ಕಷ್ಟಪಟ್ಟು ಕಣ್ಣು ತೆರೆದು ನೋಡಿದ. ಸ್ಪೆಷಲ್ ರೂಮಿನ ಮೂರನೆ ಬೆಂಚಿನಲ್ಲಿ ಒಬ್ಬ ಅಪ್ಸರೆ (ಪ್ರಭೆಯನ್ನು ಬೀರುತ್ತಾ) ಟೀ ಕುಡಿಯುತ್ತಾ ಕುಳಿತಿದ್ದಳು. [ಇಲ್ಲೇ ನೋಡಿ ನೈಜತೆಗೂ, ಮಿಕ್ಕ ಸಾಧಾರಣ ಪ್ರಣಯ ಕಾದಂಬರಿಗಳಿಗೂ ಇರುವ ವ್ಯತ್ಯಾಸ ಶುರುವಾಗುತ್ತದೆ. ಸಾಧಾರಣ ಪ್ರಣಯ ಕಾದಂಬರಿಗಳಲ್ಲಿ "ರಾಮಿರೆಡ್ಡಿ ಹಾಗೂ ಸುಧಾ (ಅಪ್ಸರೆಯ ಹೆಸರು) ಒಬ್ಬರನ್ನೊಬ್ಬರು ಪರಸ್ಪರ ಪರಿಚಯ ಮಾಡಿಕೊಳ್ಳುತ್ತಾರೆ. ರೆಡ್ಡಿ ಅವಳಿಗೆ ಇನ್ನೊಂದು ಟೀ ತರಿಸುತ್ತಾನೆ. ರೆಡ್ಡಿಯ ಕೈಯಿಂದ ಸುಧಾ ಟೀ ಕಪ್ ಪಡೆಯುವಾಗ



ಸುಧಾಳ ಗೋರಂಟಿ ಉಗುರಿನ ನೀಳ ಕೈ ಬೆರಳಿನ ತುದಿ ರಾಮಿಯ ಕೈಗೆ ತಾಗಿ ಅವನ ಮೈಯಲ್ಲಿ ವಿದ್ಯುತ್ ಸಂಚಾರವಾಗುತ್ತದೆ. ಬೆಳಗಿನಿಂದ ವಿದ್ಯುತ್ ಇಲ್ಲದೆ ಕಂಗೆಟ್ಟಿದ್ದ ಅವನಿಗೆ ಈ ಸ್ಪರ್ಶ ಬಹು ಅಪ್ಯಾಯಮಾನ. ಮಾರನೆಯ ದಿನ ಕಬ್ಬನ್‌ಪಾರ್ಕಿನಲ್ಲಿ ಭೇಟಿಮಾಡುವ ವೇಳೆಯನ್ನು, ನಿರ್ಧರಿಸಿ, ಸುಧಾ ಕೋಕಿಲಕಂಠದಲ್ಲಿ "ಬಾಯ್ ರಾಮಿ" ಎಂದು ಹೇಳಿ ಕಾಮತ್ ಹೋಟೆಲಿನಿಂದ ತೇಲುತ್ತಾ ಹೋಗುತ್ತಾಳೆ" ಹೀಗೆಲ್ಲಾ ಇರುತ್ತದೆ. ನಮ್ಮ ಕಥೆ ಹಾಗಲ್ಲ. ನಮ್ಮದು ನೈಜತೆಗೆ ತೀರಾ ಹತ್ತಿರ] ಟೀ ಕುಡಿಯುತ್ತಾ ಮೂರನೆಯ ಬೆಂಚಿನಲ್ಲಿ ಕುಳಿತಿದ್ದ ಅಪ್ಸರೆಯನ್ನು ಕಣ್ತುಂಬನೋಡುವ ಉದ್ದೇಶದಿಂದ ರಾಮಿರೆಡ್ಡಿ ಅಡ್ಡಡ್ಡಲಾಗಿ ಹಾಕಿದ್ದ ಐದನೇ ಬೆಂಚಿನಲ್ಲಿ ಕುಳಿತು ಕಾಫಿ ಆರ್ಡರ್ ಮಾಡುತ್ತಾನೆ. ಅಪ್ಸರೆ ಟೀ ಕುಡಿದು ಬಿಲ್ ಕೇಳುತ್ತಾಳೆ. ರಾಮಿ ಕಾಫಿ ಮುಗಿಸಿ ಬಿಲ್ ಕೇಳುತ್ತಾನೆ. ಅಪ್ಸರೆ ಟೀಗೆ ಬಿಲ್ ಕೊಟ್ಟು ಎದ್ದು ಹೋಗುತ್ತಾಳೆ. ರಾಮಿರೆಡ್ಡಿ ಕಾಫಿಯ ಬಿಲ್‌ಕೊಟ್ಟು, **ದೊಡ್ಡದಾದ ನಿಟ್ಟುಸಿರು ಬಿಟ್ಟು**, ಅಪ್ಸರೆಯನ್ನು ನೆನೆಯುತ್ತಾ ಪುನಃ ಕಾರ್ಖಾನೆಗೆ ಹೋಗುತ್ತಾನೆ.

ಆಶಾಜ್ಯೋತಿಗಳು ನಿರಾಶಾಜ್ಯೋತಿಗಳಾಗದಿರಲೆಂದು ಆಶಿಸುವೆ.



ವಿರೋಧ ವಿಲಾಸ

–ಎಂ.ಎಸ್.ಕೆ. ಪ್ರಭು

ಕತೆ ಹೇಳುವ ಒಂದು ಆಟ. ಕತೆ ಹೇಳು, ಕತೆ ಹೇಳು ಎಂದು ಪೀಡಿಸುವ ಮಕ್ಕಳಿಗೆ ಕತೆ ಹೇಳಲು ಬಾರದ ಹಿರಿಯರು ಒಂದು ಕತೆ ಹೇಳುತ್ತಿದ್ದರು. 'ಒಂದು ರಾಜ್ಯ'. ಮಗು ಕತೆ ಕೇಳುತ್ತಿದ್ದರೂ ಹೇಳುವವನು ಒಂದು ಶರತ್ತು ವಿಧಿಸುತ್ತಿದ್ದ. 'ಪ್ರತಿಯೊಂದು ವಾಕ್ಯ ಮುಗಿದ ನಂತರವೂ ನೀನು 'ಹೂಂ' ಅನ್ನಬೇಕು.

'ಹೂಂ'.

'ಆ ರಾಜ್ಯಕ್ಕೆ ಒಬ್ಬಾನೊಬ್ಬ ರಾಜ'.

'ಹೂಂ'.

ಅವನಿಗೊಬ್ಬಳು ಚೆಲುವೆ ಮಗಳು'.

'ಹೂಂ'.

'ಆ ರಾಜಕುಮಾರಿ ಒಂದು ದಿನ ಮುತ್ತಿನ ಚೆಂಡನ್ನು ತೆಗೆದುಕೊಂಡು ಆಟವಾಡುತ್ತಾ ಅರಮನೆಯ ಉದ್ಯಾನವನದ ಬಳಿ ಬಂದಳು'.

'ಹೂಂ'.

'ಮುತ್ತಿನ ಚೆಂಡನ್ನು ಉರುಳಿಸುತ್ತಾ, ಉರುಳಿಸುತ್ತಾ ಕೊಳದ ಬಳಿ ಬಂದಳು'.

'ಹೂಂ'.

'ಚೆಂಡು ಉರುಳುತ್ತಾ, ಉರುಳುತ್ತಾ ಹೋಗಿ ಕೊಳದ ನೀರಿನಲ್ಲಿ ಮುಳುಗಿ ಹೋಯಿತು'.

'ಹೂಂ'.

'ಅಯ್ಯೋ, ನನ್ನ ಚೆಂಡು ಮುಳುಗಿ ಹೋಯಿತು, ಇನ್ನೇನು ಗತಿ ಅಂತ ರಾಜಕುಮಾರಿ ಜೋರಾಗಿ ಅಳುತ್ತಾ .ನಿಂತುಕೊಂಡಳು.'

'ಹೂಂ'.



'ನನ್ನ ಚೆಂಡು ನನಗೆ ಬೇಕು. ಊಂ– ಅಂತ ಅಳ್ತಾನೇ ಇದ್ದಳು.'.

'ಹೂಂ'.

'ಹೂಂ' ಅಂದ್ರೆ ಚೆಂಡು ಬರುತ್ತಾ?'

'ಇಲ್ಲಾ... ಅಲ್ಲಾ... ಹೂಂ'.

'ಇಲ್ಲಾ ಅಲ್ಲಾ ಹೂಂ ಅಂದ್ರ ಬರುತ್ತಾ?'

'ಬರಲ್ಲ'.

'ಬರಲ್ಲ ಅಂದ್ರೆ ಬರುತ್ತಾ?'

'ಉಹುಂ'.

'ಉಹುಂ ಅಂದ್ರೆ ಬರುತ್ತಾ?'

'ಬರಲ್ಲ, ಬರಲ್ಲ'.

'ಬರಲ್ಲ ಬರಲ್ಲ ಅಂದ್ರೆ ಬರುತ್ತಾ?'

'ಸುಮ್ಮನಿದ್ರೆ ಬರುತ್ತಾ?'

'ಹೂಂ- -?'

'ಹೂಂ ಅಂದ್ರೆ ಬರುತ್ತಾ?'

'ಥೂ ಹೋಗಿ ಅಪ್ಪಾ-

'ಥೂ ಹೋಗಿ ಅಪ್ಪಾಂದ್ರೆ ಬರುತ್ತಾ?'

'ನೋಡಮ್ಮಾ, ಈ ಅಪ್ಪನ್ನ- -

'ನೋಡಮ್ಮ ಈ ಅಪ್ಪಾನ್ನಾ ಅಂದ್ರೆ ಬರುತ್ತಾ?'

'ನಿಮ್ಮ ಕತೇನೂ ಬೇಡ, ಗಿತೇನೂ ಬೇಡ, ನಾ ಹೋಗ್ತೀನಿ'.

'ನಿಮ್ಮ ಕತೇನೂ ಬೇಡ, ಗಿತೇನೂ ಬೇಡಾ ನಾ ಹೋಗ್ತೀನೀಂದ್ರೆ ಬರುತ್ತಾ?'

'ಇದು ಕತೇನೇ ಅಲ್ಲ ಸಾಕು ನಿಲ್ಸಿ'.

'ಇದು ಕತೇನೇ ಅಲ್ಲ ಸಾಕು ನಿಲ್ಸಿ ಅಂದ್ರೆ ಬರುತ್ತಾ?'

'ನಾ ಕೇಳ್ತಾ ಇಲ್ಲ ನಿಮ್ಮ ಕತೇನ.'

'ನಾ ಕೇಳ್ತಾ ಇಲ್ಲ ನಿಮ್ಮ ಕತೇನ ಅಂದ್ರೆ ಬರುತ್ತಾ?'

'ಕೊಳದಲ್ಲಿ ಮುಳುಗಿ ಎತ್ತುಕೊಂಡು ಬಂದ್ರೆ ಬರುತ್ತೆ'.

'ಕೊಳದಲ್ಲಿ ಮುಳುಗಿ ಎತ್ತುಕೊಂಡು ಬಂದ್ರೆ ಬರುತ್ತೆ ಅಂದ್ರೆ ಬರುತ್ತಾ?'

'ಥೂ ಹೋಗಿ ಅಪ್ಪ!ಏನ್ಮಾಡಿದ್ರೆ ಬರುತ್ತೆ ಅದನ್ನಾದ್ರೂ ಹೇಳಿ'.

'ಥೂ ಹೋಗಿ ಅಪ್ಪ! ಏನ್ಮಾಡಿದ್ರೆ ಬರುತ್ತೆ ಅದನ್ನಾದ್ರೂ ಹೇಳೀಂದ್ರೆ ಬರುತ್ತಾ?'



ಇದೊಂದು ಕೊನೆಯಿಲ್ಲದ ಸರಪಳಿ. ಹನುಮಂತನ ಬಾಲಕ್ಕಾದರೂ ಒಂದು ಕೊನೆ ಇರಬಹುದೇನೋ. ಆದರೆ ಇಂತಹ ಕತೆಗಳಿಗೆ ಕೊನೆ ಇರುವುದು ಸಾಧ್ಯವಿಲ್ಲ. ಇಲ್ಲಿರುವ ವಿಸಂಗತಿಯನ್ನು ಗಮನಿಸಿ.

ಒಂದು ನಿಯಮವನ್ನು ಹೇಳಿ ಅದೇ ನಿಯಮವನ್ನು ಅದೇ ನಿಯಮಕ್ಕೆ ಅನ್ವಯಿಸಿದಾಗ ಉಂಟಾಗುವ ಪರಿಣಾಮವನ್ನು ನೋಡಬಹುದು. ಅಂತಹ ವಿಸಂಗತಿಗೆ ಒಂದು ಉದಾಹರಣೆ.

'ಎಲ್ಲ ಸಾಮಾನ್ಯ ನಿಯಮಗಳಿಗೂ ಅಪವಾದ (exception) ಇದೆ' ಎಂಬುದು ಒಂದು ಸಾಮಾನ್ಯ ನಿಯಮ. ಈ ನಿಯಮವನ್ನು ಸ್ವಯಂ ಅನ್ವಯ ಮಾಡಿದಾಗ, ಎಲ್ಲ ಸಾಮಾನ್ಯ ನಿಯಮಗಳಿಗೂ ಅಪವಾದ ಇದೆ ಎಂಬ ಸಾಮಾನ್ಯ ನಿಯಮಕ್ಕೂ ಅಪವಾದವಿದೆಯೆಂದು ಸಿದ್ಧಿಸುತ್ತದೆ. ಎಂದರೆ ಎಲ್ಲ ಸಾಮಾನ್ಯ ನಿಯಮಗಳಿಗೂ ಅಪವಾದ ಇದೆ ಎಂದು ಸಾಮಾನ್ಯ ನಿಯಮ ಸಿದ್ಧಿಸುವುದಿಲ್ಲ. ಎಂದರೆ ಎಲ್ಲ ಸಾಮಾನ್ಯ ನಿಯಮಗಳಿಗೂ ಅಪವಾದ ಇದೆ ಎಂದು ಸಿದ್ಧಿಸುತ್ತದೆ. ಎಂದರೆ, ಎಲ್ಲ ಸಾಮಾನ್ಯ ನಿಯಮಗಳಿಗೂ ಅಪವಾದ ಇದೆ ಎಂದು ಸಿದ್ಧಿಸುವುದಿಲ್ಲ– ಬೆಳವಣಿಗೆ ನಿಲ್ಲದ ಹನುಮಂತನ ಬಾಲ ಹಿಡಿದು ಹೋಗಲು ನಿಮಗೆ ತಾಳ್ಮೆ ಇದೆಯೇ?

ಎಪಿಮೆನೈಡ್ಸ್ ಎಂಬ ಗ್ರೀಕ್ ತತ್ವಜ್ಞಾನಿ ಇದ್ದ. ಅವನು ಕ್ರೀಟ್ ಪ್ರದೇಶದ ಪ್ರಜೆ. ಅವನೊಮ್ಮೆ ಹೇಳಿದ, 'ಎಲ್ಲ ಕ್ರೀಟ್ ಪ್ರಜೆಗಳೂ ಸುಳ್ಳುಗಾರರು'. ಅವನ ಹೇಳಿಕೆಯಲ್ಲಿ ಎರಡು ವಿರುದ್ಧೋಕ್ತಿಗಳಿರುವುದನ್ನು ಗಮನಿಸಿ, 'ನಾನು ಸುಳ್ಳು ಹೇಳುತ್ತಿದ್ದೇನೆ' ಮತ್ತು 'ಈ ಹೇಳಿಕೆ ಸುಳ್ಳು'. ಎಪಿಮೆನೈಡ್ಸ್‌ನ ಹೇಳಿಕೆ ಎಪಿಮೆನೈಡ್ಸ್ ವಿರುದ್ಧೋಕ್ತಿ ಅಥವಾ ಸುಳ್ಳುಗಾರನ ವಿರುದ್ಧೋಕ್ತಿ ಎಂದು ಹೆಸರುವಾಸಿಯಾಗಿದೆ.

ಒಂದು ವಾಕ್ಯದ ಅಭಿಪ್ರಾಯ ಅದೇ ವಾಕ್ಯಕ್ಕೆ ಅಂದರೆ ಅದೇ ವಾಕ್ಯದ ಅಭಿಪ್ರಾಯಕ್ಕೆ ಲಕ್ಷ್ಯವಾದಾಗ ಅದು ಸ್ವಯಂ ಪ್ರಮಾಣವಾಗುತ್ತದೆ. ಎಪಿಮೆನೈಡ್ಸ್ ವಿರುದ್ಧೋಕ್ತಿಯಲ್ಲಿ ವಾಕ್ಯದ ಅಭಿಪ್ರಾಯ ವಾಕ್ಯದ ಅಭಿಪ್ರಾಯವನ್ನೇ ನುಂಗಿ ನಾಶಮಾಡುತ್ತದೆ. ಇಂಥ ಮಾತುಗಳು ತನ್ನ ಬಾಲದ ತುದಿಯಿಂದ ತನ್ನ ದೇಹವನ್ನೇ ನುಂಗುವ ಹಾವಿನಂತೆ.

ನನ್ನ ಮಾತನ್ನು ನಂಬಬೇಡ ಎಂದು ನನ್ನ ಸ್ನೇಹಿತನೊಬ್ಬ ಒಮ್ಮೆ ಹೇಳಿದ. ಅವನ ಈ ಮಾತನ್ನೂ ನಂಬಬೇಕೋ ಬೇಡವೋ ಎಂಬ ತೊಂಬಾವಂಚಕ್ಕೆ ಒಳಗಾದೆ. 'ನನ್ನ ಮಾತನ್ನು ನಂಬಬೇಡ' ಎಂಬ ಮಾತಿಗೆ ಅದೇ ಮಾತಿನ ಅಭಿಪ್ರಾಯವನ್ನು ಅನ್ವಯಿಸಿದಾಗ ನಾನು ನನ್ನ ಸ್ನೇಹಿತನನ್ನು ನಂಬಬೇಕಾಯಿತು. ಅವನನ್ನು ನಂಬಿದ ಕೂಡಲೇ ಅವನ ಮಾತು ಅವನ ಮಾತಿನ ಅಭಿಪ್ರಾಯಕ್ಕೆ ಢಿಕ್ಕಿ ಹೊಡೆದು ಮಾತು, ಅಭಿಪ್ರಾಯ ಎರಡೂ ನಾಶವಾದವು. ಈಗಿನ ಕಾಲದಲ್ಲಿ ಯಾರನ್ನೂ ನಂಬೋಹಾಗಿಲ್ಲ ಎಂದು ಯಾರಾದರೂ ನಿಮಗೆ ಉಪದೇಶಿಸಿದರೆ, ಉಪಧೇಶಕೊಟ್ಟವರನ್ನೂ ನಂಬಿಕೊಳ್ಳುವಂತಿಲ್ಲ. ಎಂದರೆ, ನಂಬಬಹುದು. ನಂಬಿದರೂ ಅಷ್ಟೇ,



ಬಿಟ್ಟರೂ ಅಷ್ಟೇ, ಪರಿಣಾಮ ಒಂದೇ ಎಂದು ನೀವು ಉದಾಸೀನರಾಗಿ ಕೂಡ ಇರಬಹುದು. ಆದರೆ ಯಾವುದಾದರೂ ಒಂದನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕೇನೊ. ಇಬ್ಬಂದಿಯಾದರೆ ಮಾತ್ರ 'ಸಿಂಬಳದಿನೊಣ''

'ಈ ಮುಂದಿನ ವಾಕ್ಯ ಸುಳ್ಳು. ಈ ಹಿಂದಿನ ವಾಕ್ಯ ಸತ್ಯ'. ಈ ವಾಕ್ಯಗಳ ಪರಸ್ಪರ ಮೌಲ್ಯ ನಿರ್ಧಾರ ಹೇಗೆ ಸಾಧ್ಯ? ಮೊದಲನೆ ವಾಕ್ಯದ ಅಭಿಪ್ರಾಯವನ್ನು ಎರಡನೇ ವಾಕ್ಯಕ್ಕೆ ಅನ್ವಯಿಸಿದಾಗ ಎರಡನೇ ವಾಕ್ಯದ ಅಭಿಪ್ರಾಯವನ್ನು ಅಲ್ಲಗಳೆಯಬೇಕಾಗುತ್ತದೆ. ಅಂದರೆ ಅದು 'ಈ ಹಿಂದಿನ ವಾಕ್ಯ ಸುಳ್ಳು' ಎಂದಾಗಬೇಕಾಗುತ್ತದೆ. ಈ ಎರಡನೆ ವಾಕ್ಯದ ಅಭಿಪ್ರಾಯವನ್ನು ಮೊದಲನೇ ವಾಕ್ಯಕ್ಕೆ ಅನ್ವಯಿಸಿದಾಗ ಎರಡನೇ ವಾಕ್ಯ ಸತ್ಯವಾಗಬೇಕಾಗುತ್ತದೆ. ಒಂದು ಸತ್ಯಕ್ಕೆ ಸುಳ್ಳು ಪ್ರಮಾಣ, ಒಂದು ಸುಳ್ಳಿಗೆ ಸತ್ಯದ ಪ್ರಮಾಣ. ಸತ್ಯದಿಂದ ಸುಳ್ಳು ಸಿದ್ಧಿಸುವ, ಸುಳ್ಳಿನಿಂದ ಸತ್ಯಸಿದ್ಧಿಸುವ ವಿರೋಧಾಭಾಸ ಎದುರಾಗುವ ಸಂದರ್ಭ. ಸತ್ಯ-ಸುಳ್ಳು ಎರಡೂ ಒಂದೇ ನಾಣ್ಯದ ಎರಡು ಮುಖಗಳಲ್ಲವೆ, ಎಷ್ಟಾದರೂ ಎಂದು ನೀವು ಸಮಾಧಾನ ಹೇಳಬಹುದು. ಆದರೆ, ಒಂದೇ ನಾಣ್ಯದ ಎರಡೂ ಮುಖಗಳು ಒಂದೇ ಕಾಲಕ್ಕೆ ಮೇಲೆ ಬಿದ್ದಿರುವುದನ್ನು ಕಂಡಿದ್ದೀರಾ? ಈ ವಿರೋಧಾಭಾಸಗಳಲ್ಲಿ ಹಾಗೆ ನಾಣ್ಯದ ಎರಡೂ ಮುಖಗಳು ಮೇಲೆ ಬಿದ್ದಿರುತ್ತವೆ.

ಅಪ್ಪ, ಮಗ ಇಬ್ಬರೂ ದಾರಿಯಲ್ಲಿ ನಡೆಯುತ್ತಾ ಒಂದು ಸೇತುವೆ ಬಳಿ ಬಂದರು. ಮಗ ಹೇಳಿದ "ಒಂದೇ ನಾಣ್ಯದ ಎರಡೂ ಮುಖಗಳು ಮೇಲೆ ಬಿದ್ದಿದ್ದನ್ನು ನಾನು ಒಂದೇ ಕಾಲಕ್ಕೆ ಕಂಡಿದ್ದೇನೆ"

ಅಪ್ಪ, "ಹಾಗೆಲ್ಲ ಸುಳ್ಳು ಹೇಳಬಾರದು" ಎಂದು ಮಗನಿಗೆ ನೀತಿ ಹೇಳಿದ.

"ಸುಳ್ಳು ಹೇಳಿದರೆ ಏನಾಗುತ್ತದೆ? ಎಂದು ಮಗ ಕುತೂಹಲದಿಂದ ಕೇಳಿದ.

ಒಂದು ಕ್ಷಣ ಯೋಚಿಸಿದ ಅಪ್ಪ ಮಗನಿಗೆ ಬುದ್ಧಿ ಕಲಿಸಬೇಕೆಂದು, "ಸುಳ್ಳು ಹೇಳುವವರು ಈ ಸೇತುವೆಯ ಮೇಲೆ ಕಾಲಿಟ್ಟಾಗ ಸೇತುವೆ ಕುಸಿದುಬೀಳುತ್ತದೆ" ಎಂದು ಹೇಳಿದ.

"ಹೌದಾ?" ಎಂದು ಮಗ ಆಶ್ಚರ್ಯಪಡುತ್ತಾ ನಿಂತಾಗ "ಹೌದು" ಎಂದು ಅಪ್ಪ ಸೇತುವೆಯ ಮೇಲೆ ಹೆಜ್ಜೆ ಇಟ್ಟಾಗ ಅದು ಕುಸಿದುಬಿತ್ತು.

ಸುಳ್ಳು ಹೇಳುವವರು ಸೇತುವೆಯ ಮೇಲೆ ಕಾಲಿಟ್ಟರೆ ಅದು ಕುಸಿಯುತ್ತದೆ ಎಂಬ ಸುಳ್ಳನ್ನು ಹೇಳಿದ ಅಪ್ಪ ಸೇತುವೆ ಮೇಲೆ ಬಂದಾಗ, ಅವನ ಮಾತು ಸುಳ್ಳಾದ್ದರಿಂದ ಅದು ಕುಸಿಯುತ್ತದೆ. ಎಪಿಮೆನೈಡ್ಸ್‌ನ ವಿರುದ್ಧೋಕ್ತಿ ನೆನಪಿಗೆ ಬರುತ್ತದೆ. ಇದನ್ನೇ ಹೀಗೆ ಕೂಡ ಹೇಳಬಹುದು. 'ಸುಳ್ಳು ಹೇಳುವವರು ಸೇತುವೆ ಮೇಲೆ ಕಾಲಿಟ್ಟಾಗ ಅದು ಕುಸಿಯುತ್ತದೆ ಎಂಬ ಮಾತಿನಲ್ಲಿ ನಿಜಾಂಶವಿಲ್ಲವಾದ್ದರಿಂದ ಆ ಮಾತು ಸುಳ್ಳು. ಆ ಸುಳ್ಳನ್ನು ಸಾಬೀತು ಮಾಡುವ ಪುರಾವೆಯಾಗಿ ಸೇತುವೆ ಕುಸಿಯುತ್ತದೆ'.



ಒಂದು ವಾಕ್ಯ ತನಗೆ ತಾನೇ ಪ್ರಮಾಣವಾದಾಗ ಎದ್ದುಕಾಣುವ ವಿಸಂಗತಿಗಳು ಪ್ರಕೃತಿಯಲ್ಲಿರುವ ವಿಚಿತ್ರ ಸಂಬಂಧಗಳನ್ನು ಸೂಚಿಸುತ್ತವೆ. 'ತರ್ಕಬದ್ಧ'ವಾಗಿ ಆಲೋಚಿಸುವ 'ವೈಜ್ಞಾನಿಕ' ಪದ್ಧತಿಗೆ ಮನ್ನಣೆ ಇರುವ ವೈಚಾರಿಕ ಸಂಪ್ರದಾಯಸ್ಥರಲ್ಲಿ ಇಂಥ ಅಂತರ್ವಿಸಂಗತಿಗಳು ಗಾಬರಿ, ಗೊಂದಲಗಳನ್ನು ಹುಟ್ಟಿಸಿ ಅವರನ್ನು ದಿಕ್ಕುಗೇಡಿಗಳನ್ನಾಗಿ ಮಾಡಿದರೆ ಆಶ್ಚರ್ಯವಿಲ್ಲ. ನಾವು ಅತ್ಯಂತ ಪ್ರಗತಿಪರ, ಆರೋಗ್ಯಕರ, ಪ್ರತಿಷ್ಠಿತ ಮತ್ತು ಸರ್ವಶ್ರೇಷ್ಠವೆಂದು ತಿಳಿದುಕೊಂಡು ಪ್ರಜ್ಞಾಪೂರ್ವಕವಾಗಿ ಆರಾಧಿಸುತ್ತಾ ನಮ್ಮ ನಾಗರಿಕತೆಯು ಕಟ್ಟುತ್ತಾ ಬಂದಿರುವ ವೈಜ್ಞಾನಿಕ ಪದ್ಧತಿಯ ಅಡಿಪಾಯದ ಅವಿಭಾಜ್ಯ ಅಂಗವಾದ ಗಣಿತಶಾಸ್ತ್ರದಲ್ಲಿ ಬರ್ಟ್ರಾಂಡ್‌ರಸೆಲ್ ಮತ್ತು ಆಲ್‌ಫ್ರೆಡ್‌ನಾರ್ತ್ ವೈಟ್‌ಹೆಡ್ ಬರೆದ 'ಪ್ರಿನ್ಸಿಪಿಯಾ ಮ್ಯಾಥಮ್ಯಾಟಿಕಾ' ಗ್ರಂಥಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಗಣಿತಶಾಸ್ತ್ರದಲ್ಲಿ ಪ್ರಯೋಗವಾಗುವ ಎಲ್ಲಾ ಸೂತ್ರ, ನಿಯಮ ಮತ್ತು ಪದ್ಧತಿಗಳ ಶಾಸ್ತ್ರೀಯ ಬುನಾದಿಯನ್ನು ವಿವರಿಸುವ ಗ್ರಂಥ ಇದು. ಆ ಗ್ರಂಥದಲ್ಲಿ ಒಂದು ದೋಷವಿದೆಯೆಂದು ಭಾವಿಸುವುದು ೧೯೩೧ ರವರೆಗೆ ಯಾರಿಗೂ ಹೊಳೆದಿರಲಿಲ್ಲ. ('ಪ್ರಿನ್ಸಿಪಿಯಾ ಮ್ಯಾಥಮ್ಯಾಟಿಕಾ') ಪ್ರಕಟವಾದದ್ದು ೧೯೧೦ ೧೯೧೩ರ ಅವಧಿಯಲ್ಲಿ). ೧೯೩೧ರಲ್ಲಿ ಜರ್ಮನ್ ಗಣಿತಶಾಸ್ತ್ರಜ್ಞ ಕರ್ಟಗೋಡೆಲ್ ವೈಜ್ಞಾನಿಕ ಪ್ರಪಂಚಕ್ಕೆ ಒಂದು ಶಾಕ್ ಕೊಟ್ಟ. ಅವನ ಸಿದ್ಧಾಂತವೆಂದರೆ ಪೂರ್ಣಾಂಕಗಳನ್ನು ಕುರಿತ ಸಂಖ್ಯಾ ಸಿದ್ಧಾಂತವನ್ನು ಕುರಿತಾದ ಈ ಹೇಳಿಕೆಗೆ 'ಪ್ರಿನ್ಸಿಪಿಯಾ ಮ್ಯಾಥಮ್ಯಾಟಿಕಾ'ದಲ್ಲಿ ಯಾವುದೇ ಪ್ರಮಾಣವಿಲ್ಲ. ಅಷ್ಟೇ ಅಲ್ಲ, 'ಪ್ರಿನ್ಸಿಪಿಯಾ ಮ್ಯಾಥಮ್ಯಾಟಿಕಾ'ದಲ್ಲಾಗಲೀ ಅಥವಾ ಬೇರೆಲ್ಲಾಗಲೀ ಪೂರ್ಣಾಂಕಗಳನ್ನು ಕುರಿತಾದ ಹೇಳಿಕೆಗೆ (ಸಿದ್ಧಾಂತಕ್ಕೆ) ಮತ್ತು ಸಂಬಂಧಪಟ್ಟ ಸಿದ್ಧಾಂತಗಳಿಗೆ ಎಲ್ಲೂ ಯಾವುದೇ ಪ್ರಮಾಣವಿಲ್ಲ ಎಂದೂ ಗೋಡೆಲ್ ಘೋಷಿಸಿದ. ಯಾವುದೇ ಶಾಸ್ತ್ರೀಯ ವಿಚಾರವೂ ಸಮಂಜಸವಾಗಿರಬೇಕು, ಎಂದರೆ ಅದರಲ್ಲಿ ವಿರೋಧಾಭಾಸಗಳಿರಬಾರದು ಮತ್ತು ಅದು ಪರಿಪೂರ್ಣವಾಗಿರಬೇಕು. ಆಗ ಮಾತ್ರ ಅದಕ್ಕೆ ದೃಢತೆ ಮತ್ತು ಸರ್ವಮಾನ್ಯತೆ ಲಭ್ಯವಾಗುತ್ತದೆ. ಆದರೆ ಪೂರ್ಣಾಂಕಗಳ ಸಂಕೀರ್ಣತೆಯನ್ನು ಸುಸಂಬದ್ಧವಾಗಿ, ವಿರೋಧಾಭಾಸಗಳಿಲ್ಲದೆ, ಸ್ವತಂತ್ರವಾಗಿ ಮತ್ತು ಸರ್ವಾನ್ವಯವಾಗಿರುವಂತೆ ಸಿದ್ಧಪಡಿಸುವ ಯಾವುದೇ ಪ್ರಮಾಣ ಪದ್ಧತಿ ಇಲ್ಲ. ಯಾಕೆಂದರೆ ಸಂಖ್ಯಾ ಸಿದ್ಧಾಂತದ ಎಲ್ಲಾ ಸಮಂಜಸವಾದ ಆಧಾರ ಸೂತ್ರ ಪದ್ಧತಿಗಳಲ್ಲೂ ನಿಷ್ಕೃಷ್ಟವಾಗಿ ಇತ್ಯರ್ಥಮಾಡಲಾಗದ ಪ್ರಮೇಯಗಳಿರುತ್ತವೆ. ಸ್ವಲ್ಪದರಲ್ಲಿ ಹೇಳಬಹುದಾದರೆ, ಸಂಖ್ಯಾಪ್ರಮೇಯಗಳಿಗೆ ಸಂಬಂಧಪಟ್ಟ, ಆದರೆ ಸಂಖ್ಯಾಸಿದ್ಧಾಂತದ ಪ್ರಮಾಣ ಪದ್ಧತಿಗಳಿಂದ ಸಿದ್ಧಪಡಿಸಲಾಗದ ಸತ್ಯ ಸಂಗತಿಗಳೂ ಪ್ರಪಂಚದಲ್ಲಿವೆ.



ನಾವೀಗ ಒಂದು ಸಂಪೂರ್ಣ ಹಾಗೂ ಸುಸಂಬದ್ಧ ಪದ್ಧತಿಯ ಶಿಲ್ಪ, ಆಕಾರ, ರಚನೆ, ಸಂಕೀರ್ಣತೆ ಮತ್ತು ವ್ಯಾಪಕ ಧರ್ಮವನ್ನು ಪರಿಭಾವಿಸುತ್ತಿದ್ದೇವಲ್ಲವೆ? ಇಂಥ ಯಾವುದೇ ಸಿದ್ಧಾಂತದಿಂದ ನಾವು ಸಾಧಿಸಬಹುದಾದ ಸತ್ಯಗಳ ಹೊರತಾಗಿ ಸಿದ್ಧಾಂತಕ್ಕೆ ನೇರವಾಗಿ ಸಂಬಂಧಪಟ್ಟ ಆದರೆ ಅದರಿಂದ ಸಾಧಿಸಲಾಗದ ಸತ್ಯಗಳು ಇರುತ್ತವೆಂದು ಹೇಳಿದಾಗ ಅಸಂಪೂರ್ಣತೆ ಮತ್ತು ಅಸಂಬದ್ಧತೆಗಳು

ಗೋಚರಿಸಿ ವಿರೋಧಾಭಾಸಗಳ ಪ್ರಪಂಚದ ಅತಾರ್ಕಿಕ ಸತ್ಯಗಳು ಅಣಕಿಸುತ್ತ ನಿಲ್ಲುತ್ತವೆ. ಸಂಖ್ಯಾಶಾಸ್ತ್ರದ ಆಧಾರ ಸೂತ್ರಗಳ ಅನ್ವಯದಿಂದ ಸಾಧಿತವಾದ ಹೇಳಿಕೆಗಳಲ್ಲಿ ಆಧಾರ ಸೂತ್ರಗಳು ಒಳಗೊಳ್ಳುವ ಸತ್ಯಾಂಶಗಳನ್ನೂ ಮೀರಿದ ಹೇಳಿಕೆಗಳಿರುವ ವಿರೋಧಾಭಾಸವನ್ನು ಗೋಡೆಲ್ ಪ್ರತಿಪಾದಿಸಿದ. ಸೂತ್ರಬದ್ಧ ಆಧಾರಪ್ರಾಯ ಶಾಸ್ತ್ರಪದ್ಧತಿಯಲ್ಲಿ ಇಲ್ಲದ ಕೆಲವು ಅಂಶಗಳು ಅದೇ ಶಾಸ್ತ್ರಪದ್ಧತಿಯಿಂದ ಸಿದ್ಧವಾಗುವ ಹೇಳಿಕೆಗಳಲ್ಲಿರುವ ಸೋಜಿಗದ ಕಡೆ ನಮ್ಮ ಲಕ್ಷ್ಯವನ್ನು ಸೆಳೆದ ಪ್ರತಿಭೆ ಗೋಡೆಲ್‌ನಲ್ಲಿತ್ತು. ಇಂತಹ ಹೇಳಿಕೆಗಳ ಸಾಧುತ್ವವನ್ನು ಆಧಾರಪ್ರಾಯ ಸೂತ್ರಗಳ ಅನ್ವಯದಿಂದ ಕಂಡುಹಿಡಿಯಲು ಸಾಧ್ಯವಾಗದೆಂದು ಕಂಡುಕೊಂಡಾಗ ತಾರ್ಕಿಕ ಅಡಿಗಲ್ಲುಗಳು ತಮ್ಮ ಮೇಲೆ ನಿಂತಿರುವ ಶಾಸ್ತ್ರಪದ್ಧತಿಯನ್ನು ಅಲ್ಲಾಡಿಸದೆ ಬಿಟ್ಟಾವೆಯೆ? ಇಂಥ ವಿರೋಧಾಭಾಸಗಳು 'ಶಾಸ್ತ್ರೀಯ' ಪದ್ಧತಿ ಅತಾರ್ಕಿಕ ಮುಖದರ್ಶನ ಮಾಡಿಸುತ್ತವೆ. ತರ್ಕವನ್ನು ಮೀರಿದ ವಾಸ್ತವತೆಯ ಸಂಕೀರ್ಣತೆಯತ್ತ ನಮ್ಮ ಗಮನ ಸೆಳೆದು ವಿರೋಧಾಭಾಸಗಳ ಶಕ್ತಿ ಮತ್ತು ಅಧಿಕಾರದ ಪರಿಚಯಮಾಡಿಕೊಳ್ಳಲು ಹೊಸ ದ್ವಾರವನ್ನು ನಿರ್ಮಿಸುತ್ತವೆ.

ಮನುಷ್ಯನ ಮಿದುಳಿನ ಕಾರ್ಯ ವಿಸ್ಮಯಕಾರಿ. ಇಡೀ ದೇಹದ ಎಲ್ಲ ವ್ಯಾಪಾರವನ್ನೂ ನಿಯಂತ್ರಿಸುವ ಅಂಗ ಮಿದುಳು. ಕಾರ್ಯ ದೃಷ್ಟಿಯಿಂದ ಮಿದುಳನ್ನು ಎಡ ಅರ್ಧ ಮತ್ತು ಬಲ ಅರ್ಧ ಎಂದು ವಿಂಗಡಿಸಿದ್ದಾರೆ. ಎಡ ಅರ್ಧ ಮಿದುಳು ದೇಹದ ಬಲ ಅರ್ಧದ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸಿದರೆ, ಬಲ ಅರ್ಧದ ಮಿದುಳು ದೇಹದ ಎಡ ಅರ್ಧ ಭಾಗದ ಎಲ್ಲ ಚಟುವಟಿಕೆಗಳನ್ನೂ ನಿಯಂತ್ರಿಸುವ ವ್ಯವಸ್ಥೆ ಮಿದುಳಿನ ರಚನೆಯಲ್ಲಿ ಅಡಕವಾಗಿದೆ. ಆಲೋಚನಾ ಪದ್ಧತಿ, ತರ್ಕ, ಕ್ರಮ, ಕಲಿಯುವ ಸಾಮರ್ಥ್ಯ, ಸರಿ–ತಪ್ಪುಗಳ ವಿವೇಚನೆ, ಲೆಕ್ಕಾಚಾರ, ವಿಚಾರ, ಗಣಿತ– ಇವೆಲ್ಲಕ್ಕೂ ಎಡ ಅರ್ಧ ನೆಲೆ. ಅದಕ್ಕೇ ಬಲಗೈಗೆ ಅಷ್ಟೊಂದು ಬಲ, ಬಲಭಾಗ ಶ್ರೇಷ್ಠ ಅನ್ನುವ ನಂಬಿಕೆ ನಮ್ಮಲ್ಲಿ ಬಲವಾಗಿ ಬೇರೂರಿದೆ. ಎಡ ಮಿದುಳು ಪ್ರತಿಭೆ, ರಸವಿರಸ, ಸ್ಫೂರ್ತಿ, ಕಲೆ, ಭಾವನೆ, ಸಂವೇದನೆಗಳ ಪೀಠ. ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ನಮಗಿರುವ ಒಂದೇ ಸಾಧನವೆಂದರೆ ಮಿದುಳು. ಆದರೆ ಮಿದುಳನ್ನು ಅರ್ಥಮಾಡಿಕೊಳ್ಳಲು ಕೂಡ ಅದೇ ಸಾಧನ. ಮಿದುಳಿನ ಕಾರ್ಯವಿಂಗಡಣೆಯನ್ನು ಅನುಲಕ್ಷಿಸಿ, ಮಿದುಳೂ ಕೂಡ ದೇಹದ ಒಂದು ಅಂಗವೆಂದು ಪರಿಗಣಿಸಿದಾಗ, ಎಡ ಅರ್ಧದ ಮಿದುಳನ್ನು ಬಲ ಅರ್ಧ ನಿಯಂತ್ರಿಸುತ್ತದೆಯೇ ಮತ್ತು ಬಲ ಅರ್ಧದ ಮಿದುಳನ್ನು ಎಡ ಅರ್ಧ ನಿಯಂತ್ರಿಸುತ್ತದೆಯೇ ಎಂಬ ಪ್ರಶ್ನೆ ಏಳುತ್ತದೆ. ಉತ್ತರ?

ಶೋಷಣೆ

ನಾನೆಂದೂ ತುಳಿತಕ್ಕೆ
ಒಳತಕ್ಕೆ ಒಳಗಾದವನೇ
ಅಂತ ರೋಧಿಸಿದ್ದು
ರಸ್ತೆ!



–ಪ್ರಭಾ

ಕ್ಯಾರೇ ದೇವ್ರು

–ಕಮಲಾ ರಾಮಸ್ವಾಮಿ

"ಕಕ್ಕ ಬೇವಿನ ಹಾಲು" ಅಂಬೋ ಹಳ್ಳಿ ತಲುಪಿದಾಗ ಸಂಜೆ ಆಗಿತ್ತು. ನನ್ನ ನೋಡಿದ ಕೂಡ್ಲೆ ಪ್ರಭಾ "ಅಂತೂ ಬಂದ್ಯಲ್ಲಾ ಸದ್ಯ; ಎಲ್ಲಿ ಏನಾದ್ರೂ ನೆಪ ಹೇಳಿಬಿಡ್ತಿಯೋ ಅಂದ್ಕೊಂಡಿದ್ದೆ" ಅಂದ್ಳು.

"ಬರ್ದೆ ಏನು ನಮ್ಮ ದೇಶದ ಆಚಾರ ವಿಚಾರ ಹಿಂದೂ ಮುಸ್ಲಿಂ ಭಾಯಿ ಭಾಯಿ ಹಳ್ಳಿಯಲ್ಲಿನ ಸಂಸ್ಕೃತಿ ಅಂತ ದೊಡ್ಡ ಭಾಷಣ ಕುಟ್ಟಿದೆ. ನೋಡೇ ಬಿಡೋಣ ಅದ್ಕೊಂಡು ಬಂದೇ ಬಿಟ್ಟೆ. Interesting ಆಗಿದ್ರೆ 'ಪರಕ್'ಗೂ ಕಳುಹಿಸೋಣ ಅಂತ ವಿಡಿಯೋ ಕ್ಯಾಮರಾನೂ ತಂದೆ"

"good! ನೀನೇ ನೋಡು ಈ ಜಾತ್ರೆ ಸಂಭ್ರಮಾನ. ಶಂಕ್ರಾಂತಿ ಆದ ಮಾರನೇ ದಿನವೇ ಊರ ಹಬ್ಬ. ಹಳ್ಳೀಲಿ ಇರೋದು ಒದೇ ಒಂದು ಮಸೀದಿ. ಇಲ್ಲಿನ ಮುಸ್ಲಿಂ ಜನರೇ ಕ್ಯಾರೇ ದೇವರಿಗೆ ಕುಚ್ಚಿನದಾರ ಬಾವುಟ ಹಾರ ಸರ ಎಲ್ಲಾ ಹಾಕಿ ಅಲಂಕಾರ ಮಾಡುವುದು. ಆಮೇಲೆ ಅದನ್ನು ಹೊತ್ತು ಮೊದಲು ಮಸೀದಿಯಲ್ಲಿ ಫಕೀರನಿಂದ ಆಶೀರ್ವಾದ ಪಡೆದು ಊರ ಬಾಗಿಲ ಮಾರಮ್ಮನ ಗುಡಿಗೆ ಹೋಗಿ ಮಂಗಳಾರತಿ ಮಾಡಿಸಿ ಮೆರವಣಿಗೆಯಲ್ಲಿ ಬಂದು ಹೊಂಡದ ಬಳಿ ಸೇರುತ್ತಾರೆ. ದೇವರು ಹೊಂಡ ದಾಟಿದ ಮೇಲೆ ಹರಕೆಯವರು ಭಕ್ತರು ಹೊಂಡ ದಾಟುತ್ತಾರೆ. ಆನಂತರ ಡೋಲು ಕುಣಿತ ಇತ್ಯಾದಿ ನಡೆದು ರಾತ್ರಿ ಪೂರ್ತಿ ಮಜಾ ಮಾಡ್ತಾರೆ.... ಮಾತು ಮುಗಿಸುವಷ್ಟರಲ್ಲಿ ಮನೆ ಬಂತು.

ಮಾರನೇ ದಿನ ಹಳ್ಳಿಗೆ ಹಳ್ಳೀನೇ ಸಿಂಗಾರವಾಗಿತ್ತು. ಎಲ್ಲಾರ ಮನೆ ಮುಂದೆ ರಂಗೋಲಿ ತಳಿರು ತೋರಣ. ಸಂಭ್ರಮ ಸಂತಸದಿಂದ ಎಲ್ಲರೂ ಓಡುತ್ತಿದ್ದರು. ನಾವು ಸಂಜೆ ಆಗೋದನ್ನೇ ಕಾಯ್ತಾ ಇದ್ವಿ. ನಾಲ್ಕು ಘಂಟೆ ಹೊತ್ತಿಗೆ ಡೋಲು ಬಡಿತ ಶುರು. ಹಳ್ಳಿಯ ಆಂಜನೇಯನ ಗುಡಿ ಮುಂದಿನ ಬಯಲಿನಲ್ಲಿ 20 x 22 ಅಗಲ ಉದ್ದ 4 ಅಡಿ ಆಳದ ಹಳ್ಳ ತೋಡಿದ್ದರು. ಬೆಳಗಿನಿಂದ ದೊಡ್ಡ ಮರದ ದಿಮ್ಮಿ ಸೌದೆಗಳನ್ನು ಹಾಕುತ್ತಲೇ ಇದ್ದರು. ಸಂಜೆ ಏಳು ಗಂಟೆ ಹೊತ್ತಿಗೆ ಗಣ ಗಣ ಕಾದಿರುವ ಕೆಂಡ ಹಳ್ಳ ತುಂಬಿತ್ತು. ಚಳಿಗೆ ಬೆಚ್ಚಗೆ ಇದ್ದರೂ ಅದರ ಮೇಲೆ ಹೇಗೆ ನಡೆಯುತ್ತಾರೆ ಎಂಬುದೇ ನನ್ನ ಸವಾಲು. ಹರಕೆ ಹೊತ್ತವರು ಹೊಂಡ ಹಾರಲು ಬಯಸಿದವರೆಲ್ಲಾ ಅಲ್ಲಿಗೆ ಬಂದು ಸೇರಿದರು. ಡೋಲು ಜೋರಾಗಿ ಬಡೆದರು. ನನಗೆ ಕಾತುರ ಭಯ ಎಲ್ಲಾ ಹೆಚ್ಚಾಯಿತು.



ಏಳೂವರೆಗೆ ಗುಂಪಿನಲ್ಲಿ ಗುಜುಗುಜು ಪ್ರಾರಂಭವಾಯಿತು. ಹೋ ಹೋ ಎಂದು ಕೂಗಾಡಹತ್ತಿದರು. ಕೊಂಡದ ಸುತ್ತ ಕೂತಿದ್ದ ಹಳ್ಳಿಯ ಹಿರಿಯಲು ಎದ್ದು ಕ್ಯಾರೇದೇವ್ರ ಹತ್ರ ಹೋದ್ರು.

"ಏನಾಯ್ತು ಪ್ರಭಾ"

"ತಾಳು ನೋಡ್ಕೊಂಡು ಅಣ್ಣನ್ನ ಕೇಳಿ ಬರ್ತೀನಿ" ಅಂತ ಹೋದ್ಳು. ತಿರ್ಗಿ ಬಂದ್ಳು. "ನೋಡು ಈ ಸಾರಿ ದೇವರನ್ನ ಹೊರುವವನು ಕೆಂಪಣ್ಣನ ಮಗ. ಇದು ಅವರ ಮನೆತನದ ಕೆಲಸ. ಮನೆಯ ಹಿರಿಯ ಮಗ ದೇವ್ರನ್ನ ಹೊರಬೇಕು. ಆರು ತಿಂಗಳ ಹಿಂದೆ ಕೆಂಪಣ್ಣ ಆಕ್ಸಿಡೆಂಟ್‌ನಲ್ಲಿ ತೀರಿಕೊಂಡ. ಆದ್ದರಿಂದ ಅವನ ಹಿರೀಮಗ ಪ್ಯಾಟೇಲಿ ಓದ್ತಾ ಇದ್ದ ಶ್ರೀನಿವಾಸನ್ನ ಕರೆಸಿದ್ರು. ಆತ ಎಲ್ಲಾ ಮಾಡ್ದ. ಆದರೆ ಹೊಂಡದ ಮೇಲೆ ನಡೆಯೋದಿಲ್ಲ ಬೇಕಾದ್ರೆ ಪ್ರದಕ್ಷಿಣೆ ಮಾಡ್ತೀನಿ ಅಂತಾ ಇದ್ದಾನೆ. ಜನ ಎಲ್ಲಾ ಪದ್ಧತಿ ತಪ್ಪೋದು ಉಂಟೇ! ಹೊಂಡ ಹಾಯಲೇಬೇಕು ಅಂತಿದಾರೆ. ಅದೇ ಗಲಾಟೆ" ಪ್ರಭ ಹೇಳಿದ್ಳು.

ಅಷ್ಟುಹೊತ್ತಿಗೆ ಹಳ್ಳಿಯ ವೃದ್ಧರೊಬ್ಬರನ್ನು ಕರೆತಂದರು. ಆತ ಕೋಲೂರಿಕೊಂಡು ಬಂದರು. ಗುಂಪನ್ನು ಚದರಿಸುತ್ತಾ ಅವರನ್ನ ಕ್ಯಾರೇದೇವ್ರನ್ನ ಹೊತ್ತವನ ಹತ್ತಿರ ಕರೆದೊಯ್ದರು. ನಾವು ಅವರನ್ನೇ ಹಿಂಬಾಲಿಸಿದೆವು.

ಫಾಪ! ದೇವ್ರನ್ನ ಹೊತ್ತು ಹೊಂಡ ಹಾರುವ ಹುಡುಗನಿಗೆ 24-26 ವಯಸ್ಸಿರಬಹುದು. ಷಹರಿನಲ್ಲಿದ್ದವ. ಕೆಂಡ ನೋಡಿ ಕಂಪಿಸುತ್ತಿದ್ದ. ಬೆವರು ಹರಿಯುತ್ತಿತ್ತು.

"ಇದು ನಡೀಲೇಬೇಕಾದ ಕೆಲ್ಸ ನಿಲ್ಲೋ ಹಂಗಿಲ್ಲ. ನಿನ್ನ ತಲೆ ಮೇಲೆ ದೇವ್ರೇ ಕುಂತವ್ನೆ. ನಿನ್ನ ಕಾಲ್ಗೆ ಬಿಸಿ ಹತ್ತಲ್ಲ. ಮನಸ್ಸಿನ್ಯಾಗೆ ಧ್ಯಾನ ಮಾಡ್ಕೊಂಡು ಹಾರಿಬಿಡು. ಏನೂ ಆಗುಲ್ಲ ಹಠ ಬೇಡ ಮಗು. ನೀನು ಹಾದಮೇಲೆ ಮಿಕ್ಕೆಲ್ಲಾ ಪೂಜೆ ಹರಕೆ ತಡ ಮಾಡ್ಬೇಡ ಎಲ್ಲಿ ಎಲ್ಲಾರೂ ಜಾಗ ಬಿಡಿ" ಎಂದು ಆತ ದಾರಿ ಮಾಡಿಸಿದರು. ಎಲ್ಲರೂ ಸರಿದರು. ಶ್ರೀನಿವಾಸ ದೇವ್ರನ್ನ ಹೊತ್ತು ಒಂದು ಪ್ರದಕ್ಷಣೆ ಬಂದ. ಇನ್ನೇನು ಕೆಂಡದ ಮೇಲೆ ಕಾಲಿಡುತ್ತಾನೆ ಎಂದು ಕಾದಿದ್ದೆವು. ಆತ ಕ್ಷಣ ಮಾತ್ರದಲ್ಲಿ ದೇವ್ರನ್ನ ಇಳಿಸಿ ಪೀಠದ ಮೇಲಿಟ್ಟು ಕಣ್ಣುಮಿಟಿಕಿಸುವಷ್ಟರಲ್ಲಿ ಓಡೇಬಿಟ್ಟ. ನಾವುಗಳು ಎದುರಿಗೇ ನಿಂತಿದ್ದೆವು. ನಮ್ಮನ್ನು ತಳ್ಳಿ ಕಣ್ಮರೆಯಾಗಿದ್ದ. ಜನರೆಲ್ಲಾ "ಹೋ" ಎಂದ್ರು. "ಅಭಾಸವಾಯ್ತು ಹಿಡೀರ್ರೋ ಅವ್ನ" ಅಂತ ಕಿರುಚಿದರು. ಸುಮಾರು 150-200 ಜನರು ರೇಗಿ ಹುಚ್ಚೆದ್ದು ಅವನನ್ನ ಹಿಡಿಯಲು ಓಡಿದ್ರು. ಎಲ್ಲರೂ ಆ ಹೊಂಡದ ಮೇಲೆ ಓಡಿ ಹೋದರು. ಹಳ್ಳಿಯೋರೆಲ್ಲ ಕೆಂಡದ ಮೇಲೆ ಓಡಿದ್ದು ನಂಗೆ ಅಚ್ಚರಿ. "ಏನೇ ಇದು ಈ white hot ಹೊಂಡದ ಮೇಲೆ ಓಡಿದ್ರಲ್ಲಾ ಏನಾಗಲಿಲ್ವೇ" ಅಂದೆ.

"ದೇವ್ರ ದಯೆ. ಹೋಗ್ಲಿ ನಿಂಗೆ disappoint ಆಗ್ಲಿಲ್ಲವಲ್ಲ" ಪ್ರಭಾ ಸಮಾಧಾನ ಮಾಡಿದ್ಳು.



ಇದ್ದರೂ ಇರಬಹುದು ನೆಟ್ಟರೂ ಚುಚ್ಚದ ಮುಳ್ಳು ಬಹುಶ:
ನೋಡಿದರೆ ಸಾಕು ಚುಚ್ಚುವುದು ನಿನ್ನ ಕೆಚ್ಚೆದೆಯ ಕಳಶ:

–ಶೀಪಿ

ಮೊದಲುಗಳು

–'ಪ್ರಭಾ'

ಮೊದಲ ಪ್ರೀತಿ ಅಂದರೆ ಫಸ್ಟ್‌ಲೋವ್, ಮೊದಲನೇ ದಿವಸ ಶಾಲೆಗೆ ಹೋಗಿದ್ದು, ಮೊದಲನೇ ದಿವಸ ಸೇದಿದ ಸಿಗರೇಟು, ಮೊದಲನೇ ದಿವಸ ಹೀರಿದ ಬೀರು, ಮೊದಲು ಬರೆದ ಕತೆ (ಕತೆಗಾರರಾದರೆ) ಮೊದಲಾದ ಐಟಂಗಳು ಸಂಬಂಧಿಸಿದವರ ಮನಸ್ಸಿನಲ್ಲಿ ಹಚ್ಚಹಸಿರು ಆಗಿ ಇರುತ್ತೆ ಅಂತ ದಾರ್ಶನಿಕರೊಬ್ಬರು ಹೇಳಿದ್ದಾರಂತೆ. ದಾರ್ಶನಿಕರ ಹೆಜ್ಜೆಯಲ್ಲಿಯೇ ಚಿಂತಿಸುವ ಮತ್ತೂ ಕೆಲವು ದಾಷ್ಟಿಕರು (ಅಂದರೆ ಮೆದುಳು ದಪ್ಪ ಇರುವವರು. ಇದು ಕನ್ನಡಕ್ಕೆ ನನ್ನ ಹೊಸಾ ಪದ ಎಂಬ ಹೆಗ್ಗಳಿಕೆ ಖಂಡಿತ ನನಗಿಲ್ಲ). ಈ ಪಟ್ಟಿಯನ್ನು ಬೆಳೆಸಿ ಮೊದಲ ಮಗು ಹುಟ್ಟಿದಾಗಿನ ಸಂತೋಷ, ಬಾಸ್ ಬಳಿ ಪಡೆದ ಮೊದಲ ಮೆಚ್ಚುಗೆ ಹಾಗೂ ಹೆಂಡತಿ ತಯಾರಿಸಿದ ಮೊಟ್ಟಮೊದಲ ಬಿಸಿಬೇಳೆಬಾತ್ ಇವುಗಳೂ ಅವಿಸ್ಮರಣೀಯ ಎಂದು ಸೇರಿಸುತ್ತಾರೆ. ಮಿಕ್ಕ ವಿಷಯಗಳ ಬಗೆಗೆ ನನಗೆ ಏನೂ ತಿಳಿಯದೇ ಇದ್ದರೂ ಈ ಬಿಸಿಬೇಳೆಭಾತಿನ ವಿಷಯಕ್ಕೆ ಬಂದರೆ ನನಗೆ ನನ್ನಾಕೆ ಈ ಬಿಸಿಬೇಳೆಭಾತ್ ಮಾಡುವುದನ್ನು ಕಲಿಯದಿದ್ದರೆ, ಕಲಿತು ಪ್ರಯೋಗ ನಡೆಸದಿದ್ದರೇ ಆಗಿತ್ತು ಎಂಬ ಭಾವನೆ ಹಲವು ಸಲ ಬಂದಿದೆ ಮತ್ತು ಪ್ರತಿದಿವಸ ಊಟಕ್ಕೆ ತಟ್ಟೆ ಮುಂದೆ ಕುಳಿತಾಗ ಹೆಂಗಸರು ಊಟ ತಯಾರಿಕೆ ನಿಲ್ಲಿಸಲೇ ಬೇಕು ಎಂಬ ಘನವಾದ ನಿರ್ಧಾರಕ್ಕೆ ಬಂದಿದ್ದೇನೆ. ಇದು ಹಾಗಿರಲಿ. ಈ ಮೊದಲುಗಳ ಪಟ್ಟಿಗೆ ಸೇರಬೇಕಾದ ಮತ್ತೂ ಕೆಲವು ಪಾಯಿಂಟುಗಳು ಇರುತ್ತವೆ ಎಂದು ನನ್ನ ಅಭಿಮತ. ಅವುಗಳಲ್ಲಿ ಮೊದಲು ಸ್ವೀಕರಿಸಿದ ವಿಷಾದ ಪತ್ರ, ಮೈಕಿನ ಮುಂದೆ ನಿಂತ ಮೊಟ್ಟ ಮೊದಲ ಪ್ರಸಂಗ ಹಾಗೂ ಮೊಟ್ಟಮೊದಲ ಬಾರಿಗೆ ಶಾಸಕನೋ, ಮಂತ್ರಿಯೋ ಆದ ಅನುಭವವೂ ಬೇಕೇ ಬೇಕು ಎಂಬುದೂ ನನ್ನ ಫರ್ಮ್ ಒಪೀನಿಯನ್ನು.

ಇಷ್ಟು ಪೂರ್ವ ಪೀಠಿಕೆಯೊಂದಿಗೆ ಮೊದಲುಗಳ ಪಟ್ಟಿಗೆ ನಾನು ಸೇರಿಸ ಹೊರಟಿರುವುದು ನಾನು ಬಿಗಿದ ಮೊದಲ ಭಾಷಣ. ಹೇಳಿಕೇಳಿ ಹುಟ್ಟಿದಾಗಿನಿಂದಲೂ ಕೊನೇಬೆಂಚಿನ ಖಾಯಂ ಗಿರಾಕಿಯಾದ ನನಗೆ ಕೊನೇಬೆಂಚಿನಲ್ಲಿ ಕೂತು ಶಿಳ್ಳೆ ಹೊಡೆಯುವ, ಆ ಎಂದು ಆಕಳಿಸುವ ಮತ್ತು ಭಾಷಣ ಆಗಬೇಕಾದರೆ ಇದ್ದಕ್ಕಿದ್ದಂತೆ ಆಹಾಹಾ ಎಂದು ನಕ್ಕು ಕೈಚಪ್ಪಾಳೆ ತಟ್ಟಿ ಭಾಷಣಕಾರರನ್ನು ಬೆದರಿಸುವ ಕಲೆ ಬಹಳ ಚೆನ್ನಾಗಿ ಕರಗತವಾಗಿದೆ. ಇಂತಹ ರೆಕಾರ್ಡುಗಳನ್ನು ಹೊಂದಿರುವ ನಾನೂ ಒಮ್ಮೆ ಭಾಷಣ ಬಡಾಯಿಸುವ ಇಕ್ಕಟ್ಟಿಗೆ ಸಿಲುಕಿ ಹಾಕಿಕೊಳ್ಳಬೇಕಾಯಿತು.



ಅದು ಆದದ್ದು ಹೀಗೆ. ಜಾತಿ ಸಂಘ, ತಿರುಪತಿ ದೇವರ ಭಕ್ತರ ಸಂಘ, ಗೂರವನಲಕ್ಷ್ಮಿ ಪ್ರಸಾದದವರ ಸಂಘ, ಬಡಗನಾಡು ಬಳಗ ಶರಣರ ಕೂಟ ಮೊದಲಾದ ಸಂಘಟನೆಗಳಂತೆ ನಾನೂ ಒಂದು ಕೂಟದ ಹಾನರರಿ ಸದಸ್ಯ. ಈ ಕೂಟದ ಹೆಸರು ದೇವರಿಲ್ಲದ ಸಂಘ ಅಂತ! ಈ ದೇವರಿಲ್ಲದ ಸಂಘದ ಪ್ರೊಪ್ರೈಟರ್ ಮತ್ತು ಫೌಂಡರ್ ಸದಸ್ಯ ನಾನೇ. ಸಂಘದ ಇತರೇ ಚಟುವಟಿಕೆಗಳು ಏನೇ ಇರಲಿ ಜಾತಿ

ಸಮ್ಮೇಳನ, ಧರ್ಮ ಸಮ್ಮೇಳನ ಮೊದಲಾದವುಗಳು ನಡೆದಾಗ ಅದರಲ್ಲಿ ಭಾಗವಹಿಸಿ ಸಮಾರಂಭದಲ್ಲಿ ಗದ್ದಲ ಎಬ್ಬಿಸೋದು ಮತ್ತು ಸಮಾರಂಭದ ಅವ್ಯವಸ್ಥೆಗಳನ್ನು ಬಹಿರಂಗವಾಗಿ ಟೀಕಿಸೋದು ನಮ್ಮ ಸಂಘದ ಧ್ಯೇಯಗಳಲ್ಲಿ ಒಂದು. ಸುಮಾರುಕಾಲ ಈ ತರಹದ ಆಕ್ಟಿವಿಟಿಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡ ನಂತರ ನಮ್ಮ ಸಂಘಟಕರಲ್ಲಿ ಒಂದು ಆಸೆ ಹುಟ್ಟಿತು. ನಾವೇ ಒಂದು ಸಭೆ ಏರ್ಪಟಿಸಬೇಕು ಅಂತ. ದೇವರಿಲ್ಲ ಅಂಬೋ ಸಂಘದ ಛತ್ರಿ ಅಡಿ ಮಾತಾಡಲು ಯಾರು ಒಪ್ಪುತ್ತಾರೆ? ಏರಿಯಾದ ರಾಜಕಾರಣಿಗೆ ಅವತ್ತೇ ಯಾವುದೋ ಸ್ವಾಮಿಗಳ ಪಾದಪೂಜೇಲಿ ಭಾಗವಹಿಸಬೇಕಿತ್ತು. ಆಗೊಲ್ಲ ಅಂದ. ಬೇರೆ ದಿವಸ ಆದರೂ ಸಾಧ್ಯ ಇಲ್ಲರೀ ಅಂತ ಕೈ ಆಡಿಸಿದ. ಕೆಲವು ಸಾಹಿತಿಗಳನ್ನು ಹೋಗಿ ಕಂಡರು ನಮ್ಮ ಕಾರ್ಯಕ್ರಮ ನಿಯೋಜಕರು. ಸಾಹಿತಿಗಳು ಹೇಳಿಕೇಳಿ ಪುಕ್ಕಲು ಸ್ವಭಾವದವ್ರು. ನೂರುಗಜದ ಉದ್ದನೇ ಕೋಲಿನಿಂದಲೂ ಕಾಂಟ್ರೋವರ್ಸಿಯಲ್ ಸುದ್ದಿಗಳನ್ನು ಮುಟ್ಟಲು ಹೆದರೋ ಜನ, ಪ್ಲಸ್ ಪ್ರತಿ ಸಾಹಿತೀನೂ ಯಾವುದಾದರೂ ಮಠದ ಕೃಪಾಪೋಷಿತವಾಗಿದ್ದರಿಂದ ಸಮಾರಂಭಕ್ಕೆ ಅನಿವಾರ್ಯ ಕಾರಣಗಳಿಂದ ಬರೋಕ್ಕೆ ಆಗೊಲ್ಲ ಅಂತ ತಮ್ಮ ದುಃಖ ತೋಡಿದರಂತೆ!.

ಅಪರೂಪಕ್ಕೆ ಏರ್ಪಡಿಸಿದ್ದ ಈ ಕಾರ್ಯಕ್ರಮಕ್ಕೆ ಇಷ್ಟು ತೊಡರುಗಾಲು ಬಂದಿದ್ದು ಕಂಡು ಹೇಗಾದರೂ ಸಭೆ ನಡೆಸೇ ತೀರಬೇಕು ಅಂತಲೇ ಹಠ ನಮ್ಮೊಂದಿಗೆ ಹುಟ್ಟಿತು. 'ಲೇ ಬಾರ್ಲ್ಲಾ, ಕೊನೇ ಬೆಂಚ್ನಾಗೆ ಕೂತು ಅಷ್ಟು ಪಸಂದಾಗಿ ಬೆಕ್ಕು ಕೂಗ್ದಂಗೆ ಕೂಗ್ತಿ, ಸಂದಾಗಿ ಚಪ್ಪಾಳೆ ಬಜಾಯಿಸ್ತೀ, ನೋಡ್ಲಿಕ್ಕೂ ಆಳು ಕಟ್ಟು ಮಸ್ತ್ ಇದ್ದಿ. ನೀನೇ ಭಾಷ್ಣ ಮಾಡ್ಲ. ನಿಂಗಿನ್ನ ಬೇರೆ ಭಡವ ಬೇಕೇನ್ಲೇ?.. ಅಂತ ನನ್ನ ಸ್ನೇಹಿತರು ಬಲವಂತವಾಗಿ ನನ್ನನ್ನು ಭಾಷಣಕ್ಕೆ ಅಂತ ಒಪ್ಪಿಸಿದರು. ಭಾಷಣ ಮುಂದಿನ ವಾರ ಅಂತಲೂ ನಿರ್ಧರಿಸಿದರು. ದೇವರಿಲ್ಲ ಸಂಘದ ನಿಯಮಕ್ಕೆ ಅನುಸಾರವಾಗಿ ಒಂದು ವಾರ ಪೂರ್ತಿ ಕೂತು ದೇವರು ಇಲ್ಲ ಅನ್ನೋದಕ್ಕೆ ಪಾಯಿಂಟು ಹಾಕಿದೆ. ಎಂಟು ಪೇಜು ಪಾಯಿಂಟು ಹಾಕಿ ಕೆಲವು ಪಾಯಿಂಟುಗಳನ್ನು ಹೇಗೆ ಹೇಗೆ ಹಿಗ್ಗಿಸಬೇಕು ಅಂತ ಮನಸ್ಸಿನಲ್ಲೇ ಚಿಂತಿಸಿದೆ. ದಿನಾ ರಾತ್ರಿ ಹತ್ತರ ನಂತರ ರೂಮು ಸೇರಿ ಬಾಗಿಲು ಜಡಿದು ಕನ್ನಡಿ ಮುಂದೆ ನಿಂತು 'ಪ್ರಿಯ ಸಭಿಕರೇ.... ಅಂತ ನನ್ನ ಅರ್ಧ ಘಂಟೆಯ ಭಾಷಣವನ್ನು ಸಖತ್ತಾಗಿ ರಿಹರ್ಸಲ್ ನಡೆಸಿದೆ. ಭಾಷಣದ ಭಾನುವಾರದ ಹಿಂದಿನ ಶನಿವಾರ ಸಂಜೆ ಕತ್ತಲಾದ ಮೇಲೆ ಯಾರೂ ಗೆಳೆಯರು ನನ್ನನ್ನ ಹಿಂಬಾಲಿಸುತ್ತಿಲ್ಲ ಅಂಬೋದನ್ನ ಖಚಿತ ಪಡಿಸಿಕೊಂಡು ಆಂಜನೇಯನ ಗುಡಿಗೆ ಹೋಗಿ ತುಪ್ಪದ ದೀಪ ಹಚ್ಚಿ 'ದೇವರೇ ನಾಳೆ ದೇವರಿಲ್ಲ ಸಂಘದಲ್ಲಿನ ನನ್ನ ಭಾಷಣ ಯಾವ ಎಗ್ಗೂ ತಗ್ಗೂ ಅಡೆ ತಡೇನೂ ಇಲ್ಲದೆ ನಡೆದರೆ ನಿನಗೊಂದು ಬೆಳ್ಳಿ ನಾಲಗೆ ಮಾಡಿಸ್ತೀನಿ. ಅಷ್ಟು ಮಾಡಿ ಕೊಡು ದೇವರೇ ಅಂತ ಕೈ ಮುಗಿದು ಕೇಳಿಕೊಂಡೆ. ರಾತ್ರಿ ಎಲ್ಲಾ ದೇವರಿಗೆ ಮತ್ತೆ ಮತ್ತೆ ಪ್ರಾರ್ಥನೆ ಒಪ್ಪಿಸಿದೆ. ಧೈರ್ಯ ಕೊಡು, ಶಕ್ತಿ ಕೊಡು ಭಾಷಣದ ಮಧ್ಯೆ ಸ್ಥೈರ್ಯ ಕೊಡು ಅಂತ ಕೇಳಿ ಕೊಂಡೆ ಅಂತ ಕಾಣುತ್ತೆ. ಹತ್ತು ಜನರ ಹಿಂದೆ ಕೂತು ಮಾಡುವ ಚೇಷ್ಟೆಗಳಿಗಿಂತಲೂ ಹತ್ತು ಜನರ ಎದುರು ನಿಂತು ಆಡಬೇಕಾದ ಮಾತುಗಳು ಹೆಚ್ಚು ಹಿಂಸೆಗೆ, ಮಾನಸಿಕ ಹಿಂಸೆಗೆ, ದಾರಿನಂತೆ. ಇದಕ್ಕೆ ಕಾರಣ ಅಂದರೆ ಜನರನ್ನು ಕಂಡಕೂಡಲೇ ಮೈ ನಡುಗೋದು, ಬಾಯಿತೊದಲೋದು ಮತ್ತು ಮೆದುಳು ಬ್ಲ್ಯಾಂಕ್



ಆಗೋದು ಅಂತೆ. ಕೊನೆಗೂ 'ಡಿ ಡೇ' (D-Day) ಬಂದೇ ಬಂದಿತು. ಹತ್ತಕ್ಕೆ ಶುರುವಾಗಬೇಕಾದ ಸಭೆ ಜನ ಬರಲಿ ಜನ ಬರಲಿ ಅಂತ ಹನ್ನೊಂದೂವರೆಗೆ ಶುರು ಆಯಿತು. ಜೇಬಿನಲ್ಲಿ ನಾನು ಮಡಿಸಿಟ್ಟಿದ್ದ ನೋಟ್ಸ್ ಹಾಳೆಗಳೂ ಇತ್ತು. ಡಯಾಸಿನ ಮೇಲೆ ನನ್ನನ್ನು ಕರೆದು ಕೂರಿಸಿದರು. ಸ್ವಾಗತ ಪರಿಚಯ ಆದ ನಂತರ 'ದೇವರಿಲ್ಲ' ಎಂಬ ಬಗ್ಗೆ ನನ್ನ ಭಾಷಣ ಬನ್ನಿ ಇವರೇ ಅಂತ ಮೈಕ್ ಬಳಿ ಕರೆದರು. 'ದೇವರೇ ಕಾಪಾಡು' ಅಂತ ಮನಸ್ಸಿನಲ್ಲೇ ಅಂದುಕೊಂಡು ಮೈಕ್ ಬಳಿ ನಡೆದೆ. ಸಭೆ ಕಡೆ ಒಮ್ಮೆ ನೋಡಿದೆ. ಸಭೆ ತುಂಬಾ ಹುಲಿ, ಕರಡಿ, ಸಿಂಹಗಳು ಕೂತಿದ್ದವು. ಮೈಕ್ ಮುಂದೆ ನಿಂತು 'ಸಭಿಕರೇ... ಅಂದೆ. ಬಾಯಿಂದ ಧ್ವನಿ ಬರಲಿಲ್ಲ. ಮತ್ತೊಮ್ಮೆ ಸಭಿಕರೇ ಅನ್ನಲು ಪ್ರಯತ್ನಿಸಿದೆ. 'ಸ್ಸ್ಸ್ ಅನ್ನೋ ಶಬ್ದ ಮಾತ್ರ ಹೊರಟಿತು. ಎದುರು ಕೂತಿರೋ ಕರಡಿ ಸಿಂಹ ಹುಲಿಗಳು 'ಆ' ಅಂತ ಬಾಯಿತೆಗೆದು ನನ್ನನ್ನ ನುಂಗಲು ಬರ್ತಿವೆ ಅನಿಸಿತು. ಕೊನೇ ಬೆಂಚಿನಿಂದ ಯಾವುದೋ ನಾಯಿ ಟಾಟಾ ಅಂದರೆ ಅದೇ ಬೆಂಚಿನಿಂದ ಒಂದು ಬೆಕ್ಕು ಗಟ್ಟಿಯಾಗಿ ಅರಚಿತು. ನನಗೆ ಕೈಕಾಲು ನಡುಗಿತು. ಬಾಯಿಯಲ್ಲಿ ದ್ರವ ಆರಿಹೋಯಿತು. ಕೈಲಿದ್ದ ಪೇಪರು ಒದ್ದೆ ಆಯಿತು. ಒಂದೆರಡು ಸೆಕೆಂಡ್‌ನಲ್ಲಿ ಬೆವರಿನ ಸ್ನಾನ ಆಗಿ ಹೋಯಿತು. ಕಣ್ಣು ಕತ್ತಲು ಆದ ಹಾಗೆ ಆಗಿ...... ಮುಂದೇನಾಯಿತೋ ತಿಳಿಯದು.


ಭಾಷಣಕಾರರು ಸಭಾ ಮಂಟಪದಲ್ಲೇ ಬಿದ್ದರು, ಅಸ್ವಸ್ಥರಾಗಿ ಅಂತ ಮಾರನೇದಿವಸ ಪೇಪರಿನಲ್ಲಿ ಬಂತಂತೆ. ದೇವರಿಲ್ಲ ಸಂಘದ ಮೊದಲನೇ ಕಾರ್ಯಕ್ರಮ ಹೀಗೆ ಪಲ್ಟಿ ಹೊಡೆದದ್ದೂ ಅಲ್ಲದೇ ನನಗೆ ನನ್ನ ಮೊದಲ ಭಾಷಣದ ನೆನಪನ್ನೂ ಅಚ್ಚಳಿಯದ ಹಾಗೆ ಮನಸ್ಸಿನಲ್ಲಿ ಗುಂಡು ಕಲ್ಲಿನಂತೆ ಕೂತಿದೆ! ದೇವರು ಕೈಕೊಟ್ಟದ್ದು ನನ್ನ ನೆನಪಿನಲ್ಲಿ ಹಚ್ಚ ಹಸಿರು!! ದೇವರು ಕೂಡ ಢಂಗ್ ಹೊಡೀಬಹುದು ಅಂತ ಆವತ್ತು ಅರ್ಥ ಆಯಿತು. ಮತ್ತೆ ಭಾಷಣಕ್ಕೆ ಯಾರೂ ನನ್ನ ಕರೆದಿಲ್ಲ ಮತ್ತು ಭಾಷಣ ಅಂದರೇ ನನಗೆ ತೊಡೆ ನಡುಕ ಆರಂಭ ಆಗುತ್ತೆ.

ನಮ್ಮವರು

ಎಚ್. ಡುಂಡಿರಾಜ್

ನಮ್ಮವರು
ಬಾಲು
ತಡೆಯಲು
ಬೀಳುವುದಿಲ್ಲ
ಯಾಕೆಂದರೆ
ಹಾಗೆ ಬಿದ್ದರೆ
ಮತ್ತೆ ಏಳುವುದಿಲ್ಲ!





"Have you been waiting long?"

ಕೃಪೆ - ಸ್ಪ್ಯಾನ್

ನಾನು ಮತ್ತು ನನ್ನ ಹೆಸರು

–ಬಿ.ಎಸ್. ಚಂದ್ರಶೇಖರ್

ಹೆಸರಿನ ಬಗೆಗೆ ಬರೆಯುವವರು ಷೇಕ್ಸ್‌ಪಿಯರ್ ಮಹಾಕವಿಯ ಆ ಪ್ರಸಿದ್ಧ ಸಾಲುಗಳನ್ನು ಉಲ್ಲೇಖಿಸಲೇ ಬೇಕು ಎನ್ನುವ ಹನ್ನೊಂದನೆಯ ಕಮಾಂಡ್‌ಮೆಂಟ್ ಇದೆಯಂತೆ. ಅದಕ್ಕೆ ಬದ್ಧನಾಗಿ ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೂ ಅದರ ಸುಮಧುರತೆ ಕಡಿಮೆಯಾದೀತೆ ಎನ್ನುವ ಆ ಪಂಕ್ತಿಯಿಂದಲೇ ಪ್ರಾರಂಭಿಸುತ್ತೇನೆ. ಆದರೆ ನನಗೂ, ನನ್ನ ಹೆಸರಿಗೂ, ಮುಖಕ್ಕೂ ಗುಲಾಬಿಗೂ ಅಥವಾ ಇನ್ನು ಯಾವುದೇ ಹೂವಿಗೂ ಏನೂ ಹೋಲಿಕೆಯಿಲ್ಲ ಎಂದೂ ಮುಂಚೆಯೇ ಸ್ಪಷ್ಟಪಡಿಸಲು ಬಯಸುತ್ತೇನೆ.

ನನ್ನ ಅಮ್ಮನಿಗೆ ನಾನು ಹುಟ್ಟಿದಾಗ 'ನಿಮ್ಮ ಚಂದದ ಮಗುವಿಗೆ ಒಂದು ಅಂದದ ಹೆಸರು' ಶೀರ್ಷಿಕೆಯ ಪುಸ್ತಕಗಳು ಲಭ್ಯವಿರಲಿಲ್ಲ. ಪ್ರತಿ ಕಾದಂಬರಿಯ ಪಾತ್ರಗಳಿಗೆ ತೀರಾ ವಿನೂತನ ಹೆಸರು ಹುಡುಕುವ ಲಲನಾಮಣಿಯ ಕಾದಂಬರಿಗಳು ಆಗಿನ್ನೂ ಪ್ರಕಟವಾಗಿರಲಿಲ್ಲ. ಹೆಸರಿನಲ್ಲಿ ಎಷ್ಟು ವೈವಿಧ್ಯ ಸಾಧ್ಯ ಎಂದು ತಿಳಿಸುವ ವಿವಿಧ ಭಾರತೀಯ ನಿಮ್ಮ ಮೆಚ್ಚಿನ ಚಿತ್ರಗೀತೆಗಳೂ ಇರಲಿಲ್ಲ. ಆದರೆ ಹೊಸ ತರಹ ಹೆಸರು ಬೇಕು ಎನ್ನುವ ಆಸೆ ಮಾತ್ರ ಇತ್ತು ಅಂತ ಕಾಣುತ್ತೆ. ಸುಬ್ಬಪ್ಪ, ನಾರಣಪ್ಪ, ಸೂರಪ್ಪ ವಂಶದಲ್ಲಿ ಚಂದ್ರಶೇಖರ ಎನ್ನುವುದು ತೀರಾ ವಿನೂತನ ಎನ್ನಿಸಿರಬಹುದು.

ಆದರೆ ಇದೇ ಯೋಚನೆ ಇನ್ನೂ ಹಲವು ಲಕ್ಷ ತಾಯಿಗಳಿಗೆ ಅದೇ ಸಮಯದಲ್ಲಿ ಬಂದಿದ್ದೆ ನನ್ನ ಸಮಸ್ಯೆಯ ಮೂಲ. ಹೆಸರು ಒಂದು ವ್ಯಕ್ತಿಯನ್ನು ಗುರುತಿಸಲು ಇರುತ್ತದೆ. ಆದರೆ ನನ್ನ ಬಗೆಗೆ ಮಾತ್ರ ಚಂದ್ರು ಅಂದಾಗ ಯಾವ ಚಂದ್ರು? ಎನ್ನುವ ಸಪ್ಲಿಮೆಂಟರಿ ಪ್ರಶ್ನೆ ಮೊದಲಿನಿಂದಲೂ ಬರುತ್ತಿದೆ. ನಮ್ಮನೆ ಚಂದ್ರು, ಆಚೆಮನೆ ಚಂದ್ರು, ಬಾಗೂರು ಚಂದ್ರು ಅರಸೀಕೆರೆ ಚಂದ್ರು, ಕರಿಚಂದ್ರು ಬಿಳಿಚಂದ್ರು ಇತ್ಯಾದಿಗಳನ್ನು ನಮ್ಮ ಮನೆಯಲ್ಲೇ ಉಪಯೋಗಿಸಬೇಕಾಗುತ್ತಿತ್ತು. ಶಾಲೆಯಲ್ಲಿ ನನ್ನ ಹುಡುಗರು ಉಪಯೋಗಿಸುತ್ತಿದ್ದ ವಿಶೇಷಣಗಳು ಈಗ ಜ್ಞಾಪಿಸಿಕೊಂಡರೂ ಬೆಚ್ಚಿ ಬೀಳುವ ಹಾಗಾಗುತ್ತೆ.



ಚತುಷ್ಕೋಟಿ ಕನ್ನಡಿಗರಲ್ಲಿ ಚತುರ್ ಲಕ್ಷ ಏಕೆ ಚತುರ್ದಶ ಲಕ್ಷ ಕ್ಷಮಿಸಿ ಇಷ್ಟೊಂದು ದೊಡ ದೊಡ ಅಂಕಿಗಳನ್ನು ನಾನು ಸಂಸ್ಕೃತದಲ್ಲಿ ಹೇಳಲಾರೆ, ನಾಲ್ಕು ಲಕ್ಷದಿಂದ ನಲ್ವತ್ತು ಲಕ ಜನ ಚಂದ್ರ ಮತ್ತು ಅದರ ಡಿರೈವ್ ಹೆಸರಿನವರಿರಬೇಕು. ಸರ್ಕಾರದ 'ಎ' ಯಿಂದ ಜಡ್‌ವರೆಗಿನ ಎಲ್ಲಾ ಜಾತಿಪಟ್ಟಿಗಳಲ್ಲೂ ನನ್ನ ಹೆಸರಿನವರಿದ್ದಾರೆ. ಅಷ್ಟೇಕೆ ಕನಾ ಕುಮಾರಿಯಿಂದ ಕಾಶ್ಮೀರದವರೆಗೂ (ಸದ್ಯಕ್ಕೆ

ಜಮ್ಮುವರೆಗೆ) ಸೇಕರ್, ಶೇಖರನ್, ಶೇಖರಂ, ಚೊಂದ್ರೋ, ಚಂದರ್ ಇತ್ಯಾದಿ ಕೋಟಿ ಚಂದ್ರಶೇಖರ್‌ಗಳಿರಬೇಕು.

ಪ್ರಧಾನಮಂತ್ರಿ ಚಂದ್ರಶೇಖರ್ (ಅವರು ಎಷ್ಟು ದಿನ ಪ್ರಧಾನಮಂತ್ರಿಗಳಾಗಿದ್ದರೋ ಅಷ್ಟು ವರ್ಷ ಮಾಜಿ ಪ್ರಧಾನಿಗಳಾಗಿರುತ್ತಾರಲ್ಲವೇ?) ನೋಬೆಲ್ ವಿಜ್ಞಾನಿ ಸರಿಯೇ ಸರಿ. ಇತ್ತೀಚೆಗೆ ಬೆಂಗಳೂರಿನಲ್ಲಿ ಅತಿಹೀನ ಅಪರಾಧಕ್ಕಾಗಿ ಮೂರು ಜನ ಚಂದ್ರಶೇಖರ್‌ಗಳನ್ನು ಒಂದೇ ಜಾಗದಿಂದ ಪೋಲಿಸರು ಹಿಡಿದಿದ್ದರು. ಹೀಗಾಗಿ ನನ್ನ ಹೆಸರಿನವರ ಖ್ಯಾತಿ ಜೀವನದ ಎಲ್ಲಾ ಭಾಗಗಳನ್ನೂ ಆವರಿಸಿದೆ. ಹೆಸರು ನನಗೆ ಒಂದು ಐಡೆಂಟಿಟಿ ಕೊಡುವ ಬದಲು, ಇವನು ಇವನೇ ಎಂದು ಹೇಳುವ ಬದಲು, ಈ ಗುಂಪಿನಲ್ಲಿ ಮುಖ ಹುಡುಕಿ ಎಂದು ಮಾತ್ರ ಹೇಳುವಂತಾಗಿದೆ.

ನಿಜ ಇದು ನನ್ನ ಒಬ್ಬನ ಸಮಸ್ಯೆಯಲ್ಲ. ನನ್ನ ಸೋದರಳಿಯನ ಊರಿಗೆ ಈಚೆಗೆ ಹೋಗಿದ್ದೆ. ಯಾವುದೋ ಕೆಲಸಕ್ಕಾಗಿ ಅವರ ಕಚೇರಿಗೂ ಹೋಗುವ ಸಂದರ್ಭವಿತ್ತು. 'ಮಾವ ಅಲ್ಲಿ ಬಂದಾಗ ಮ್ಯಾನೇಜರ್ ಶ್ರೀಧರ ಎಂದು ಕೇಳಿ. ನನ್ನ ರೂಮ್ ತೋರಿಸುತ್ತಾರೆ' ಎಂದು ಹೇಳಿದ. ನಾನು ಹಲವು ವರ್ಷಗಳಿಂದ ತಾಪೇದಾರಿ ಮಾಡುತ್ತಿದ್ದೇನೆ. ಇಪ್ಪತ್ತು ವರ್ಷದ ನಂತರ ಇಂದಾ–ಗೆಯಿಂದ ಫಸ್ಟ್ ಡಿವಿಜನ್‌ಗೆ ಭಡ್ತಿ ಸಿಕ್ಕಿದೆ. ಇವನು ಇಷ್ಟು ಸಣ್ಣ ವಯಸ್ಸಿನಲ್ಲಿ ಮ್ಯಾನೇಜರ್ ಆಗಿದ್ದಾನೆ. ನನ್ನನ್ನು ಹಂಗಿಸುತ್ತಿದ್ದಾನೆ ಎಂದು ತಿಳಿದು 'ಸರಿಯಪ್ಪ ನೀನು ಮ್ಯಾನೇಜರ್ ಆಗಿದ್ದು ನಿಮ್ಮಮ್ಮ ನನ್ನ ಮುಂದೆ ನೂರು ಸರ್ತಿ ಹೇಳಿದಾಳೆ' ಎಂದೆ. ನನ್ನ ಭಾವನೆ ಅವನಿಗೆ ಅರ್ಥವಾಯಿತು ಅಂತ ಕಾಣುತ್ತೆ. 'ಹಾಗಲ್ಲ ಮಾವ ನಮ್ಮ ಆಫೀಸಿನಲ್ಲಿ ನನ್ನ ಹೆಸರಿನವರೇ ಹತ್ತು ಜನ ಇದ್ದಾರೆ. ಮ್ಯಾನೇಜರ್ ಶ್ರೀಧರ ನಾನು ಒಬ್ಬನೇ' ಎಂದು ಹೇಳಿದ. ಆಗ ಗೆಂಡೇ ಮೂಗಿನ ಚಂದ್ರು ಅನ್ನೋದಕ್ಕಿಂತ ಎಲ್‌ಡಿಸಿ ಚಂದ್ರು ಅಂತ ನನ್ನ ಆಫೀಸ್‌ನವರು ನನ್ನ ಕರೆದಿದ್ದರೆ ಚೆನ್ನಾಗಿರುತ್ತಿತ್ತಲ್ಲ ಅನ್ನಿಸಿತು.

ಇದಕ್ಕಿಂತ ಇನ್ನೂ ಹೆಚ್ಚಿನ ಗೊಂದಲದ ಒಂದು ಸಂಗತಿಯನ್ನು ನನ್ನ ಸ್ನೇಹಿತರು ಹೇಳಿದ್ದರು. ಅವರು ಯಾವುದೋ ಬ್ಯಾಂಕ್ ಗುಮಾಸ್ತರ ಕೆಲಸಕ್ಕೆ ನಡೆಯುವ ಪರೀಕ್ಷೆಯ ಒಂದು ರೂಮ್ ಸೂಪರ್‌ವೈಸರ್ ಆಗಿದ್ದರಂತೆ. ಯಾರೋ ಸುಧಾ ಹೆಸರಿನ ಹುಡುಗಿಯನ್ನು ಹುಡುಕಿಕೊಂಡು ಬಂದರಂತೆ. ಇವರ ರೂಮಿನಲ್ಲಿದ್ದ ನೂರೈವತ್ತು ಹುಡುಗಿಯರೂ ಸುಧಾಗಳೇ. ಆ ಕಡೆ ಈ ಕಡೆ ರೂಮಿನಲ್ಲಿ ಇನ್ನೂ ನೂರು ಸುಧಾಗಳು ಇದ್ದಾರೆ. ಹುಡುಕಿಕೊಂಡು ಬಂದವರು ಎಸ್ ಎನ್ನುವ ಇನಿಷಿಯಲ್ ಹೇಳಿದರು. ಒಟ್ಟು ಅರವತ್ತು ಹುಡುಗಿಯರಿಗೆ ಅದೇ ಇನಿಷಿಯಲ್ ಇದೆ. ಹಸಿರು ಕೆಂಪು ಸಲ್‌ವಾರ್ ಕಮೀಜ್ ಎನ್ನುವ ಅಡಿಷನಲ್ ಮಾಹಿತಿಯಿಂದ ಅರವತ್ತು ಮೂವತ್ತಕ್ಕೆ ಇಳಿಯಿತು. ಹುಡುಕಿಕೊಂಡು ಬಂದವರು, ಹಿಂದಿನ ಲೇಖಕರು ಹೇಳುತ್ತಿದ್ದಂತೆ 'ಕಿಂಕರ್ತವ್ಯ ಮೂಢರಾದರು'. ಪಾಪ ಒಂದು ತಲೆಮಾರಿನ ತಾಯಂದಿರು ಆ ಎರಡು ಅಕ್ಷರದ ಹೊಸ ಹೆಸರನ್ನು



ತಮ್ಮ ಮಕ್ಕಳಿಗಿಟ್ಟರು. ಆ ಮುದ್ದಿನ ಮಗು ಬೆಳೆದು ನಿರುದ್ಯೋಗಿಗಳ ಸೈನ್ಯ ಸೇರಿ ತಂದೆಗೇ ಗೊಂದಲ ಬರುವಂತಹ ಸ್ಥಿತಿ ಏರ್ಪಟಿತು.

ನನ್ನದು ಇಂತಹ ವಿಷಮ ಪರಿಸ್ಥಿತಿಯಲ್ಲ ನಿಜ. ಹಳೇ ಮೈಸೂರಿನ ಊರು, ತಂದೆ ಹೆಸರು ನಂತರ ಹೆಸರು ಎನ್ನುವ ಪ್ರವರದ ರೀತಿಯಿಂದ ಎಷ್ಟೋ ಲಕ್ಷದಲ್ಲಿ ಒಬ್ಬ ಎನ್ನುವುದರಿಂದ ಹಲವು ಸಾವಿರಗಳಲ್ಲಿ ಒಬ್ಬ ಎನ್ನುವ ಅನುಕೂಲವಿದೆ. ಆದರೇ ಇದೇ ಕೆಲವು ಬಾರಿ ನನಗೆ ಮುಜುಗರ ತಂದಿದೆ.


ಕೆಲವು ವರ್ಷಗಳ ಹಿಂದೆ ಬೆಂಗಳೂರಿನಿಂದ ಧಾರವಾಡಕ್ಕೆ ಕಚೇರಿ ಕೆಲಸಕ್ಕೆ ಹೋಗಬೇಕಾಗಿತ್ತು. ಹೇಗೂ ಸರಕಾರ ದುಡ್ಡು ಕೊಡುತ್ತದೆ ಎಂದು ಮೊದಲನೆಯ ದರ್ಜೆಯಲ್ಲಿ ರಿಸರ್ವ್ ಮಾಡಿಸಿದ್ದೆ. ಬಾಗಿಲಿನಲ್ಲಿ ಅಂಟಿಸಿದ್ದ ಪಟ್ಟಿ ನೋಡಿ ನನ್ನ ಜಾಗಕ್ಕೆ ಹೋಗಿ ಕುಳಿತಾಗ, ಎದುರಿನ ಸೀಟಿನಲ್ಲಿದ್ದ ಹುಡುಗಿ 'ಇದು ರಿಸರ್ವ್ ಆಗೈತ್ರಿ. ಬೇರೆ ಕಡೆ ಹೋಗಿ' ಎಂದು ಆಜ್ಞೆ ಮಾಡಿದಳು. ಪಟ್ಟಿಲಿ ನನ್ನ ಹೆಸರಿದೆ ಎಂದಾಗ 'ಸರಿಯಾಗಿ ಹೋಗಿ ನೋಡ್ರಿ ಇದು ಬಿ.ಎಸ್. ಚಂದ್ರಶೇಖರ ಅವರಿಗೆ ರಿಸರ್ವ್ ಆಗೈತೆ' ಎಂದು ವಾದಿಸಿದಳು. ಪ್ರಖ್ಯಾತ ಕ್ರಿಕೆಟ್‌ಪಟು ಚಂದ್ರಶೇಖರ್ ಇಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ಅವರ ಆಟೋಗ್ರಾಫ್ ತೆಗೆದುಕೊಂಡು ನಾಳೆ ಗೆಳತಿಯರಿಗೆ ತೋರಿಸಿ ಹೆಮ್ಮೆ ಪಡುತ್ತೇನೆ ಎಂದು ನಿರೀಕ್ಷಿಸಿದ್ದ ಆ ಹುಡುಗಿ ಆ ಹೆಸರಿನಲ್ಲೇ ಒಂದು ಮೋಸ ಮಾಡಿದ ನನ್ನನ್ನು ಕ್ಷಮಿಸಲಿಲ್ಲ. ಮಾರನೆಯ ದಿನ ಬೆಳಿಗ್ಗೆ ಎದ್ದಾಗಲೂ ನನ್ನನ್ನು ಕೋಪದಿಂದಲೇ ನೋಡುತ್ತಿದ್ದಳು.

ಅಪರೂಪಕ್ಕೆ ಪತ್ರಿಕೆಗಳಲ್ಲಿ ಲೇಖನ ಬರೆದಾಗಲೂ ಇದೇ ಸ್ಥಿತಿ. ನಾನು ಬರೆದಿದ್ದನ್ನು ನನ್ನ ಸ್ನೇಹಿತರೂ ಗಮನಿಸಿರುವುದಿಲ್ಲ. ನನ್ನ ಹೆಸರಿನವರು ಬರೆದಿದ್ದನ್ನು ಓದಿ ನನ್ನನ್ನು ಬೈದವರೇ ಜಾಸ್ತಿ. ಮೊನ್ನೆ ನಾನು ಬರೆಯದ ಪದ್ಯವನ್ನು ಬೇರೆ ಕಡೆ ಪ್ರಕಟಿಸಲು ನನ್ನ ಅನುಮತಿ ಕೇಳಿದ ಪತ್ರ ಬಂದಿತ್ತು. ನಾಲ್ಕು ಕಾಸು ಸಿಗುವುದಾದರೆ ಯಾಕೆ ಆಗಬಾರದು ಎನ್ನುವ ಉತ್ಸಾಹವಿದ್ದರೂ, ನಾಳೆ ಈ ಸಾಲಿನ ಅರ್ಥಕೇಳಿ ಮತ್ತೆ ಪತ್ರ ಬಂದರೆ ಎಂದು ಹೆದರಿ ನಿಜಸ್ಥಿತಿಯನ್ನು ಪತ್ರ ಬರೆದವರಿಗೆ ತಿಳಿಸಿದೆ. ತೀರಾ ಈಚೆಗೆ ಭಾನುವಾರದ ಪತ್ರಿಕೆಯಲ್ಲಿ ನನ್ನ ಹೆಸರಿನವರು ಬರೆದಿದ್ದ ತೀರಾ ಕ್ಲಿಷ್ಟ ವಿಷಯದ ಬಹು ಗಹನ ಲೇಖನ ಓದಿ ನನ್ನ ತೀರಾ ಆಪ್ತ ಸ್ನೇಹಿತರೂ ಪತ್ರ ಬರೆದಿದ್ದರು. ಅದು ನಾನು ಬರೆದಿದ್ದಲ್ಲ ಎಂದು ತಿಳಿಸಿದಾಗ, 'ನನಗೆ ಅದೇ ಅನುಮಾನ ಇತ್ತು. ಅದು ನಿಮ್ಮ ಸ್ಟಾಂಡರ್ಡ್ ಮೀರಿದ್ದು. ಆದರೆ ಈಚೆಗೆ ನೀವು ಸ್ವಲ್ಪ ಇಂಪ್ರೂವ್ ಆಗಿರಬಹುದು ಎಂದುಕೊಂಡಿದ್ದೆ' ಎಂದು ಎಡಗೈ ಪ್ರಶಸ್ತಿ ಕೊಟ್ಟಿದ್ದಾರೆ.



ತೀರಾ ಅಪರೂಪದ ಹೆಸರಿನ "ನನ್ನ ಹೆಸರು ಬಿಟ್ ಬಂದಪ್ಪ' ಎನ್ನುವ ವ್ಯಕ್ತಿಯ ಜನಪದ ಕಥೆ ಬಹು ಹಿಂದೆ ಓದಿದ್ದೆ. ಪ್ರಾಪರ್ ನೇಮ್ ತೀರಾ ಕಾಮನ್ ಆಗದಿರಬೇಕಾದರೆ ಇಂತಹ ತೀರಾ ಅಪರೂಪದ ಹೆಸರಿರಬೇಕಾಗುತ್ತದೆ. ಇಂತಹ ಹೆಸರಿದ್ದರೆ ಇನ್ನೂ ಒಂದು ತರಹದ ಸಮಸ್ಯೆಗಳಿರುತ್ತೆ ಅಂತ ಕಾಣುತ್ತೆ. "ನನ್ನ ಪ್ರೀತಿಯ ಮಗುವಿಗೆ

ತುಂಬಾ ಸುಂದರ ಹೆಸರು ಅನಿಕೇತನ ಅಂತಿಟ್ಟಿದ್ದೆ. ಈಗ ಅದರ ಅರ್ಥ ತಲೆಮೇಲೆ ಸೂರು ಇಲ್ಲದವನು ಅಂತ ಗೊತ್ತಾಯಿತು. ಏನು ಮಾಡಲಿ'' ಎನ್ನುವ ತಾಯಿಯ ವ್ಯಥೆ ಈಚೆಗೆ ಪೇಪರಿನಲ್ಲಿ ಓದಿದ್ದೆ. ಅಂತಹ ಅಪರೂಪದ ಹೆಸರಿಗಿಂತ ನನ್ನ ಹೆಸರೇ ವಾಸಿಯೇನೋ, ಚಿಕ್ಕಪುಟ್ಟ ಕಿರಿಕಿರಿ ಇದ್ದರೂ – ಹೆಸರು ಕೇಳಿದ ಕೂಡಲೇ ಆಕಾಶ ಭೂಮಿ ನೋಡುವ ಸ್ಥಿತಿಯಲ್ಲವಲ್ಲ ಎನ್ನುವುದೇ ಸಮಾಧಾನ.



"ಕರ್ಫ್ಯೂ ಅಂತ ಗೊತ್ತಿರಲಿಲ್ಲ, ಗ್ರಹಣ ಅಂತ ಅಂದ್ಕೊಂಡೆ"



ಫಿಮೇಲ್ ಲಾಜಿಕ್ ಅಥವಾ ಮಹಿಳಾ ತರ್ಕ!

–ಶಾಂತಾ ರಘು

"ಗಂಟೆ ಒಂದಾಯ್ತು. ಮನೇಗೆ ಬರೋ ಯೋಚ್ನೆ ಏನಾದ್ರು ಇದ್ಯೆ ಇವ್ಳಿಗೆ? ನಾಳೆ ಯುಗಾದಿ. ಅರ್ಧ ದಿನ ರಜ ಹಾಕಿ ಮನೆಗೆ ಬಂದ್ರೆ ಇವಳೇ ನಾಪತ್ತೆ! ಪಕ್ಕದ್ಮನೆ ಪಮ್ಮಿ ಜತೆ ಮ್ಯಾಟನಿಗೇನಾದ್ರೂ ಹೊರಟುಹೋದ್ಲೋ ಏನೋ?" ಅಂತ ದಿನೇಶ ವಟಗುಡ್ತಾ, ಶತಪಥ ಮಾಡ್ತಾಯಿದ್ದ ಮುದ್ದಿನ ಮಡದಿಗೆ ಬಯ್ಗುಳ ಅರ್ಚನೆ ಮಾಡ್ತಾ.

ವಿನುತಾಗೆ ನೂರಾಯಸ್ಸು. ಧಡಬಡಾಂತ ಆಟೋದಲ್ಲಿ ಬಂದಿಳಿದ್ಳು. ದೊಡ್ಡ ಪಾಕೆಟ್ಟು ಕೈಯಲ್ಲಿ.

"ಎತ್ಲಾಗೆ ಹೋಗಿದ್ಯೆ? ಹೊಟ್ಟೆ ತಾಳ ಹಾಕ್ತಾಯಿದೆ!" ಗಂಡ ರೇಗಿದ.

"ಸರಿ ! ಸದಾ ಹೊಟ್ಟೆ ಯೋಚ್ನೆ ನಿಮ್ಗೆ ! ನೋಡಿ ಇಲ್ಲಿ !" ಅಂತ ಸಂಭ್ರಮದಿಂದ ಪ್ಯಾಕೀಟು ಬಿಚ್ಚಿದ್ಲು.

ಚಿಕ್ಕ ರೋಸ್‌ವುಡ್ ಸ್ಟೂಲು ದಂತದ ಕೆತ್ತನೆ ಕೆಲಸ.

"ಇದೇನೇ ಇದು? ಹಗಲೆಲ್ಲಾ ತಿರುಗಿ ಒಂದು ಫ್ಯಾನ್ಸಿ ಸ್ಟೂಲು ಕೊಂಡುಕೊಂಡ್ಯಾ? ಯಾತಕ್ಕಿದು? ಮೊದ್ಲೇ ಮನೆ ತುಂಬ ಕೆಲ್ಸಕ್ಕೆ ಬಾರದ ಕಸ! ಜಾಗಾನೇ ಇಲ್ಲ. ನಾನೂ ನೀನು ಹೊರಗೆ ಹೋಗ್ಬೇಕು- ಅಷ್ಟೇ!"

"ಸ್ವಲ್ಪ ಸುಮ್ನೆ ಇರ್ತೀರಾ? ಫೇಮಸ್ ಫರ್ನಿಚರ್ಸ್ ನವ ಯುಗಾದಿ ಸೇಲ್ ಹಾಕಿದ್ದ. ಎಂಥಾ ಬಾರ್‌ಗೆಯ್‌ನು!"

"ಈ ಚಿಕ್ಕ ಸ್ಟೂಲಿಗೆ ಏನು ಬೆಲೇಂತ ಬಡಪಾಯಿ ಗಂಡ ಕೇಳ್ಬಹುದೇ?"

"ಕರೆಕ್ಟಾಗಿ ಒಂದು ಸಾವಿರ ರೂಪಾಯಿ"

"ನೆಟ್ಟಗೆ ಒಂದು ಲೋಟ ಕೂಡ ಇಡೋಕಾಗೊಲ್ಲ! ಇದಕ್ಕೆ ಸಾವಿರ ರೂಪಾಯಿ ಕೊಟ್ಯೇನೇ?"

"ಫಸ್ಟ್‌ಕ್ಲಾಸ್ ಇನ್‌ವೆಸ್ಟ್‌ಮೆಂಟ್! ನಿಮಗೊತ್ತಿಲ್ಲ ಸುಮ್ನಿರಿ. ಪಮ್ಮಿ ಎರಡು ವರ್ಷಕ್ಮುಂಚೆ ಇಂತದೇ ಸ್ಟೂಲಿಗೆ ಏಳುನೂರು ಕೊಟ್ಳು. ಈಗದರ ಬೆಲೆ ಮೂರು ಸಾವಿರ – ಗೊತ್ತೇನ್ರಿ?"



"ಹತ್ತು ವರ್ಷಕ್ಮುಂಚೆ ರಾಯಲ್ ಫರ್ನಿಷಿಂಗ್ ಹೌಸ್‌ನಲ್ಲಿ ಆರು ಸಾವಿರ ಕೊಟ್ಟು ನಾವು ತೊಗೊಂಡ ಡೈನಿಂಗ್ ಟೇಬಲ್ ಕೂಡ ಭಾಳಾ ಒಳ್ಳೇ ಇನ್‌ವೆಸ್ಟ್‌ಮೆಂಟು– ಅಂದಿ ನೀನು"

"ಅಲ್ದೆ ಮತ್ತೆ ! ಈಗದರ ಬೆಲೆ ಹದಿನೈದು ಸಾವಿರ! ತಿಳ್ಕೊಳ್ಳಿ! ಫೇಮಸ್ ಫರ್ನಿಚರ್ಸ್‌ನವನೇ ಮಾಡ್ತಾಯಿದಾನೆ!"

‘‘ನಮ್ಮ ಮದ್ವೇಲಿ ನಿಮ್ಮಪ್ಪ ಕೊಟ್ರಲ್ಲ ಜಂಗಲ್ ವುಡ್ ಮಂಚ– ಅದರ ಬೆಲೇನೂ ಜಾಸ್ತಿಯಾಗಿರ್ಬಹುದೇನೇ?’’ ಅಂತ ನೈಸಾಗಿ ಬಾಳೆ ಹಣ್ಣಿನೊಳಗೆ ಸೂಜಿ ಚುಚ್ಚಿದ.

‘‘ನಮ್ಮಪ್ಪನ ಮಾತ್ಯಾಕೆ ಈಗ? ನಮ್ಮ ತವರ್ಮನೇವರ್ನ ಏನಾದ್ರೂ ಅಂತಾ ಇರ್ಬೇಕು ನಿಮ್ಗೆ! ಇಲ್ದಿದ್ರೆ ತಿಂದ ಊಟ ಅರಗೊಲ್ಲ! ನಾನು ಹೇಳ್ತಾ ಇದ್ದದ್ದು ನಮ್ಮ ಟೀಕ್‌ವುಡ್ ಡೈನಿಂಗ್ ಟೇಬಲ್ ವಿಷ್ಯ!’’

‘‘ಸರಿ! ಮಾರಿಬಿಡೋಣ್ವೆ ಅದನ್ನ?’’

‘‘ಅಯ್ಯೋ! ಗಂಡಸರ ಬುದ್ಧಿಗಿಷ್ಟು! ಮಾರಿಬಿಟ್ರೆ ಡೈನಿಂಗ್ ಟೇಬಲ್ ಬೇಡ್ವಾ ನಮಗೆ? ಯಾಕೆ ಮಾರ್ಬೇಕು ಅದನ್ನ?’’

‘‘ಯಾರಿಗ್ಗೊತ್ತು? ಒಳ್ಳೆ ಇನ್‌ವೆಸ್ಟ್‌ಮೆಂಟ್ ಅಂತೀಯಾ! ನಾಳೇನೇ ಡೈನಿಂಗ್ ಟೇಬಲ್ ಮಾರ್ಕೆಟ್ ರೇಟು ಧಢಾರಂತ ಬಿದ್ದು ಹೋದ್ರೆ?’’

‘‘ಮತ್ತೆ ಟೇಬಲ್‌ಗೆ ನಾವೇನ್ಮಾಡೋದು?’’

‘‘ಐದು ಸಾವಿರಕ್ಕೆ ಇನ್ನೊಂದು ತಗೊಂಡು, ಇನ್ನೊಂದು ಹತ್ವರ್ಷಕ್ಕೆ ಇಪ್ಪತ್ತು ಸಾವಿರಕ್ಕೆ ಮಾರಬಹುದು ಅದನ್ನ!’’

‘‘ರಾಮರಾಮ! ಈಗೆಲ್ರೀ ಸಿಗತ್ತೆ ಐದು ಸಾವಿರಕ್ಕೆ ಅದೂ?’’

‘‘ಬೆಂಗಳೂರಲ್ಲಿ ಕರೆಂಟ್ ಯಾವಾಗ ಹೋಗುತ್ತೆ, ಬರತ್ತೆ ಅಂತಾನಾದ್ರೂ ತಿಳ್ಕೋಬಹುದು. ಈ ಹೆಂಗಸರ ಬುದ್ಧೀನೇ ತಿಳೀವಲ್ದು! ಅಲ್ವೆ! ಸುಮ್‌ಸುಮ್ನೆ ದುಡ್ಡು ಇನ್‌ವೆಸ್ಟ್ ಮಾಡಿ ಏನೇ ಬಂತು? ಅದನ್ನ ಮಾರಿದ್ರೆ ತಾನೇ ಪ್ರಯೋಜನ? ಈ ಸಾಸಿವೆ ಕಾಳಿನಷ್ಟಿರೋ ಟೀಪಾಯಿ ತೊಗೊಂಡು ಏನು ಯೂಸ್ ಈಗ?’’

‘‘ನೀವು ಸಿ.ಎ. ಓದಿರೋದು ದಂಢ! ಈಗ ಸಿಕ್ಕಾಪಟ್ಟೆ ಇನ್‌ಫ್ಲೇಷನ್ನು (ಹಣದುಬ್ಬರ) ಎಲ್ಲಾದರ ಬೆಲೇನೂ ಏರ್ತಾನೇ ಇದೆ. ನಮಗೆ ದುಡ್ಡು ಬೇಕಾದಾಗ ಮಾರೋಣಂತೆ’’

‘‘ಅದುಸರಿ. ನಮಗೆ ದುಡ್ಡು ಬೇಕಾದಾಗ ಎಲ್ರೂ ಪಾಪರಾಗಿರ್ಬಹುದು. ಯಾರು ತಗೋತಾರೆ ನಿನ್ನ ಟೇಬಲ್ಲು, ಟೀಪಾಯಿ? ನೀನಾಗಿದ್ರೆ ತಗೋತಿದ್ಯಾ?’’

‘‘ಬಿಡ್ರಿ! ಆ ಅಂಗಡಿಯವನೇ ಹೇಳ್ದ. ಯಾವಾಗ ಬೇಕಾದ್ರೂ, ಯಾವ ಸಾಮಾನು ಬೇಕಾದ್ರೂ, ವಾಪಸ್ಸು ಕೊಂಡುಕೋತಾನಂತೆ’’

‘‘ಹಾ! ಹೇಳ್ತಾನೆ! ಕೊಡೋಕೆ ಹೋಗು! ಗೊತ್ತಾಗತ್ತೆ ಅವನ ಬೇಳೆಕಾಳು!’’



‘‘ರೀ! ಯಾವಾಗ್ಲೂ ಬುದ್ಧಿ ಉಪಯೋಗಿಸಿ ದುಡ್ಡು ಇನ್‌ವೆಸ್ಟ್ ಮಾಡ್ಬೇಕು. ನಾವು ಹತ್ತು ವರ್ಷಕ್ಮುಂಚೆ ಕೊಂಡ್ಕೊಂಡಿದ್ದೆಲ್ಲಾ, ಈಗ ಐದು ಪಟ್ಟು ಬೆಲೆ ಹೆಚ್ಚಾಗಿದೆ!’’

"ಹಾಗಾದ್ರೆ ಒಂದ್ಕೆಲ್ಸ ಮಾಡೋಣ. ನಮ್ಮ ಹತ್ರ ಇರೋದೆಲ್ಲಾ ಮಾರಿದ್ರೆ ಹೇಗೂ ಲಕ್ಷಾಂತರ ರೂಪಾಯಿ ಬರುತ್ತೆ! ಸದ್ದಿಲ್ದೆ ಮಾರಿ, ಕಂಬಿ ಕೀಳೋಣ!"

"ಎಲ್ಲಾದ್ರೂ ಉಂಟೆ? ಇನ್‌ಫ್ಲೇಷನ್ ಎಷ್ಟು ಫಾಸ್ಟ್ ಆಗಿ ಹೋಗ್ತಾಯಿದೇಂದ್ರೆ ಈ ಥರಾ ಬುದ್ಧಿವಂತಿಕೆಯಿಂದ ದುಡ್ಡು ಇನ್‌ವೆಸ್ಟ್ ಮಾಡ್ಬಿಟ್ಟು ಭದ್ರವಾಗಿ ಕೂರ್ಬೇಕು. ಆಗ್ಲೇ ನಮಗೂ ಒಂದು ಭದ್ರತೆ ಇರುತ್ತೆ"

ಇನ್ನು ಇವಳ ಹತ್ರ ಮಾತಾಡೋದು, ಮೋಟು ಗೋಡೆಗೆ ಮಂಡೆ ಬಡಕೊಂಡ ಹಾಗೆಯೇ ಅಂತ ಖಾತ್ರಿಯಾಯ್ತು. ಇವಳ ಲಾಜಿಕ್ಕೇ ಅರ್ಥ ಆಗ್ತಾ ಇಲ್ವಲ್ಲ! ತಾನು ನೋಡಿದ ಮೊಲಕ್ಕೆ ಮೂರೇ ಕಾಲು ಅಂತ ಸಾದಿಸ್ತಾಳೆ!

"ಬೇಗ ಊಟಕ್ಬನ್ನಿ! ನಂಗಿನ್ನೂ ಷಾಪಿಂಗ್ ಬಾಕಿ ಇದೆ!" ಅಂತ ವಿನುತಾ ಕೂಗಿದ್ಳು.

"ಇನ್ನೂ ಮುಗಿದಿಲ್ವೆ ನಿನ್ನ ಷಾಪಿಂಗೂ? ನಾಳೆ ಹಬ್ಬಕಾರಾ ಏನಾದ್ರೂ ತಿಂಡಿ ಗಿಂಡಿ ಮಾಡ್ತೀಯೋ ಹ್ಯಾಗೆ?"

"ಮಾಡಿದ್ರಾಯ್ತು! ಪೇಪರ್ ನೋಡ್ಲಿಲ್ವೆ ನೀವು? ಬಿ.ಜೆ.ಕೆ.ಯಲ್ಲಿ ಯುಗಾದಿ ಸೂಪರ್ ಸೇಲ್ ಹಾಕಿದಾನೆ!"

"ಥತ್! ಈ ಅಂಗಡಿಯೋರೆಲ್ಲಾ ಯಾಕೆ ಹೀಗೆ ಗಂಡಂದಿರನ್ನು ಗೋಳು ಹುಯ್ಕೋತಾರೋ ಏನೋ? ಒಂದು ಹಬ್ಬ ಬಿಡ್ದೆ ಗಾಲಾ ಸೇಲ್, ಸೂಪರ್ ಸೇಲ್, ಬಂಪರ್ ಸೇಲ್, ಸ್ಪೆಷಲ್ ಸೇಲ್ ಅಂತ ಡಂಗೂರ ಸಾರ್ಕೊಂಡು ಬಂದ್ಬಿಡ್ತಾರೆ! ಹಾಯಾಗಿ ಒಂದು ಹಬ್ಬ ಆಚರಿಸೋ ಹಾಗೇ ಇಲ್ಲ! ಯಾವ ಹೆಂಗಸಾದ್ರೂ ಮನೇಲಿದ್ರೆ ತಾನೆ? ಅವರಾಯ್ತು, ಷಾಪಿಂಗಾಯ್ತು! ಶ್ರೀರಂಗಂ ದೇವಸ್ಥಾನದ ಆನೆಗೆ ಹಾಕಿರೋ ನಾಮಕ್ಕಿಂತ ದೊಡ್ಡ ಪಂಗನಾಮ ತಮಗೆ ಹಾಕ್ತಾಯಿದಾರೇಂತ ತಿಳಿದೂ, ತಿಳಿದೂ, ಕಂಡ ಕಂಡ ಸೇಲ್‌ಗಳಿಗೆ ಓಡಿ, ಗಂಡಂದಿರ ಪರ್ಸು ನುಣ್ಣಗೆ ಖಾಲಿಮಾಡ್ಕೊಂಡು ಬರ್ತಾರೆ! ಸೇಲ್ ಅನ್ನೋ ಶಬ್ಧ ಕೇಳಿದ್ರೇ ಮೈ ಉರ್ದ್ಹೋಗತ್ತೆ!" ಅಂತ ಪತಿರಾಯ ಖಟಖಟನೆ ಹಲ್ಲು ಮಸೆದ.

"ಏನ್ರೀ ಅದು ಗೊಣಗ್ತಾಯಿದೀರಾ? ನಡೀರಿ, ನಡೀರಿ!" ಅಂತ ಅವನ್ನೂ ಎಳಕೊಂಡು ಹೊರಟೇಬಿಟ್ಳು ವಿನುತ.

ಮಟಮಟ ಮಧ್ಯಾಹ್ನವಾದ್ರೂ, ಬಿ.ಜಿ.ಕೆ. ಷೋ ರೂಂನಲ್ಲಿ ಜನ ಘೇರಾಯಿಸಿದ್ರು. ವಿನುತಾ ಆಸೆಯಿಂದ ಮೈಕ್ರೋವೇವ್ ಓವನ್ನನ್ನು ಮುಟ್ಟಿ ಮುಟ್ಟಿ ನೋಡ್ತಾಯಿದ್ಳು.



ದಿನೇಶ ನಕ್ಕ. "ಮಹರಾಯ್ತಿ! ನೀನು ಮಾಡೋ ಗೊಡ್ಡು ಹುಳಿ, ತಿಳಿ ಸಾರಿಗ್ಯಾಕೆ ಇದು? ನಮ್ಮ ಇಂಡಿಯನ್ ಅಡಿಗೆಗೆ ಇದು ಸರಿ ಇಲ್ಲ ಬಿಡು"

"ಮುಂದೆ ಉಪಯೋಗ ಆಗೂಲ್ಲಾಂತ ಹ್ಯಾಗ್ರಿ ಗೊತ್ತು? ಏನು ಬೆಲೆ ಕಡಿತ ಮಾಡಿದಾನೆ ನೋಡಿ! ಹದಿನೆಂಟು ಸಾವಿರದಿಂದ ಹದಿನೈದು ಸಾವಿರಕ್ಕೆ ಇಳಿಸಿದಾನೆ!"

"ಅಯ್ಯೋ! ಮಂಕೆ! ಅದಕ್ಕೇ ಹೆಂಗಸರ್ಗೆ ಅಷ್ಟು ಸಾಲ್ದೂಂತ ನಾವು ಹೇಳೋದು! ಇದರ ಬೆಲೇನೇ ಹದಿನೈದು ಸಾವಿರ ಕಣೇ! ಎರಡು ತಿಂಗಳ ಮುಂಚೆ ಹದಿನೆಂಟಕ್ಕೆ ಏರಿಸಿದ್ದ. ಈಗ ತಿರ್ಗಾ ಒರಿಜಿನಲ್ ಬೆಲೆಗೆ ಇಳಿಸಿ, ಬೆಲೆ ಕಡಿತ ಅಂತ ನಿಮಗೆಲ್ಲಾ ಮಕಮಲ್ ಟೋಪಿ ಹಾಕ್ತಾಯಿದಾನೆ!"

"ಹಾಗಂತೀರಾ?"

"ಹೂ! ಹಾಗೇ ಅನ್ನೋದು!"

"ರೀ! ಬಡೆಟ್ ಆದ್ಮೇಲೆ ಮೈಕ್ರೋವೇವ್ ಬೆಲೆ ಇಪ್ಪತ್ತೈದು ಸಾವಿರ ಆಗತ್ತಂತೆ. ಮಿಸೆಸ್ ಜಾನ್‌ಸನ್ ಹೇಳಿದ್ರು. ಈಗ್ಗೇ ತಗೊಂಬಿಟ್ರೆ ಹತ್ಸಾವಿರ ಉಳಿಸಿದ ಹಾಗಾಗತ್ತೆ ನೋಡಿ!"

"ಆಹಾ! ಏನ್ ತಲೇನೇ ನಿಂದು! ರಾಂಗ್ ಸೈಡಲ್ಲೇ ಓಡತ್ತೆ! ಯಾವಾಗ್ಲೂ ಈ ಥರಾ ಲೆಕ್ಕಾಚಾರಾನೇ! ನನಗೆ ಬದ್ಲು ನೀನೇ ಸಿ.ಎ. ಬೋರ್ಡು ಹಾಕ್ಕೊಂಡು ಪ್ರಾಕ್ಟೀಸ್ ಮಾಡು! ಈಗ ನಡಿ! "

ಹೊರಗೆ ಬಂದ್ರು. "ಹೋಗ್ಲಿ! ಪ್ರಿಯದರ್ಶಿನೀಲಿ 40% ರಿಡಕ್ಷನ್ ಸೇಲ್ ಹಾಕಿದಾನೆ. ಬರೀ ಸಾವಿರದಿನ್ನೂರಿಗೆ ಒಂದು ಪ್ರಿಂಟೆಡ್ ಸಿಲ್ಕಾದ್ರೂ ತಗೊಳ್ಳಲೇ?"

"ಆಂ! ಸಾವಿರದಿನ್ನೂರೇ!"

"ಆಹಾ! ಜುಗ್ಗು ಕಣ್ರೀ! ನಿಮ್ಮ ಕಂಜೂಸ್ ಬುದ್ಧಿ ತೋರಿಸ್ತೀರಲ್ಲ! ಈಗ್ತಾನೇ ಹದಿನೈದು ಸಾವಿರ ರೂಪಾಯಿ ಉಳಿಸ್ಲಿಲ್ವಾ ನಿಮಗೆ?"

ದಿನೇಶ ಮಿಕಿ ಮಿಕಿ ನೋಡ್ದ.

"ತಿಳೀದಂಗೆ ನಟನೆ ಮಾಡ್ಬೇಡಿ! ಈಗ ಆ ಮೈಕ್ರೋವೇವ್ ಕೊಂಡುಕೊಳ್ದೆ ಬಿಟ್ನಲ್ಲಾ ಹದಿನೈದು ಸಾವಿರ ಉಳಿಸ್ಲಿಲ್ವಾ ನಿಂಗೆ?"

ತಲೇಲಿ ಮಿಕ್ಕಿರೋ ನಾಲ್ಕೈದು ಕೂದಲನ್ನೇ ಕಿತ್ತುಕೊಳ್ಳೋಣ್ವೆ ಅನ್ನಿಸ್ತು ದಿನೇಶನಿಗೆ. ಈ ಫೀಮೇಲ್ ಲಾಜಿಕ್ ಅರ್ಥವೇ ಆಗ್ಲಿಲ್ಲ ಅವನಿಗೆ. ಒಟ್ಟಿನಲ್ಲಿ ಇಷ್ಟು ಗೊತ್ತಾಯ್ತು. ತಮ್ಮ ಮನೇಲಿರೋ ಮೇಜು, ಕುರ್ಚಿ, ಬೀರು, ಹಂಡೆ, ಚೊಂಬು ಎಲ್ಲಾ ಮಾರಿದ್ರೆ, ತಾನು ಲಕ್ಷಾಧೀಶ್ವರನೇ! ದಿನೇಶ ನಿಟ್ಟುಸಿರುಬಿಟ್ಟ. ಮನೆ ಕಟ್ಟೋಕೆ ತಗೊಂಡಿದ್ದ ಸಾಲಕ್ಕೆ – ಮುಂದಿನ ತಿಂಗಳು ಹೇಗೆ ಹಣ ಹೊಂದಿಸೋದು ಅನ್ನೋದೇ ಅವನ ಚಿಂತೆ ಈಗ ಸದ್ಯಕ್ಕೆ!



ದಾನ

–ಚಂಚಲಾ ವೇಣು

ಯಾವಾಗಲೂ ಏನೇನೋ ಯೋಚಿಸುತ್ತಿರುವುದೇ ಈ ಮನಸ್ಸಿನ ಕೆಲಸ. 'ಎಂಪ್ಟಿ ಮೈಂಡ್ ಈಸ್ ದಿ ಡೆವಿಲ್ಸ್ ವರ್ಕ್‌ಶಾಪ್' ಅನ್ನುವಂತೆ ತಲೆಬುಡವಿಲ್ಲದ ಪ್ರಶ್ನೆಗಳೋ, ಸುಡುಗಾಡು ಸಂದೇಹಗಳೋ, ಕೆಟ್ಟ ಕುತೂಹಲವೋ ಉದ್ಭವಿಸುವುದೇ ಅಲ್ಲಿ. ಈಗ ಆದದ್ದೂ ಹಾಗೇ. ಏನೋ ಯೋಚಿಸಲು ಹೋಗಿ ಯಾವುದೋ ಪ್ರಶ್ನೆ ಕಾಡಿತು..

ದಾನದಲ್ಲೆಲ್ಲಾ ದೊಡ್ಡ ದಾನ ಯಾವುದು?

ಪ್ರಶ್ನೆ ಹುಟ್ಟಿದ್ದೇನೂ ತಪ್ಪಿಲ್ಲ. ಆದರೆ ಅದಕ್ಕೆ ಉತ್ತರ ಸಿಗುವುದಾದರೂ ಎಲ್ಲಿ? ಉತ್ತರ ಚಾಣಾಕ್ಷ ಆ ಬೀರಬಲ್ಲನೇನಾದರೂ ಬದುಕಿದ್ದಲ್ಲಿ ನನ್ನ ಪ್ರಶ್ನೆಯನ್ನು ರಿಪ್ಲೈ ಕಾರ್ಡಿನಲ್ಲಿ ಬರೆದು ಸುಲಭವಾಗಿ ಕಳುಹಿಸಿಬಿಡಬಹುದಿತ್ತು ಅಥವಾ ಆ ಹಾಸ್ಯಕವಿ ತೆನಾಲಿ ರಾಮಕೃಷ್ಣನಾದರೂ ಬದುಕಿದ್ದಿದ್ದಲ್ಲಿ ಹೇಗೂ ಉತ್ತರ ಪಡೆಯುವ ಸಾಧ್ಯತೆಯಿತ್ತು...' ಆದರೆ ಅವರಾರೂ ಈಗಿಲ್ಲ.

ಯಾವ ಯಾವುದೋ ಶ್ರೇಷ್ಠ ಗ್ರಂಥಗಳನ್ನು ಹುಡುಕಿ ಉತ್ತರ ಪಡೆಯುವ ಸಹನೆ ತಾಳ್ಮೆ ನನ್ನಲ್ಲಿಲ್ಲ.. ಸರಿ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದರೆ ಏನು ಉಪಯೋಗ? ಅವರಿವರನ್ನು ಕೇಳಿದರೆ ಉತ್ತರ ಹೇಳುವ ಬದಲು ನನ್ನ ಮುಖವನ್ನೇ ಕನಿಕರದಿಂದ ದಿಟ್ಟಿಸೀ ಯಾರು ಎಂಬ ಭಯದಿಂದ ಮನೆಯವರನ್ನೇ ಕೇಳಲು ಶುರು ಮಾಡಿದೆ.

ಮಗ ಶಾಲೆಯಿಂದ ಬಂದೊಡನೆ ಅವನೆದುರು ತಿಂಡಿ ಕಾಫಿ ಇಡುತ್ತಾ ನನ್ನ ಪ್ರಶ್ನೆಯನ್ನೂ ಇಟ್ಟೆ.

'ದಾನದಲ್ಲೆಲ್ಲಾ ದೊಡ ದಾನ ಯಾವುದಿರಬಹುದು ಪುಟ್ಟಾ?'

ಹೆಚ್ಚು ತಲೆಕೆಡಿಸಿಕೊಳ್ಳದ ಅವನು

'ಆಟದ ಮೈ ದಾನ' ಎನ್ನುತ್ತಾ ಬಾಣದಂತೆ ಹೊರಗೋಡಿದ. ಛೇ ಎನಿಸಿತು ಸರಿಯೆನಿಸಲಿಲ್ಲ.



ಊರಿಂದ ಅಮ್ಮ ಬಂದಳು, ನನ್ನ ಪ್ರಶ್ನೆಗೆ ಅವಳು ಗಾಢವಾಗಿ ಯೋಚಿಸುತ್ತಾ

'ಕನ್ಯಾದಾನ ಅಲ್ಲವೇನಮ್ಮ... ಸದ್ಯ ಕೊನೆಯೋಳ ಲಗ್ನ ಕೂಡಿಬಂದರೆ ನಮಗೆ ಅದಕ್ಕಿಂತ ದೊಡದೇನು.. ಎಂದಳು. ಅವಳ ಮಾತು ಸಹಜವೇ, ನಾಲ್ಕು ಹೆಣ್ಣುಮಕ್ಕಳ ಕನ್ಯಾದಾನ ಮಾಡೀ ಮಾಡೀ

ಸುಸ್ವಾದ ಅವಳ ಬಾಯಿಂದ ಮತ್ತೇನು ಬಂದೀತು. ತೃಪ್ತಿಯೆನಿಸದೆ ಹಳ್ಳಿಗೆ ಹೋಗಿದ್ದಾಗ ಅತ್ತೆಯನ್ನೇ ಕೇಳಿದೆ.

'ಅನ್ನದಾನ ಅಲ್ಲವೇನೇ.. ಎಂದರಾಕೆ. ಸಾಕ್ಷಾತ್ ಅನ್ನಪೂರ್ಣೇಶ್ವರಿ, ಯಾವಯಾವುದೋ ಪೂಜೆ, ವ್ರತಗಳೆಂದು ಅನ್ನದಾನ ನಡೆಸುತ್ತಿದ್ದ ಮಹಾತಾಯಿ ಆಕೆ. ಅವರ ಮನೆಯಲ್ಲಿ ಅತಿಥಿಗಳ ಓಂಡೇ ಇರುತ್ತಿತ್ತು.. ಒಂದು ರೀತಿಯಲ್ಲಿ ಅವರ ಮಾತೂ ಸರಿಯೇ.. ಆದರೇಕೋ ನನ್ನ ಪ್ರಶ್ನೆಗೆ ಆ ಉತ್ತರ ಸರಿಯೆನಿಸಲಿಲ್ಲ.

ರಸ್ತೆಯಲ್ಲಿ ಶಾಸ್ತ್ರಿಗಳು ಸಿಕ್ಕರು, ನನ್ನ ಪ್ರಶ್ನೆ ಅವರೆದುರು ಬಂದೇ ಬಿಟ್ಟಿತು. ನನ್ನ ಪ್ರಶ್ನೆ ಕೇಳುತ್ತಿದ್ದಂತೆಯೇ ಅವರ ಮುಖ ಅರಳಿಹೋಯಿತು. ಯಾವುದೋ ನಿರೀಕ್ಷೆಯಲ್ಲಿ ಅವರ ಕಣ್ಣು ಮಿಂಚಿತು.

'ಒಂದು ವ್ರತವಿದೇಮ್ಮ, ಅದನ್ನ ಮಾಡಿ ಬ್ರಾಹ್ಮಣ ದಂಪತಿಗಳಿಗೆ ವಸ್ತ್ರದಾನ, ಬೆಳ್ಳಿ ಬಟ್ಲು, ಚಿನ್ನದ ತಾಳಿ, ಗೋದಾನ ಮಾಡಿದ್ರೆ ಅದೇ ದೊಡ್ಡದು, ತುಂಬಾ ಅದ್ದೂರಿಯಾಗಿ ಮಾಡಿಬಿಡು ಮತ್ತೆ.. ನಾನೇ ಖುದ್ದು ನಿಂತು ಮಾಡಿಸ್ತೀನಿ... ಕೈತುಂಬಾ ದಕ್ಷಿಣೆ ಕೊಟ್ರಂತೂ.. ಹ್ಹೆ..ಹ್ಹೆ..ಹ್ಹೆ..'

ಎಂದ ಅವರ ಆಸೆಬುರುಕುತನ ಮಾತುಗಳಿಂದ ತಪ್ಪಿಸಿಕೊಂಡು ಹೊರಬರುವುದೇ ಪ್ರಯಾಸವಾಯಿತು. ಅವರವರ ದೃಷ್ಟಿಗಳಲ್ಲಿ ಆ ದಾನಗಳು ಶ್ರೇಷ್ಠವಾದುದೇ.. ಆದರೇಕೋ ನನ್ನ ಮನಸ್ಸಿಗೆ ಸಮಾಧಾನ ತರುತ್ತಿರಲಿಲ್ಲ.

ನನ್ನ ಗೆಳತಿಯನ್ನು ಕೇಳಿದರೆ, ಅವಳು ಮುಸಿಮುಸಿ ನಗುತ್ತಾ

'ನಿದಾನ.. ಎಂದಳು, ಕೋಪ ಬಂತು.

ಕೊನೆಯದಾಗಿ ನನ್ನ ಪತಿಯನ್ನೇ ಕೇಳಿದರಾಯಿತು ಎನ್ನುತ್ತಾ ಅವರಲ್ಲಿ ಪ್ರಶ್ನೆ ಪ್ರಸ್ತಾಪಮಾಡುತ್ತಿರುವಂತೆಯೇ ಮಲಗಿದ್ದವರು ದಢಕನೆದ್ದು ಕುಳಿತರು, ಅವರ ಮುಖ ಒಮ್ಮೆಲೇ ಅರಳಿಬಿಟ್ಟಿತು ಮಲ್ಲಿಗೆಯಂತೆ.

'ಇಷ್ಟು ದಿವಸಕ್ಕೆ ಒಳ್ಳೇ ಪ್ರಶ್ನೆ ಕೇಳ್ತಿದ್ದೀ' ಎನ್ನುತ್ತಾ ಪೀಠಿಕೆ ಹಾಕಿದವರೇ,

'ಮನುಷ್ಯನ ಜೀವನ ಎಷ್ಟು ನಶ್ವರ ನೋಡು.. ಅವರ ದೇಹವಂತೂ ಪ್ರಾಣ ಹೋಗ್ತಿದ್ದ ಹಾಗೆ ಮಣ್ಣಾಗಿಯೋ, ಬೂದಿಯಾಗಿಯೋ ವ್ಯರ್ಥವಾಗಿ ಹೋಗಿಬಿಡುತ್ತೆ.. ಆದ್ದರಿಂದ ಮನುಷ್ಯನ ದೇಹ ಜೀವ ಇರುವಾಗಲೋ ಇಲ್ಲಾ ಸತ್ತ ನಂತರಾನೋ ಒಂದು ಒಳ್ಳೇ ಕೆಲಸಕ್ಕೆ ಉಪಯೋಗಿಸ್ಕೋಬಹುದು.. ಹೇಗೆಂದರೆ ವೈದ್ಯಕೀಯ ಕಾಲೇಜಿಗೆ ದೇಹವನ್ನೇ ದಾನವಾಗಿ ಕೊಡಬಹುದು, ಸತ್ತ ಕೂಡಲೇ ಕಣ್ಣನ್ನೂ ಸಹ ಕೊಡಬಹುದು, ಎರಡು ಕಿಡ್ನಿಗಳಲ್ಲಿ ಒಂದನ್ನು ಕೊಟ್ಟು ಒಂದು ಜೀವ ಉಳಿಸಬಹುದು..



ಅವರ ಮಾತು ನನ್ನಲ್ಲಿ ಗಾಭರಿ ಹುಟ್ಟಿಸಿತು, ಅದರ ಅರ್ಥವಾಗದೇ

..ರೀ ಬದುಕಿರೋವಾಗಲೇ ದೇಹದಾನ ಹೇಗಾಗತ್ತೆ.. ಕಣ್ಣು ಅಷ್ಟೆ.'

ನನ್ನ ಸಂದೇಹದ ಪ್ರಶ್ನೆಗೆ

'ಸಾಯಕ್ಕೆ ಮುಂಚೇನೇ ಅವುನ್ನ ದಾನ ಮಾಡ್ತೀನಿ ಅಂತ ಬರೆದಿಡಬಹುದು.. ಸದ್ಯಕ್ಕೆ ಅವು ಬೇಡ.. ನಿನ್ನ ಕೈಲಿ ಸಾಧ್ಯವಿರೋದನ್ನ ಮಾಡಬಹುದಲ್ಲಾ...

'ಯಾವುದು?'

'ರಕ್ತದಾನ.. ಚಿನ್ನ.. ಅದಕ್ಕಿಂತ ದೊಡ್ಡ ದಾನ ಯಾವುದಿದೆ?..

ಅವರು ಒಂದು ಸಮಾಜ ಸೇವಾ ಸಂಸ್ಥೆಯ ಸದಸ್ಯರು.. ಅವರ ಸಂಸ್ಥೆಯಿಂದ ಜನೋಪಯೋಗಿ ಕೆಲಸಗಳು ನಡೆಯುತ್ತಲೇ ಇರುತ್ತವೆ.. ಅವುಗಳಲ್ಲಿ ರಕ್ತದಾನ ಶಿಬಿರವೂ ಒಂದು.. ಆಗೆಲ್ಲಾ ಇವರು ರಕ್ತದಾನ ಮಾಡುತ್ತಲೇ ಇರುತ್ತಾರೆ... ಈಗವರ ಕಣ್ಣು ನನ್ನ ಮೇಲೂ ಬಿತ್ತೆ ಎನಿಸಿತು.

'ಹೌದಮ್ಮಾ ರಕ್ತದಾನಕ್ಕಿಂತ ಹಿರಿದಾದ ದಾನ ಯಾವುದೂ ಇಲ್ಲ ಈ ಬಾರಿ ನೀನೂ ಕೊಡಬೇಕು.. ಹಾಗೆ ಕೊಟ್ಟೆಯಾದರೆ ನೀನ್ ಕೇಳಿದ್ದು ಕೊಡಿಸ್ತೀನಿ...

ಎಂದು ಲಂಚದ ಆಸೆ ತೋರಿಸಿದರು. ಹಾಗೆ ರಕ್ತದಾನ ಕುರಿತಾದ ಅನೇಕಾನೇಕ ವಿಷಯಗಳನ್ನೂ ವಿವರಿಸಿದರು. ಆ ಮಾತುಗಳನ್ನು ಕೇಳಿದ ಮೇಲೆ ನನ್ನ ಪ್ರಶ್ನೆಗೆ ಇದೇ ತಕ್ಕ ಉತ್ತರ ಎನಿಸಿ ತೃಪ್ತಿಯಾಯಿತು.

ನನ್ನ ಎ-ನೆಗಟೀವ್ ಗುಂಪಿನ ರಕ್ತ ಮೊನ್ನೆ ದಾನ ಮಾಡಿ ಬಂದೆ. ಅಪೂರ್ವವಾದ ಶಾಂತಿ ಸಿಕ್ಕಿತು. ಜೊತೆಗೆ ನನ್ನವರು ಮಾತುಕೊಟ್ಟಂತೆ ನಾ ಕೇಳಿದ್ದನ್ನೇ ಕೊಟ್ಟರು.. ಅದು ಸೀಕ್ರೆಟ್..

ಕಾರಣ

ಎನ್. ಪ್ರಕಾಶ್



ಈ ವಿನಾಶ–
ಕ್ಕೇನು ಕಾರಣ?
ರಾಮ ಕಾರಣ?
ರಾಜ ಕಾರಣ?
ವಿನಾ ಕಾರಣ?
ಇರಬಹುದೆ ಕಾರಣ
ದಲ್ಲಿ ರಣ!
ವಿರುವುದೇ ಕಾರಣ?

ಭವಿಷ್ಯವಾಣಿ

-ಲೀಲಾ ಮಿರ್ಲೆ

ಫ್ರಾನ್ಸಿನಲ್ಲಿ ಹದಿನಾರನೆಯ ಶತಮಾನದಲ್ಲಿದ್ದ ನಾಸ್ಟ್ರಡೇಮಸ್, ಮಹಾ ತತ್ವಜ್ಞಾನಿ ಹಾಗೂ ಭವಿಷ್ಯವಾದಿ. ಮುಂಬರುವ ನೂರಾರು ಶತಮಾನಗಳಲ್ಲಿ ನಡೆಯುವ ಮುಖ್ಯ ಘಟನೆಗಳನ್ನು ಆತ ಫ್ರೆಂಚ್ ಭಾಷೆಯಲ್ಲಿ ಚೌಪದಿಯ ರೂಪದಲ್ಲಿ ಬರೆದಿದ್ದಾನೆ. ಆತ ನುಡಿದಿರುವ ಭವಿಷ್ಯದ ಬಗ್ಗೆ ಪುಸ್ತಕಗಳಲ್ಲೂ, ಟೀ.ವಿ.ಯಲ್ಲೂ ಸಾಕಷ್ಟು ಪ್ರಸಾರವಾಗಿದೆ. ಈ ಫ್ರೆಂಚ್ ಜ್ಯೋತಿಷಿಯನ್ನು ಜನ ಕೊಂಡಾಡಿದ್ದೇ ಕೊಂಡಾಡಿದ್ದು.

'ಹಿತ್ತಲ ಗಿಡ ಮದ್ದಲ್ಲ' ಎನ್ನುವಂತೆ ನಮ್ಮ ವೆಂಕಟಾಚಾರ್ಯರನ್ನು ಕೇಳೋರೇ ಇಲ್ಲ. ಈತ ಯಾವ ನಾಸ್ಟ್ರಡೇಮಸ್‌ಗೂ ಕಮ್ಮಿ ಇಲ್ಲ. ವೆಂಕಟಾಚಾರ್ಯರು ಹೇಳಿರುವ ಭವಿಷ್ಯಗಳೆಲ್ಲಾ ಸಿಕ್ಕಾಪಟ್ಟೆ ನಿಜವಾಗಿದೆ. ಆದರೆ ಅವರು ಬರೆದಿರುವುದು ಕನ್ನಡದಲ್ಲಿ. ಸ್ಥಳ ಬಸವಸಂದ್ರ. ಅಂದಮೇಲೆ ಆತ ಬರೆದಿರುವುದು ಯಾರ ಗಮನಕ್ಕೂ ಬರದಿರುವುದು ಸಹಜವೆ.

ಹದಿನೆಂಟನೆಯ ಶತಮಾನದಲ್ಲಿ, ಬಸವಸಂದ್ರವೆಂಬ ಹಳ್ಳಿಯಲ್ಲಿ ವೆಂಕಟಾಚಾರ್ಯರು ಗಣಿತದ ಉಪಾಧ್ಯಾಯರಾಗಿದ್ದರು. ಆತ ಮಹಾ ಮೇಧಾವಿ. ಅಂದಮೇಲೆ ಸಹಜವಾಗಿಯೇ ಸ್ವಲ್ಪ ಎಕ್ಸ್‌ಟ್ರಾಬಿರ್ರಿ! ಗಣಿತದಲ್ಲಿ ಪಾಂಡಿತ್ಯವಲ್ಲದೆ, ಆತ ದೊಡ್ಡ ಭವಿಷ ವಾದಿಯೂ ಆಗಿದ್ದರು. ಮುಂದಾಗುವ ಘಟನೆಗಳು ಅವರಿಗೆ ಕಣ್ಣಿಗೆಕಟ್ಟಿದಂತೆ ಕಾಣುತ್ತಿತ್ತು. ಆತ ಬಂದರೆ ಜನ ಬೆದರುತ್ತಿದ್ದರು. ಕಾರಣ ವೆಂಕಟಾಚಾರ್ಯರು ಮುಚ್ಚುಮರೆ ಇಲ್ಲದೆ ಎದ್ವಾ ತದ್ವಾ ಮಾತಾಡುತ್ತಿದ್ದರು. ಉದಾಹರಣೆಗೆ ರೋಗಿ ಇದ್ದ ಮನೆಗೆ ಹೋಗಿ "ಮುಗೀತು ಕೆಲಸ, ಚಾಪೆ ಸುತ್ತು" ಎಂದು ಅವರು ಹೇಳಿದ ದಿನವೇ ರೋಗಿ ಕಣ್ಣುಮುಚ್ಚುತ್ತಿದ್ದ. ಹೀಗೆ ಅವರ ಜ್ಯೋತಿಷ್ಯದ ಬಗ್ಗೆ ನೂರಾರು ಕಥೆಗಳು.

ವೆಂಕಟಾಚಾರ್ಯರು ಮುಂದಿನ ಹಲವಾರು ಶತಮಾನಗಳ ಭವಿಷ್ಯವನ್ನು ಅವರದೇ ಆದ ಒಂದು ರೀತಿಯಲ್ಲಿ ಬರೆದ ಹಸ್ತಪ್ರತಿ ಈಗಲೂ ಬಸವಸಂದ್ರದಲ್ಲಿ ಅವರ ಮನೆತನದವರ ಹತ್ತಿರ ಇದೆ. ಹಸ್ತಪ್ರತಿ ವಿಪರೀತ ಜೀರ್ಣವಾಗಿದೆ. ಮೋಡಿ ಅಕ್ಷರ. ಓದುವುದು ಬಲು ಪ್ರಯಾಸದ ಕೆಲಸ. ನನಗೆ ಓದಲು ಸಾಧ್ಯವಾದುದನ್ನು 'ಅಪರಂಜಿ'ಯ ಓದುಗರಿಗಾಗಿ ಬರೆದುಕೊಂಡು ಬಂದಿದ್ದೇನೆ.



ನನಗೆ ಈ ಹಸ್ತಪ್ರತಿಯಲ್ಲಿ ಬಂದ ಅನುಮಾನ ಒಂದೇ ಒಂದು. ಅಲ್ಲಲ್ಲಿ ಇಂಗ್ಲಿಷ್ ಪದಗಳನ್ನು ಉಪಯೋಗಿಸಿದ್ದಾರೆ. ಆಗಿನ ಹಳ್ಳಿಯ ಮಾಸ್ತರಿಗೆ ಇಂಗ್ಲಿಷ್ ಪರಿಚಯವಿರಲು ಸಾಧ್ಯವೇ ಅಂತ. ಅಯ್ಯೋ, ಎಂತಹ ಪ್ರಶ್ನೆ! ಮಹಾನ್ ಭವಿಷ್ಯವಾದಿಗೆ ಭಾಷೆಯ ಮಿತಿ ಉಂಟೆ!


ಪ್ರಜಾಪ್ರಭುತ್ವ



ಕಾಲ:– 19 - 20 ಶತಮಾನ.

'ಹೇಳೋನು ಹೆಡ್ಡ, ಕೇಳೋನು ಕಿವುಡ' ಅಂದ ಹಾಗೆ ಯಾರೊ, 'ಜನರಿಗಾಗಿ, ಜನರಿಂದ, ಜನರ ರಾಜ್ಯ' ಎನ್ನುತ್ತಾನೆ. ಸರಿ, ಕುರಿಗಳು ಕಣ್ಣುಮುಚ್ಚಿಕೊಂಡು, ತಮ್ಮನ್ನು ಆಳಲು ತೋಳಗಳನ್ನು ಆರಿಸುತ್ತವೆ. ತೋಳ ಕುರಿಮರಿಯ ಕಥೆ ಗೊತ್ತೆ ಇದೆಯಲ್ಲಾ. ಸಂಕಟಕ್ಕೀಡಾದ ಕುರಿಗಳು "ಪ್ರಭೋತ್ವಂ ಕುತ್ರಾಸಿ" "ಪ್ರಭೋತ್ವಂ ಕುತ್ರಾಸಿ" (ದೇವರೇ ನೀನೆಲ್ಲಿರುವೆ) ಎಂದು ಗೋಗರೆಯುತ್ತವೆ. ಆದ್ದರಿಂದ ಈ ರೀತಿಯ ಆಡಳಿತಕ್ಕೆ "ಪ್ರಜಾಪ್ರಭುತ್ವ" ವೆಂಬ ಹೆಸರು ಬರುತ್ತದೆ.

ಹಸು ಕರು



ಕಾಲ:– 1984 - 1991

ಧರಣಿ ಮಂಡಲ ಮಧ್ಯದೊಳಗೆ
ಇರುವ ಭಾರತವೆಂಬ ನಾಡೊಳು
ನಡೆವ ಕಥೆಯದನೆಂತು ಪೇಳಲಿ
ದಾರುಣದ ಈ ಕಗ್ಗವ.
ವನದ ರಾಣಿಯು ತೆರವ ಗೋವಿಗೆ
ಇಹುದು ಮುದ್ದಿನದೊಂದು ಕರುವು
ಕ್ರೂರ ಸಿಂಹವು ಗೋವ ಕೊಲ್ವುದು
ಕರುವ ಕೊಲುವುದು ವ್ಯಾಘ್ರನು



ಅಶ್ವತ್ಥಾಮ ಹತಃ ಕುಂಜರಃ

ಜಾತ್ಯಾತೀತತೆ

ಕಾಲ:– 20ನೇ ಶತಮಾನದ ಮಧ್ಯಭಾಗ.

ಈ ಕಾಲದಲ್ಲಿ ಭಾರತದಲ್ಲಿ ಒಂದು ದೊಡ್ಡ ತಮಾಷೆಯಾಗುತ್ತದೆ. ನಾಲ್ಕಾರು ಹಿರಿಯರು ಭಾರತದ ಸಂವಿಧಾನದಲ್ಲಿ ಅದು 'ಜಾತ್ಯಾತೀತ' ರಾಷ್ಟ್ರವಾಗಬೇಕೆಂದು ಘೋಷಿಸುತ್ತಾರೆ. ಮುದುಕರು ಇನ್ನೆಷ್ಟು ಜೋರಾಗಿ ಘೋಷಿಸಲು ಸಾಧ್ಯ! ಅವರ ದುರ್ಬಲ ಧ್ವನಿಯಿಂದಾಗಿ ಜನರಿಗೆ ಬರೀ 'ಜಾತಿ' ಎನ್ನುವುದು ಕೇಳಿಸಿಬಿಡುತ್ತದೆ. ಅವರು ಜಾತಿಯೇ ಮುಖ್ಯವೆಂದುಕೊಂಡುಬಿಡುತ್ತಾರೆ.

ಸ್ವಜಾತಿ ಪ್ರೇಮಿಗಳು ಪರಸ್ಪರ ಎಡಾಬಡ್ಡಾ ಹೊಡೆದಾಡಿ ಕೊನೆಗೆ ನಿರ್ನಾಮವಾಗುತ್ತಾರೆ.

ಪರಿಣಾಮ:– ಜನರಿಗೆ 21ನೇ ಶತಮಾನದ ಹೊತ್ತಿಗೆ 'ಜಾತಿ'ಯ ಬಗ್ಗೆ ಅಲರ್ಜಿ ಉಂಟಾಗುತ್ತದೆ. ಆಗ ಭಾರತ 'ಜಾತಿ ರಹಿತ' ರಾಷ್ಟ್ರವಾಗುತ್ತದೆ.

ಇಮಾಮ್ ಸಾಹೇಬರೂ ಗೋಕುಲಾಷ್ಟಮಿಯೂ



ಕಾಲ:– 20ನೇ ಶತಮಾನದ ಉತ್ತರಾರ್ಧ.



'ಇಮಾಮ್ ಸಾಹೇಬರಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ' ಎನ್ನುವ ಗಾದೆ ಈ ಕಾಲದಲ್ಲಿ ಸುಳ್ಳಾಗುತ್ತದೆ.

ಇಮಾಮ್ ಸಾಹೇಬರೂ, ಗೋವಿಂದ ಭಟ್ಟರೂ, ದೇವರು ಒಬ್ಬನೇ ಎನ್ನುವುದನ್ನು ನಂಬಿ, ಒಂದೇ ಜಾಗದಲ್ಲಿ ನಮಾಜ್/ಪೂಜೆ ಮಾಡಲು ಕುಳಿತುಕೊಳ್ಳುತ್ತಾರೆ. ಇಬ್ಬರು ಒಂದೇ ಜಾಗದಲ್ಲಿ ಕೂರಲು

ಸಾಧ್ಯವಿಲ್ಲವಾದ್ದರಿಂದ ("ಎರಡು ವಸ್ತುಗಳು ಒಂದೇ ಸಮಯದಲ್ಲಿ ಒಂದೇ ಜಾಗವನ್ನು ಆಕ್ರಮಿಸಿಕೊಳ್ಳಲು ಸಾಧ್ಯವಿಲ್ಲ" ಭೌತಶಾಸ್ತ್ರ ನಿಯಮ), ಒಬ್ಬರನ್ನೊಬ್ಬರು ನೂಕಿ, ತಿವಿದು, ಗುದ್ದಾಡಿ ಗೊಂದಲ ಎಬ್ಬಿಸುತ್ತಾರೆ. ಮೌಲ್ವಿ, ಭಟ್ಟರ ಸಹವಾಸ ತಾಳಲಾರದೆ ಅಲ್ಲಾ ಉರೂಫ್ ವಿಷ್ಣು ಇತ್ಯಾದಿ ನಾಮಧೇಯಗಳನ್ನು ಹೊಂದಿದ ಪರಮಾತ್ಮನು ನೂರು ಕಿ.ಮಿ. ವೇಗದಲ್ಲಿ ಆ ಸ್ಥಳದಿಂದ ಓಡಿಬಿಡುತ್ತಾನೆ.

ಕನಕದಾಸರು ದೇವರಿಲ್ಲದ ಸ್ಥಳವಿಲ್ಲ ಎಂದು ಹುಡುಕಾಡುತ್ತಾರೆ. ಅವರು ಬದುಕಿದರೆ ಆ ಸ್ಥಳಕ್ಕೆ ಹೋಗಿ ಬಾಳೆಹಣ್ಣು ತಿನ್ನಬಹುದಾಗಿತ್ತು.

ರಾಷ್ಟ್ರಭಾಷೆ

HIP HIP HURRAY

ಕಾಲ:- 21ನೇ ಶತಮಾನದ ಮಧ್ಯ ಭಾಗ.

ಸ್ವತಂತ್ರ ಭಾರತದ, ದೇಶಪ್ರೇಮಿಗಳ ಕನಸು ಈ ಶತಮಾನದಲ್ಲಿ ನನಸಾಗುತ್ತದೆ. ಭಾರತಾದ್ಯಂತ ಜನರು ಒಂದೇ ಭಾಷೆಯನ್ನು ಬಳಸುವರು. ಭಾಷಾವಾರು ಪ್ರಾಂತಗಳ ಸಮಸ್ಯೆ ಪರಿಹಾರವಾಗುತ್ತದೆ. ಪುರಾತನವಾದ ಆ ಭಾಷೆಯ ಹೆಸರು ಇಂಗ್ಲಿಷ್

ಚಕ್ರಾಧಿಪತ್ಯತೆ



ಕಾಲ: ಕ್ರಿ.ಶ. 2069

ದೇಶ: ಇಂಡಿಯಾ

ಚಕ್ರವರ್ತಿ: His Excellency George Sam Kenton.




ಚರಿತ್ರೆಗೆ ಕಲ್ಪನಾ ಶಕ್ತಿ ಕಮ್ಮಿ. ಆದ್ದರಿಂದಲೇ ಅದು ಪದೇ ಪದೇ ಮರುಕಳಿಸುತ್ತದೆ.

ಹಳೇ ನೀತಿ: ಒಳ ಜಗಳಗಳಿಂದ ಮೂರನೆಯವನಿಗೆ ಲಾಭ.

ಹೊಸ ನೀತಿ: ಸದಾ ನೀತಿಗಳನ್ನು ಬೋಧಿಸಬಾರದು. ಅದರಲ್ಲಿ ಸತ್ಯವಿದ್ದರೂ, ಸಣ್ಣ ವಯಸ್ಸಿನಿಂದ ಕೇಳಿ ಕೇಳಿ ಒಂದು ತರಹ ಜಿಗುಪ್ಸೆ ಉಂಟಾಗುತ್ತದೆ. ಹಾಗಾಗಿ ಜನ ನೀತಿಗಳಿಂದ ಪಾಠ ಕಲಿಯುವುದಿಲ್ಲ.

ಮನೆದೇವರು – ಟೀ.ವಿ.



ಕಾಲ: 22ನೇ ಶತಮಾನ

ದೇವರ ದಯದಿಂದ 20ನೆ ಶತಮಾನದ ಮಾನವ 22ನೇ ಶತಮಾನದಲ್ಲಿ ಬದುಕಿರುವುದಿಲ್ಲ. ಅಪ್ಪಿ ತಪ್ಪಿ ಬದುಕಿದ್ದರೆ, 22ನೆ ಶತಮಾನದ ನರನನ್ನು ನೋಡಿ ಅವನು ಭೂತವೋ, ಪ್ರೇತವೋ ಎಂದು ಹೆದರಿ ನಡುಗಿ ಆಗಲಾದರೂ ಸಾಯುತ್ತಾನೆ.

20ನೆ ಶತಮಾನದಲ್ಲಿ ಟೀ.ವಿ. ಮನೆದೇವರ ಸ್ಥಾನವನ್ನು ಪಡೆಯುತ್ತದೆ. ಮಕ್ಕಳು ಆಟ, ವ್ಯಾಯಾಮ ಇತ್ಯಾದಿಗಳನ್ನು ಮರೆಯುತ್ತಾರೆ. 22ನೆ ಶತಮಾನದ ಹೊತ್ತಿಗೆ ನರನ ಕೈ ಕಾಲುಗಳು ಹಂಚಿಕಡ್ಡಿಯಂತಿರುತ್ತದೆ. ತಲೆ ವಿಪರೀತ ದಪ್ಪ. (ಟೀ.ವಿ. ಸೀರಿಯಲ್‌ಗಳ ಕಥೆ ಕಾರ್ಪಣ್ಯ ಅವನ ತಲೆ ತುಂಬಿರುತ್ತವೆ.) ವರ್ಷಾನು ಕಾಲ ಟೀ.ವಿ. ಸ್ಕ್ರೀನನ್ನು ದುರುಗುಟ್ಟಿಕೊಂಡು ನೋಡಿ ನೋಡಿ ಅವನ ಕಣ್ಣುಗಳು ಕಪ್ಪೆಯ ನೇತ್ರವನ್ನು ಹೋಲುತ್ತದೆ. ಅವನ ರೂಪ ಹೆಚ್ಚು ಕಡಿಮೆ ಮೇಲಿನ ಚಿತ್ರದಲ್ಲಿ ಬರೆದಂತಿರುತ್ತದೆ.



ಔಷಧದ ತಯಾರಕರು – ಜನಸಂಖ್ಯೆ

ಕಾಲ:– 22ನೇ ಶತಮಾನದ ಉತ್ತರಾರ್ಧ.

ಈ ಕಾಲ ಬಹಳ ಸ್ವಾರಸ್ಯಕರವಾಗಿರುತ್ತದೆ. ಅದು ಹದಿನಾರನೆಯ ಶತಮಾನವನ್ನು ಹೋಲುತ್ತದೆ. ಹದಿನಾರನೆಯ ಶತಮಾನದಲ್ಲಿ ವಿಜ್ಞಾನ ಮುಂದುವರಿದಿರಲಿಲ್ಲವಾದ್ದರಿಂದ, ಬೇನೆಗಳು

ಬಂದಾಗ ಮುಕ್ಕಾಲುಪಾಲು ಜನ ಸತ್ತು, ತೀರ ಆರೋಗ್ಯವಾಗಿದ್ದವರು ಮಾತ್ರ ಬದುಕುತ್ತಿದ್ದರು ಜನಸಂಖ್ಯೆ ಕಡಿಮೆಯಾಗಿತ್ತು.

22ನೆ ಶತಮಾನದಲ್ಲೂ ಹಾಗೇ ಆಗುತ್ತದೆ. ವಿಜ್ಞಾನ ವಿಪರೀತ ಮುಂದುವರೆದು ವಿಶಿಷ್ಟ ಔಷಧಗಳು ತಯಾರಾಗುತ್ತವೆ. ಅವುಗಳ ಬೆಲೆ ಊಹೆಗೆ ಮೀರುತ್ತದೆ. ಹಾಗಾಗಿ ಜನ ಮದ್ದು ಖರೀದಿಸಲು ಸಾಧ್ಯವಾಗದೆ ತೊಪ ತೊಪನೆ ಸಾಯುತ್ತಾರೆ. ಕೋಟ್ಯಾಧೀಶ್ವರರಿಗೆ ಮಾತ್ರ ತಲೆ ನೋವಿನ ಮಾತ್ರೆ ಕೊಳ್ಳಲು ಸಾಧ್ಯವಾಗುತ್ತದೆ.

ಜನಸಂಖ್ಯೆಯನ್ನು ಕಡಿಮೆ ಮಾಡುವ ಸದುದ್ದೇಶದಿಂದಲೇ ಔಷಧದ ತಯಾರಕರು 20ನೆ ಶತಮಾನದಿಂದಲೇ ಬೆಲೆ ಏರಿಸಲು ಪ್ರಾರಂಭಿಸುತ್ತಾರೆ. ಅವರ ಅಭಿಲಾಷೆ ಈಡೇರುತ್ತದೆ. ಭೂಮಿಯ ಭಾರ ಕಡಿಮೆಯಾಗುತ್ತದೆ.

ಸಾಹಸ ಕಾರ್ಯಗಳು

ಕಾಲ:– 20ನೇ ಶತಮಾನ

ಈ ಶತಮಾನದ ಮಾನವ ಅನೇಕ ಸಾಹಸ ಕಾರ್ಯಗಳನ್ನು ಮಾಡುತ್ತಾನೆ. ಅಮಾನುಷ ಕೆಲಸಗಳನ್ನು ಅತಿ ಧೈರ್ಯವಾಗಿ ಸಾಧಿಸಲು ಪ್ರಯತ್ನಿಸುತ್ತಾನೆ.

ಉದಾಹರಣೆಗೆ– ಕನ್ನಡಾಂಬೆಯ ಮಕ್ಕಳು "ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ" ಎಂಬಂತೆ ನಷ್ಟವನ್ನು ಲೆಕ್ಕಿಸದೆ ಮಾಸ ಪತ್ರಿಕೆಗಳನ್ನು ಹೊರಡಿಸುತ್ತಾರೆ. ಇನ್ನೂ ಕೆಲವು ಕೆಚ್ಚೆದೆಯ ವೀರರು ಹಾಸ್ಯ ಪತ್ರಿಕೆಗಳನ್ನು ಹೊರಡಿಸಲೂ ಹಿಂಜರಿಯುವುದಿಲ್ಲ.

ಈ ಮೇಲ್ಕಂಡ ಗುಂಪಿನ ಜನರಿಗೆ ಭಗವದ್ಗೀತೆ ಜಾಸ್ತಿ ಪ್ರಭಾವ ಬೀರುತ್ತದೆ. ಆ ಕಾರಣ ಅವರಿಗೆ ಲಾಭ ನಷ್ಟ ಇವುಗಳ ವ್ಯತ್ಯಾಸ ತಿಳಿಯುವುದಿಲ್ಲ. ಈ ದೋಷದ ದೆಸೆಯಿಂದ ಸಾಹಿತ್ಯ ಸೇವೆ ನಡೆದುಕೊಂಡು ಹೋಗುತ್ತದೆ.

ವೆಂಕಟಾಚಾರ್ಯರ ಭವಿಷ್ಯವಾಣಿಯನ್ನು ಓದಿದ ಮೇಲೆ, ನನ್ನನ್ನು ಸದಾ ಕಾಡುತ್ತಿದ್ದ ಪ್ರಶ್ನೆಗೆ ಉತ್ತರ ಸಿಕ್ಕಿತು. ಬರೆಯುವ ಚಟವನ್ನು ಹೊಂದಿದವರನ್ನು ನೋಡಿ ನನಗೆ ಸದಾ ಮರುಕ! ಮೂರು ಕಾಸಿನ ಪ್ರಯೋಜನವಿಲ್ಲದ ಈ ಕೆಲಸವನ್ನು ಏಕೆ ಈ ಜನ ಮಾಡುತ್ತಾರೆ ಅಂತ ಅರ್ಥವಾಗಿರಲಿಲ್ಲ. ಈಗ ತಿಳೀತು. ಪಾಪ! ದ್ವಂದ್ವಗಳ ವ್ಯತ್ಯಾಸ ತಿಳಿಯದು. ಅವರೇನು ಮಾಡಿಯಾರು?



ಅಜ್ಜಿ ಹಾಡಿದಳು !

ವಿಜಯಾ ಸಚ್ಚಿದಾನಂದ್ .

ಅಜ್ಜಿ ಹಾಡುತ್ತಿದ್ದಾಳೆ ! ತನ್ಮಯಳಾಗಿ ಅರ್ಧದಲಿತ ನೇತ್ರದವಳಾಗಿ ತನ್ನ ಹಾಡಿನ ರಸವನ್ನು ತಾನೇ ಸ್ವಾದಿಸುತ್ತಾ ಹಾಡುತ್ತಿದ್ದಾಳೆ. ಅವಳ ಬಾಯಿಂದ ರಾಗ ಎಳೆ ಎಳೆಯಾಗಿ ಹೊರಟು ಅಲೆಅಲೆಯಾಗಿ ಚಿಮ್ಮಿ ಕಿಟಕಿಯಿಂದ ಹೊರಹೊಮ್ಮಿ ಡೆಲ್ಲಿಯ ನೇತಾಜಿ ನಗರದ ಬಡಾವಣೆಯಲ್ಲೆಲ್ಲಾ ಹರಡುತ್ತಿದೆ. ಹರಡುತ್ತಿರುವ ಆ ಹಾಡು, ಅದನ್ನು ಆಲೈಸಿ ಆನಂದಪಡುತ್ತಿರಬಹುದಾದ ಆ ಜನಸ್ತೋಮ ಅವಳ ಕಣ್ಣ ಮುಂದೆ ಬಂದಂತಾಗಿ ಇನ್ನೂ ಮಧುರವಾಗಿ ರಾಗವಾಗಿ ಹಾಡಲೆತ್ನಿಸುತ್ತಿದ್ದಾಳೆ ಅಜ್ಜಿ.

ಕೃಷ್ಣಾ ನೀ ಬೇಗನೆ ಬಾರೋ SS ।


ಕಾಶೀ ಪೀತಾಂಬರ ಕೈಯಲ್ಲಿ ಕೊಳಲೂ --- ॥

ಟುಮಕಿ ಚಲತ ರಾಮಚಂದ್ರಾSS !

ಬಾಜತ ಪೈಜನಿಯಾ--- ॥

ಪುರಂದರದಾಸರ ಶ್ರೀಕೃಷ್ಣನನ್ನು ಬೇಗ ಬಾರೆಂದು ರಾಗವಾಗಿ ಕರೆದು, ಕಷ್ಟಪಟ್ಟು ಕಾಶೀ ಪೀತಾಂಬರ ಮತ್ತು ಅವನ ಕೈಯಿನ ಕೊಳಲನ್ನು ಜ್ಞಾಪಿಸಿಕೊಳ್ಳುತ್ತಿದ್ದಂತೆಯೇ ಮುಂದಿನ ಚರಣ ಮರೆತಿರುತ್ತಾಳೆ. ಆದರೇನು ಅಜ್ಜಿ ಧೃತಿಗೆಡುತ್ತಿದ್ದಾಳೆಯೇ? ಇಲ್ಲ ! ಶ್ರೀ ಕೃಷ್ಣನಾದರೇನೂ ಅಥವಾ ಶ್ರೀ ಸೂರದಾಸನ ಶ್ರೀರಾಮಚಂದ್ರನಾದರೇನು? ಎರಡೂ ಆ ಶ್ರೀಮನ್ ನಾರಾಯಣನ ಅವತಾರವೇ ಅಲ್ಲವೆ ಎನ್ನುತ್ತಾ "ಟುಮಕಿ ಚಲತ ರಾಮಚಂದ್ರ ---- ಬಾಜತ ಪೈಜನಿಯಾ-ಆ ಆ ಆ" ಎನ್ನುತ್ತಾ ರಾಮಚಂದ್ರನ ಬಾಲಲೀಲೆಯನ್ನು ಕೊಂಡಾಡುತ್ತಿದ್ದಾಳೆ. ಅಷ್ಟೇ ಅಲ್ಲ ! ತ್ಯಾಗರಾಜರು, ಕನಕದಾಸರ ಪದಗಳನ್ನೆಲ್ಲಾ ಸೇರಿಸಿ ತನ್ನದೇ ಆದ ಒಂದು ಹಾಡನ್ನು ಸೃಷ್ಟಿಸಿದ್ದಾಳೆ. ಅದನ್ನು ತನ್ನದೇ ಆದ ರಾಗದಲ್ಲಿ ಹಾಡುತ್ತಿದ್ದಾಳೆ. ಸೂಕ್ಷ್ಮವಾಗಿ ಆಲೈಸಿದವರಿಗೆ ಸಿನೆಮಾ ಹಾಡಿನ ಸಂಗತಿಗಳೂ ಮಧ್ಯೆ ಕೇಳಿಸಿದರೆ ಆಶ್ಚರ್ಯವೇನಿಲ್ಲವೆನ್ನಬಹುದು।

ಅವಳಿಗೆ ತಾನೇನು ಹಾಡುತ್ತಿರುವೆನೆಂಬ ಪರಿವೆಯೇ ಇಲ್ಲ. ಪರಿವೆಯಿದರೂ ಪರವಾಗಿಲ್ಲ. ಏಕೆಂದರೆ ಅವಳ ಬಡಾವಣೆಯಲ್ಲಿ ವಾಸಿಸುವ ಮುಕ್ಕಾಲು ಪರಿವಾರ ಉತ್ತರದವರಾಗಿದ್ದಾರೆ. ಅಂದರೆ ಅವರುಗಳ ಸಂಗೀತದ ಜ್ಞಾನ ಅಷ್ಟಕ್ಕಷ್ಟೇ ಎನ್ನುವುದು ಗುಟ್ಟಿನ ಮಾತೇನಲ್ಲವಲ್ಲ !



ಅವಳಿಗೆ ಹೊಸದಾಗಿ ಬಂದ ಅಜ್ಜಿಯ ಪಟ್ಟ ಇಂತಹ ಹುಮ್ಮಸ್ಸನ್ನು ಕೊಟ್ಟಿದೆಯೆಂದು ಹೇಳಿದರೂ ಸುಳ್ಳಾಗಲಾರದು. ಅವಳ ಎರಡು ತಿಂಗಳ ಮೊಮ್ಮಗು ತೊಡೆಯ ಮೇಲೆ ಸುಖವಾಗಿ ಮಲಗಿದೆ.

ಅಜ್ಜಿಯ ಹಾಡು ಜೋಗುಳದಂತೆ ಹಾಯಾಗಿದೆ. ಶಾಂತವಾಗಿ ನಿದ್ರಿಸುತ್ತಿದೆ. ಏನೆಂದೆ? ಶಾಂತವಾಗಿ ನಿದ್ರಿಸುತ್ತಿದೆಯೆಂಗೆನೆ? ಇಲ್ಲ ! ಅಜ್ಜಿ ಹಾಡನ್ನು ಕೊಂಚ ಕ್ಷಣ ನಿಲ್ಲಿಸಿದರೂ ಸಹ ಮೈಕೈ ಆಡಿಸಿ, ಕಣ್ಣುಬಿಟ್ಟು ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದೆ.

ಅಜ್ಜಿ (ಆವಾಗಿನ್ನೂ ಅಜ್ಜಿಯಾಗಿರಲಿಲ್ಲವೆನ್ನಿ) ತನ್ನ ಹತ್ತನೆಯ ವಯಸ್ಸಿನ ತನಕ ಹಾಡೂ ಅಂದ್ರೆ ಏನೆಂದೇ ಅರಿವಿಲ್ಲದಂತೆ ಬೆಳೆದಿದ್ದಳಂತೆ. ಅದರಿಂದ ಅವಳಿಗೆ ಹಾನಿಯೇನೂ ಆಗಿರಲಿಲ್ಲ. ಅವರಮ್ಮ ಒಂದು ದಿನ ಯಾವುದೋ ಮದುವೆಗೆ ಅಂತ ಹೋದವರು ಅಲ್ಲಿ ಇವಳದೇ ಅಂದರೆ ಮಗಳ ವಯಸ್ಸಿನ ಒಬ್ಬಳು ಹುಡುಗಿ ತಂಬೂರಿ ಮೀಟುತ್ತಾ, ತಾಳ ಹಾಕಿಕೊಂಡು ಹಾಡುತ್ತಿದ್ದ ದೃಶ್ಯ ತುಂಬಾ ಮನೋಹರವಾಗಿ ಕಂಡಿತಂತೆ. ನೋಡೋಕ್ಕೆ ಎರಡು ಕಣ್ಣುಗಳು ಸಾಲದಾಗಿತ್ತು. ಆ ಹುಡುಗಿ ಸ್ಥಾನದಲ್ಲಿ ತನ್ನ ಮಗಳನ್ನು ಚಿತ್ರಿಸಿಕೊಂಡು ಅವಳಮ್ಮ ಪುಳುಕಿತಗೊಂಡಿದ್ದಳಂತೆ. ಸರಿ, ಮದ್ವೆ ಮನೆಯಿಂದ ವಾಪ್ಸು ಬರ್ತಿದ್ದಹಾಗೇ "ಅಹಾ! ಆ ಹುಡುಗಿ ಹಾಕ್ಕೊಂಡಿದ್ದ ಇಷ್ಟಂಚಿನ ಲಂಗಾನೋ, ಆ ಜ್ಯಾಕೆಟ್ಟೋ, ಇಷ್ಟಗಲ ಪೆಂಡೆಂಟಿದ್ದ (ಅಂಗೈ ಅಗಲ ಬೇರೆ ತೋರಿಸಿದ್ದರಂತೆ) ಆ ಸರಾನೋ, ಅವಳು ಕಿವಿಗೆ ಹಾಕ್ಕೊಂಡಿದ್ದ ಆ ಕೆಂಪಿನ ಜುಮುಕಿ – ಅವಳು ತಾಳ ಹಾಕ್ಕೊಂಡು ತಲೆ ತೂಗ್ತಾಗೆಲ್ಲಾ ಎಷ್ಟು ಚೆನ್ನಾಗಿ ಕೆನ್ನೆ ಮೇಲೆ ಕುಣೀತಿತ್ತು ಅಂತಿ" ಅಂತ ಹೊಗಳಿದ್ದೂ ಅಲ್ದೆ, "ಥೂ ! ನೀನೂ ಇದ್ದೀ ! ಅನ್ನಕ್ಕೆ ದಂಡ, ಭೂಮಿಗೆ ಭಾರ. ದಂಡ ಪಿಂಡ. ಹಾಳಾಗು" ಅಂತ ಶಾಪ ಹಾಕಿದ್ದಲ್ಲದೆ ತಲೆ ಮೇಲೆ ಬೇರೆ ಮಟ್ಟಿದ್ದಳು. ಪಾಪ ! 'ಅಜ್ಜಿ'ಗೇನೂ ಅರ್ಥವಾಗದೇ ಪಿಳಿ ಪಿಳಿ ಕಣ್ಣು ಬಿಡ್ತಾ ನೋಡ್ತಾಯಿದ್ಲು.

ಸರಿ, ಮಾರನೆಯ ದಿನವೇ ಎಳೆದುಕೊಂಡು ಹೋಗಿ ಹತ್ತಿರವೇ ಇದ್ದ ಸಮಾಜದಲ್ಲಿ ಹಾಡಿನ ಕ್ಲಾಸಿಗೆ ಸೇರಿಸಿಯೂ ಬಿಟ್ಟಳಂತೆ. ಇದುವರೆಗೂ ತನ್ನಮ್ಮ ಯಾಕೆ ಮದುವೆ ಮನೆಯಿಂದ ಬಂದೇಟಿಗೆ ತನ್ನ ತಲೆ ಮೇಲೆ ಹಾಗೆ ಮಟ್ಟಿದ್ದು ಅಂತ ಅರ್ಥವಾಗದ 'ಅಜ್ಜಿ'ಗೆ ಈಗ ಎಲ್ಲಾ ಅರ್ಥವಾಗಿತ್ತು. ತಾನು ಇನ್ಮೇಲಿಂದ ದಿನಾ ಸ್ಕೂಲಿನಿಂದ ಬಂದು ಹಾಡಿನ ಕ್ಲಾಸಿಗೆ ಹೋಗಬೇಕಲ್ಲಾ ಅಂತ ದುಃಖ ಆಗಿ ರಾತ್ರೆಯೆಲ್ಲಾ ಮುಸಿ ಮುಸಿ ಅಳ್ತಾಯಿದ್ದಳಂತೆ. ಆ ಇಷ್ಟಂಚಿನ ಲಂಗದ, ಅಂಗೈ ಅಗಲ ಪೆಂಡೆಂಟಿನ ಸರದ ಹುಡುಗಿಗೆ ರಾತ್ರೆಯೆಲ್ಲಾ ಶಾಪ ಹಾಕ್ತಾಯಿದ್ದಳು ಬೇರೆ. ಮಾರನೇ ಸಾಯಂಕಾಲದಿಂದಲೇ ಶುರುವಾಗಿತ್ತು ಘಸ್ನಿ ಮಹಮೂದನ ದಂಡಯಾತ್ರೆ ತರಹ ಅವಳ music class ನ ಯಾತ್ರೆ.

ಅಗಸ ಹೊಸದರಲ್ಲಿ ಗೋಣೀನ ಎತ್ತಿ ಒಡೀತಾನಂತಲ್ಲಾ ಹಾಗೆ ಅವಳಮ್ಮಾನೂ ದಿನಾ note book ತಗೊಂಡು, ಏನು ಬರ್ಕೊಂಡೆ, ಹ್ಯಾಗೆ ಬರ್ಕೊಂಡೆ ಅಂತ ಕೇಳಿ ಪ್ರಾಕ್ಟೀಸ್ ಮಾಡ್ಕೊ ಅಂತ ಗೋಳು ಹುಯ್ಕೋತಾಯಿದ್ದಳು. ಆ ಮೇಷ್ಟ್ರೋ ಇವಳು ಹಾಡೋದನ್ನ ಕೇಳಿ "ನೀಕು ವಚ್ಚಲೇದು ನಾಕು ಮರ್ಚಾಲೇದು" ಅಂತ ಆ ಬಕ್ಕ ತಲೆ ಮೇಲೆ ಕೈ ಆಡಿಸ್ತಾ ಕೂತಿದ್ರೆ ಆ ಮೇಷ್ಟ್ರ ಕತ್ತನ್ನ ಹಿಚಕಿ ಹಾಕಿಬಿಡೋ



ಅಷ್ಟು ಕೋಪ 'ಅಜ್ಜಿ'ಗೆ ಬರ್ತಾಯಿತ್ತಂತೆ. ಜೀವನದಲ್ಲೇ ಒಂದು ತರಹ ಬೇಸರ ಬಂದಿದು.

ದಸರಾ ರಜದಲ್ಲಿ ಒಂದು ಬಾರಿ ಮೈಸೂರಿಗೆ ಹೋದಳು. ಅಲ್ಲಿ ತನ್ನ ಗೋಳನ್ನು ದೊಡ್ಡಮ್ಮನ ಮಗಳು ಜಯಮ್ಮನ ಹತ್ತಿರ ಹೇಳಿಕೊಂಡಾಗ "ಅಯ್ಯೋ ! ಯಾತಕ್ಕೆ ಕಷ್ಟಪಡ್ತೀ. ಪಕ್ಕದ್ಮನೆ ಟೀಚರಮ್ಮನ ಮೇಷ್ಟ್ರು 3 ಇಂಚು ಬಾಯಿ ತೆಗೆದು ಸಾ, ಪಾ, ಸಾ ಕೂಗೂ ಅಂತ ಹೇಳಿದ್ದಾರಂತೆ. ಅವಳಮ್ಮ ಬೇರೆ 'ತೊಂಡೆ ಬಿಟ್ಟು ಹಾಡು' ಅಂತ ಹೇಳ್ತಾನೇಯಿರ್ತಾರೆ ಕಣೆ. ನೀನೂ ಸರಿಯಾಗಿ ಹಾಗೇ ಬಾಯಿ ಬಿಟ್ಟು ಹೇಳು" ಅಂತ advise ಬೇರೆ ಮಾಡಿದಳಂತೆ. ಹಾಗೇ 'ಅಜ್ಜಿ' ಬಾಯ್ಬಿಟ್ಟು ಹಾಡಿದ್ದೂ ಹಾಡಿದ್ದೇ. ಒಂದು ದಿನ ಪಕ್ಕದ್ಮನೆ ಪದ್ಮಮ್ಮನ ಕೊನೆ ಮಗ ಸುರೇಶ ಇವ್ಳು ಹಾಡ್ತಿರೋದು ಕಂಡು "ಯಾಕಮ್ಮಾ ಅವ್ಳು ಹಾಗೆ ದೊಡ್ಡದಾಗಿ ಬಾಯಿ ತೆಗೆದು ಕೆಟ್ಟದಾಗಿ ಮುಖ ಮಾಡ್ತಾ ಹಾಡ್ತಾಳೆ" ಅಂತಾ ಜೋರಾಗಿ ಹೇಳ್ದಾಗ ಅಮ್ಮ ಇವಳ ಬೆನ್ನಿನ ಮೇಲೆ ನಾಲ್ಕು ಬಾರಿಸಿ "ಥೂ ಹಾಳಾದೋಳೇ ! ಜಯಮ್ಮ ಹೇಳಿದ್ಲಂತೆ ಇವಳು ಕೇಳಿದಳಂತೆ. ಹೀಗೇ ಅಭ್ಯಾಸ ಮಾಡ್ಕೊ ನಾಳೆ ದೊಡ್ಡೋಳಾದಮೇಲೆ ಸಭೆಯಲ್ಲಿ ಹಾಡೋವಾಗ ಹೀಗೇ ಮುಖ ಸೊಟ್ಟಗೆ ಮಾಡು ಬಲು ಚೆನ್ನಾಗಿರುತ್ತೆ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗುತ್ತ್ಯೇ ಅಂತ ಗಾದೇನೇ ಇದೆ" ಅಯ್ಯೋ ಪಾಪ! ಎಂಥ ಆಸೆ ಇಟ್ಕೊಂಡಿದ್ಲು ಅವಳಮ್ಮ.

ಹಾಗೇ ತಿಂಗಳುಗಳು ಕಳೀತಾ ಬಂತು. ಅಮ್ಮನಿಗೆ ಹೊಸದರಲ್ಲಿದ್ದ ಹುಮ್ಮಸ್ಸು ಈಗ ಕಮ್ಮಿ ಆಗ್ತಾ ಬಂದಿತ್ತು ಎಳೆ ಮಗುವಿನ ಕಾಟ, ಮನೆ ಕೆಲ್ಸದಲ್ಲಿ ಇವಳ ಹಾಡಿನ ವಿಷಯ ಯೋಚಿಸೋಕ್ಕಾದರೂ ಪುರುಸೊತ್ತೆಲ್ಲಿ? 'ಅಜ್ಜಿ'ಗೂ ಸುಖವಾಗಿತ್ತು. ಸ್ಕೂಲಿನಿಂದ ಮನಗ ಬರ್ತಿದ್ದ ಹಾಗೇ ಹಾಡಿನ ಕ್ಲಾಸೂಂತ ಮನೆಯಿಂದ ಕಾಲ್ಕೀಳೋದು. ಇದರಿಂದ ಮನೆ ಕೆಲಸಕ್ಕೆ ಚಕ್ಕರ್ ಹೊಡೀಬಹುದು. ಹಾಡಿನ ಕ್ಲಾಸಿಗೆ ಚಕ್ಕರ್ ಹಾಕಿ ಸ್ನೇಹಿತೆ ಮನೆಗೆ ಹೋದ್ರೆ ಕುಂಟೇಬಿಲ್ಲೆ ಆಡಬಹುದು. ಎಂಥಾ ಮಜ. ಜೀವನದಲ್ಲಿ ಮೊದಲ ಬಾರಿಗೆ ಹಾಡಿನ ಕ್ಲಾಸಿಗೆ ಸೇರಿದ್ದು ವ್ಯರ್ಥ ಅಂತ ಅನ್ನಿಸಲಿಲ್ಲವಂತೆ.

ಒಂದು ಸತಿ 15ನೇ ತಾ. ಆದ್ರೂ ಫೀಸ್ ತೊಗೊಂಡು ಹೋಗದೇಯಿದ್ದ 'ಅಜ್ಜೀ'ನ ಮೇಷ್ಟ್ರು "ಹಾಡು ಕಲ್ತುಕೊಳ್ಳದೇಯಿದ್ರೆ ಕತ್ತೇಬಾಲ ಹೋಯ್ತು ! ನಿನಗೆ ಒರ್ಲಿ ಒರ್ಲಿ ಗಂಟ್ಲೆಲ್ಲಾ ನೋಯ್ಸಿಕೊಂಡಿದ್ದಕ್ಕಾದ್ರೂ ಫೀಸ್ ತರ್ತೀಯೇನೋ ಅಂದ್ರೆ ಅದಕ್ಕೆ ಬೇರೆ ಚೌಕಾಸಿ ಮಾಡ್ತೀಯಲ್ಲೇ ! ಎಂಥ ಹಟಮಾರೀನೇ ನೀನು" ಅಂತ ಎಲ್ಲರ ಎದುರಿನಲ್ಲೂ ಛೀಮಾರಿ ಹಾಕಿದರಂತೆ. ಅವತ್ತು ಮನೆಗೆ



ಬಂದಮೇಲೆ ತಮ್ಮಮ್ಮನ ಹತ್ರ "ನೀನು ಏನು ಮಾಡಿದ್ರೂ ನಾನಂತೂ ಇನ್ಮೇಲೆ ಹಾಡಿನ ಕ್ಲಾಸ್‌ಕಡೆ ತಲೆ ಹಾಕೋಲ್ಲ" ಅಂತ ಹಟ ಮಾಡಿದ್ದಕ್ಕೆ ಅಮ್ಮ "ಹೋಗೇ ! ಬೇಜಾರು ಮಾಡ್ಬೇಡ, ನೀನು ಹಾಡು ಕಲೀಲಿಲ್ಲಾಂತ ಯಾರೂ ಅಳ್ತಾಯಿಲ್ಲಾ. ನಿನಗೂ ನನಗೂ ಈ ಜನ್ಮದಲ್ಲಿ ವಿದ್ಯೆ ಹತ್ತಿದ ಹಾಗೇ." ಅಂತ ಅಂದ್ಲಂತೆ. ಆಮೇಲೆ ಅದೇನನ್ನಿಸಿತೋ ತನ್ನ ಕೋಪಾನ ಮೇಷ್ಟ್ರ ಕಡೆ ತಿರುಗಿಸಿ "ಥೂ! ಅದೆಂತಹ ಮೇಷ್ಟ್ರೋ

! ಪಣ ಪಣಾಂತ ಬಾಯಿ ಬಾಯಿ ಬಿಡ್ತಾನೆ. ನಾನೇನು ಅವರ ಹಣ ತಿನ್ಕೊಂಡು ಹೋಗೋಲ್ಲಾ ಅನ್ನೇಕಾಗಿತ್ತು'' ಅಂತ ಕೂಗಾಡಿದ್ಲಂತೆ. ಅವತ್ತಿಗೇ ಕೊನೆ ಅವಳ ಹಾಡಿನ ಪಾಠ.

ಸರಿ, 'ಅಜ್ಜೀ'ಗೆ ಮಧ್ಯೆ ಆಗ ನಾರ್ತ್ ಇಂಡಿಯಾಕ್ಕೆ ಹೊರಟುಹೋದ್ಮೇಲಂತೂ ಸರಿಯೇ ಸರಿ. ಸಂಗೀತಾ ಅನ್ನೋದು ಒಂದಿರತ್ತೆ ಅನ್ನೋದು ಮರ್ತೇ ಹೋಯ್ತು. ಆದ್ರೂ ಲೇಡೀಸ್ ಕ್ಲಬ್ಬಿನಲ್ಲೋ ಅಥವಾ ಇನ್ನಯಾವುದಾದರೂ ಗ್ಯಾದರಿಂಗ್‌ನಲ್ಲೋ 'ಏಕ್ ಗಾನಾ ಹೋ ಜಾಯೇ' (ಒಂದು ಹಾಡಾಗಲಿ) ಅಂದಾಗ ಸ್ವಲ್ಪ ನಾಚಿದ್ಹಾಗೆ ಮಾಡಿದರೂ ''ತುಮ್ ಬಿನ್ ಜಾವ್ಪೂ ಕಹಾಂ'' ಅಥವಾ ''ವಾದಾ ರಹಾ ಯೇ ವಾದಾ ರಹಾ'' ಅಂತ ಎರಡು ಲೈನ್ ಹಿಂದಿ ಹಾಡನ್ನೇ ಹೇಳಿ ''ಸೈ'' ಅಂತ್ಲೂ ಅನ್ನಿಸಿಕೊಂಡಿದ್ದು ಉಂಟಂತೆ.

ಆದ್ರೆ ಇತ್ತೀಚೆಗೆ ಯಾಕೋ ಕೆಲವು ಸಲ ತಾನೂ ಕಲ್ತುಕೊಳ್ಳೋ ಕಾಲದಲ್ಲಿ ಹಾಡು ಕಲ್ತಿದ್ರೇ ಅನ್ನೋ ಯೋಚನೆ ಬರ್ತಿತ್ತಂತೆ. ಆಹಾ ! ಚಕ್ಕಂಬಕ್ಕ ಹಾಕಿ ಕೂತು ತೊಡೆಯ ಮೇಲೆ ತಾಳ ಹಾಕ್ತ ಪಕ್ಕವಾದ ಗಳೊಂದಿಗೆ ಹಾಡೋ ಸುಖ ಇನ್ಯಾವುದರಲ್ಲಿ ಇದ್ದೀತು ಅಂತ ಅನ್ನೋದು (ಅಂದರೆ ಅದು ಬರುತ್ತಿರುವ ವೃದ್ಧಾಪ್ಯದ ಮಹಿಮೆಯೆ ಅಂತ ಯಾರೂ ಅವಳನ್ನ ಕೇಳಿಕೋ ಹಾಗೆ ಇರಲಿಲ್ಲವೆನ್ನಿ !).

ಬಹುಶಃ ದಸರಾ ಹಬ್ಬದಲ್ಲಿ ಸರಸ್ವತಿ ಪೂಜೆ ದಿನ ಹಿಂದಿನ ಬೀದಿ ಸರೋಜಾ ಮಾಮಿ ಅರಸಿನ ಕುಂಕುಮಕ್ಕೆ ಕರೆದಿದ್ದರಲ್ಲಾ ಆವಾಗ ''ಯಾರಾದ್ರೂ ಒಂದು ಪಾಟು ಪಾಡುಂಗೋ'' ಅಂತ 'ಅಜಿ' ಕಡೆಯೇ ಕಣ್ಣು ಹಾಯಿಸಿದರಂತೆ. ಆವಾಗ ಏನಾದ್ರೂ ಎರಡು ಲೈನಿನ ಹಾಡನ್ನ ಸರಸ್ವತಿ ದೇವಿ ಮೇಲೆ ಹಾಡೇಬಿಡೋಣ ಅಂತ ಜ್ಞಾಪಿಸಿಕೊಳ್ಳೋದಕ್ಕೆ ಹೋದ್ರೆ, ಹಿಂದಿನ ದಿನ ನೋಡಿದ 'ಜಾನಿ ಮೇರಾ ನಾಮ್' ಸಿನಿಮಾದ 'ಓ ಮೇರೇ ರಾಜಾ !' ಹಾಡೇ ಜ್ಞಾಪಕಕ್ಕೆ ಬರ್ತಿತ್ತಂತೆ. ಸದ್ಯ ! ಯಾವುದೋ ಜ್ಞಾನದಲ್ಲಿ ಅದನ್ನ ಹಾಡಿ ಅಭಾಸ ಮಾಡ್ಕೊಳ್ಳಲಿಲ್ಲವಲ್ಲಾ. ಆದ್ರೆ ಇವಳ ಕಡುವೈರಿ (cold war ಅಷ್ಟೇ) ಆಂಧ್ರದ ಕುಸುಮ ಅಲ್ಲೇ ಇದ್ದ ತಂಬೂರೀನೂ ಎಳೆದುಕೊಂಡು ತಂತಿ ಮೀಟುತ್ತಾ ಎರಡು, ಮೂರು ಅಂತ ನಾಲ್ಕೈದು ಕೀರ್ತನೆಗಳನ್ನು ಹಾಡೇ ಬಿಟ್ಟೋದೇ. ಅರಿಶಿನ, ಕುಂಕುಮ, ಸುಂಡಲ್ ಚರಪು ತೆಗೆದುಕೊಂಡು ಹೊರಡಲು ತಯಾರಾಗಿದ್ದ ಮಹಿಳೆಯರೆಲ್ಲಾ ತಿರುಗಿ ಸ್ವಸ್ಥಾನವನ್ನು ಆಕ್ರಮಿಸಿಕೊಂಡು ಹಾಡಿನಲ್ಲಿ ತಲ್ಲೀನರಾಗುತ್ತಿದ್ದರೆ 'ಅಜ್ಜಿ' ಮುಖ ಮಾತ್ರ ಹರಳೆಣ್ಣೆ ಕುಡಿದ ಹಾಗಿತ್ತು. ಅಲ್ಲಿಗೆ ಬಂದಿದ್ದೋರ್ ಕೈಲೆಲ್ಲಾ ಹೊಗಳಿಸಿಕೊಂಡಿದ್ದಲ್ಲದೇ ಇವಳ ಕಡೆ ಏನೋ ಜಯಭೇರಿ ಹೊಡೆದೋಳ ತರಹ ನೋಡೋದೆ ಆ ಕುಸುಮ.




'ಅಜ್ಜಿ' ಯಥಾಪ್ರಕಾರದಂತೆ ಆ ಸಂಜೆಯೂ ಹಾಡುತ್ತಿದ್ದಾಳೆ. ಅದೇತಾನೇ ಕನಕದಾಸರ ''ತಲ್ಲಣಿಸದಿರು ಕಂಡ್ಯ ತಾಳು ಮನವೇsss.... ಎಲ್ಲರನೂ ಸಲಹುವನೂ ಇದಕೆ ಸಂಶಯವಿಲ್ಲಾ ಆ ಆ'' ದಿಂದ

ಅವಳಿಗೇ ಅರಿವಿಲ್ಲದಂತೆ ಪುರಂದರದಾಸರ "ತಾರಕ್ಕ ಬಿಂದಿಗೆ ನಾನೀರಿಗ್ಹೋಗುವೆ"ಗೆ ಬಂದಿದ್ದಾಳೆ. ಆದರೂ ಅವಳ ತನ್ಮಯತೆಗೆ ಕುಂದಿಲ್ಲ. ಅವಳ ಎರಡನೆಯ ಮಗಳು (ಬಹುಶಃ ತನ್ನ ತಾಯಿಯ ಸಂಗೀತ ಕಛೇರಿಯಿಂದ ತೊಂದರೆಯಾಗದಿರಲೆಂದೇನೋ) ಮನೆಯ ಬಗೀಚಾದಲ್ಲಿ (garden) ಟಹಲಾಯಿಸುತ್ತ ಮಾರನೆಯ ದಿನದ testಗಾಗಿ ಉರು ಹೊಡೆಯುತ್ತಿದ್ದವಳು ಓಡಿ ಒಳಗೆ ಬಂದು, "Moms ! Congratularion !" ಕೈನ ಜೋರಾಗಿ ಕುಲುಕುತ್ತಿದ್ದಾಳೆ. ಯಾಕಿರಬಹುದು?

ಆದೇ ತಾನೇ ಇವರ ಮನೆಯ ಮೇಲೆ ಅಂದರೆ I floor ನಲ್ಲಿ ವಾಸಿಸುವ ಶ್ರೀ ಮತ್ತು ಶ್ರೀಮತಿ ಜೈನ್‌ರವರು ವಾಯುವಿಹಾರಕ್ಕೆಂದು ಕೆಳಗಿಳಿದು ಬಂದಿದ್ದಾರೆ. (1 1/2 ವರ್ಷಗಳಿಂದಲೂ ಕೆಳಗೆ ಮೇಲೆ ವಾಸವಾಗಿದ್ದರೂ ಒಬ್ಬರಿಗೊಬ್ಬರಿಗೆ ಮಾತಿಲ್ಲ; ಕಥೆ ಮೊದಲೇ ಇಲ್ಲ. (ವೈರಿತ್ವವೇನಿಲ್ಲ, introduction ಆಗಿಲ್ಲ ಅಷ್ಟೇ!) ಒಂದು ಕ್ಷಣ ಏನನ್ನೋ ಆಲೈಸಿದಂತಿದೆ. ತಕ್ಷಣವೇ ಮಗಳನ್ನು ಕರೆದು "ಏನೂ ! ಇತ್ತೀಚೆಗೆ ನಿಮ್ಮ ಮನೆಯಿಂದ ತುಂಬಾ ಮದ್ರಾಸಿ ಗಾನಾ ಕೇಳಿ ಬರುತ್ತಿದೆಯಲ್ಲಾ! ಏನು ವಿಶೇಷ? ಹಾಡುಗಳು M.S. ಸುಬ್ಬಲಕ್ಷ್ಮಿದಲ್ಲವೇ? ಹೊಸದಾಗಿ ಕ್ಯಾಸೆಟ್‌ಗಳನ್ನು ಮದ್ರಾಸಿನಿಂದ (ಕರ್ನಾಟಕ ಅಂತ ಇದೇಂತ ಗೊತ್ತಿದ್ದರಲ್ಲವೇ !) ತರಿಸಿದರೇನು?" (ಅವರು ಕೇಳಿದ್ದು ಹಿಂದೀಲಿ) ಅಂತ ಕೇಳಿದ್ದಾರೆ !

ಅಜಿಯ ಸ್ವರ್ಗಕ್ಕೆ ಮೂರೇ ಗೇಣು! ಆಹಾ! ಅಜ್ಜಿ ಹಾಡಿನ ಮಹಿಮೆಯೇ!



"ಸರಿ ನಾನು, ಐವತ್ತು ಕೆ.ಜಿ. ಆದ ಹಾಗೇ!
ನೀವು ಮಂತ್ರಿ ಆದ ಹಾಗೇ!"

REGISTERED No BGW 180

Printed by V R NATH for the Publisher M SHIVAKUMAR Published and owned by M SHIVA KUMAR 36 6th Main Road, Malleswaram, Bangalore - 560 003 Printed at IMPRESSIONS, 404, Sampige Road, Malleswaram, Bangalore - 560 003 Editor M SHIVAKUMAR